ಹೊಯ್ಸಳ ಅರಸ ಮೂರನೇ ನರಸಿಂಹನ ಕಾಲದ ದಂಡನಾಯಕರು ಮತ್ತು ಅವರ ಕೊಡುಗೆಗಳು ಒಂದು ಚಾರಿತ್ರಿಕ ಅಧ್ಯಯನ

(ಇತಿಹಾಸ ಎಂ.ಫಿಲ್ ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ನಿಬಂಧ)

ಸಂಶೋಧಕ
ಡಿ.ಎನ್. ರವಿ

ಮಾರ್ಗದರ್ಶಕರು
ಡಾ. ಶ್ರೀಕಂಠ

ಕರ್ನಾಟಕ ಸಂಘ (ರಿ), ಮಂಡ್ಯ.
ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ.)
2008-2009

ಹೊಯ್ಸಳ ಅರಸ ಮೂರನೇ ನರಸಿಂಹನ ಕಾಲದ ದಂಡನಾಯಕರು ಮತ್ತು ಅವರ ಕೊಡುಗೆಗಳು ಒಂದು ಚಾರಿತ್ರಿಕ ಅಧ್ಯಯನ

(ಇತಿಹಾಸ ಎಂ.ಫಿಲ್ ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ನಿಬಂಧ)

ಸಂಶೋಧಕ
ಡಿ.ಎನ್. ರವಿ

ಮಾರ್ಗದರ್ಶಕರು
ಡಾ. ಶ್ರೀಕಂಠ

ಕರ್ನಾಟಕ ಸಂಘ (ರಿ), ಮಂಡ್ಯ.
ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ.)
2008-2009

ಮಾರ್ಗದರ್ಶಕರ ಪ್ರಮಾಣ ಪತ್ರ

"ಹೊಯ್ಸಳ ಅರಸ ಮೂರನೇ ನರಸಿಂಹನ ಕಾಲದ ದಂಡನಾಯಕರು ಮತ್ತು ಅವರ ಕೊಡಗೆಗಳು – ಒಂದು ಚಾರಿತ್ರಿಕ ಅಧ್ಯಯನ " ಎಂಬ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಡಿ.ಎನ್. ರವಿ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ಮಂಡ್ಯ.

ದಿನಾಂಕ : 22-9-2009.

(ಡಾ. ಶ್ರೀಕಂಠ ಎಂ.ಎ., ಪಿ.ಹೆಚ್.ಡಿ.)
ಇತಿಹಾಸ ಪ್ರಾಧ್ಯಾಪಕರು
ಮಹಾರಾಜ ಪ್ರಥಮ ದರ್ಜೆ ಕಾಲೇಜು
ಮೈಸೂರು ವಿಶ್ವವಿದ್ಯಾಲಯ
ಮೈಸೂರು.

ಸಂಶೋಧಕರ ಪ್ರಮಾಣ ಪತ್ರ

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ 2008–09ನೇ ಸಾಲಿಗೆ ಇತಿಹಾಸ ಎಂ.ಫಿಲ್ ಅಭ್ಯರ್ಥಿಯಾಗಿ ನಾನು ಪ್ರವೇಶ ಪಡೆದಿರುತ್ತೇನೆ. ನನ್ನ ಎಂ.ಫಿಲ್. ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು "ಹೊಯ್ಸಳ ಅರಸ ಮೂರನೇ ನರಸಿಂಹನ ಕಾಲದ ದಂಡನಾಯಕರು ಮತ್ತು ಅವರ ಕೊಡಗೆಗಳು – ಒಂದು ಚಾರಿತ್ರಿಕ ಅಧ್ಯಯನ" ವಿಷಯವನ್ನು ಆಯ್ಕೆ ಮಾಡಿಕೊಂಡು ಡಾ. ಶ್ರೀಕಂಠರವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲಿ ನಿಬಂಧದ ಅಧ್ಯಾಯಗಳನ್ನಾಗಲಿ ಬೇರೆ ಯಾವ ಗ್ರಂಥಗಳು ಹಾಗೂ ನಿಯತ ಕಾಲಿಕೆಗಳಲ್ಲಿ ಪ್ರಕಟಿಸಿರುವುದಿಲ್ಲ ಮತ್ತು ಕನ್ನಡ ವಿಶ್ವ ವಿದ್ಯಾಲಯವು ನೀಡುವ ಎಂ.ಫಿಲ್. ಪದವಿಗಾಗಿ ಈ ನಿಬಂಧವನ್ನು ಒಪ್ಪಿಸುತ್ತಿದ್ದೇನೆ.

ಸ್ಥಳ : ಮಂಡ್ಯ.

(ಡಿ.ಎನ್. ರವಿ)

ದಿನಾಂಕ : 22-9-2009.

ಸಂಶೋಧನಾ ವಿದ್ಯಾರ್ಥಿ

ಹೊಯ್ಸಳ ಅರಸ ಮೂರನೇ ನರಸಿಂಹನ ಕಾಲದ ದಂಡನಾಯಕರು ಮತ್ತು ಅವರ ಕೊಡುಗೆಗಳು

ಒಂದು ಚಾರಿತ್ರಿಕ ಅಧ್ಯಯನ

ವಿಷಯಸೂಚಿ

ಅಧ್ಯಾಯ – 1
ಪೀಠಿಕೆ

1.1 ಆಧಾರಗಳು

1.2 ಅಧ್ಯಯನ ವಿಧಾನ

1.3 ಅಧ್ಯಯನ ಸ್ವರೂಪ ಮತ್ತು ವ್ಯಾಪ್ತಿ

1.4 ಹೊಯ್ಸಳರ ಸಂಕ್ಷಿಪ್ತ ರಾಜಕೀಯ ಇತಿಹಾಸ

ಅಧ್ಯಾಯ–1

ಪೀಠಿಕೆ

ಹೊಯ್ಸಳರು ಕರ್ನಾಟಕದಲ್ಲಲ್ಲದೆ ದಕ್ಷಿಣ ಭಾರತದಲ್ಲಿ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದಾರೆ. ರಾಜಕೀಯ, ಇತಿಹಾಸ, ಆಡಳಿತ, ಧರ್ಮ, ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪದಲ್ಲಿ ಅವರ ಕೊಡುಗೆಗಳು ವಿಭಿನ್ನವಾಗಿವೆ ಮತ್ತು ಆಸಕ್ತಿದಾಯಕವಾಗಿವೆ. ದುರದೃಷ್ಟವಾಗಿ ಈ ಸಂತತಿಯು ಹೆಚ್ಚು ಕೆಲಸವನ್ನು ಮಾಡಲಿಲ್ಲ. ಹೊಯ್ಸಳ ಸಂತತಿಯು ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ಅವರ ಸಂತತಿಯನ್ನು ಮಹತ್ವಗೊಳಿಸಿದ ವಿಷ್ಣುವರ್ಧನ, ಇಮ್ಮಡಿ ಬಲ್ಲಾಳ, ಸೋಮೇಶ್ವರ, 3ನೇನರಸಿಂಹ ಮತ್ತು 3ನೇ ಬಲ್ಲಾಳನಂತಹ ಕೆಲವು ಸುಪ್ರಸಿದ್ಧ ರಾಜರುಗಳನ್ನು ಹೊಂದಲು ಒಳ್ಳೆಯ ಅದೃಷ್ಟವನ್ನು ಹೊಂದಿದೆ. ಹೊಯ್ಸಳರು ಕ್ರಿ.ಶ. 1000 ದಿಂದ 1346 ರವರೆಗೆ ಸುಮಾರು 350 ವರ್ಷಗಳ ಕಾಲ ಆಳ್ವಿಕೆ ನಡೆಸಿದ್ದಾರೆ.

1.1 ಆಧಾರಗಳು

ಕರ್ನಾಟಕ ಇತಿಹಾಸದ ನಮ್ಮ ಜ್ಞಾನವು 20ನೇ ಶತಮಾನದ ಪ್ರಾರಂಭದಿಂದ ಅಸಾಮಾನ್ಯವಾಗಿ ಬೆಳೆದಿದೆ. ಹಲವು ಪ್ರಾಚ್ಯವಸ್ತು ಅವಶೇಷಗಳು ಮತ್ತು ಸಾಹಿತ್ಯಗಳು ಸಾಮಾನ್ಯವಾಗಿ ಕರ್ನಾಟಕದ ಇತಿಹಾಸ ವಿಶೇಷವಾಗಿ ಹೊಯ್ಸಳರ ಇತಿಹಾಸದ ಅಧ್ಯಯನ ಉದ್ದೇಶಕ್ಕೆ ಲಘು ಮಾಹಿತಿ ಆಧಾರಗಳಾಗಿವೆ.

ಈ ಉದ್ದೇಶಕ್ಕಾಗಿ ಪ್ರಸಿದ್ಧ ವಿದ್ವಾಂಸರು ಮತ್ತು ಕನ್ನಿಂಗ್‌ಹ್ಯಾಮ್, ಜೆ.ಎಸ್.ಫ್ಲೀಟ್ ಮತ್ತು ಬಿ.ಎಲ್.ರೈಸ್‌ರಂತಹ ಪಾಶ್ಚಾತ್ಯ ಶಾಸನ ಶಾಸ್ತ್ರಜ್ಞರಿಗೆ ಹೆಚ್ಚು ಗೌರವವನ್ನು ಕೊಡಬೇಕಾಗಿದೆ. ಡಾ.ಫ್ಲೀಟ್‌ರವರು ಬೊಂಬಾಯಿ ಪ್ರಾಂತ್ಯಕ್ಕೆ ಸೇರಿದ ಉತ್ತರ ಕರ್ನಾಟಕದಲ್ಲಿ ಹಲವು ಶಾಸನಗಳನ್ನು ಕ್ರಮವಾಗಿ ಸಂಗ್ರಹಿಸಲು ಮತ್ತು ಪ್ರಕಾಶಿಸಲು ಪ್ರಾರಂಭಿಸಿದರು.[1] ಬಿ.ಎಲ್.ರೈಸ್‌ರವರ ಎಪಿಗ್ರಾಫಿಯ ಕರ್ನಾಟಕದ 12 ಸಂಪುಟಗಳು ಮತ್ತು ಪ್ರಾಚ್ಯವಸ್ತುಶಾಸ್ತ್ರ ಇಲಾಖೆಯ ಇತರ ನಾಲ್ಕು ಸಂಪುಟ ಗಳನ್ನು (14–17 ಸಂಪುಟಗಳನ್ನು) ತರ್ಜುಮೆ ಮಾಡಲು ಮತ್ತು ಟಿಪ್ಪಣಿಗಳನ್ನು ರಚಿಸಲು ಮೈಸೂರು ಸರ್ಕಾರವು ಮುಂದೆ ಬಂದಿತು. ಶಾಸನಗಳ ಪಠ್ಯಭಾಗ ತರ್ಜುಮೆ ಮತ್ತು ಆಧಾರ ಮಾಹಿತಿಗಳ ಜೊತೆಯಲ್ಲಿ ಶಾಸನಗಳ

ಪಠ್ಯಭಾಗವನ್ನು ಪ್ರಕಟಿಸಲಾಯಿತು. ಅವು ಹೊಯ್ಸಳರ ಕಾಲದ ಐತಿಹಾಸಿಕ ಪಟ್ಟಣಗಳು ಮತ್ತು ದೇವಾಲಯಗಳಿಗೆ ಹೆಚ್ಚುವರಿ ಮಾಹಿತಿಗಳನ್ನು ಸೇರಿಸಲ್ಪಟ್ಟಿವೆ.

ಮೈಸೂರು ವಿಶ್ವವಿದ್ಯಾನಿಲಯವು ಎಪಿಗ್ರಾಫಿಯ ಕರ್ನಾಟಕ ಶಾಸನಗಳನ್ನು ಮತ್ತು ಮೈಸೂರು ಪ್ರಾಚ್ಯವಸ್ತುಶಾಸ್ತ್ರ ವರದಿಗಳನ್ನು ಪರಿಷ್ಕರಿಸುವ ಮತ್ತು ಪುನರ್ ಸಂಪಾದನಾ ಕಾರ್ಯವನ್ನು ತೆಗೆದುಕೊಂಡು 9 ಸಂಪುಟಗಳನ್ನು ಹೊರತಂದಿತು. ಜೊತೆಯಲ್ಲಿ 'ಎಪಿಗ್ರಾಫಿಯ ಇಂಡಿಕಾ', 'ಭಾರತೀಯ ಪ್ರಾಚೀನ ಅವಶೇಷಗಳು', 'ದಕ್ಷಿಣ ಭಾರತದ ಶಾಸನಗಳು' ಮತ್ತು ಹೈದರಾಬಾದ್ ಶಿಲಾಶಾಸನಗಳು ಬಹುಪಾಲು ಹೊಯ್ಸಳರ ಶಾಸನಗಳನ್ನು ಪ್ರಕಟಿಸಿತು.[2] ಧಾರವಾಡದ ಕನ್ನಡ ಸಂಶೋಧನಾ ಸಂಸ್ಥೆಯು ಬಾಂಬೆ-ಕರ್ನಾಟಕ ಪ್ರಾಂತ್ಯಗಳಿಗೆ ಸೇರಿದ ಕೆಲವು ಶಾಸನಗಳನ್ನು ಹೊಂದಿದೆ.

1.1.1 ಶಾಸನಾಧಾರಗಳು

ಅಧ್ಯಯನದ ವಿಷಯವು ಬಹುಪಾಲು ಹೊಯ್ಸಳ ಶಾಸನಗಳನ್ನು ಅವಲಂಬಿಸಿದೆ. ಒಟ್ಟಾರೆ 2000 ಶಾಸನಗಳಿವೆ. ಬಹುಪಾಲು ಶಾಸನಗಳು ಹಾಸನ, ಮೈಸೂರು, ಮಂಡ್ಯ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ದೊರೆತಿವೆ. ಆದರೆ ಇವುಗಳಲ್ಲಿ ಕೆಲವು ವಿರೂಪವಾಗಿವೆ ಮತ್ತು ಅಪೂರ್ಣವಾಗಿವೆ. ಅವುಗಳಲ್ಲಿ ಕೆಲವೇ ಕೆಲವು ಸಂಪೂರ್ಣವಾಗಿ ನಾಶವಾಗಿವೆ. ಶಾಸನಗಳು ಸ್ಪಷ್ಟ ಕಾವ್ಯ ಶೈಲಿಯಲ್ಲಿವೆ. ಅವು ಕಂದ, ವೃತ್ತ, ಚಂಪುವಂತಹ ಇತ್ಯಾದಿ ವಿವಿಧ ಬಂಧಗಳಲ್ಲಿ ರಚಿಸಲಾಗಿದೆ. ಅವುಗಳನ್ನು ತಾಮ್ರಪಟಗಳ ಮತ್ತು ಕಲ್ಲಿನ ಮೇಲೆ ಕೆತ್ತಲಾಗಿದೆ. ಕನ್ನಡ, ಸಂಸ್ಕೃತ, ತಮಿಳು ಭಾಷಾ ಬರಹದಲ್ಲಿದೆ.

ತೋರಿಕೆಗಾಗಿ ದಾನಶೀಲಾ ಅಥವಾ ಉದಾರಗಳ ಎಲ್ಲಾ ಬಗೆಯ ನೊಂದಣಿ ಕೊಡುಗೆಗಳ ಶಾಸನಗಳು ಆದರೆ ಒಂದು ಪೂರ್ಣ ಮತ್ತು ಎಚ್ಚರಿಕೆಯ ಅವುಗಳ ಅಧ್ಯಯನವು ಸಂಪೂರ್ಣ ಅಭಿವೃದ್ಧಿಯಲ್ಲಿ ರಾಜ್ಯದ ಚಟುವಟಿಕೆಗಳು ಮತ್ತು ಸಮಾಜದ ಬೆಳವಣಿಗೆಯನ್ನು ಬಹಿರಂಗ ಪಡಿಸುತ್ತದೆ. ಶಾಸನಗಳಿಂದ ನಾವು ಆಡಳಿತ ವ್ಯವಸ್ಥೆ ರಚನೆಯ ವಿವಿಧ ಮಂತ್ರಿಯ ಇಲಾಖೆಗಳ ದಾನಗಳ ಕಲ್ಪನೆ, ಚಾತುರ್ವರ್ಣ ವ್ಯವಸ್ಥೆಯ ಆಧಾರದ ಮೇಲೆ ಸಮಾಜದ ರಚನೆ, ಮತ್ತು ಅದರ ಚಲನೆ, 18 ಸಮಯಗಳು ಇತ್ಯಾದಿ ಮಾಹಿತಿಯನ್ನು ಪಡೆಯಬಹುದು.

ಉದಾಹರಣೆಗೆ ರಾಜರುಗಳು ನಾಲ್ಕು ವೇದಗಳ ಮಹಾನ್ ಕೊಡುಗೆಗಳನ್ನು ಅಧ್ಯಾಯನ ಮಾಡುವಲ್ಲಿ ತೊಡಗಿದ್ದರು.[3] ಹೊಯ್ಸಳ ಇಮ್ಮಡಿ ಬಲ್ಲಾಳನ ನೆರಲಿಗೆ ತಾಮ್ರಪಟವು ಬ್ರಾಹ್ಮಣರ ನೆಲೆ ಮತ್ತು ಕಲಿಕೆಯ ಅಭಿವೃದ್ಧಿಗೆ ಗುರಿಯಾಗಿದೆ.[4] ಅನ್ನದಾನ ಮತ್ತು ಸಂತರ್ಪಣ ಮಾಡುವ ಸಂಪ್ರದಾಯವು ಈ ಕಾಲದ ಪ್ರಮುಖ ವೈಶಿಷ್ಟ್ಯತೆ.[5]

ಹೊಯ್ಸಳ ಶಾಸನಗಳ ಈ ಅಧ್ಯಯನವೂ ಮೇಲಿನ ವಿಷಯಾಂಶಗಳನ್ನು ಬೆಳಕಿಗೆ ತರುವಲ್ಲಿ ನಮ್ಮ ಉದ್ದೇಶಕ್ಕೆ ವಿಶಾಲವಾದ ಉಪಯೋಗವಾಗಿದೆ. ಶಾಸನಗಳ ಕುರುಹುಗಳು

ಕುಟುಂಬ, ವಂಶ, ವಿವಾಹ ಮತ್ತು ಹರಿಹರ ಆರಾಧನಾ ಪದ್ಧತಿಯಂತಹ ವಿವಿಧ ಶಬ್ದಗಳ ಕಲ್ಪನೆಯನ್ನು ವಿಶಾಲವಾಗಿ ಒದಗಿಸುತ್ತದೆ. ಅವು ಹೊಯ್ಸಳ ಸಮಾಜದ ಬೆಳವಣಿಯ ಸಂಬಂಧದಲ್ಲಿ ರಾಜ್ಯ ಚಟುವಟಿಕೆಗಳ ಕ್ರಿಯಾತ್ಮಕ ಅಧ್ಯಯನವನ್ನು ಕೈಗೊಳ್ಳಲು ಅನುರೂಪವಾಗಿವೆ.

1.1.2 ಸ್ಮಾರಕಗಳು

ಸ್ಮಾರಕಗಳು ಹೊಯ್ಸಳ ರಾಜ್ಯದಲ್ಲೆಲ್ಲ ದೊರೆತಿವೆ. ಹೊಯ್ಸಳ ದೇವಾಲಯ ಶಿಲ್ಪಗಳು ಮಾರ್ಪಟ್ಟ ಮಾನವ ಕುಲಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಬಹಿರಂಗಪಡಿಸುತ್ತವೆ. ಉದಾಹರಣೆಗೆ ಚನ್ನರಾಯಪಟ್ಟಣ ತಾಲ್ಲೂಕಿನ ನುಗ್ಗೆಹಳ್ಳಿ 'ಲಕ್ಷ್ಮೀನಾರಾಯಣ ದೇವಾಲಯ'ದ ಹೊರಗೋಡೆಯ ಮೂರನೇ ಸಾಲು ಗೊಲ್ಲರ ನಿತ್ಯ ಜೀವನ ಕ್ರಮವನ್ನು ಹೇಳುತ್ತದೆ. 'ಸೋಮನಾಥಪುರ ದೇವಾಲಯ'ದ ಹೊರಗೋಡೆಯ ಮೂರನೇ ಸಾಲು ಸ್ಪಷ್ಟವಾಗಿ ಪುತ್ರ ಕಾಮೇಷ್ಠಿಯಾಗ, ದಶರಥ ರಾಜನ ಮಕ್ಕಳ ನಾಮಕರಣವನ್ನು ಹೇಳುತ್ತದೆ. ಬೇಲೂರಿನ ಕೇಶವ ದೇವಾಲಯದ ಚಿಕ್ಕ ಗೋಪುರಗಳ ನಾಲ್ಕು ಪಾರ್ಶ್ವಗಳ ಶಿಲ್ಪಗಳಲ್ಲಿ ಮಲ್ಲಯುದ್ಧದ ವಿವಿಧ ಭಂಗಿಗಳನ್ನು ಚಿತ್ರಿಸಲಾಗಿದೆ. ಅಮೃತಪುರ ದೇವಾಲಯದಲ್ಲಿ ಕೃಷ್ಣನ ತೊಟ್ಟಿಲು ತೂಗುವ ಸುಂದರ ಶಿಲ್ಪವು ಸುಂದರವಾಗಿ ಕೆತ್ತಲ್ಪಟ್ಟಿದೆ. ದೇವಾಲಯ ಶಿಲ್ಪಗಳ ಈ ಅಧ್ಯಯನವು ನಮಗೆ ಈ ಕಾಲದ ಸಮಾಜದಲ್ಲಿನ ಧಾರ್ಮಿಕ ಸಂಪ್ರದಾಯಗಳು ಮತ್ತು ಆಚರಣೆಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ.

1.1.3 ಸಾಹಿತ್ಯಾಧಾರಗಳು

ಪ್ರಾಚ್ಯವಸ್ತು ಆಧಾರಗಳಲ್ಲದೆ ಸಾಹಿತ್ಯಾಧಾರಗಳು ಹೊಯ್ಸಳ ಸಮಾಜದ ವಿಭಿನ್ನ ಚಟುವಟಿಕೆಗಳ ಅಧ್ಯಯನ ಉದ್ದೇಶಕ್ಕೆ ಮೌಲ್ಯಾಧಾರಿತ ಆಕರಗಳು. ಅವು ಐತಿಹಾಸಿಕ ಗುಣ ಲಕ್ಷಣಗಳ ಚಲನೆಯಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ಚಿತ್ರಣವನ್ನು ಸಮರ್ಥಗೊಳಿಸಲು ಇತಿಹಾಸಕಾರರಿಗೆ ಆಗಿದೆ.[6] ಸಾಹಿತ್ಯಾಧಾರಗಳು ಸಮಕಾಲೀನ ಜನಜೀವನವನ್ನು ಪ್ರತಿಬಿಂಬಿಸುತ್ತವೆ. ಶಾಸನಗಳು ಆಗಾಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ಮಾತ್ರ ನಮಗೆ ಕೊಡುತ್ತದೆ, ಸಾಹಿತ್ಯವು ಆರ್ಥಿಕ, ಸಾಮಾಜಿಕ ಬೆಳಕು ಮತ್ತು ಸಾಂಸ್ಕೃತಿಕ ಅಲಂಕಾರ ಜೊತೆಯಲ್ಲಿ ಸಂಕ್ಷಿಪ್ತ ಮಾಹಿತಿಯನ್ನು ವಿಸ್ತಾರ ಗೊಳಿಸಲು ಸಹಾಯ ಮಾಡುತ್ತದೆ.[7] ಹೇಗಾದರೂ ಸಾಹಿತ್ಯ ಆಧಾರಗಳು, ಮುಖಮೌಲ್ಯವನ್ನು ತೆಗೆದುಕೊಳ್ಳಲಾಗುವುದಿಲ್ಲ. ಕೇವಲ ಊಹೆಗಳನ್ನು ಸಾಕ್ಷ್ಯವಾಗಿ ತೆಗೆದುಕೊಳ್ಳಬಹುದು.

ಹೊಯ್ಸಳ ಕಾಲವು ವಿಫಲ ಸಾಹಿತ್ಯವನ್ನು ಸೃಷ್ಟಿಸಿದೆ. ಸಾಹಿತ್ಯಾಧಾರಗಳನ್ನು ಕನ್ನಡ ಮತ್ತು ಸಂಸ್ಕೃತ ಕೃತಿಗಳ ಎರಡು ವಿಭಾಗದಡಿಯಲ್ಲಿ ಅಧ್ಯಯನ ಸಾಧ್ಯವಾಗಿದೆ. ಮುಂದುವರೆದು ಕನ್ನಡ ಕೃತಿಗಳನ್ನು ಜೈನ, ಶೈವ ಮತ್ತು ವಚನ ಸಾಹಿತ್ಯದಡಿಯಲ್ಲಿ ಅಧ್ಯಯನ ಮಾಡಲು ಸಾಧ್ಯವಾಗಿದೆ.

ಅ) ಸಂಸ್ಕೃತ ಸಾಹಿತ್ಯಗಳು

ಎರಡನೇ ವಿದ್ಯಾಚಕ್ರವರ್ತಿಯ ಗದ್ಯಕರ್ಣಾಮೃತವು ಒಂದು ಬಹುಮಟ್ಟಿನ ಐತಿಹಾಸಿಕ ಸಂಸ್ಕೃತ ಗದ್ಯ ವಿದ್ಯಾಚಕ್ರವರ್ತಿಯ ಸಂಪೂರ್ಣ ವಂಶವು ಹೊಯ್ಸಳರ ಕಾಲದಲ್ಲೇ ಜೀವಿಸಿತ್ತು. ಉದಾಹರಣೆಗೆ ಒಂದನೇ ವಿದ್ಯಾಚಕ್ರವರ್ತಿಯು ಇಮ್ಮಡಿ ಬಲ್ಲಾಳನಡಿಯಲ್ಲಿ, ವೈದ್ಯನಾಥನು ಇಮ್ಮಡಿ ನರಸಿಂಹನಡಿಯಲ್ಲಿ 2ನೇ ವಿದ್ಯಾಚಕ್ರವರ್ತಿಯು ಹೊಯ್ಸಳ ಸೋಮೇಶ್ವರನಡಿಯಲ್ಲಿ, ಕವಿ ವಾಸುದೇವನು ಹೊಯ್ಸಳ ರಾಮನಾಥ ಮತ್ತು ಮುಮ್ಮಡಿ ನರಸಿಂಹನ ಅಡಿಯಲ್ಲಿ ಹಾಗೂ ಮಹಾದೇವ ಅಥವಾ 3ನೇ ವಿದ್ಯಾಚಕ್ರವರ್ತಿಯು ಮುಮ್ಮಡಿ ಬಲ್ಲಾಳನಡಿಯಲ್ಲಿದ್ದ ಕವಿಗಳನ್ನು ಚೆನ್ನಾಗಿ ಉಲ್ಲೇಖಿಸಬಹುದು, ರುಕ್ಮಿಣಿ ಕಲ್ಯಾಣವು ಇವನ ಮತ್ತೊಂದು ಕೃತಿ. ಗದ್ಯಕರ್ಣಾಮೃತವು ಎರಡು ವಿಭಾಗಗಳಾಗಿ ನೋಡಬಹುದು. ಮೊದಲನೆಯದು ಐತಿಹಾಸಿಕ ಘಟನೆಗಳು ಚಿಹ್ನೆಯಾಗಿ ಪೂರ್ವಛಾಯೆ ಕಾಣುವ ದಂತಕತೆಗಳ ಪೂರ್ವಭಾವಿ ಸಾಹಿತ್ಯ ಮತ್ತು ಎರಡನೆಯದು ನಿಜವಾದ ಐತಿಹಾಸಿಕ ವಿವರಣೆ. ಶಿವದೇವನು 2ನೇ ನರಸಿಂಹನಾಗಿ ಮತ್ತು ಕಳಲದೇವಿಯು ಶಿವನ ಹೆಂಡತಿ ಪಾರ್ವತಿಯಾಗಿ ಪ್ರತಿನಿಧಿಸುತ್ತಾರೆ.[8]

ಆ) ಕನ್ನಡ ಸಾಹಿತ್ಯಗಳು

ಈ ಕಾಲದಲ್ಲಿ ರಚನೆಯಾದ ಅಸಂಖ್ಯ ಸಾಹಿತ್ಯಗಳಲ್ಲಿ ಆಗಾಗ್ಗೆ ಹೊಯ್ಸಳ ಸಮಾಜದಲ್ಲಿ ನಡೆಯುವ ಚಟುವಟಿಕೆಗಳು ಮತ್ತು ಬದಲಾವಣೆಗಳನ್ನು ತೋರಿಸುವ ಕೆಲವು ಕನ್ನಡ ಸಾಹಿತ್ಯಗಳನ್ನು ಹೇಳಬಹುದು.

ರುದ್ರಭಟ್ಟನ 'ಜಗನಾಥ ವಿಜಯ' (ಸಂಕಲನ: ಡಾ.ಆರ್.ಶಾಮಶಾಸ್ತ್ರಿ) ವನ್ನು ಇಮ್ಮಡಿ ಬಲ್ಲಾಳನ ಕಾಲ ಕ್ರಿ.ಶ. 1180ರಲ್ಲಿ ಸಜ್ಜೆವಲ್ಲ ಚಂದ್ರಮೌಳಿಯನ್ನು ಮೆಚ್ಚಿಸಲು ರಚಿಸಲಾಯಿತು. ರುದ್ರಭಟ್ಟನು ಒಬ್ಬ ಬ್ರಾಹ್ಮಣ ಕವಿ ಜಗನಾಥ ವಿಜಯವು 18 ಸರ್ಗಗಳನ್ನು ಹೊಂದಿದೆ. ಇದು ಶ್ರೀಕೃಷ್ಣ ಕಥೆಯನ್ನು ಹೇಳುತ್ತದೆ. ದ್ವಿತೀಯಾರ್ಧ ಕಾವ್ಯವು ವೃತ್ತಿಗಳ, ಕ್ರೀಡೆ ಮತ್ತು ಆಟಗಳು ಹಾಗೂ ಲಜಹೋಮದಂತಹ ವಿವಾಹ ಆಚರಣೆಗಳನ್ನು ಹೇಳುತ್ತದೆ.[9]

ಜನ್ನನ ಅನಂತನಾಥ ಪುರಾಣವು ಜೈನ ಸಾಹಿತ್ಯದಲ್ಲಿಯೇ ಒಂದು ಮಹತ್ವದ ಕೃತಿ. ಕವಿ ಜನ್ನನನ್ನು ಹೊಯ್ಸಳ ಶಾಸನಗಳಲ್ಲಿ ಜನ್ನ, ಜನ್ನಯ್ಯ, ಮತ್ತು ಜನ್ನಿಗ ಎಂಬ ವಿವಿಧ ಹೆಸರುಗಳಲ್ಲಿ ಉಲ್ಲೇಖಿಸಲಾಗಿದೆ. ಅವನನ್ನು ಅವನ ಮಹಾನ್ ಪಾಂಡಿತ್ಯದ ಪ್ರಯುಕ್ತ 'ಕವಿಚಕ್ರವರ್ತಿ'ಯೆಂದು ಕರೆಯಲಾಗಿದೆ. ಈ ಕೃತಿಯು ಕನ್ನಡ ಅಧ್ಯಯನ ಸಂಸ್ಥೆಯ ದೇವಿರಪ್ಪ.ಎಚ್, ಪದ್ಮನಾಭ ಎಂ.ಸಿ ಅವರಿಂದ 1972ರಲ್ಲಿ ಸಂಪಾದಿಸಲ್ಪಟ್ಟಿತ್ತು. ಇದು 14 ತೀರ್ಥಂಕರರು, ಅನಂತ ಜಿನರ ಕಥೆಗಳನ್ನು ಹೇಳುತ್ತದೆ. ಈ ಕಾವ್ಯವು ಸಿದ್ಧಿಕಲ್ಪನೆಯಂತಹ ಕೆಲವು ಸಾಂಪ್ರದಾಯಿಕ ಧಾರ್ಮಿಕ ಕಾರ್ಯಗಳನ್ನು ಹೇಳುತ್ತದೆ.[10] ಈತನ 'ಯಶೋಧರ ಚರಿತ್ರೆ' ಎಂಬ ಮತ್ತೊಂದು ಕೃತಿಯು ಅಹಿಂಸಾ ತತ್ವ ಬೋಧನೆಗಳು ಮತ್ತು ಜೀವದಯಷ್ಟಾಮಿನೊಂಪಿ ಆಚರಣೆಯನ್ನು ಸಮರ್ಥಿಸುತ್ತದೆ.

'ನೇಮಿನಾಥ ಪುರಾಣಂ' ಮತ್ತು 'ಲೀಲಾವತಿ ಪ್ರಬಂಧಂ' ಗಳು ನೇಮಿಚಂದ್ರನ ಎರಡು ಜೈನ ಕಾವ್ಯಗಳು. ಈ ಕವಿಯು ಇಮ್ಮಡಿ ಬಲ್ಲಾಳನ ಕಾಲದಲ್ಲಿ ಜೀವಿಸಿದ್ದನು. 'ನೇಮಿಚಂದ್ರ ಪುರಾಣಂ' ಅಥವಾ 'ಅರ್ಧನೇಮಿ'ಯು 22 ತೀರ್ಥಂಕರರ ಕಥೆಗಳನ್ನು ಹೇಳುತ್ತದೆ. ಈ ಕೃತಿಯು ಲೀಲಾವತಿ ರಾಜಕುಮಾರಿಯ ಶಿಕ್ಷಣದ ಬಗ್ಗೆ ಬೆಳಕು ಚೆಲ್ಲುತ್ತದೆ. ಲೀಲಾವತಿ ಪ್ರಬಂಧವು ನಿಜವಾದ ಪ್ರೇಮವು ಒಂದು ವ್ಯವಸ್ಥಿತ ವಿವಾಹವಾಗಿ ಬದಲಾವಣೆಗೊಂಡು ಕಥೆಯನ್ನು ಹೇಳುತ್ತದೆ. ಧಾರೆ ವೈವಾಹಿಕ ಶಾಸ್ತ್ರವು ಸಮಾಜದ ಸಾಮಾಜಿಕ ಸಂಪ್ರದಾಯದ ಭಾಗವೆಂದು ಹೇಳುತ್ತದೆ.[11]

ನಯಸೇನನ 'ಧರ್ಮಾಮೃತ' ಮಾಹಿತಿಗಳ ಒಂದು ಗಣಿಯಾಗಿದೆ. ಇವನು ಗದಗ ತಾಲ್ಲೂಕಿನ ಮುಳುಗುಂದದಲ್ಲಿ ನೆಲೆಸಿದ್ದ ಒಂದು ಪ್ರಖ್ಯಾತ ಭೋದಕ ಕುಟುಂಬಕ್ಕೆ ಸೇರಿದವನು. ಕಾವ್ಯವು ಚಂಪೂ ಶೈಲಿಯಲ್ಲಿ ಬರೆಯಲ್ಪಟ್ಟಿದೆ. 10ನೇ ಸರ್ಗವೂ ಹೆಚ್ಚು ಹೊಯ್ಸಳರ ಕಾಲಕ್ಕೆ ಗಮನಿಸಿ ವೇಶ್ಯೆಯರ ಶಿಕ್ಷಣವನ್ನು ಎತ್ತಿ ತೋರಿಸುತ್ತದೆ.[12]

ಹರಿಹರ, ರಾಘವಾಂಕರಂತಹ ವೀರಶೈವ ಕವಿಗಳು ಇದ್ದರು. ಕವಿ ಹರಿಹರನು ಒಂದನೇ ನರಸಿಂಹನ ಬಳಿ ಲೆಕ್ಕಿಕನಾಗಿ ಮೊದಲು ಸೇವೆ ಸಲ್ಲಿಸಿದ್ದನು. ಅನಂತರ ರಾಜಾಶ್ರಯವನ್ನು ಬದಿಗಿಟ್ಟು ಹಂಪಿಯಲ್ಲಿ ನೆಲೆಸಿದನು. ಹರಿಹರನ ಜೀವನ ಚರಿತ್ರೆಯು ವೀರಶೈವ, ಜೈನ, ಬ್ರಾಹ್ಮಣ, ವೈಷ್ಣವರಲ್ಲಿನ ಸಂಘರ್ಷಕ್ಕೆ ಸಾಕ್ಷಿಯಾಗಿದ್ದಾನೆ. ರಗಳೆಗಳು ಮತ್ತು ಗಿರಿಜಾ ಕಲ್ಯಾಣಕ್ಕೆ ಪ್ರಸಿದ್ಧ ಕವಿ. 'ಹರಿಹರನ ರಗಳೆಗಳನ್ನು ಪಿ.ಜಿ.ಹಳಕಟ್ಟಿಯವರು ಸಂಪಾದಿಸಿದ್ದಾರೆ. ವೈಜಕವ್ವೆ, ಅದಯ್ಯ, ಏಕಾಂತದ ರಮಿತಂದೆಯ ರಗಳೆಗಳಲ್ಲಿ ಜೈನರು ಮತ್ತು ಶೈವರ ನಡುವೆ ಧಾರ್ಮಿಕ ಘರ್ಷಣೆ ಬಗ್ಗೆ ಮಾಹಿತಿ ಕೊಡುವ ಆಧಾರವಾಗಿದೆ. ವೀರಶೈವರ ಸಾಮರ್ಥ್ಯವು ಚೆನ್ನಾಗಿ ಕವಿಯಿಂದ ಪ್ರಕಟವಾಯಿತು. ಬಸವರಾಜದೇವ ರಗಳೆಯು ಬಸವಣ್ಣನ ಕಥೆಯಾಗಿದೆ. ಗಿರಿಜಾ ಕಲ್ಯಾಣವು ಹಿಂದೂ ವಿವಾಹ ಪದ್ಧತಿಗಳ ಉದಾಹರಣೆಯಾಗಿದೆ.

ಹೊಯ್ಸಳ ಕಾಲದ ಪ್ರಸಿದ್ಧ ಕವಿ ರಾಘವಾಂಕ, ಹರಿಶ್ಚಂದ್ರ ಕಾವ್ಯ, ಸೋಮನಾಥ ಚರಿತೆ ಮತ್ತು ಸಿದ್ಧರಾಮಚರಿತೆ, ಇವನ ಪ್ರಮುಖ ಕೃತಿಗಳು. ಸೋಮನಾಥ ಚರಿತೆಯು ಜೈನ ಮತ್ತು ಶೈವರ ವಿವಾದವನ್ನು ವಿವರಿಸಿದರೆ ಸಿದ್ಧರಾಮ ಚರಿತೆಯು ಸಮಾಜ ಸುಧಾರಕ ಸಿದ್ಧರಾಮನ ಲೋಕೋಪಕಾರಿ ಚಟುವಟಿಕೆಯನ್ನು ಬಿಂಬಿಸುತ್ತದೆ. ಮತ್ತು ಹರಿಶ್ಚಂದ್ರ ಕಾವ್ಯವು ಹೊಯ್ಸಳ ಸಮಾಜದ ಸಾಮಾಜಿಕ ರಚನೆಗೆ ಸುಳಿವು ನೀಡುತ್ತದೆ.

ಬಿ.ಬಿ.ಹಾಂದಿಯವರು ಸಂಪಾದಿಸಿದ ಕೆರೆಯ ಪದ್ಮರಸನ ದೀಕ್ಷಾ ಬೋಧೆಯು ವೀರಶೈವ ಮತ್ತೊಂದು ಕೃತಿ. ಇದು ದೀಕ್ಷಾಮತ ಅಥವಾ ತತ್ವವನ್ನು ವಿದ್ಯಾರ್ಥಿಗಳಿಗೆ ಉಪದೇಶಿಸಿ ಚಿಂತಿಸಿವುದನ್ನು ಹೇಳುತ್ತದೆ. ಕವಿಯು ಸಮಾಜದ ಸಾಮಾಜಿಕ ಪಿಡುಗುಗಳನ್ನು ತೆರೆದಿಟ್ಟಿದ್ದಾನೆ.

1958ರಲ್ಲಿ ಧಾರವಾಡದ ಡಾ.ಆರ್.ಸಿ.ಹೀರೆಮಠರವರಿಂದ ಸಂಪಾದಿಸಲ್ಪಟ್ಟ ಸಂಪೂರ್ಣ ಪದ್ಮರಾಜ ಪುರಾಣವು ಶೈವ ಮತ್ತು ವೈಷ್ಣವರ ನಡುವೆ ಧಾರ್ಮಿಕ ಚರ್ಚೆಗಳು ಮತ್ತು ವಿವಾದಗಳು ಮತ್ತು ಅವರ ಪರಸ್ಪರ ದೇವರು ಶಿವ ಮತ್ತು ವಿಷ್ಣುವಿನ ಮಹತ್ವವನ್ನು ಎತ್ತಿ ಹಿಡಿಯುವ ಅಧ್ಯಯನಕ್ಕೆ ಒಂದು ಪ್ರಮುಖವಾದ ಆಧಾರವಾಗಿದೆ. ಕವಿ ಕೆರೆಯ ಪದ್ಮರಸನ ವಂಶದ ಸಾಲಿಗೆ ಸೇರಿದ ಸಂಪೂರ್ಣ ಪದ್ಮರಾಜ ಪುರಾಣದಲ್ಲಿ ಇಮ್ಮಡಿ ನರಸಿಂಹನ ಮಂತ್ರಿಯಾಗಿ ಮತ್ತು ಕವಿಯಾಗಿ ಕೆರೆಯ ಪದ್ಮರಸನ ಜೀವನ ಮತ್ತು ಸಾಧನೆಗಳನ್ನು ಚಿತ್ರಿಸಿದ್ದಾನೆ. ಉದಾಹರಣೆಗೆ 10ನೇ ಸರ್ಗವು ಕೆರೆಯ ಪದ್ಮರಸ ಮತ್ತು ತ್ರಿಭುವನ ತಾತರ ನಡುವೆ ಧಾರ್ಮಿಕ ವಿವಾದ ವಿಷ್ಣುವಿನ 10 ಅವತಾರವನ್ನು ಟೀಕೆಗಳು, ಶಿವನ ಪರಮಶ್ರೇಷ್ಟ ಮಹತ್ವವನ್ನು ಎತ್ತಿ ಹಿಡಿದದ್ದು ಮತ್ತು ತ್ರಿಭುವನ ತಾತನ್ನು ವೈಷ್ಣವದಿಂದ ಶೈವತ್ವಕ್ಕೆ ಮತಾಂತರವಾದುದನ್ನು ಬಹಿರಂಗ ಪಡಿಸುತ್ತದೆ.[13]

ಮಲ್ಲಿಕಾರ್ಜುನನ ಕಾವ್ಯಸಾರ ಅಥವಾ ಸುಕ್ತಿಸುದರ್ಣವಮ್ ಕನ್ನಡ ಕಾವ್ಯಗಳ ಯಥಾರ್ಥ ಕೋಶವಾಗಿದೆ. ಪ್ರತಿ ಸರ್ಗವ ಕೊನೆಯ ಉಲ್ಲೇಖಗಳ ಹೊಯ್ಸಳ ರಾಜ ಸೋಮೇಶ್ವರನನ್ನು ಮೆಚ್ಚಿಸಲು ರಚಿಸಿದನ್ನು ಬಹಿರಂಗಪಡಿಸುತ್ತದೆ. ಕವಿಯು ಹೊಯ್ಸಳರ ಕಾಲದ ಬೇಟೆಗಾರರ ಜೀವನ ನಿತ್ಯಕ್ರಮವನ್ನು ವರ್ಣಿಸಿದ್ದಾನೆ.

ವಚನ ಸಾಹಿತ್ಯವು ಸಮಾಜ ರಚನೆಯ ಬಗ್ಗೆ ವಿಶ್ಲೇಷಿಸಲು ಸಮಗ್ರವಾಗಿ ಉಪಯೋಗವಾಗಿದೆ. ಸಿರಿಗೆರೆ ಅಣ್ಣಿನ ಬಳಗದ ಅಂಗಡಿ ಎಸ್.ಎಮ್. ರವರಿಂದ, ಸಂಪಾದಿಸಿ ಮತ್ತು ತರ್ಜುಮೆ ಮಾಡಿದ 'ಬಸವಣ್ಣನ ವಚನಗಳು' ಕೆಲಸ ಉಪಾಸನೆ ಮೇಲೆ ಒತ್ತು ಮತ್ತು ಕಾಯಕವೇ ಕೈಲಾಸ ಕಲ್ಪನೆಯನ್ನು ಹೇಳುತ್ತದೆ. ಶಿವಶರಣೆಯರ ವಚನಗಳು ಸಮಾಜದ ದೌರ್ಬಲ್ಯವನ್ನು ಅಧ್ಯಯನ ಮಾಡಲು ಮಾಹಿತಿ ನೀಡಿದ ಮತ್ತೊಂದು ಆಧಾರವಾಗಿದೆ. ಕಾಳವ್ವೆ, ಕಡಿರೆ ರೇಮವ್ವೆ ಮತ್ತು ಅಮ್ಮಗೆ ರಾಯಮ್ಮರ ವಚನಗಳು ಚಾತುರ್ವರ್ಣ ವ್ಯವಸ್ಥೆಯ ಕಾಠಿಣ್ಯವನ್ನು ಪ್ರಕಟಿಸುತ್ತದೆ. ಅಮುಗೆ ರಾಯಮ್ಮ ಪವಿತ್ರ ಗ್ರಂಥಗಳ ಅಸತ್ಯಗಳು ಇತ್ಯಾದಿಗಳನ್ನು ಟೀಕಿಸಿ ವಿಸ್ತರಿಸಲು ಹೊರಟಿದ್ದಾಳೆ.

1.2 ಸಂಶೋಧನಾ ಅಧ್ಯಯನ ವಿಧಾನ

ಪ್ರಸ್ತುತ ಅಧ್ಯಯನಕ್ಕೆ ಐತಿಹಾಸಿಕ ಸಂಶೋಧನಾ ವಿಧಾನಗಳನ್ನು ಅಳವಡಿಸಿಕೊಳ್ಳಲಾಗುವುದು. ಪ್ರಮುಖವಾಗಿ ಶಾಸನಗಳು ಮತ್ತು ಸಾಹಿತ್ಯಾಧಾರಗಳನ್ನು ಬಳಸಲಾಗುವುದು. ಮೇಲೆ ಹೇಳಲ್ಪಟ್ಟ ಕಾರ್ಯಕ್ಕೆ ಪ್ರಾಥಮಿಕ, ದ್ವಿತೀಯ ಆಕರಗಳ ಇತ್ತೀಚಿನ ಮಾಹಿತಿಗಳನ್ನು ಸಂಗ್ರಹಿಸಲಾಗುವುದು.

1.3 ಅಧ್ಯಯನದ ಸ್ವರೂಪ ಮತ್ತು ವ್ಯಾಪ್ತಿ

ಕರ್ನಾಟಕದಲ್ಲಿ ಐತಿಹಾಸಿಕ ಸಂಶೋಧನೆಯು ಇತ್ತೀಚಿನ ಕಾಲಗಳಲ್ಲಿ ವಿವಿಧ ದೃಷ್ಟಿ ಕೋನದಿಂದ ಅನುಸಂಧಾನ ಮಾಡಿದರು. ಕಳೆದ ಶತಮಾನದಲ್ಲಿ ಕರ್ನಾಟಕ

ಇತಿಹಾಸದಲ್ಲಿ ಸಂಶೋಧನಾ ಕೆಲಸವು ಪಾಶ್ಚಾತ್ಯ ಮತ್ತು ಭಾರತೀಯ ವಿದ್ವಾಂಸರಿಂದ ನಿಜವಾದ ಆಸಕ್ತಿಯಲ್ಲಿ ಪ್ರಾರಂಭವಾಯಿತು. ಪ್ರಾಂತೀಯ ರಾಜಕೀಯ ಇತಿಹಾಸದ ಮುಖ್ಯ ಅಂಶವನ್ನು ರಚಿಸುವ ದೃಷ್ಟಿಯಿಂದ ಶಾಸನಗಳನ್ನು ಮತ್ತು ಇತರ ಆಕರಗಳನ್ನು ಬೃಹತ್ ಪ್ರಮಾಣದಲ್ಲಿ ಸಂಗ್ರಹಿಸಲಾಯಿತು. ಏಕೆಂದರೆ ರಾಜಕೀಯ ಇತಿಹಾಸದ ಬಲವಾದ ಆಧಾರವಿಲ್ಲದೆ ಕರ್ನಾಟಕ ಇತಿಹಾಸದ ಬೇರೆ ವಿಷಯಗಳು ಅವುಗಳಲ್ಲಿ ನಿಜವಾದ ಯಥಾದೃಷ್ಟಿಗಳನ್ನು ಗ್ರಹಿಸುವುದು ಸಾಧ್ಯವಾಗಿರಲಿಲ್ಲ. ಈ ಪ್ರವೃತ್ತಿಯು 20ನೇ ಶತಮಾನದ ಮಧ್ಯ ಭಾಗದವರೆಗೂ ಮುಂದುವರೆದಿತ್ತು. ಕರ್ನಾಟಕದ ಸಾಂಸ್ಕೃತಿಕ ಕೊಡುಗೆಗಳನ್ನು ವಿಶೇಷವಾಗಿ ಕನ್ನಡ ಸಾಹಿತ್ಯ ಅಭಿವೃದ್ಧಿಯಲ್ಲಿ ಆಸಕ್ತಿ ತೋರಿದಂತಹ ವಿದ್ವಾಂಸರಿಂದ ಗಮನಿಸಲಾಯಿತು. ಇಷ್ಟಾದರೂ ಇತಿಹಾಸದ ಸೂಕ್ಷ್ಮ ಅಧ್ಯಯನಗಳಿಗೆ ಸರಿಯಾದ ಗಮನವನ್ನು ಕೊಡಲಿಲ್ಲ. ರಾಜಕೀಯ ಅಧ್ಯಯನವು ಈ ಗಮನವನ್ನು ಸ್ವೀಕರಿಸಿತು. ಆದರೆ ಹೊಯ್ಸಳರ ಆಳ್ವಿಕೆಯ ಕಾಲದ ದಂಡನಾಯಕರ ಅಧ್ಯಯನವನ್ನು ನಿರ್ಲಕ್ಷಿಸಲಾಯಿತು. ಅದನ್ನು ಪರಿಪೂರ್ಣಗೊಳಿಸುವುದೇ ಪ್ರಸ್ತುತ ಸಂಶೋಧನೆಯ ಉದ್ದೇಶವಾಗಿದೆ.

ಈ ಮೇಲಿನ ವಿಷಯವನ್ನು ಕ್ರಮವಾಗಿ ವಿವರಿಸಲು ರಾಜಪ್ರಭುತ್ವ ಸಂಸ್ಥೆಗಳು ಮಾದರಿಯಾಗಿವೆ. ದಂಡನಾಯಕರು ಆಡಳಿತದಲ್ಲಿ ಒಂದು ಪ್ರಮುಖವಾದ ಪಾತ್ರವನ್ನು ವಹಿಸಿದ್ದಾರೆ. ಅವರು ರಾಜನಿಗೆ ನಂಬಿಕಸ್ಥರಾಗಿದ್ದರು. ಹೊಯ್ಸಳರ ಆಳ್ವಿಕೆಯ ಕಾಲದಲ್ಲಿ ದಂಡನಾಯಕರು ಶಕ್ತಿಶಾಲಿ ಮಂತ್ರಿಗಳಾಗಿದ್ದು ಅವರು ರಾಜಕೀಯ ಶಕ್ತಿಗೆ ಸ್ಥಂಭಗಳಂತೆ ನಂತಿದ್ದರು.

ಈ ಪ್ರಬಂಧವನ್ನು ಆರು ಅಧ್ಯಾಯಗಳಲ್ಲಿ ವಿಭಾಗಿಸಿ ವಿಶ್ಲೇಷಿಸಲಾಗಿರುವುದು. ಮೊದಲನೆಯ ಅಧ್ಯಾಯವು ಅಧ್ಯಯನದ ಉದ್ದೇಶ, ವ್ಯಾಪ್ತಿ, ಆಧಾರಗಳು ಮತ್ತು ಅಧ್ಯಯನದ ವಿಧಾನವನ್ನು ವಿವರಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಹೊಯ್ಸಳ ರಾಜ ಮೂರನೇ ನರಸಿಂಹನ ಆಡಳಿತವನ್ನು ವಿವರಿಸಲಾಗಿದೆ.

ಮೂರನೇ ಅಧ್ಯಾಯದಲ್ಲಿ ದಂಡನಾಯಕರ ಉದಯ, ಅರ್ಹತೆಗಳು, ಪ್ರಾಂತ್ಯಗಳು, ಪೆರುಮಳೆ ದಂಡನಾಯಕ, ಮಹಾಪ್ರಧಾನ ಸೋಮೆಯ, ಮಲ್ಲಿಕಾರ್ಜುನ, ಸೋಮಣ್ಣ, ಮಂಡೇಯ ಮಾರ್ನೆಯ, ಮಲ್ಲಿದೇವ, ಭೀಮಯ್ಯ ದಂಡನಾಯಕರು ಹಾಗೂ ಇತರೆ ದಂಡನಾಯಕರನ್ನು ವಿವರಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಹೊಯ್ಸಳ ರಾಜ್ಯದಲ್ಲಿ ದಂಡನಾಯಕರ ಪಾತ್ರವನ್ನು ವಿವರಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ದಂಡನಾಯಕರ ಸಾಂಸ್ಕೃತಿಕ ಕೊಡುಗೆಗಳನ್ನು ವಿವರಿಸಲಾಗಿದೆ. ಆರನೆಯ ಅಧ್ಯಾಯವು ಉಪಸಂಹಾರವನ್ನು ವಿವರಿಸಲಾಗಿದೆ.

ಈ ರೀತಿ ಪ್ರಬಂಧವನ್ನು ಆರು ಅಧ್ಯಾಯಗಳಾಗಿ ವಿಂಗಡಿಸಲಾಗಿದ್ದು ಈ ಅಧ್ಯಾಯಗಳ ನಂತರ ಗ್ರಂಥಸೂಚಿ, ವಂಶಾವಳಿಗಳು, ಭೂಪಟ, ಸೇರ್ಪಡಿಸಲಾಗಿದೆ. ಈ ರೀತಿ ಪ್ರಸ್ತುತ ಪ್ರಬಂಧವನ್ನು ಒಂದು ದಿಕ್ಸೂಚಿಯ ರೂಪದಲ್ಲಿ ಸಿದ್ಧಪಡಿಸಲಾಗಿದೆ.

1.4 ಹೊಯ್ಸಳರ ಸಂಕ್ಷಿಪ್ತ ರಾಜಕೀಯ ಇತಿಹಾಸ

ಈ ಸಂತತಿಯ ಸ್ಥಾಪಕನಾದ ಹೊಯ್ಸಳನು ಕಾಲ್ಪನಿಕ ವ್ಯಕ್ತಿಯಾಗಿರಬೇಕೆಂದು ಹಲವು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದರು. ಆದರೆ ಕ್ರಿ.ಶ. 10ನೇ ಶತಮಾನದ ಕೊನೆಯ ಭಾಗದಿಂದ ಹೊಯ್ಸಳ ಎಂಬ ಹೆಸರು ಹಲವು ಶಾಸನಗಳಲ್ಲಿ ಕಂಡುಬರುತ್ತದೆ. ಹೊಯ್ಸಳ ಮಾರುಗ ಎಂಬುವನು ಗಂಗರೊಡನೆ ಸೇರಿ ನೊಳಂಬ ರಾಜನನ್ನು ಸೋಲಿಸಿದ ಸಂಗತಿಯು ಶಾಸನವೊಂದರಿಂದ ತಿಳಿದು ಬರುತ್ತದೆ. ಆದ್ದರಿಂದ ಪ್ರಾರಂಭದಲ್ಲಿ ಈ ಸಂತತಿಯು ಗಂಗರ ಮಾಂಡಲಿಕ ಮನೆತನವಾಗಿ ಮಲೆನಾಡಿನಲ್ಲಿ ಅಸ್ತಿತ್ವಕ್ಕೆ ಬಂದಿತು. ಮಿಗಿಲಾಗಿ ಹೊಯ್ಸಳ ರಾಜರು ಗಂಗರ ಬಿರುದುಗಳಾದ ಪೆರ್ಮಾನಡಿ, ವೀರಗಂಗ, ವಿಕ್ರಮಗಂಗ ಮತ್ತು ರಕ್ಕಸಗಂಗ ಮೊದಲಾದ ಬಿರುದುಗಳನ್ನು ಹೊಂದಿದ್ದರು. ಈ ಸಂಗತಿಯು ಗಂಗರಿಗೂ ಹೊಯ್ಸಳರಿಗೂ ಪ್ರಾರಂಭದಲ್ಲಿ ಇದ್ದ ಸಂಬಂಧವನ್ನು ಸೂಚಿಸುತ್ತದೆ. ಈ ಸಂತತಿಯ ಸ್ಥಾಪಕನಾದ ಹೊಯ್ಸಳನ ಶಾಸನಗಳಾವುವು ಇದುವರೆಗೆ ದೊರೆತಿಲ್ಲ. ಆದರೆ ಹೊಯ್ಸಳನು ಐತಿಹಾಸಿಕ ವ್ಯಕ್ತಿಯೆಂಬುದು ನಿರ್ವಿವಾದ ಸಂಗತಿ. ಅವನು 10ನೇ ಶತಮಾನದ ಕೊನೆಯಲ್ಲಿ ಪ್ರಾಮುಖ್ಯತೆ ಪಡೆದು ಕ್ರಿ.ಶ. 1006 ರವರೆಗೂ ಆಳ್ವಿಕೆ ನಡೆಸಿದನೆಂದು ತಿಳಿದು ಬರುತ್ತದೆ. ಕ್ರಿ.ಶ. 1006ರಲ್ಲಿ ಚೋಳ ದಂಡನಾಯಕನಾದ ಅಪ್ರಮೇಯನನ್ನು ತಿರುಮಕೂಡಲು ನರಸೀಪುರ ತಾಲ್ಲೂಕಿನ ಕೆಳಗೂರು ಗ್ರಾಮದಲ್ಲಿ ಎದುರಿಸಿ ಪರಾಜಿತನಾದ ಹೊಯ್ಸಳ ಮುಖ್ಯನು ಈ ಸಂತತಿಯ ರಾಜ್ಯ ಸ್ಥಾಪಕನಾದ ಹೊಯ್ಸಳನೆಂಬುದರಲ್ಲಿ ಸಂಶಯ ತೋರುವುದಿಲ್ಲ.

ಒಂದನೇ ವಿನಯಾದಿತ್ಯ

ಹೊಯ್ಸಳನ ತರುವಾಯ ಒಂದನೇ ವಿನಯಾದಿತ್ಯನು ರಾಜನಾದನು. ಇವನು ಹೊಯ್ಸಳ ಮತ್ತು ಅವನ ಪತ್ನಿ ಭೂಮಿದೇವಿಯರ ಮಗ. ವಿನಯಾದಿತ್ಯನು ಕ್ರಿ.ಶ. 1022 ರವರೆಗೂ ಆಳಿದನು. ಇವನ ಆಳ್ವಿಕೆಯ ಪ್ರಾರಂಭದಲ್ಲೇ ಹೊಯ್ಸಳರಿಗೂ ಮತ್ತು ಚೋಳರಿಗೂ ಘರ್ಷಣೆಗಳು ನಡೆದವು ಎಂದು ಶಾಸನಗಳಿಂದ ತಿಳಿದು ಬರುತ್ತದೆ. ಉದಾಹರಣೆಗೆ 1006ರ ಕಲಿಯೂರು ಶಾಸನವನ್ನು ಹೆಸರಿಸಬಹುದು. ಈ ಕಾಳಗದಲ್ಲಿ ವಿನಯಾದಿತ್ಯನ ದಂಡನಾಯಕ ನಾಗಣ್ಣನೆಂಬುವನು ತನ್ನ ಪರಾಕ್ರಮವನ್ನು ಮೆರೆದನು. ವಿನಯಾದಿತ್ಯನು 1022ರಲ್ಲಿ ಮರಣ ಹೊಂದಿದನು.

ನೃಪಕಾಮ

ಒಂದನೇ ವಿನಯಾದಿತ್ಯನ ಮಗನಾದ ನೃಪಕಾಮನು ತನ್ನ ತಂದೆಯ ಮರಣಾನಂತರ ಅಧಿಕಾರಕ್ಕೆ ಬಂದನು. ಇವನು 1047 ರವರೆಗೂ ಆಳ್ವಿಕೆ ನಡೆಸಿದನು. ನೃಪಕಾಮನನ್ನು 'ಕಾಮನೃಪ' ಎಂದು ಹಲವು ಶಾಸನಗಳಲ್ಲಿ ಹೆಸರಿಸಲಾಗಿದೆ. ಅಧಿಕಾರಕ್ಕೆ ಬಂದ ನಂತರ ರಾಜ್ಯ ವಿಸ್ತರಣೆಯಲ್ಲಿ ತೊಡಗಿದನು. ಮೊದಲಿಗೆ ಅವನು ಚೋಳ ಸಾಮಂತರಾಗಿದ್ದ ಚೆಂಗಾಳ್ವರ ಮೇಲೆ ಯುದ್ಧ ಮಾಡಬೇಕಾಯಿತು. ಅನೇಕ ಬಾರಿ ಚೆಂಗಾಳ್ವರ ಮೇಲೆ ಹೋರಾಟ ಮಾಡಿದನು ಎಂದು ಶಾಸನಗಳು ತಿಳಿಸುತ್ತವೆ. ನೃಪಕಾಮನು ಚೆಂಗಾಳ್ವರನ್ನು ಸೋಲಿಸಿ ರಾಜ್ಯ ವಿಸ್ತರಿಸಿ 'ಮಹಾ ಮಂಡಲೇಶ್ವರ', 'ರಾಜಮಲ್ಲ ಪೆರ್ಮಾಡಿ' ಎಂಬ ಬಿರುದುಗಳನ್ನು ಧರಿಸಿದನು. 'ರಾಜಮಲ್ಲ ಪೆರ್ಮಾಡಿ' ಎಂಬ ಬಿರುದು ಗಂಗ ಸಂತತಿಯ ಪ್ರಭುಗಳು ಹೊಂದಿದ್ದ ಬಿರುದಾಗಿದ್ದು ಇದು ತಲಕಾಡಿನ ಗಂಗರಿಗೂ ದ್ವಾರಸಮುದ್ರದ ಹೊಯ್ಸಳರಿಗೂ ಇದ್ದ ಸಂಬಂಧವನ್ನು ವ್ಯಕ್ತ ಪಡಿಸುತ್ತದೆ. ವಿಷ್ಣುವರ್ಧನನ ಪ್ರಸಿದ್ಧ ದಂಡನಾಯಕ ಮತ್ತು ಅಮಾತ್ಯನಾಗಿದ್ದ ಗಂಗರಾಜನ ತಾತ ಈಚಿಮಯ್ಯನು ನೃಪಕಾಮನ ಆಸ್ಥಾನದಲ್ಲಿ ಇದ್ದನು. ನೃಪಕಾಮನು 1047ರಲ್ಲಿ ಮರಣ ಹೊಂದಿದನು. ನೃಪಕಾಮನ ತರುವಾಯ ಅವನ ಮಗ ಇಮ್ಮಡಿ ವಿನಯಾದಿತ್ಯನು ರಾಜನಾದನು.

ಇಮ್ಮಡಿ ವಿನಯಾದಿತ್ಯ (ಕ್ರಿ.ಶ. 1048-1100)

ಹೊಯ್ಸಳರ ಪ್ರಾರಂಭದ ರಾಜರಲ್ಲಿ ಸಮರ್ಥನಾದ ಇಮ್ಮಡಿ ವಿನಯಾದಿತ್ಯನು ತನ್ನ ಸ್ವಸಾಮರ್ಥ್ಯದಿಂದ ಹೊಯ್ಸಳರ ಪ್ರಾಬಲ್ಯವನ್ನು ವಿಸ್ತರಿಸಿದನು. ವಿನಯಾದಿತ್ಯನ ಕಾಲವನ್ನು ಹೊಯ್ಸಳರ ಶಕ್ತಿ ಸಂಘಟನೆ ಮತ್ತು ಸಂಚಯನದ ಕಾಲ ಎಂದು ಕರೆಯಲಾಗಿದೆ. ಇವನು ಚೋಳ ಮತ್ತು ಚಾಳುಕ್ಯರ ನಡುವಿನ ಕಾದಾಟದಿಂದ ಒದಗಿದ್ದ ಒಳ್ಳೆಯ ಅವಕಾಶವನ್ನು ಉಪಯೋಗಿಸಿ ಕೊಂಡು ರಾಜ್ಯ ವಿಸ್ತರಣೆಯಲ್ಲಿ ತೊಡಗಿದನು. ಸೈನ್ಯ ಬಲವನ್ನು ಹೆಚ್ಚಿಸಿಕೊಂಡು ಚಿಕ್ಕಮಗಳೂರು, ಹಾಸನ ಜಿಲ್ಲೆಗಳ ಮೇಲೂ ಮತ್ತು ಮೈಸೂರು, ಶಿವಮೊಗ್ಗ ಜಿಲ್ಲೆಗಳ ಮೇಲೂ ತನ್ನ ಆದಿಪತ್ಯವನ್ನು ಸ್ಥಾಪಿಸಿದನು. ಪ್ರಾರಂಭದಲ್ಲಿ ಸೊಸೆವೂರನ್ನು ರಾಜಧಾನಿಯನ್ನಾಗಿ ಹೊಂದಿದ್ದ ಇವನು ಅನಂತರ ಸ್ವಲ್ಪ ಮಟ್ಟಿಗೆ ಮೈದಾನ ಪ್ರದೇಶವಾಗಿದ್ದ ಹಾಗೂ ಸಂಪರ್ಕ ಸಾಧನಗಳಿಗೆ ಅನುಕೂಲವಾಗಿದ್ದ ದ್ವಾರಸಮುದ್ರವನ್ನು ರಾಜಧಾನಿಯಾಗಿ ಮಾಡಿಕೊಂಡನು.

ಚೆಂಗಾಳ್ವ ಮತ್ತು ಕೊಂಗಾಳ್ವರನ್ನು ಸೋಲಿಸಿ ಮೈಸೂರು ಜಿಲ್ಲೆಯ ಕನ್ನಂಬಾಡಿಯವರೆಗೂ ರಾಜ್ಯ ವಿಸ್ತರಿಸಿದನು. ತಲಕಾಡು ಗಂಗರ ಬಿರುದಾದ "ರಕ್ಕಸಗಂಗ" ಎಂಬುದನ್ನು ಧರಿಸಿ ಗಂಗವಾಡಿಯನ್ನು ಚೋಳರ ಆಳ್ವಿಕೆಯಿಂದ ಮುಕ್ತಗೊಳಿಸಲು ಪ್ರಯತ್ನಿಸಿದನು. ಇವನ ಕಾಲದಲ್ಲಿ ಕೊಂಕಣ, ಆಳ್ವಖೇಡ, ವೈನಾಡು ಮತ್ತು ತಲಕಾಡು ಹೊಯ್ಸಳ ರಾಜ್ಯದ ಗಡಿಗಳಾಗಿದ್ದವೆಂದು ಶಾಸನದಿಂದ ತಿಳಿದು ಬರುತ್ತದೆ.

ಕಲ್ಯಾಣಿ ಚಾಳುಕ್ಯರ ಸಾರ್ವಭೌಮಾಧಿಕಾರವನ್ನು ಒಪ್ಪಿಕೊಂಡು ಅವರ ಬಿರುದುಗಳಲ್ಲಿ ಒಂದಾದ ತ್ರಿಭುವನಮಲ್ಲ ಎಂಬುದನ್ನು ತಾನೂ ಧರಿಸಿದನು. ಕೇವಲ ರಾಜಕೀಯ ಸಂಬಂಧವಷ್ಟೇ ಅಲ್ಲದೆ ವೈವಾಹಿಕ ಸಂಬಂಧವೂ ಇವನ ಕಾಲದಲ್ಲಿ ಹೊಯ್ಸಳ ಮತ್ತು ಚಾಳುಕ್ಯರ ನಡುವೆ ಏರ್ಪಟ್ಟಿತ್ತೆಂದು ಶಾಸನವೊಂದು ತಿಳಿಸುತ್ತದೆ. ಚಾಳುಕ್ಯ ಚಕ್ರವರ್ತಿ ಇಮ್ಮಡಿ ಸೋಮೇಶ್ವರನ ರಾಣಿಯಾದ ಹೊಯ್ಸಳ ಮಹಾದೇವಿಯು ವಿನಯಾದಿತ್ಯನ ಸಹೋದರಿಯಾಗಿದ್ದಳು. ವಿನಯಾದಿತ್ಯನ ಮಗನೂ, ಯುವರಾಜನೂ ಆದ ಎರೆಯಂಗನು ಚಾಳುಕ್ಯ ಚಕ್ರವರ್ತಿ ಆರನೇ ವಿಕ್ರಮಾದಿತ್ಯನಿಗೆ ಬಲಭುಜದಂತಿದ್ದನು ಎಂದು ಶಾಸನಗಳಲ್ಲಿ ವರ್ಣಿಸಲಾಗಿದೆ. ಆರನೇ ವಿಕ್ರಮಾದಿತ್ಯನು ಕೈಗೊಂಡ ಉತ್ತರದ ದಂಡಯಾತ್ರೆಯ ಸಮಯದಲ್ಲಿ ಎರೆಯಂಗನು ಚಾಳುಕ್ಯ ಸೈನ್ಯದ ನೇತೃತ್ವವನ್ನು ವಹಿಸಿದ್ದನು. ಮಾಳ್ವವನ್ನು ಮುತ್ತಿದನಲ್ಲದೆ ಧಾರಾ ನಗರವನ್ನು ಮತ್ತು ಚಕ್ರಕೂಟವನ್ನು ಸೂರೆಗೊಂಡನು.

"ಪಂಚಮಹಾಶಬ್ಧ ಮಹಾಮಂಡಲೇಶ್ವರ ವೀರ ಎರೆಯಂಗ ಹೊಯ್ಸಳದೇವ" ಎಂಬ ಬಿರುದಾಂಕಿತನಾದ ಎರೆಯಂಗನಿಗೆ ಏಚಲಾದೇವಿ ಮತ್ತು ಮಹಾದೇವಿ ಎಂಬ ಇಬ್ಬರು ಪತ್ನಿಯರಿದ್ದರು. ಏಚಲಾದೇವಿ ಯುವರಾಣಿಯಾಗಿದ್ದಳು. ಈಕೆಯ ತಂದೆ ಗಂಗ ಸಂತತಿಯ ಪೆರ್ಮಾಡಿದೇವನು ಎಡತೊರೆ ನಾಡಿನ ಪ್ರಭುವಾಗಿದ್ದನು. ಎರೆಯಂಗ ಮತ್ತು ಏಚಲಾದೇವಿಗೆ ಬಲ್ಲಾಳ, ಬಿಟ್ಟಿದೇವ ಮತ್ತು ಉದಯಾದಿತ್ಯ ಎಂಬ ಮೂವರು ಗಂಡು ಮಕ್ಕಳಿದ್ದರು. ಪರಾಕ್ರಮಿಯೂ ಗುಣ ಸಂಪನ್ನನೂ ಆದ ಎರೆಯಂಗನು ಇನ್ನೂ ಯುವರಾಜನಾಗಿದ್ದಾಗಲೇ ತನ್ನ ತಂದೆಯ ಆಳ್ವಿಕೆಯ ಕಾಲದಲ್ಲಿ ಕ್ರಿ.ಶ. 1099ರಲ್ಲಿ ಮರಣ ಹೊಂದಿದನು. ಜೈನ ಮತಾವಲಂಬಿಯಾಗಿದ್ದ ಎರೆಯಂಗನಿಗೆ 'ಗೋಪನಂದಿ' ಎಂಬ ಆಚಾರ್ಯನು ಗುರುವಾಗಿದ್ದನು.

ವಿನಯಾದಿತ್ಯನು ದಕ್ಷ ಆಡಳಿತಗಾರನಾಗಿದ್ದನು. ಪೋಚಿಮಯ್ಯ ಎಂಬುವನು ಅವನ ಮಹಾಸಂಧಿ ವಿಗ್ರಹಿಯಾಗಿದ್ದನು. ಮರಿಯಾನೆ ಮತ್ತು ಬಾಹುಬಲಿ ಎಂಬುವರು ಅವನ ಇತರ ಮುಖ್ಯ ಸಚಿವ ಮತ್ತು ದಂಡನಾಯಕರಾಗಿದ್ದರು. ವಿನಯಾದಿತ್ಯನು ಜೈನ ಮತಾವಲಂಬಿಯಾಗಿದ್ದನು. ಅವನ ರಾಣಿ ಕೆಳೆಯಬ್ಬರಿಸಿ ಜೈನ ಮತೀಯರಿಗೆ ಪ್ರೋತ್ಸಾಹ ನೀಡಿದಳು. ಶಾಂತಿದೇವ ಎಂಬ ಜೈನಮುನಿಯು ವಿನಯಾದಿತ್ಯನ ಗುರುವಾಗಿದ್ದನು. ಇಮ್ಮಡಿ ವಿನಯಾದಿತ್ಯನು ದಕ್ಷ ಆಡಳಿತಗಾರನಾಗಿದ್ದಂತೆ ಕಲಾಪ್ರೇಮಿಯೂ ಆಗಿದ್ದನು. ಮತ್ತಾವರ, ಸೊಸೆವೂರು, ಶ್ರವಣಬೆಳಗೊಳ, ಚಿಕ್ಕಹನ ಸೋಗೆ ಮೊದಲಾದ ಕಡೆಗಳಲ್ಲಿ ಅನೇಕ ಜೈನ ಬಸದಿಗಳು ಇವನ ಕಾಲದಲ್ಲಿ ನಿರ್ಮಾಣವಾದವು.

ವಿನಯಾದಿತ್ಯನು ಜೈನಮತೀಯನಾದರೂ, ಪರಮತ ಸಹಿಷ್ಣುವಾಗಿದ್ದನು. ತೊಣಚಿಯ ಬಸವೇಶ್ವರ, ಕುಪ್ಪತ್ತೂರಿನ ಕೈತಬೇಶ್ವರ ದೇವಾಲಯಗಳು ಈ ಕಾಲದಲ್ಲಿ ನಿರ್ಮಾಣವಾದವು. ಅವನು ಅನೇಕ ದಾನದತ್ತಿಗಳನ್ನು ಬಿಟ್ಟಿದ್ದಕ್ಕೆ ನಿದರ್ಶನಗಳಿವೆ.

ಬಳ್ಳಿಗಾವೆಯಲ್ಲಿರುವ ಕೇದಾರೇಶ್ವರ ದೇವಾಲಯವು ವಿನಯಾದಿತ್ಯನ ಆಳ್ವಿಕೆಯಲ್ಲಿ ಕಟ್ಟಲಾದುದೆಂದು ಅಭಿಪ್ರಾಯಪಡಲಾಗಿದೆ. ಹೊಯ್ಸಳ ಸಂತತಿಯ ಪ್ರಾರಂಭದ ಪ್ರಬಲ ರಾಜನಾದ ವಿನಯಾದಿತ್ಯನು ಅನೇಕ ಕೆರೆ, ಕಟ್ಟೆಗಳನ್ನು ಕಟ್ಟಿಸಿದನು. ಕೃಷಿಗೆ ಪ್ರೋತ್ಸಾಹವನ್ನು ನೀಡಿದ್ದನು. ವಿನಯಾದಿತ್ಯನು ಕ್ರಿ.ಶ. 1100 ರಲ್ಲಿ ಮರಣ ಹೊಂದಿದನು.

ಒಂದನೇ ಬಲ್ಲಾಳ (ಕ್ರಿ.ಶ. 1100–1107)

ಯುವರಾಜ ಎರೆಯಂಗನು ಮೊದಲೇ ಮರಣ ಹೊಂದಿದ್ದರಿಂದ ವಿನಯಾದಿತ್ಯನ ಮೊಮ್ಮಗನಾದ ಹಾಗೂ ಎರೆಯಂಗನ ಹಿರಿಯ ಮಗನಾದ ಬಲ್ಲಾಳನು ರಾಜನಾದನು. ಇವನನ್ನು ಒಂದನೇ ಬಲ್ಲಾಳನೆಂದು ಕರೆಯಲಾಗಿದೆ. ಪಟ್ಟಕ್ಕೆ ಬಂದ ಕೂಡಲೇ ಬಲ್ಲಾಳನು ತನ್ನ ಸಂತತಿಯ ಪೂರ್ವಿಕರ ನೆಲೆಯಾದ ಸೊಸೆವೂರು ಅಥವಾ ಶಶಕಪುರವನ್ನು ಸಂದರ್ಶಿಸಿ ಅಲ್ಲಿನ ದೇವಾಲಯ ಗಳಿಗೆ ಕೈಂಕರ್ಯಗಳನ್ನು ಏರ್ಪಡಿಸಿ ದತ್ತಿಗಳನ್ನು ಬಿಟ್ಟನು. ತನ್ನ ತಾತನಂತೆ ಬಲ್ಲಾಳನೂ ಕೂಡ ಕಲ್ಯಾಣದ ಚಾಳುಕ್ಯರ ಸಾಮಂತತ್ವವನ್ನು ಒಪ್ಪಿಕೊಂಡು 'ತ್ರಿಭುವನಮಲ್ಲ' ಎಂಬ ಬಿರುದನ್ನು ಹೊಂದಿದ್ದನು. ಪಟ್ಟಕ್ಕೆ ಬಂದ ಕೂಡಲೇ ಚೆಂಗಾಳ್ವರನ್ನು ಹತ್ತಿಕ್ಕಬೇಕಾಯಿತು. ಬಲ್ಲಾಳನು ದ್ವಾರಸಮುದ್ರವನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡಿದ್ದನು.

ಬಲ್ಲಾಳನ ಆಳ್ವಿಕೆಯ ಅತಿ ಮುಖ್ಯ ಘಟನೆ ಎಂದರೆ ಜಗದೇವ ಎಂಬುವನು ಹೊಯ್ಸಳ ರಾಜ್ಯವನ್ನು ಆಕ್ರಮಣ ಮಾಡಿದುದು. ಈ ಜಗದೇಕ ಯಾರು ಎಂಬುದರ ಬಗ್ಗೆ ಜಿಜ್ಞಾಸೆ ಇದೆ. ಅವನು ಮಾಳವದ ದೊರೆ ಎಂದು ಅಭಿಪ್ರಾಯಪಡಲಾಗಿತ್ತು. ಆದರೆ ಮಾಳವದ ರಾಜನೊಬ್ಬನು ಚಾಳುಕ್ಯ ಸಾಮ್ರಾಜ್ಯವನ್ನು ದಾಟಿ ಹೊಯ್ಸಳ ರಾಜ್ಯದ ಆಕ್ರಮಣಕ್ಕೆ ಪ್ರಯತ್ನಿಸಿದನೆಂಬುದು ಸಮಂಜಸವಾಗಿ ತೋರುವುದಿಲ್ಲ. ಆದ್ದರಿಂದ ಜಗದೇಕನು ಶಾಂತಾರ ಸಂತತಿಯ ಪೊಟ್ಟ ಪೊಂಬುರ್ಚದ ರಾಜನಲ್ಲದೆ ಬೇರೆಯವನಲ್ಲ ಎಂದು ವೇದ್ಯವಾಗುತ್ತದೆ. ಏನೇ ಭಿನ್ನಾಭಿಪ್ರಾಯ ಗಳಿದ್ದರೂ, ಬಲ್ಲಾಳನು ತನ್ನ ಸಹೋದರನಾದ ವಿಷ್ಣುವರ್ಧನ ಸಹಾಯದಿಂದ ಶತ್ರುವನ್ನು ಎದುರಿಸಿ ಸೋಲಿಸಿ ಹಿಮ್ಮೆಟ್ಟಿಸಿದನು.

ಒಂದನೇ ಬಲ್ಲಾಳನಿಗೆ ಮಕ್ಕಳಿರಲಿಲ್ಲವಾದ್ದರಿಂದ ಉತ್ತರಾಧಿಕಾರಿಯನ್ನು ಪಡೆಯುವ ಹಂಬಲದಿಂದ ತನ್ನ ದಂಡನಾಯಕ ಮರಿಯಾನೆ ಎಂಬುವನ ಮೂವರು ಸುಂದರ ಪುತ್ರಿಯರಾದ ಪದ್ಮಲ, ಚಾಮಲ ಮತ್ತು ಬೊಪ್ಪಲದೇವಿಯರನ್ನು ವಿವಾಹ ಮಾಡಿಕೊಂಡು ಅವರ ಮಾತಾಪಿತೃಗಳಿಗೆ ಸಿಂದಗೆರೆ ಎಂಬ ಗ್ರಾಮವನ್ನು ದಾನವಾಗಿ ನೀಡಿದನು. ಆದರೂ ಬಲ್ಲಾಳನಗೆ ಮಕ್ಕಳಾಗಲಿಲ್ಲ. ಅವನು ಯಾವುದೋ ಒಂದು ಜನ್ಮಾಂತರೀಯ ರೋಗದಿಂದ ನರಳುತ್ತಿದ್ದನು. ಶ್ರವಣಬೆಳಗೊಳದ ಚಾರುಕೀರ್ತಿ ಪಂಡಿತನೆಂಬ ಯತಿಯು ರೋಗವನ್ನು ಉಪಶಮನಗೊಳಿಸಿ 'ಬಲ್ಲಾಳ ಜೀವರಕ್ಷಕ' ಎಂಬ ಬಿರುದನ್ನು ಪಡೆದನು. ಆದರೂ ಬಲ್ಲಾಳನು

ಅನಾರೋಗ್ಯಕ್ಕೆ ತುತ್ತಾಗಿ ಮರಣ ಹೊಂದಿದನು. ಅವನು ಜೈನಮತಾವಲಂಬಿಯಾಗಿದ್ದರೂ ಪರಮತ ಸಹಿಷ್ಣುವಾಗಿದ್ದನು. ಶುಭಚಂದ್ರ ಜೈನಮುನಿ ಎಂಬ ಪ್ರಸಿದ್ಧ ಜೈನಯತಿ ಅವನ ಸಮಕಾಲೀನನಾಗಿದ್ದನು. ರಾಜಧಾನಿ ಮತ್ತು ಇತರ ಕಡೆಗಳಲ್ಲಿನ ಹಲವು ಜೈನ ಬಸದಿಗಳು ಅವನ ಕಾಲದಲ್ಲಿ ನಿರ್ಮಾಣವಾದವು.

ವಿಷ್ಣುವರ್ಧನ (ಕ್ರಿ.ಶ. 1108–1142)

ಒಂದನೇ ಬಲ್ಲಾಳನಗೆ ಮಕ್ಕಳಿರಲಿಲ್ಲವಾದ್ದರಿಂದ ಅವನ ಮರಣಾನಂತರ ಅವನ ತಮ್ಮನಾದ ವಿಷ್ಣುವರ್ಧನನು ರಾಜನಾದನು. ತನ್ನ 35 ವರ್ಷಗಳ ಆಳ್ವಿಕೆಯಲ್ಲಿ ವಿಷ್ಣುವರ್ಧನನು ಹೊಯ್ಸಳ ಸಂತತಿಯ ಅಧಿಕಾರವನ್ನು ಭದ್ರಬುನಾದಿಯ ಮೇಲೆ ರಾಜ್ಯವನ್ನು ಸ್ಥಾಪಿಸಿದನಲ್ಲದೆ, ವಿಸ್ತರಿಸಿ ಆಡಳಿತವನ್ನು ವ್ಯವಸ್ಥೆಗೊಳಿಸಿದನು. ಸಾಹಿತ್ಯ, ಧರ್ಮ, ಕಲೆಗೆ ವಿಶೇಷ ಪ್ರೋತ್ಸಾಹವನ್ನು ನೀಡಿದನು. ಪ್ರಜೆಗಳ ಪುರೋಭಿವೃದ್ಧಿಗಾಗಿ ಶ್ರಮಿಸಿ ಪ್ರಜಾನುರಾಗ ಗಳಿಸಿದನು. ಚಾಳುಕ್ಯರ ಪರಮಾಧಿಕಾರವನ್ನು ಕೊನೆಗಾಣಿಸಿ, ಸ್ವತಂತ್ರ ಆಡಳಿತವನ್ನು ಸ್ಥಾಪಿಸಿ, ಚೋಳರನ್ನು ಕನ್ನಡ ನಾಡಿನಿಂದ ಓಡಿಸಿ, ಕನ್ನಡನಾಡಿಗೆ ಆಶ್ರಯ ಕೋರಿ ಬಂದ ಧರ್ಮ ಸುಧಾರಕ ಶ್ರೀರಾಮಾನುಜಾ ಚಾರ್ಯರನ್ನು ಪುರಸ್ಕರಿಸಿ, ಬೇಲೂರು ಮತ್ತು ಹಳೇಬೀಡಿನ ಮನಮೋಹಕ ದೇವಮಂದಿರಗಳನ್ನು ನಿರ್ಮಿಸಿ, ಚತುಸ್ಸಮಯ ಸಮುದ್ಧರಣನೆನಿಸಿದ ಬಿಟ್ಟಿಗ ವಿಷ್ಣುವರ್ಧನನು ಹೊಯ್ಸಳ ಸಂತತಿಯ ಪರಮಶ್ರೇಷ್ಠ ರಾಜರಲ್ಲಿ ಒಬ್ಬನಾಗಿರುವುದಲ್ಲದೆ ಕನ್ನಡನಾಡಿನ ಆದರ್ಶ ಪ್ರಭುಗಳಲ್ಲಿ ಒಬ್ಬನಾಗಿದ್ದಾನೆ.

ವಿಷ್ಣುವರ್ಧನನು ತನ್ನ ತಾತನಾದ ಎರಡನೆ ವಿಕ್ರಮಾದಿತ್ಯನ ಆಳ್ವಿಕೆಯ ಕೊನೆಗಾಲದಲ್ಲಿ ಶ್ರೀರಂಗಪಟ್ಟಣ ತಾಲ್ಲೂಕಿನ ಬೆಳಗೊಳದ ಸುತ್ತಮುತ್ತಲ ಪ್ರದೇಶಕ್ಕೆ ಪ್ರಾಂತ್ಯಾಧಿಕಾರಿಯಾಗಿದ್ದನು. ಬೆಳಗೊಳದ ಸೀತಾರಾಮ ದೇವಾಲಯಕ್ಕೆ ದಾನನೀಡಿ ಆ ಗ್ರಾಮವನ್ನು ಒಂದು ಅಗ್ರಹಾರವಾಗಿ ಪರಿವರ್ತಿಸಿ ಬ್ರಾಹ್ಮಣರಿಗೆ ಕೊಟ್ಟನು. ಆ ಪ್ರದೇಶವನ್ನು 1096ರ ಶಾಸನವು 'ಶ್ರೀ ವಿಷ್ಣುವರ್ಧನ ಚತುರ್ವೇದಿ ಮಂಗಲ' ಎಂಬ ಹೆಸರಿನಿಂದಲೇ ಕರೆದಿದೆ. ತನ್ನ ಅಣ್ಣ ಬಲ್ಲಾಳನ ಆಳ್ವಿಕೆಯಲ್ಲಿ ಯುದ್ಧ ಮತ್ತು ಆಡಳಿತದಲ್ಲಿ ಸಕ್ರಿಯ ಪಾತ್ರ ವಹಿಸಿದ್ದನು. ಜಗದೇವ ಹಾಗೂ ಇತರರೊಡನೆ ಪರಾಕ್ರಮದಿಂದ ಹೋರಾಡಿ ಶತ್ರುಗಳನ್ನು ಸೋಲಿಸಿದನು. ಇವನು ತನ್ನ ಅಣ್ಣನಲ್ಲಿಟ್ಟಿದ್ದ ಪ್ರೀತ್ಯಾಧರಗಳನ್ನು ಕುರಿತು ಶಾಸನವೊಂದು ರಾಮಲಕ್ಷ್ಮಣರ ಉದಾಹರಣೆಯೊಡನೆ ವರ್ಣಿಸಿದೆ. ಪಟ್ಟಕ್ಕೆ ಬರುವ ಮೊದಲೆ ಆಡಳಿತ ಮತ್ತು ಯುದ್ಧಗಳಲ್ಲಿ ನುರಿತು ವಿಶೇಷ ಅನುಭವ ಗಳಿಸಿದ್ದನು.

ಕ್ರಿ.ಶ. 1008ರಲ್ಲಿ ವಿಷ್ಣುವರ್ಧನನು ಸಿಂಹಾಸನಕ್ಕೆ ಬಂದನು. ವಿಷ್ಣುವರ್ಧನನು ಮುಖ್ಯವಾಗಿ ಎರಡು ಆಶಯಗಳನ್ನು ಹೊಂದಿದ್ದನು. ಅವುಗಳೆಂದರೆ ಮೊದಲನೆಯದಾಗಿ ಗಂಗವಾಡಿ ಮತ್ತು ನೊಳಂಬವಾಡಿ ಪ್ರದೇಶಗಳನ್ನು ಚೋಳರ ಆಳ್ವಿಕೆಯಿಂದ ಪಾರು ಮಾಡುವುದು. ಎರಡನೆಯದಾಗಿ ಚಾಳುಕ್ಯರ ಅಧೀನತೆಯನ್ನು ಕೊನೆಗಾಣಿಸಿ ತನ್ನ ಮನೆತನದ

ಸ್ವತಂತ್ರ ಆಳ್ವಿಕೆಯನ್ನು ಕನ್ನಡನಾಡಿನಲ್ಲಿ ಸ್ಥಾಪಿಸುವುದು. ಈ ಧ್ಯೇಯಗಳ ಸಾಧನೆಗಳಿಗಾಗಿ ಕಾರ್ಯೋನ್ಮುಖ ನಾದನು. ಸಿಂಹಾಸನಕ್ಕೆ ಬಂದ ಕೂಡಲೇ ಆಡಳಿತವನ್ನು ಬಿಗಿಗೊಳಿಸಿ, ಸೈನ್ಯವನ್ನು ಹೆಚ್ಚಿಸಿಕೊಂಡು, ಅನುಭವಿಗಳನ್ನೂ, ಪರಾಕ್ರಮಿಗಳನ್ನೂ ಸಚಿವ ಮತ್ತು ದಂಡನಾಯಕರುಗಳಾಗಿ ನೇಮಿಸಿಕೊಂಡನು. ಶೂರನೂ, ಅನುಭವಿಯೂ, ದಕ್ಷನೂ ಆದ ಗಂಗರಾಜನನ್ನು ತನ್ನ ಪ್ರಧಾನ ದಂಡನಾಯಕನನ್ನಾಗಿ ನೇಮಿಸಿದನು. ಸರ್ವಸಿದ್ಧತೆಗಳನ್ನು ಮಾಡಿಕೊಂಡು ಗಂಗವಾಡಿಯನ್ನು ಚೋಳರ ಆಕ್ರಮಣದಿಂದ ತೆರವು ಮಾಡಲು ಅಣಿಯಾದನು. ಕ್ರಿ.ಶ. 1114ರಲ್ಲಿ ತಲಕಾಡನ್ನು ಮುತ್ತಲು ನಿರ್ಧರಿಸಿ ಗಂಗ ರಾಜನನ್ನು ಮುಖ್ಯ ದಂಡನಾಯಕನನ್ನಾಗಿ ನೇಮಿಸಿ ಅವನನ್ನು ಹುರಿದುಂಬಿಸಿ ಕೆಲವು ಗ್ರಾಮಗಳನ್ನು ದತ್ತಿಯಾಗಿ ನೀಡಿ ರಣವೀಳ್ಯ ನೀಡಿದನು.

ವಿಷ್ಣುವರ್ಧನನ ರಾಜ್ಯ ವಿಸ್ತರಣೆಯು ತಲಕಾಡು ಕದನದಿಂದ ಆರಂಭವಾಯಿತು. ಆದಿಯಮ ಎಂಬುವನು ಆ ಸಮಯದಲ್ಲಿ ಚೋಳ ಸಾಮ್ರಾಟನ ಪ್ರಾಂತ್ಯಾಧಿಕಾರಿಯಾಗಿ ಗಂಗವಾಡಿಯ ಆಡಳಿತಕ್ಕೆ ನೇಮಿತವಾಗಿದ್ದನು. ಚೋಳರು ಗಂಗವಾಡಿಯನ್ನು 'ರಾಜರಾಜ ಚೋಳಮಂಡಲ' ಎಂಬುದಾಗಿಯೂ ತಲಕಾಡನ್ನು 'ರಾಯ ರಾಯಪುರ' (ರಾಜ ರಾಜಪುರ) ಎಂಬುದಾಗಿಯೂ ಕರೆಯುತ್ತಿದ್ದರು. ರಾಜ ನೀತಿಜ್ಞನಾದ ಗಂಗರಾಜನು ರಕ್ತಪಾತಕ್ಕೆ ಎಡೆಯಿಲ್ಲದಂತೆ ಗಂಗವಾಡಿಯನ್ನು ಬಿಟ್ಟುಕೊಡಬೇಕೆಂದು ದೂತರ ಮೂಲಕ ಆದಿಯಮನಿಗೆ ಹೇಳಿ ಕಳುಹಿಸಿದನು. ಆದರೆ ಯುದ್ಧ ಮಾಡಿ ತಲಕಾಡನ್ನು ವಶಪಡಿಸಿಕೊಳ್ಳುವಂತೆ ಆದಿಯಮನು ದರ್ಪದಿಂದ ಉತ್ತರಿಸಿದನು. ಇದರಿಂದ ಯುದ್ಧ ಅನಿವಾರ್ಯವಾಯಿತು. ವಿಷ್ಣುವರ್ಧನ ಮತ್ತು ಗಂಗರಾಜರು ಹೊಯ್ಸಳ ಸೈನ್ಯವನ್ನು ಕನ್ನಂಬಾಡಿ ಮತ್ತು ಶ್ರೀರಂಗಪಟ್ಟಣದ ಮುಖಾಂತರ ತಲಕಾಡಿನತ್ತ ನಡೆಸಿದರು. ಮೊದಲೇ ಸಿದ್ಧರಾಗಿದ್ದ ಚೋಳ ಅಧಿಕಾರಿಗಳಾದ ಆದಿಯಮ, ದಾಮೋದರ, ನರಸಿಂಗವರ್ಮನ್ ಮೊದಲಾದವರು ತಲಕಾಡಿನ ಹೊರವಲಯದಲ್ಲಿ ಹೊಯ್ಸಳ ಸೈನ್ಯವನ್ನು ಎದುರಿಸಿದರು. ತಲಕಾಡು ಯುದ್ಧ ಕ್ರಿ.ಶ. 1116ರಲ್ಲಿ ನಡೆಯಿತು ಎಂಬ ಅಭಿಪ್ರಾಯ ಪ್ರಚಲಿತವಾಗಿತ್ತು. ಆದರೆ ಕ್ರಿ.ಶ. 1114ರ ಪ್ರಾರಂಭದಿಂದ ಚೋಳರ ಶಾಸನಗಳು ಗಂಗವಾಡಿಯ ಪ್ರದೇಶದಲ್ಲಿ ದೊರಕದಿರುವುದರಿಂದಲೂ ಹಾಗೂ ವಿಷ್ಣುವರ್ಧನನು ಕ್ರಿ.ಶ. 1115ರ ಆದಿಯಲ್ಲೇ ಪ್ರಥಮವಾಗಿ 'ತಲಕಾಡು ಗೊಂಡ' ಎಂಬ ಬಿರುದನ್ನು ಧರಿಸಿದ್ದುದರಿಂದಲೂ ತಲಕಾಡು ಕದನವು ಕ್ರಿ.ಶ. 1114ರಲ್ಲಿಯೇ ನಡೆಯಿತೆಂದು ಖಚಿತವಾಗಿ ತಿಳಿದುಬರುತ್ತದೆ.

ತಲಕಾಡಿನ ಹೊರವಲಯದಲ್ಲಿ ಹೊಯ್ಸಳ ಮತ್ತು ಚೋಳ ಸೈನ್ಯಗಳಿಗೆ ಭೀಕರ ಕದನವು ಜರುಗಿತು. ಹೊಯ್ಸಳ ಸೇನೆಯ ಆಕ್ರಮಣವನ್ನು ಆದಿಯಮನು ತಡೆಗಟ್ಟಲಾಗಲಿಲ್ಲ. ಚೋಳ ಸೈನ್ಯದಲ್ಲಿ ಹೆಚ್ಚು ಸಾವು ನೋವುಗಳುಂಟಾದವು. ಚೋಳ ಸೈನ್ಯವು ಸೋತು, ಕಂಗೆಟ್ಟು, ಹಿಮ್ಮೆಟ್ಟಿ ತಲಕಾಡಿನ ಕೋಟೆಯೊಳಗೆ ರಕ್ಷಣೆ ಪಡೆಯಲು ಧಾವಿಸಿತು. ವಿಷ್ಣುವರ್ಧನ

ಮತ್ತು ಗಂಗರಾಜರ ನಾಯಕತ್ವದ ಹೊಯ್ಸಳ ಸೈನ್ಯವು ಶತ್ರು ಸೈನ್ಯವನ್ನು ಬೆನ್ನಟ್ಟಿ ಕೋಟೆಯನ್ನು ಪ್ರವೇಶಿಸಿ ವೀರಾವೇಶ ದಿಂದ ಹೋರಾಡಿತು. ವೈರಿ ಸೇನೆಯು ಸೋತು ರಕ್ಷಣೆಗಾಗಿ ದಿಕ್ಕು ದಿಕ್ಕಿಗೆ ಓಡಿತು. ಗಂಗರಾಜನು ಆದಿಯಮನ ನವಾಸವನ್ನು ಹೊಕ್ಕು ಅವನನ್ನು ಇರಿದು ಕೊಂದನು. ಅಳಿದುಳಿದ ಚೋಳ ಸೈನ್ಯ ಎರಡು ಗುಂಪುಗಳಾಗಿ ತಮಿಳುನಾಡಿನತ್ತ ಧಾವಿಸಿತು. ಒಂದು ಪಡೆಯು ಕೊಂಗುನಾಡಿನತ್ತ ಪಲಾಯನ ಮಾಡಿತು. ವಿಷ್ಣುವರ್ಧನನ ಸೈನ್ಯ ಅದನ್ನು ಬೆನ್ನಟ್ಟಿ ಕೊಂಗುನಾಡನ್ನು ವಶಪಡಿಸಿ ಕೊಂಡಿತು. ಮತ್ತೊಂದು ಪಡೆಯು ಕೋಲಾರದ ಮಾರ್ಗವಾಗಿ ಪಲಾಯನ ಮಾಡಿತು. ವಿಷ್ಣುವರ್ಧನನೇ ಸ್ವತಃ ಇದನ್ನು ಬೆನ್ನಟ್ಟಿ ನೊಳಂಬವಾಡಿಯನ್ನು ಆಕ್ರಮಿಸಿ ಕೋಲಾರ ಮತ್ತು ನಾಂಗಲಿಯವರೆಗಿನ ಪ್ರದೇಶಗಳನ್ನು ವಶಪಡಿಸಿಕೊಂಡನು. ಗಂಗವಾಡಿಯು ಚೋಳರಿಂದ ವಿಮುಕ್ತವಾಯಿತು. ವಿಷ್ಣುವರ್ಧನನ ಸೈನ್ಯ ತಮಿಳುನಾಡಿನ ಗಡಿಗಳನ್ನು ಪ್ರವೇಶಿಸಿ ತನ್ನ ಪರಾಕ್ರಮವನ್ನು ಮೆರೆಯಿತು. ಆಂತರಿಕ ತೊಂದರೆಗೆ ಒಳಗಾಗಿದ್ದ ಚೋಳ ಚಕ್ರವರ್ತಿ ಕುಲೋತ್ತುಂಗನು ಮತ್ತೆ ಗಂಗವಾಡಿಯನ್ನು ಸ್ವಾಧೀನಪಡಿಸಿಕೊಳ್ಳುವ ಅಥವಾ ಹೊಯ್ಸಳರ ಮೇಲೆ ಯುದ್ಧ ಮಾಡುವ ಸಾಹಸಕ್ಕೆ ಕೈ ಹಾಕಲಿಲ್ಲ.

ತಲಕಾಡು ವಿಜಯವು ಕನ್ನಡನಾಡಿನ ಇತಿಹಾಸದಲ್ಲಿ, ಹಾಗೂ ಹೊಯ್ಸಳರ ಅಭ್ಯುದಯಕ್ಕೆ ಸಂಬಂಧಿಸಿದಂತೆ ಒಂದು ಮಹತ್ತರ ಘಟನೆಯಾಗಿದೆ. ಕ್ರಿ.ಶ. 1004ರಲ್ಲಿ ಗಂಗ ಸಂತತಿಯ ವಿನಾಶದೊಡನೆ ಸುಮಾರು ಒಂದು ನೂರು ವರ್ಷಗಳ ಕಾಲ ಚೋಳರ ಆಳ್ವಿಕೆಗೆ ಒಳಗಾಗಿದ್ದ ಕನ್ನಡ ಪ್ರದೇಶಗಳು ವಿಮೋಚನೆ ಪಡೆದವು. ಹೊಯ್ಸಳ ರಾಜ್ಯವು ವಿಸ್ತಾರವಾಯಿತು. ಗಂಗವಾಡಿ, ನೊಳಂಬವಾಡಿ, ಕೊಂಗುನಾಡುಗಳು ಹೊಯ್ಸಳ ರಾಜ್ಯಕ್ಕೆ ಸೇರಿದವು. ವಿಷ್ಣುವರ್ಧನನು 'ತಲಕಾಡು ಗೊಂಡ' ಹಾಗೂ ಗಂಗ ವಂಶದ ಉತ್ತರಾಧಿಕಾರಿ ಎಂಬರ್ಥದಲ್ಲಿ 'ವಿಕ್ರಮಗಂಗ' ಎಂಬ ಬಿರುದುಗಳನ್ನು ಧರಿಸಿದನು. ತನ್ನ ಈ ವಿಜಯಗಳ ಜ್ಞಾಪಕಾರ್ಥವಾಗಿ, ತನ್ನ ಇಷ್ಟ ದೇವನಾದ ವಿಷ್ಣುವಿಗಾಗಿ ಅನೇಕ ಮಂದಿರಗಳನ್ನು ಕಟ್ಟಿಸಿದನು. ಬೇಲೂರಿನ ಚೆಲುವ ನಾರಾಯಣ, ತಲಕಾಡಿನ ಕೀರ್ತಿ ನಾರಾಯಣ ಮೊದಲಾದವುಗಳನ್ನು ನಿರ್ಮಿಸಿದನು. ಅನೇಕ ದಾನದತ್ತಿಗಳನ್ನು ನೀಡಿದನಲ್ಲದೆ "ತಲಕಾಡುಗೊಂಡ, ನೊಳಂಬವಾಡಿಗೊಂಡ, ಮಲೆಪರೊಳ್‌ಗಂಡ" ಎಂಬ ಬಿರುದುಗಳನ್ನು ಟಂಕಿಸಿದ ಚಿನ್ನದ ನಾಣ್ಯಗಳನ್ನು ಅಚ್ಚು ಹಾಕಿಸಿದನು. ತನ್ನ ವಿಜಯಕ್ಕೆ ಬಹುಮಟ್ಟಿಗೆ ಕಾರಣನಾದ ಗಂಗರಾಜನಗೆ 'ಮಹಾಪ್ರಚಂಡ ದಂಡನಾಥ' ಮುಂತಾದ ಬಿರುದುಗಳನ್ನು ನೀಡಿದನಲ್ಲದೆ ಅನೇಕ ಗ್ರಾಮಗಳನ್ನು ದಾನವಾಗಿ ಕೊಟ್ಟನು. ಗಂಗರಾಜನು ಅಷ್ಟೇ ವಿಶಾಲ ಹೃದಯದಿಂದ, ಧರ್ಮ ನಿಷ್ಠೆಯಿಂದ ಆ ದತ್ತಿಗಳನ್ನು ಜಿನಮುನಿಗಳಿಗೆ ದತ್ತಿಯಾಗಿ ನೀಡಿದನು. ತಲಕಾಡಿನ ವಿಜಯ ಹೊಯ್ಸಳರ ಪ್ರಾಬಲ್ಯವನ್ನು ಸಾರಿತು. ದಕ್ಷಿಣ ಭಾರತದ ಇತರ ರಾಜಮನೆತನಗಳಲ್ಲಿ ವಿಷ್ಣುವರ್ಧನನ ಕೀರ್ತಿ ಪರಾಕ್ರಮಗಳು ಏಕಕಾಲದಲ್ಲಿ ಭಯಾಶ್ಚರ್ಯಗಳನ್ನು ಮೂಡಿಸಿದವು.

ಚೋಳರನ್ನು ಸೋಲಿಸಿ ಗಂಗವಾಡಿಯ ಮೇಲೆ ತನ್ನ ಆಳ್ವಿಕೆಯನ್ನು ಸ್ಥಾಪಿಸಿದ ಅನಂತರ ವಿಷ್ಣುವರ್ಧನನು ಸ್ವತಂತ್ರವಾಗಿ ಆಳಲು ಪ್ರಾರಂಭಿಸಿದನು. ಪುಣಿಸಮಯ್ಯನ

ನೇತೃತ್ವದ ಹೊಯ್ಸಳ ಸೇನೆಯು ನೀಲಗಿರಿಯನ್ನು ವಶಪಡಿಸಿಕೊಂಡು ನೀಲಾದ್ರಿಯ ಮೇಲೆ ಹೊಯ್ಸಳ ಧ್ವಜವನ್ನು ಹಾರಿಸಿತು. ವಿಷ್ಣುವರ್ಧನನು ಸ್ವತಃ ಸೈನ್ಯ ಸಮೇತನಾಗಿ ಹೋಗಿ ಚಾಳುಕ್ಯರ ಸಾಮಂತರಾದ ಶಾಂತಾರರನ್ನು, ಹಾನಂಗಲ್ಲಿನ ಕದಂಬರನ್ನು ಸೋಲಿಸಿದನು. ಕ್ರಿ.ಶ. 1117ರಲ್ಲಿ ಉಚ್ಚಂಗಿಯ ಪಾಂಡ್ಯರನ್ನು ಚಿತ್ರದುರ್ಗ ಜಿಲ್ಲೆಯ 'ದುಮ್ಮೆ' ಎಂಬಲ್ಲಿ ಸೋಲಿಸಿ ಕಪ್ಪಕಾಣಿಕೆಯನ್ನು ಪಡೆದು ತನ್ನ ರಾಜ್ಯದ ಗಡಿಯನ್ನು ವಿಸ್ತರಿಸಿದನು.

ಹೊಯ್ಸಳರ ಪ್ರಾಬಲ್ಯ ಕ್ರಮೇಣ ಬೆಳೆಯುತ್ತಿದ್ದುದನ್ನು ಗಮನಿಸಿದ ಚಾಳುಕ್ಯ ಚಕ್ರವರ್ತಿ ಆರನೇ ವಿಕ್ರಮಾದಿತ್ಯನು (1075–1127) ವಿಷ್ಣುವರ್ಧನನ ಪ್ರಭಾವವನ್ನು ತಡೆಗಟ್ಟಲು ತವಕಿಸುತ್ತಿದ್ದನು. ತನ್ನ ಪರಮಾಧಿಕಾರವನ್ನು ಕೊನೆಗಾಣಿಸಿದುದಲ್ಲದೆ ತನ್ನ ಸಾಮಂತರನ್ನು ಸೋಲಿಸಿದ ವಿಷ್ಣುವರ್ಧನನನ್ನು ಶಿಕ್ಷಿಸಲು ಹವಣಿಸಿದನು. ಹೊಯ್ಸಳ ಸೇನೆಯು ಅನೇಕ ಯುದ್ಧಗಳಲ್ಲಿ ಗಳಿಸಿದ ವಿಜಯಗಳಿಂದ ಅದರ ಬಲವನ್ನು ಅರಿತಿದ್ದ ವಿಕ್ರಮಾದಿತ್ಯನು ಸಾಮ್ರಾಜ್ಯದ ಜೊತೆಗೆ ಎಲ್ಲಾ ಸಾಮಂತರ ಸೈನ್ಯಗಳನ್ನು ಒಟ್ಟುಗೂಡಿಸಿದನು. ಅನುಭವಿಯೂ, ಸಮರ್ಥನೂ ಆದ ಸಿಂದ್ ಸಾಮಂತ ಆಚ್ಚುಗಿಯನ್ನು ಸೈನ್ಯದ ಮುಖಂಡನನ್ನಾಗಿ ನೇಮಿಸಿ ಹೊಯ್ಸಳರ ರಾಜಧಾನಿ ದ್ವಾರಸಮುದ್ರವನ್ನು ಆಕ್ರಮಿಸಲು ಕಳುಹಿಸಿದನು. ಕ್ರಿ.ಶ. 1118ರಲ್ಲಿ ಅಪರಿಮಿತ ಚಾಳುಕ್ಯ ಸೈನ್ಯ ದ್ವಾರಸಮುದ್ರವನ್ನು ಆಕ್ರಮಿಸಲು ಪ್ರಯಾಣ ಕೈಗೊಂಡು ಹಾಸನ ಜಿಲ್ಲೆಯ ಕಣ್ಣೆಗಾಲ ಗ್ರಾಮವನ್ನು ತಲುಪಿತು.

ವಿಷ್ಣುವರ್ಧನ ಮತ್ತು ದಂಡನಾಯಕ ಗಂಗರಾಜನು ಚಾಳುಕ್ಯ ಸೈನ್ಯವನ್ನು ದೂರದಲ್ಲೇ ಎದುರಿಸಲು ತೀರ್ಮಾನಿಸಿದರು. ವಿಷ್ಣುವರ್ಧನನು ಯುದ್ಧ ನಿರ್ವಹಣೆಯ ಸಮಸ್ತ ಅಧಿಕಾರವನ್ನು ಗಂಗರಾಜನಿಗೆ ವಹಿಸಿದನು. ಗಂಗರಾಜನು ಚಾಳುಕ್ಯ ಸೈನ್ಯವನ್ನು ಕಣ್ಣೆಗಾಲದ ಬಳಿಯಲ್ಲಿ ತಡೆಗಟ್ಟಿದನು. ಅಪಾರ ಚಾಳುಕ್ಯ ಸೈನ್ಯದ ಮೇಲೆ ರಾತ್ರಿ ವೇಳೆಯಲ್ಲಿ ಎರಗಿದನು. ಹೊಯ್ಸಳ ಸೈನ್ಯದ ಈ ಅನಿರೀಕ್ಷಿತ ದಾಳಿಗೀಡಾದ ಚಾಳುಕ್ಯ ಸೈನ್ಯವು ಸೋತು ಯುದ್ಧ ಸಾಮಗ್ರಿಗಳನ್ನು ರಣರಂಗದಲ್ಲೇ ಬಿಟ್ಟು ಓಡಿತು. ಗಂಗರಾಜನು ಹೊಯ್ಸಳ ಗಡಿಯವರೆಗೂ ವೈರಿಗಳನ್ನು ಬೆನ್ನಟ್ಟಿ ಹೋದನು. ಶತ್ರು ಸೈನ್ಯ ಬಿಟ್ಟು ಹೋದ ಯುದ್ಧ ಸಾಮಗ್ರಿಗಳನ್ನು ಸಂಗ್ರಹಿಸಿ ತಂದು ವಿಷ್ಣುವರ್ಧನನಿಗೆ ಒಪ್ಪಿಸಿದನು. ಗಂಗರಾಜನ ಸಾಮರ್ಥ್ಯದಿಂದ ವಿಷ್ಣುವರ್ಧನನಿಗೆ ಒದಗಿದ್ದ ವಿಪತ್ತು ದೂರವಾಯಿತು. ಸಂತುಷ್ಟನಾದ ವಿಷ್ಣುವರ್ಧನನು ಗಂಗರಾಜನಿಗೆ ಎರಡು ಗ್ರಾಮಗಳನ್ನೂ, ಬಿರುದುಗಳನ್ನೂ ನೀಡಿ ಸನ್ಮಾನಿಸಿದನು.

ವಿಕ್ರಮಾದಿತ್ಯನು ಬದುಕಿರುವವರೆಗೂ ಹೊಯ್ಸಳರಿಗೂ ಚಾಳುಕ್ಯರಿಗೂ ಯುದ್ಧಗಳು ಪುನಃ ಸಂಘಟಿಸಲಿಲ್ಲ. ವಿಷ್ಣುವರ್ಧನನು ಆಡಳಿತ ಸುಧಾರಣೆ, ಸಾಹಿತ್ಯ, ಕಲೆಗೆ ವಿಶೇಷ ಪ್ರೋತ್ಸಾಹವನ್ನು ನೀಡಿ ರಾಜ್ಯ ವಿಸ್ತರಣೆಗೆ ಶಕ್ತಿ ಸಂಘಟನಾ ಕಾರ್ಯದಲ್ಲಿ ತೊಡಗಿದ್ದನು. ಕ್ರಿ.ಶ. 1127ರಲ್ಲಿ ವಿಕ್ರಮಾದಿತ್ಯನ ಮರಣದ ನಂತರ ವಿಷ್ಣುವರ್ಧನನ ರಾಜ್ಯ ವಿಸ್ತರಣಾ ನೀತಿಗೆ ಅವಕಾಶ ದೊರೆಯಿತು. ಕೃಷ್ಣಾ ನದಿಯವರೆಗೂ ತನ್ನ ಅಧಿಕಾರವನ್ನು ಸ್ಥಾಪಿಸಲು ಯೋಚಿಸಿಕೊಂಡಿದ್ದನು. ಆದರೆ ಆ ವೇಳೆಗೆ ಅವನು ಹಲವು ಕೌಟುಂಬಿಕ ಆಘಾತಕ್ಕೀಡಾದನು.

ಅವನ ಏಕಮಾತ್ರ ಪುತ್ರನೂ, ಯುವರಾಜನೂ, ಆಗಿದ್ದ ಕುಮಾರ ಬಲ್ಲಾಳನು 1129ರಲ್ಲಿ ಅಕಾಲ ಮರಣಕ್ಕೀಡಾದನು. ತನ್ನ ಪ್ರೀತಿ ಪಾತ್ರ ಪುತ್ರನ ಅಗಲಿಕೆಯ ವೇದನೆಯನ್ನು ತಡೆಯಲಾಗದೆ ವಿಷ್ಣುವರ್ಧನನ ಅಚ್ಚುಮೆಚ್ಚಿನ ರಾಣಿಯಾದ ಶಾಂತಲಾದೇವಿಯು ಸಲ್ಲೇಖನ ವಿಧಿಯನ್ನು ಅನುಸರಿಸಿ ಮರಣ ಹೊಂದಿದಳು. ದುಃಖತಪ್ತನಾಗಿದ್ದ ವಿಷ್ಣುವರ್ಧನನಿಗೆ ಮತ್ತೊಂದು ಆಘಾತವು ಕಾದಿತ್ತು. ತನ್ನ ಪ್ರಭುವಿನ ಏಳಿಗೆಯೇ ತನ್ನ ಸರ್ವಸ್ವವೆಂದು ಬಗೆದು ವಿಷ್ಣುವರ್ಧನನ ಬಲಭುಜದಂತಿದ್ದ ಅಮಾತ್ಯ ಗಂಗರಾಜನು 1130ರಲ್ಲಿ ಮರಣ ಹೊಂದಿದನು. ತನ್ನ ಆಪ್ತೇಷ್ಟರ ಅಗಲುವಿಕೆಯ ದುಃಖದಿಂದ ಚೇತರಿಸಿಕೊಳ್ಳಲು ವಿಷ್ಣುವರ್ಧನನಗೆ ಒಂದೆರಡು ವರ್ಷಗಳೇ ಬೇಕಾಯಿತು. ಅವನು 1131ರಲ್ಲಿ ಲಕ್ಷ್ಮೀದೇವಿ ಎಂಬುವಳನ್ನು ವರಿಸಿದನು. ಕ್ರಿ.ಶ. 1133ರಲ್ಲಿ ಅವನ ಪಟ್ಟದ ರಾಣಿಯಾದ ಲಕ್ಷ್ಮೀದೇವಿಗೆ ಪುತ್ರೋತ್ಸವವಾಯಿತು. ತನ್ನ ರಾಜ್ಯದ ಉತ್ತರದ ಗಡಿಗಳತ್ತ ದಂಡೆತ್ತಿ ಹೋಗಿ ವಿಜಯದಿಂದ ಹಿಂತಿರುಗುತ್ತಿದ್ದಾಗ ಸುದ್ದಿ ಮುಟ್ಟಿತು. ಅದೇ ವೇಳೆಗೆ ಗಂಗರಾಜನ ಸ್ಮರಣಾರ್ಥವಾಗಿ ಅವನ ಮಗ ಬೊಪ್ಪ ದಂಡನಾಯಕನು ರಾಜಧಾನಿಯಲ್ಲಿ ಕಟ್ಟಿಸಿದ ಜೈನ ಬಸದಿಯು ಪೂರ್ಣಗೊಂಡ "ದ್ರೋಹಗರಟ್ಟ" ಜಿನಾಲಯದ ತೀರ್ಥ ಪ್ರಸಾದಗಳು ರಾಜನಿಗೆ ತಲುಪಿದವು. ಇವುಗಳಿಂದ ಆನಂದಪಟ್ಟ ವಿಷ್ಣುವರ್ಧನನು ತನ್ನ ಪುತ್ರನಿಗೆ ವಿಜಯನರಸಿಂಹನೆಂದೂ, ಗಂಗರಾಜನ ಸ್ಮರಣಾರ್ಥ ಕಟ್ಟಿಸಿದ ಬಸದಿಗೆ 'ವಿಜಯಪಾರ್ಶ್ವನಾಥ ಜಿನಾಲಯ' ಎಂದೂ ಹೆಸರಿಟ್ಟನು. ವಿಜಯ ನರಸಿಂಹನಿಗೆ ಕೂಡಲೇ ಯುವರಾಜ ಪಟ್ಟವನ್ನು ಕಟ್ಟಿ ತನ್ನ ಅನೇಕ ಬಿರುದುಗಳನ್ನು ಅವನಿಗೆ ಕೊಟ್ಟನು.

ಉತ್ತರಾಧಿಕಾರಿಯ ಜನನದಿಂದ ಹರ್ಷಗೊಂಡ ವಿಷ್ಣುವರ್ಧನನು ಉತ್ಸಾಹದಿಂದ ರಾಜ್ಯ ವಿಸ್ತರಣೆಗೆ ತೊಡಗಿದನು. ತನ್ನ ರಾಜ್ಯದ ಗಡಿಗಳನ್ನು ದಾಟಿ ಶಾಂತಾರರನ್ನು, ಸಿಂದರನ್ನು, ಕದಂಬರನ್ನು ಮತ್ತು ಉಚ್ಚಂಗಿ ಪಾಂಡ್ಯರನ್ನು ಯುದ್ಧಗಳಲ್ಲಿ ಸೋಲಿಸಿ ಅವರಿಂದ ಕಾಣಿಕೆಯನ್ನು ಪಡೆದನು. ವಿಕ್ರಮಾದಿತ್ಯನ ಉತ್ತರಾಧಿಕಾರಿಯಾಗಿದ್ದ ಭೂಲೋಕಮಲ್ಲನು ಅಸಮರ್ಥನಾಗಿದ್ದುದಲ್ಲದೆ ಸಾಮ್ರಾಜ್ಯದ ಶತ್ರುಗಳು ಮತ್ತು ಮಾಂಡಲೀಕರಿಂದ ಪ್ರಾರಂಭವಾಗಿದ್ದ ಗೊಂದಲಮಯ ಪರಿಸ್ಥಿತಿಯಲ್ಲಿದ್ದನು. ವಿಷ್ಣುವರ್ಧನನು ರಾಜ್ಯ ವಿಸ್ತರಿಸಲು ಒಳ್ಳೆಯ ಅವಕಾಶ ಉಂಟಾಗಿತ್ತು. ಅವನು ಕ್ರಿ.ಶ. 1137ರ ವೇಳೆಗೆ ತುಂಗಭದ್ರ ನದಿಯ ಪ್ರದೇಶಗಳ ಮೇಲೆ ತನ್ನ ಅಧಿಕಾರ ಸ್ಥಾಪಿಸಿ ಕೃಷ್ಣಾ ನದಿಯ ವರೆವಿಗೂ ದಂಡೆತ್ತಿ ಹೋದನೆಂದೂ ದಣಿದ ಕುದುರೆಗಳು ಪೆರ್ದೊರೆ (ಪೆದ್ದೊರೆ)ಯಲ್ಲಿ ಜಲಪಾನ ಮಾಡಿದವೆಂದೂ ಶಾಸನಗಳಲ್ಲಿ ವರ್ಣಿಸಲಾಗಿದೆ. ಬನವಾಸಿ, ಹಾನಂಗಲ್, ಹಲಸೀಗೆ ಮತ್ತು ಬೆಳ್ವೊಲ ಪ್ರದೇಶಗಳ ಮೇಲೆ ತನ್ನ ಅಧಿಕಾರ ಸ್ಥಾಪಿಸಿ ಹಾನಂಗಲ್ಲನ್ನು ತನ್ನ ಉಪರಾಜಧಾನಿಯನ್ನಾಗಿ ಮಾಡಿಕೊಂಡನು. ತನ್ನ ವಿಜಯಗಳನ್ನು ಸಾರಲು ಅವನು ಬನವಾಸಿ ಹಾನಂಗಲ್, ಹಲಸೀಗೆ, ಬೆಳುವೊಲ ಮತ್ತು ಬೆಳ್ವೊಲ ಕೊಂಡ ಎಂಬ ಬಿರುದುಗಳನ್ನು ಧರಿಸಿದನು. ಹಲವು ಕಾಲ ತನ್ನ ರಾಜಧಾನಿ ದ್ವಾರಸಮುದ್ರದಲ್ಲಿ ಧರ್ಮ

ಮತ್ತು ಕಲೆಗೆ ಪ್ರೋತ್ಸಾಹ ನೀಡುತ್ತಾ ಸುಖ-ಸಂತೋಷ, ವಿನೋದದಿಂದ ಆಡಳಿತ ನಡೆಸುತ್ತಿದ್ದನು. ಪುನಃ 1142ರಲ್ಲಿ ಉಪರಾಜಧಾನಿಯಾದ ಬಂಕಾಪುರದಲ್ಲಿದ್ದನು. ಆ ವೇಳೆಗೆ ವೃದ್ಧಾಪ್ಯವನ್ನು ಸಮೀಪಿಸಿದ್ದ ಅವನು ಅಲ್ಲಿ ಸ್ವರ್ಗಸ್ಥನಾದನು. ವಿಷ್ಣುವರ್ಧನನ ಮಂತ್ರಿಗಳು ರಾಜನ ಕಳೇಬರವನ್ನು ದ್ವಾರಸಮುದ್ರಕ್ಕೆ ಸಾಗಿಸಿಕೊಂಡು ಬಂದು ಅಂತ್ಯಕ್ರಿಯೆ ನೆರವೇರಿಸಿ, ಇನ್ನೂ ಬಾಲಕನಾಗಿದ್ದ ಅವನ ಪುತ್ರ ವಿಜಯನರಸಿಂಹನಿಗೆ ಪಟ್ಟಾಭಿಷೇಕ ಮಾಡಿದರು. ಕೀರ್ತಿನಾರಾಯಣ ವಿಷ್ಣುವರ್ಧನನ ಆಳ್ವಿಕೆಯು ಕ್ರಿ.ಶ. 1142ರಲ್ಲಿ ಕೊನೆಗೊಂಡಿತು.

ವಿಷ್ಣುವರ್ಧನನ ಆಳ್ವಿಕೆಯು ಧಾರ್ಮಿಕ ಪುರೋಭಿವೃದ್ಧಿಯ ಕಾಲವಾಗಿತ್ತು. ಜೈನ, ವೈಷ್ಣವ, ಶೈವ ಪಂಥಗಳು ಕನ್ನಡನಾಡಿನಲ್ಲಿ ಪರಸ್ಪರ ಅಭಿವೃದ್ಧಿ ಸ್ಥಿತಿಯಲ್ಲಿದ್ದವು. ವಿಷ್ಣುವರ್ಧನನು ಪ್ರಾರಂಭದಲ್ಲಿ ಜೈನ ಮತಾವಲಂಬಿಯಾಗಿದ್ದನೆಂದೂ ಆನಂತರ ವೈಷ್ಣವ ಪಂಥವನ್ನು ಸ್ವೀಕರಿಸಿದನೆಂದೂ ಪ್ರತೀತಿಯಾಗಿದೆ. ಈ ಘಟನೆಗೆ ಸಂಬಂಧಿಸಿದಂತೆ ಭಿನ್ನ ಭಿನ್ನ ಹೇಳಿಕೆಗಳಿವೆ. ಒಂದು ಐತಿಹ್ಯದ ಪ್ರಕಾರ ಅವನ ಕುಮಾರಿಯಾದ ಹರಿಯಲದೇವಿಯು ಕ್ರೂರ ಗ್ರಹ ದೋಷದಿಂದ ನರಳುತ್ತಿದ್ದಳೆಂದೂ ಅವಳ ರೋಗವನ್ನು ಗುಣಪಡಿಸಲು ಜೈನಯತಿಗಳು ಮಾಡಿದ ಪ್ರಯತ್ನವೆಲ್ಲಾ ನಿರರ್ಥಕವಾಯಿತೆಂದೂ, ಹಾಗೂ ಆ ವೇಳೆಗೆ ಕನ್ನಡನಾಡಿಗೆ ಆಗಮಿಸಿದ ಶ್ರೀರಾಮಾನುಜಾಚಾರ್ಯರು ತಮ್ಮ ಆಧ್ಯಾತ್ಮಿಕ ಶಕ್ತಿಯಿಂದ ಆ ರೋಗವನ್ನು ಉಪಶಮನಗೊಳಿಸಿದರೆಂದೂ, ಅವರ ತಪಶ್ಯಕ್ತಿಗೆ ಮಾರುಹೋದ ವಿಷ್ಣುವರ್ಧನನು ವೈಷ್ಣವ ಪಂಥವನ್ನು ಸ್ವೀಕರಿಸದನೆಂದೂ ತಿಳಿದು ಬರುತ್ತದೆ. ಇನ್ನೊಂದು ಹೇಳಿಕೆಯ ಪ್ರಕಾರ ವಿಷ್ಣುವರ್ಧನನಿಗೆ ಲಕ್ಷ್ಮೀದೇವಿ ಎಂಬ ಶ್ರೀ ವೈಷ್ಣವ ಪಂಥಕ್ಕೆ ಸೇರಿದ ರಾಣಿಯಿದ್ದಳೆಂದೂ, ಅವಳು ಪ್ರಾರಂಭ ದಿಂದಲೂ ತನ್ನ ಗಂಡನನ್ನು ವೈಷ್ಣವ ಮತವನ್ನು ಸ್ವೀಕರಿಸುವಂತೆ ಪ್ರೇರೇಪಿಸುತ್ತಿದ್ದಳೆಂದೂ ಕೊನೆಗೆ ವಿಷ್ಣುವರ್ಧನನು ಶ್ರೀರಾಮಾನುಜಾಚಾರ್ಯರ ಸಂದರ್ಶನವಾದ ಮೇಲೆ ವೈಷ್ಣವ ಧರ್ಮಕ್ಕೆ ಮತಾಂತರ ಹೊಂದಿದನೆಂದೂ ವರ್ಣಿಸಲಾಗಿದೆ. ಮತ್ತೊಂದು ಐತಿಹ್ಯದ ಪ್ರಕಾರ ವಿಷ್ಣುವರ್ಧನನು ತನ್ನ ಪೂರ್ವಿಕರಂತೆ ಮೊದಲಿಗೆ ಜೈನನಾಗಿದ್ದನೆಂದೂ, ಯುದ್ಧವೊಂದರಲ್ಲಿ ತನ್ನ ಬೆರಳೊಂದನ್ನು ಕಳೆದುಕೊಂಡಿದ್ದರಿಂದ ಸಹಧರ್ಮಿಯರು ಅವನೊಡನೆ ಸಹ ಭೋಜನ ನಿರಾಕರಿಸಿದರೆಂದೂ ಇದರಿಂದ ಖೇದಗೊಂಡ ರಾಜನು ಕನ್ನಡನಾಡಿಗೆ ರಾಮಾನುಜರು ಬಂದ ಮೇಲೆ ವೈಷ್ಣವ ಮತಕ್ಕೆ ಸೇರಿದನೆಂದೂ ಹೇಳಲಾಗಿದೆ.

ವಿಷ್ಣುವರ್ಧನನಿಗೆ ಮೊದಲು 'ಬಿಟ್ಟಿ' ಎಂಬ ಹೆಸರಿತ್ತೆಂದೂ ವೈಷ್ಣವ ಮತಕ್ಕೆ ಸೇರಿದ ಮೇಲೆ ವಿಷ್ಣುವರ್ಧನ ಎಂಬ ಹೊಸ ನಾಮಾಂಕಿತವಾಯಿತೆಂಬ ಅಭಿಪ್ರಾಯವಿದ್ದರೂ ಬಿಟ್ಟ ವಿಠ್ಠಲ-ವಿಷ್ಣು ಎಂಬುದು ರೂಪಾಂತರವೆಂಬುದು ನಿಜ. ಅವನಿಗೆ ಮೊದಲಿನಿಂದಲೂ ವಿಷ್ಣುವರ್ಧನ ಎಂಬ ಹೆಸರಿತ್ತೆದು ಹೇಳಲು 1096ರ ಶಾಸನ ನಿದರ್ಶನವಾಗಿದೆ. ಶ್ರೀರಂಗಪಟ್ಟಣದ ಬೆಳಗೊಳದ ಸುತ್ತಮುತ್ತಲ ಪ್ರದೇಶಕ್ಕೆ ಪ್ರಾಂತ್ಯಾಧಿಕಾರಿಯಾಗಿದ್ದಾಗ ಅವನು

ವಿಷ್ಣುವರ್ಧನನೆಂದು ಪ್ರಖ್ಯಾತಿ ಪಡೆದಿದ್ದನು. ಅವನ ಮತಾಂತರದ ವಿಷಯಕ್ಕೆ ಸಂಬಂಧಿಸಿದ ವಿಭಿನ್ನ ಹೇಳಿಕೆಗಳ ಮುಖ್ಯ ಕಾರಣವೆಂದರೆ ಶ್ರೀರಾಮಾನುಜರನ್ನು ಗೌರವಿಸಿ, ಅವನು ವೈಷ್ಣವ ಮತವನ್ನು ಸ್ವೀಕರಿಸಿದುದು ಅದರ ಅನುಯಾಯಿಗಳು ತರುವಾಯ ಈ ಕಟ್ಟುಕಥೆಗಳನ್ನು ಹೆಣೆದಿದ್ದಾರೆ. ಎಲ್ಲಕ್ಕೂ ಮಿಗಿಲಾಗಿ ಮತಾಂತರಕ್ಕೆ ಸಂಬಂಧಿಸಿದಂತೆ ಸಮಕಾಲೀನ ದಾಖಲೆಗಳಲ್ಲಿ ಯಾವ ವಿಧವಾದ ಗೊಂದಲವೂ ಕಾಣಬರುವುದಿಲ್ಲ.

ಮತ್ತೆ ಕೆಲವು ವಿಪರ್ಯಾಸ ಪೂರ್ವಕ ಹೇಳಿಕೆಗಳೆಂದರೆ ವಿಷ್ಣುವರ್ಧನನು ವೈಷ್ಣವ ಮತಕ್ಕೆ ಮತಾಂತರ ಹೊಂದಿದ ಮೇಲೆ ಜೈನಬಸದಿಗಳನ್ನು ನಾಶಗೊಳಿಸಿ ಆ ಸಾಮಗ್ರಿಗಳಿಂದಲೇ ವೈಷ್ಣವ ದೇವಾಲಯಗಳನ್ನು ನಿರ್ಮಾಣ ಮಾಡಿದನೆಂಬ ಹೇಳಿಕೆ ನಿಜಕ್ಕೂ ಹಾಸ್ಯಾಸ್ಪದವಾದುದು. ಇದಕ್ಕೆ ಯಾವ ಶಾಸನಾಧಾರಗಳೂ ಇಲ್ಲ. ತನ್ನ ಅರಮನೆಗೆ ಸ್ವಲ್ಪ ದೂರದಲ್ಲೇ ಜೈನ ಬಸದಿಗಳನ್ನು ನಿರ್ಮಿಸಿದುದು ಮತ್ತು ಜಿನಾಲಯಗಳ ಪ್ರಸಾದವನ್ನು ಭಕ್ತಿಯಿಂದ ಸ್ವೀಕರಿಸುತ್ತಿದ್ದುದು ಅವನು ಜೈನ ಮತವನ್ನು ಕಡೆಗಾಣಿಸಲಿಲ್ಲ ಎಂಬುದಕ್ಕೆ ನಿದರ್ಶನಗಳಾಗಿವೆ. ಅಲ್ಲದೆ ಅವನ ಪಟ್ಟದ ರಾಣಿ ಶಾಂತಲಾದೇವಿ, ದಂಡನಾಯಕರಾದ ಗಂಗರಾಜ, ಹುಲ್ಲ, ಪುಣಿಸ, ಬಾಹುಬಲಿ, ಮೊದಲಾದವರು ಜಿನೋಪಾಸಕರಾಗಿದ್ದರು. ಜೈನ ಮತೀಯ ದಂಡನಾಯಕನೊಬ್ಬನ ಹಸುಗೂಸನ್ನು ತಾನೇ ಸಾಕಿ ಜೈನ ವಿಧಿಯಂತೆ ಉಪನಯನ, ಇತರ ಸಂಸ್ಕಾರಗಳನ್ನು ನೆರವೇರಿಸಿ ಮುಂದೆ ದಂಡನಾಯಕನನ್ನಾಗಿ ವಿಷ್ಣುವರ್ಧನನು ನೇಮಿಸಿಕೊಂಡಿದ್ದನು. ಅನೇಕ ಜೈನ ಕವಿಗಳೂ ವಿದ್ವಾಂಸರೂ, ವಿಷ್ಣುವರ್ಧನನ ಆಸ್ಥಾನವನ್ನು ಅಲಂಕರಿಸಿದ್ದರು. ಆದ್ದರಿಂದ ವಿಷ್ಣುವರ್ಧನನು ಮತೀಯ ಸಂಕುಚಿತ ಭಾವನೆಯನ್ನು ಹೊಂದಿರಲಿಲ್ಲ ಎಂಬುದು ನಿಸ್ಸಂದೇಹ.

ವಿಷ್ಣುವರ್ಧನನು ಕಲೆ ಮತ್ತು ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿದ್ದನು. ಭವ್ಯ ದೇವ ಮಂದಿರಗಳು ನಿರ್ಮಾಣವಾದುವು. ಬೇಲೂರಿನ ಚೆನ್ನಕೇಶವ, ದೊಡ್ಡಗದ್ದವಳ್ಳಿಯ ಮಹಾಲಕ್ಷ್ಮೀ ದೇವಾಲಯ ತೊಣ್ಣೂರಿನ ನಾರಾಯಣ, ತಲಕಾಡಿನ ಕೀರ್ತಿ ನಾರಾಯಣ, ದ್ವಾರಸಮುದ್ರದ ಹೊಯ್ಸಳೇಶ್ವರ ಮೊದಲಾದುವು ಇವನ ಕಾಲದಲ್ಲಿ ನಿರ್ಮಾಣವಾದವು. ಸಾಮಾಜಿಕ ನೆಮ್ಮದಿಗಾಗಿ ವ್ಯಾಪಾರ, ವ್ಯವಸಾಯವನ್ನು ಪ್ರೋತ್ಸಾಹಿಸಿದನು. ಕೆರೆಕಟ್ಟೆಗಳು ನಿರ್ಮಾಣವಾದವು. ಜ್ಞಾನಾಭಿವೃದ್ಧಿಗಾಗಿ ಮತ್ತು ಬ್ರಾಹ್ಮಣರ ಸಂರಕ್ಷಣೆಗಾಗಿ ಹಲವಾರು ಅಗ್ರಹಾರಗಳನ್ನು ನಿರ್ಮಿಸಿದನು. ನಾಗವರ್ಮ ಕಂತಿ ಮೊದಲಾದ ವಿದ್ವನ್ಮಣಿಗಳು ಇವನ ಆಸ್ಥಾನದಲ್ಲಿದ್ದರು.

ವಿಷ್ಣುವರ್ಧನನು ಸಮರ್ಥ ಯೋಧ ಮಾತ್ರವಲ್ಲದೆ ದಕ್ಷ ಆಡಳಿತಗಾರನೂ ಆಗಿದ್ದನು. 'ಪಂಚ ಪ್ರಧಾನ'ರೆಂದು ಅವನ ಮಂತ್ರಿ ಮಂಡಲಕ್ಕೆ ಹೆಸರಾಗಿತ್ತು. ಕೇಂದ್ರೀಯ, ಪ್ರಾಂತೀಯ ಮತ್ತು ಸ್ಥಳೀಯ ಆಡಳಿತವನ್ನು ಸುವ್ಯವಸ್ಥಿತಿವಾಗಿ ಏರ್ಪಡಿಸಿದನು. ಯುವರಾಜ ಮತ್ತು ಪಟ್ಟದ ರಾಣಿಯರು ಆಡಳಿತದಲ್ಲಿ ಭಾಗವಹಿಸುವ ಏರ್ಪಾಡು ಮಾಡಿದನು. ವೀರರಿಗೆ. ದಾನದತ್ತಿಗಳನ್ನು ನೀಡುವ ಪದ್ಧತಿಯನ್ನು ಇಟ್ಟುಕೊಂಡು ಆ ಮೂಲಕ ಅವರಲ್ಲಿ

ರಣೋತ್ಸಾಹವನ್ನು ಹೆಚ್ಚಿಸುತ್ತಿದ್ದನು. ರಾಣಿ ಶಾಂತಲಾದೇವಿ, ಅಮಾತ್ಯ ಗಂಗರಾಜ ಆಡಳಿತದಲ್ಲಿ ಸಕ್ರಿಯ ಪಾತ್ರ ವಹಿಸುತ್ತಿದ್ದರು. ಅನೇಕ ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ನೆರವಾಗುತ್ತಿದ್ದರು. ಕಲಿಯುಗ ಪಾರ್ಥ, ಕೀರ್ತಿನಾರಾಯಣ, ವಿಕ್ರಮಗಂಗ, ತಲಕಾಡುಗೊಂಡ, ನೊಳಂಬವಾಡಿಗೊಂಡ, ಮಲೆಪೆರು ಗಂಡ ಎಂಬ ಬಿರುದುಗಳನ್ನು ವಿಷ್ಣುವರ್ಧನನು ಧರಿಸಿದ್ದನು. ಶೌರ್ಯ, ಪರಾಕ್ರಮ, ರಣೋತ್ಸಾಹ, ಸ್ವಾತಂತ್ರ್ಯ ಪ್ರಿಯತೆ, ರಾಜ್ಯ ವಿಸ್ತರಣೆ, ದಕ್ಷ ಆಡಳಿತ, ಪ್ರಜಾವಾತ್ಸಲ್ಯ, ಅನುಕರಣೀಯ ಧಾರ್ಮಿಕ ನೀತಿ, ಕಲೆ ಮತ್ತು ಸಾಹಿತ್ಯಕ್ಕೆ ನೀಡಿದ ಪ್ರೋತ್ಸಾಹ ಮೊದಲಾದ ಮಹಾತ್ಸಾಧನೆಗಳಿಂದ ವಿಷ್ಣುವರ್ಧನನು ಹೊಯ್ಸಳ ಸಂತತಿಯ ಅಷ್ಟೇಕೆ ಕನ್ನಡನಾಡಿನ ಅತಿಮುಖ್ಯ ಕೀರ್ತಿಶೇಷ ಪ್ರಭುಗಳಲ್ಲಿ ಒಬ್ಬನಾಗಿದ್ದಾನೆ.

ಒಂದನೇ ನರಸಿಂಹ (1143–1172)

ವಿಷ್ಣುವರ್ಧನನು 1142ರಲ್ಲಿ ಸ್ವರ್ಗಸ್ಥನಾದ ಮೇಲೆ ಅವನ ಮಂತ್ರಿಗಳು ಇನ್ನೂ ಬಾಲಕನಾಗಿದ್ದ ವಿಜಯನರಸಿಂಹನಿಗೆ ಪಟ್ಟ ಕಟ್ಟಿ ಪ್ರಾಪ್ತ ವಯಸ್ಕನಾಗುವವರೆಗೂ ನಿಷ್ಠೆಯಿಂದ ಆಡಳಿತ ಮುಂದುವರಿಸಿಕೊಂಡು ಹೋದರು. ವಿಷ್ಣುವರ್ಧನನಿಂದ ಪರಾಜಿತರಾಗಿದ್ದ ಹೊಯ್ಸಳ ಶತ್ರುಗಳು ನರಸಿಂಹನ ಕಾಲದಲ್ಲಿ ಚುರುಕಾದರು. ಕಲ್ಯಾಣದ ಚಾಳುಕ್ಯರು ಹೊಯ್ಸಳರನ್ನು ಸೋಲಿಸಿ ನರಸಿಂಹನು ಪುನಃ ತಮ್ಮ ಸಾರ್ವಭೌಮತ್ವವನ್ನು ಒಪ್ಪಿಕೊಳ್ಳುವಂತೆ ಮಾಡಿದರು. ತುಂಗಭದ್ರ ನದಿಯ ಪ್ರದೇಶಗಳು ಕೈಬಿಟ್ಟು ಹೋದವು. ನರಸಿಂಹನು ಪ್ರಾಪ್ತ ವಯಸ್ಕನಾದ ಮೇಲೆ ಅಧಿಕಾರವನ್ನು ವಹಿಸಿಕೊಂಡನು. ಸುಖಲೋಲುಪ್ತನೂ, ವಿಲಾಸಪ್ರಿಯನೂ ಆದ ನರಸಿಂಹನು ತಂದೆಯಂತೆ ದಕ್ಷನಾಗಿರಲಿಲ್ಲ. ರಾಜ್ಯ ವಿಸ್ತರಣೆಗೆ ಆಸಕ್ತಿ ತೋರಲಿಲ್ಲ. 1156ರಲ್ಲಿ ಕಲ್ಯಾಣದಲ್ಲಿ 'ರಕ್ತಹಿತ ವಿಪ್ಲವ' ನಡೆಯಿತು. ಕಲ್ಯಾಣಿ ಚಾಳುಕ್ಯರ ಬಲ ಕುಗ್ಗಿತ್ತು. ಕಳಚೂರಿ ಬಿಜ್ಜಳನು ಚಾಳುಕ್ಯ ಸಿಂಹಾಸನವನ್ನು ಆಕ್ರಮಿಸಿ ಕಳಚೂರಿ ಸಂತತಿಯನ್ನು ಸ್ಥಾಪಿಸಿದನು. ಇಂತಹ ಸಂದರ್ಭದಲ್ಲಿ ಹೊಯ್ಸಳರ ಪ್ರಭಾವವನ್ನು ಔನ್ನತ್ಯಕ್ಕೇರಿಸುವ ಅವಕಾಶಗಳಿದ್ದರೂ ನರಸಿಂಹನು ಆಲಸ್ಯದಿಂದ ಅಸಡ್ಡೆ ತೋರಿ ವ್ಯರ್ಥವಾಗಿ ಕಾಲ ಕಳೆದನು. ತನ್ನ ರಾಜ್ಯವನ್ನು ವಿಸ್ತರಿಸುವುದಿರಲಿ ತನ್ನ ಗಡಿಗಳೇ ಪರಾಕ್ರಮಣಗಳಿಗೆ ತುತ್ತಾದವು. ವಿಷ್ಣುವರ್ಧನನಿಂದ ಸೋಲನ್ನು ಅನುಭವಿಸಿದ್ದ ಉಚ್ಚಂಗಿಯ ಪಾಂಡ್ಯರು ಪುನಃ ಕಳೆದುಕೊಂಡಿದ್ದ ಪ್ರದೇಶಗಳನ್ನು ವಶಪಡಿಸಿಕೊಂಡರು. ಚೆಂಗಾಳ್ವರು ಹೊಯ್ಸಳರ ಮೇಲೆ ಎರಗಿದರು. ಆದರೆ ನರಸಿಂಹನ ದಂಡನಾಯಕರು ಚೆಂಗಾಳ್ವರನ್ನು ಸೋಲಿಸಿದರು. ತುಂಗಭದ್ರ ಪ್ರದೇಶಗಳು ಬಿಜ್ಜಳನ ವಶವಾದುವು. ನರಸಿಂಹನ ದಂಡನಾಯಕರು ನಿಷ್ಠೆಯಿಂದ ಹೋರಾಡಿ ಇನ್ನೂ ಹೆಚ್ಚು ಪ್ರದೇಶಗಳು ಬಿಜ್ಜಳನ ವಶವಾಗುವಂತೆ ತಡೆದರು.

ವಿಷಯಲಂಪಟನಾದ ನರಸಿಂಹನ ಆರೋಗ್ಯ ಕ್ರಮೇಣ ಕೆಡುತ್ತಾ ಬಂತು. ಆಡಳಿತದಲ್ಲಿ ಅನಾಸಕ್ತನಾಗಿ, ಪಟ್ಟದ ರಾಣಿ ಏಚಲದೇವಿ ಮತ್ತು ಯುವರಾಜ, ಕುಮಾರ ಬಲ್ಲಾಳರನ್ನು ಆಡಳಿತದಲ್ಲಿ ನೇಮಿಸಿಕೊಂಡು ತಾನು ಮಾತ್ರ ಅಧಿಕಾರಕ್ಕೆ ಅಂಟಿಕೊಂಡಿದ್ದನು. ಅವನ ಆಳ್ವಿಕೆಯ ಸಂಧ್ಯಾಕಾಲದಲ್ಲಿ ರಾಜ್ಯದಲ್ಲಿ ಗೊಂದಲಮಯ ಪರಿಸ್ಥಿತಿ ತಲೆದೋರಿತು.

ರಾಜ್ಯ ರಕ್ಷಣೆಯ ದೃಷ್ಟಿಯಿಂದ ಕುಮಾರ ಬಲ್ಲಾಳನು ತಂದೆಯ ವಿರುದ್ಧ ಸಿಡಿದೆದ್ದು ಅಧಿಕಾರ ವಹಿಸಿಕೊಂಡನು. ನರಸಿಂಹನು 1173ರ ಆದಿ ಭಾಗದಲ್ಲಿ ಮರಣ ಹೊಂದಿದನು.

ಇಮ್ಮಡಿ ವೀರಬಲ್ಲಾಳ (1173–1220)

ಬಲ್ಲಾಳನು ಚಿಕ್ಕ ವಯಸ್ಸಿನಲ್ಲಿಯೇ ತನ್ನ ತಾತನಾದ ವಿಷ್ಣುವರ್ಧನನ ಗುರಿಯಾಗಿದ್ದ ಸಾಮ್ರಾಜ್ಯ ಸ್ಥಾಪನೆಯನ್ನು ಸಾಧಿಸುವ ಸಂಕಲ್ಪ ಮಾಡಿದನು. ಇವನ ಆಳ್ವಿಕೆ ಕನ್ನಡನಾಡಿನ ಇತಿಹಾಸದಲ್ಲಿ ಬಹುಮುಖ್ಯ ಘಟನಾವಳಿಗಳಿಂದ ಕೂಡಿದೆ. ಇವನ ಆಳ್ವಿಕೆಯಲ್ಲಿ ಕಲ್ಯಾಣಿ ಚಾಳುಕ್ಯ ಮತ್ತು ಕಳಚೂರಿ ಮನೆತನಗಳು ಇತಿಹಾಸದಿಂದ ನಿರ್ಗಮಿಸಿದವು. ಸೇವುಣರ ವಿಸ್ತರಣಾ ನೀತಿಯನ್ನು ಕುಂಠಿತಗೊಳಿಸಿದನು. ಪಾಂಡ್ಯರ ಆಕ್ರಮಣದಿಂದ ಚೋಳರಿಗೆ ಪುನಃ ಸಿಂಹಾಸನ ದೊರಕಿಸಿಕೊಟ್ಟು 'ಚೋಳರಾಜ್ಯ ಪ್ರತಿಷ್ಠಾಪನಾಚಾರ್ಯ' ಎಂಬ ಬಿರುದು ಧರಿಸಿದನು. ಬಲ್ಲಾಳನ ಪರಾಕ್ರಮದಿಂದ ಹೊಯ್ಸಳ ರಾಜ್ಯವು ವಿಶಾಲ ಸಾಮ್ರಾಜ್ಯವಾಗಿ ಮಾರ್ಪಾಡಾಯಿತು. ಸಕಲ ಶತ್ರುಗಳನ್ನು ಮರ್ದಿಸಿ ದಕ್ಷಿಣ ಭಾರತದಲ್ಲಿ ಹೊಯ್ಸಳ ರಾಜ್ಯವನ್ನು ಆಜೇಯ ಸಾಮ್ರಾಜ್ಯವನ್ನಾಗಿ ಪರಿವರ್ತಿಸಿದನು. ವೀರಬಲ್ಲಾಳನ ಪ್ರೋತ್ಸಾಹದಿಂದ ವ್ಯವಸಾಯ ವ್ಯಾಪಾರವು ಪ್ರಗತಿಪಥದಲ್ಲಿದ್ದವು. ಅನೇಕ ಸುಂದರ ದೇವಮಂದಿರಗಳು ನಿರ್ಮಾಣವಾದವು.

ಅಧಿಕಾರ ವಹಿಸಿಕೊಂಡ ಕೂಡಲೇ ರಾಜ್ಯದಲ್ಲಿದ್ದ ಅರಾಜಕತೆಯನ್ನು ಹೋಗಲಾಡಿಸಿ ರಾಜ್ಯ ವಿಸ್ತರಣಾ ಕಾರ್ಯದಲ್ಲಿ ತೊಡಗಿದನು. ಸಮರ್ಥರಾದ ವ್ಯಕ್ತಿಗಳನ್ನು ಮಂತ್ರಿ ಮತ್ತು ದಂಡನಾಯಕರಾಗಿ ನೇಮಿಸಿಕೊಂಡು ತನ್ನ ಗುರಿಯಾದ ಹೊಯ್ಸಳ ಸಾಮ್ರಾಜ್ಯವನ್ನು ಸ್ಥಾಪಿಸಲು ಕಾರ್ಯೋನ್ಮುಖನಾದನು. ವಿಷ್ಣುವರ್ಧನನ ಕಾಲದಲ್ಲಿ ಸಾಮಂತರಾಗಿದ್ದ ಅನೇಕ ಸಣ್ಣಪುಟ್ಟ ರಾಜರು ನರಸಿಂಹನ ಕಾಲದಲ್ಲಿ ಸ್ವತಂತ್ರರಾದರು. ಕೊಡಗಿನ ಚೆಂಗಾಳ್ವರು ನರಸಿಂಹನ ಕಾಲದಲ್ಲಿ ಸ್ವತಂತ್ರರಾದರು. ಯುದ್ಧ ಅನಿವಾರ್ಯವಾಗಿ ಬಲ್ಲಾಳನ ದಂಡನಾಯಕ ಬೆಟ್ಟರಸನು ಕ್ರಿ.ಶ. 1173ರಲ್ಲಿ ಚೆಂಗಾಳ್ವರನ್ನು ಸೋಲಿಸಿದನು. ಆದರೆ ಮತ್ತೆ ಕೆಲವು ದಿನಗಳಲ್ಲಿ ಚೆಂಗಾಳ್ವರು ಬೆಟ್ಟರಸನ ಸೈನ್ಯವನ್ನು ಮುತ್ತಿದರು. ತಕ್ಷಣವೇ ವೀರಬಲ್ಲಾಳನು ಬೆಟ್ಟರಸನ ಸಹಾಯಕ್ಕೆ ಹೆಚ್ಚು ಸೈನ್ಯ ಕಳುಹಿಸಿದನು. ಚೆಂಗಾಳ್ವರು ಬಲ್ಲಾಳನ ಪರಮಾಧಿಕಾರವನ್ನು ಒಪ್ಪಿಕೊಳ್ಳಬೇಕಾಯಿತು. ಚೆಂಗಾಳ್ವ ರಾಜಕುಮಾರಿಯನ್ನು ಬಲ್ಲಾಳನು ವರಿಸಿದನೆಂದು ತಿಳಿದುಬರುತ್ತದೆ.

ಅನಂತರ ಅಭೇದ್ಯ ಕೋಟೆಯಾಗಿದ್ದ ಉಚ್ಚಂಗಿಗೆ ಲಗ್ಗೆ ಹಾಕಲು, ಎಮ್ಮೆಗನೂರು ಎಂಬಲ್ಲಿ ಪಾಂಡ್ಯರ ಸೇನೆಯನ್ನು ಸೋಲಿಸಿ ರಾಜಧಾನಿಗೆ ಕ್ರಿ.ಶ. 1177ರಲ್ಲಿ ಮುತ್ತಿಗೆ ಹಾಕಿದನು. ಪಾಂಡ್ಯರಾಜ ಕಾಮದೇವನು ಸೋತು ಶರಣಾದನು. ಹೇರಳ ಕಪ್ಪಕಾಣಿಕೆಯನ್ನು ಪಡೆದು "ಪಾಂಡ್ಯರಾಜ ಪ್ರತಿಷ್ಠಾಪನಾಚಾರ್ಯ" ಎಂಬ ಬಿರುದು ಧರಿಸಿದನು. ಶನಿವಾರಸಿದ್ಧಿ, ಗಿರಿದುರ್ಗಮಲ್ಲ ಎಂಬ ಬಿರುದುಗಳನ್ನು ಸಹ ವಹಿಸಿದನು. ಅನಂತರ ಪೊಟ್ಟಿ ಪೊಂಬುರ್ಚದ ಶಾಂತಾರರನ್ನು, ಹಾನಂಗಲ್ಲಿನ ಕದಂಬರನ್ನು ತುಳುರಾಜನನ್ನು ಸೋಲಿಸಿದನು. ಆ ವೇಳೆಗೆ

ಚಾಳುಕ್ಯರ ಸಾಮಂತ ಪಕ್ಷವನ್ನು ವಹಿಸಿದ್ದ ಉಚ್ಚಂಗಿಯ ಕಾಮದೇವನನ್ನು ಪುನಃ ಸದೆ ಬಡಿಯಬೇಕಾಯಿತು. ಈ ವಿಜಯ ಸ್ಮರಣೆಗಾಗಿ 'ಪಾಂಡ್ಯರಾಜ ನಿರ್ಮೂಲನ' ಎಂಬ ಬಿರುದನ್ನು ಧರಿಸಿದನು.

ತನ್ನ ಮಾಂಡಲೀಕರನ್ನು ಸೋಲಿಸಿದ್ದರಿಂದ ಕುಪಿತನಾದ ಕಳಚೂರಿ ಚಕ್ರವರ್ತಿ ಸಂಕಮನು ಕ್ರಿ.ಶ. 1180ರಲ್ಲಿ ಬಲ್ಲಾಳನ ವಿರುದ್ಧ ಸೈನ್ಯ ಕಳುಹಿಸಿದನು. ವೀರಬಲ್ಲಾಳನು ಕಳಚೂರಿ ಸೇನೆಗಳನ್ನು ಸೋಲಿಸಿ ಉದ್ರಿಕೋಟೆಯನ್ನು ಆಕ್ರಮಿಸಿದನು. ಸಂಕಮನು ಬಲ್ಲಾಳನೊಡನೆ ಸಂಧಾನಕ್ಕೆ ಒಪ್ಪಿಕೊಳ್ಳಬೇಕಾಯಿತು. ಮುಂಬರಲಿದ್ದ ಒಳ್ಳೆಯ ಅವಕಾಶವನ್ನು ಬಲ್ಲಾಳನು ನಿರೀಕ್ಷಿಸುತ್ತಿದ್ದನು. ಕಳಚೂರಿಗಳನ್ನು ಸೋಲಿಸಿ 1184ರಲ್ಲಿ 3ನೇ ಸೋಮೇಶ್ವರನು ಕೆಲವು ಮಾಂಡಲೀಕರ ಸಹಾಯದಿಂದ ಪುನಃ ಅಧಿಕಾರವನ್ನು ಸ್ಥಾಪಿಸಿದರೂ ಕುಂತಳ ಸಾಮ್ರಾಜ್ಯದ ಅವನತಿಯ ಕುರುಹುಗಳು ಕಂಡುಬಂದವು. ಸೋಮೇಶ್ವರನು ತನಗೆದುರಾಗಿದ್ದ ಶಕ್ತಿಗಳನ್ನು ಹತ್ತಿಕ್ಕುವಷ್ಟು ದಕ್ಷನಾಗಿರಲಿಲ್ಲ. ದಕ್ಷಿಣದಿಂದ ಹೊಯ್ಸಳರು ಚಾಳುಕ್ಯರ ಪರಮಾಧಿಕಾರವನ್ನು ಕಿತ್ತೆಸೆದು ತಮ್ಮ ಸಾಮ್ರಾಜ್ಯ ಸ್ಥಾಪಿಸಲು ಹವಣಿಸುತ್ತಿದ್ದರು. ಕೊನೆಗೆ ವೀರಬಲ್ಲಾಳನು 1189ರಲ್ಲಿ ಕಲ್ಯಾಣಿವರೆಗೂ, ದಂಡೆತ್ತಿ ಹೋಗಿ ಸೋಮೇಶ್ವರನ ಪ್ರಧಾನ ದಂಡನಾಯಕನಾದ ಬ್ರಹ್ಮ ದಂಡೇಶನನ್ನು ಸೋಲಿಸಿದನು. ಸೋಮೇಶ್ವರನ ಬಲಗೈಯಂತಿದ್ದ ಬ್ರಹ್ಮ ದಂಡನಾಯಕನು ಸೋತ ಮೇಲೆ ದಿಕ್ಕುತೋಚದ ಚಾಳುಕ್ಯ ದೊರೆ ತಲೆಮರೆಸಿಕೊಂಡನು. ಬಲ್ಲಾಳನು ಚಾಳುಕ್ಯ ಸಾಮ್ರಾಜ್ಯದ ದಕ್ಷಿಣ ಭಾಗದ ಮೇಲೆ ತನ್ನ ಆಳ್ವಿಕೆಯನ್ನು ಸ್ಥಾಪಿಸಿ 'ಕರ್ನಾಟಕ ಚಕ್ರವರ್ತಿ' ಎಂಬ ಬಿರುದನ್ನು ವಹಿಸಿದನು.

ಅನಂತರ ಕುಂತಳದ ಒಡೆತನಕ್ಕಾಗಿ ದೇವಗಿರಿಯ ಸೇವುಣರಿಗೂ ಹೊಯ್ಸಳರಿಗೂ ಯುದ್ಧಗಳು ಪ್ರಾರಂಭವಾದವು. ಸೇವುಣರಾಜ 5ನೇ ಭಿಲ್ಲಮ್ಮನು ವೀರಬಲ್ಲಾಳನಂತೆ ಸಮರ್ಥನೂ, ಪರಾಕ್ರಮಿಯೂ, ದಕ್ಷನೂ ಆಗಿದ್ದನು. ಭಿಲ್ಲಮ್ಮನು 1190ರಲ್ಲಿ ಕಲ್ಯಾಣಿಯನ್ನು ಆಕ್ರಮಿಸಿ ಧಾರವಾಡ ಜಿಲ್ಲೆಯ ಸೊರಟೂರಿನವರೆಗೂ ಮುಂದುವರಿದನು. ಆ ವೇಳೆಗೆ ಬಲ್ಲಾಳನು ಭಿಲ್ಲಮನನ್ನು ಎದುರಿಸಲು ಸೈನ್ಯದೊಡನೆ ಸಜ್ಜಾದನು. ಧಾರವಾಡ ಜಿಲ್ಲೆಯ ಸೊರಟೂರಿನ ಬಳಿಯಲ್ಲಿ ಭೀಕರ ಕದನ ನಡೆಯಿತು. ವೀರಬಲ್ಲಾಳನೇ ಸೈನ್ಯದ ಮುಖಂಡತ್ವವನ್ನು ವಹಿಸಿದ್ದನು. ಭಿಲ್ಲಮನ ಸೈನ್ಯವು ಅಸಂಖ್ಯಾತ ಸೈನಿಕರಿಂದಲೂ ಚದುರಂಗ ಬಲದಿಂದಲೂ ಕೂಡಿತ್ತು. ಬಲ್ಲಾಳನು ಶತ್ರು ಸೈನ್ಯದ ಮುಖ್ಯ ದಂಡನಾಯಕ ಜೈತುಗಿಯನ್ನು ಕೊಂದನು. ಸೇವುಣ ಬಲವು ಹೊಡೆತಗಳನ್ನು ತಾಳಲಾರದೆ ರಕ್ಷಣೆಗಾಗಿ ಓಡಿತು. ಸೇವುಣ ಭಿಲ್ಲಮನು ಪ್ರಾಣ ರಕ್ಷಣೆಗಾಗಿ ರಣರಂಗದಿಂದ ಸೈನ್ಯದೊಡನೆ ಲೊಕ್ಕಿ ಗುಂಡಿಕೋಟೆ ಸೇರಿದನು. ಹೊಯ್ಸಳ ಸೈನ್ಯವು ಲೊಕ್ಕಿಗುಂಡಿಯ ಕೋಟೆಗೆ ನುಗ್ಗಿತು. ಸೇವುಣ ಸೈನ್ಯ ಪುನಃ ಸೋತಿತು. ಸಮಕಾಲೀನ ಕವಿಯಾದ ರಾಜಾಧಿತ್ಯನು ತನ್ನ ವ್ಯವಹಾರ ಗಣಿತದಲ್ಲಿ ಸೇವುಣ ಸೈನ್ಯದಲ್ಲಿ ಅಪಾರ ಸಾವು ನೋವುಗಳುಂಟಾದವು ಎಂದು ಉಲ್ಲೇಖಿಸಿದ್ದಾನೆ. ಸೋತು ಪಲಾಯನ ಮಾಡುತ್ತಿದ್ದಾಗ ಭಿಲ್ಲಮನು ಬಲ್ಲಾಳನಿಂದ ಹತನಾದನು. ಕೃಷ್ಣಾ

ನದಿಯವರೆವಿಗೂ ಶತ್ರುವನ್ನು ಬೆನ್ನಟ್ಟಿ ಅಲ್ಲಿಯವರೆಗಿನ ಪ್ರದೇಶಗಳ ಮೇಲೆ ಬಲ್ಲಾಳನು ತನ್ನ ಆಳ್ವಿಕೆಯನ್ನು ಸ್ಥಾಪಿಸಿದನು.

ಸೊರಟೂರು ಮತ್ತು ಲೊಕ್ಕಿಗುಂಡಿ ಕದನಗಳ ವಿಜಯಗಳಿಂದ ಹೊಯ್ಸಳ ರಾಜ್ಯವು ಸಾಮ್ರಾಜ್ಯವಾಗಿ ಮಾರ್ಪಟ್ಟಿತು. ವೀರಬಲ್ಲಾಳನು 'ದಕ್ಷಿಣ ಚಕ್ರವರ್ತಿ' ಎಂಬ ಬಿರುದನ್ನು ವಹಿಸಿದನು. ಈ ಯುದ್ಧದ ಸೋಲಿನಿಂದ ಚೇತರಿಸಿಕೊಳ್ಳಲು ಸೇವುಣರಿಗೆ ಇಪ್ಪತ್ತು ವರ್ಷಗಳು ಬೇಕಾಯಿತು. ಈ ವಿಜಯಗಳ ಕುರುಹಾಗಿ ಬಲ್ಲಾಳನು ಕ್ರಿ.ಶ. 1191 ರಿಂದ 'ಬಲ್ಲಾಳಯುಗ' ಎಂಬ ಹೆಸರಿನಿಂದ ಕಾಲಗಣನೆಯನ್ನು ಆಚರಣೆಗೆ ತಂದನು. ಈ ವಿಜಯದಿಂದ ಹೊಯ್ಸಳರ ಅಧಿಕಾರವು ಬನವಾಸಿ ಹಾನಂಗಲ್, ಬೆಳುವೊಲ, ಹಲಸೀಗೆ ಮೊದಲಾದ ಪ್ರದೇಶಗಳ ಮೇಲೆ ಸ್ಥಾಪಿತವಾಯಿತು. ಹೊಯ್ಸಳ ಸಂತತಿಯ ಪ್ರಭಾವವು ಇಮ್ಮಡಿಯಾಯಿತು. ಅದು ದಕ್ಷಿಣ ಭಾರತದ ಅತ್ಯಂತ ಪ್ರಬಲ ಸಾಮ್ರಾಜ್ಯವಾಗಿ ಮಾರ್ಪಟ್ಟಿತು.

ಕ್ರಿ.ಶ. 1215ರ ಅನಂತರ ಬಲ್ಲಾಳನ ಗಮನ ತಮಿಳುನಾಡಿನತ್ತ ತಿರುಗಿತು. ಬಲ್ಲಾಳನ ಜೀವನದ ಸಂಧ್ಯಾ ಕಾಲದಲ್ಲಿ ಚೋಳರಿಗೂ ಅವರ ಸಾಮಂತರಾದ ಪಾಂಡ್ಯರಿಗೂ ವೈರತ್ವ ಪ್ರಾರಂಭವಾಗಿತ್ತು. ಮೂರನೇ ರಾಜರಾಜನು ಪಾಂಡ್ಯರಿಂದ ಸಿಂಹಾಸನಚ್ಯುತನಾಗಿ ಬಲ್ಲಾಳನ ಸಹಾಯವನ್ನು ಯಾಚಿಸಿದನು. ಬಲ್ಲಾಳನು ಯುವರಾಜ ನರಸಿಂಹನ ನೇತೃತ್ವದಲ್ಲಿ ಹೊಯ್ಸಳ ಸೈನ್ಯವನ್ನು ತಮಿಳುನಾಡಿಗೆ ಕಳುಹಿಸಿದನು. ಅದು ಚೋಳರ ಶತ್ರುವನ್ನು ಸೋಲಿಸಿ ರಾಜರಾಜನಿಗೆ ಪುನಃ ಸಿಂಹಾಸನವನ್ನು ದೊರೆಕಿಸಿಕೊಟ್ಟಿತು. ರಾಜರಾಜನು ಬಲ್ಲಾಳನಿಗೆ ಹೇರಳ ಕಾಣಿಕೆಯನ್ನು ಸಲ್ಲಿಸಿದನು. ಬಲ್ಲಾಳನು 'ಚೋಳರಾಜ ಪ್ರತಿಷ್ಠಾಪನಾ ಚಾರ್ಯ' ಎಂಬ ಬಿರುದನ್ನು ಧರಿಸಿದನು.

ಇಮ್ಮಡಿ ವೀರಬಲ್ಲಾಳನ ಕಾಲದಲ್ಲಿ ಸಾಹಿತ್ಯ ಮತ್ತು ಕಲೆಯಲ್ಲಿ ಅಸಾಧಾರಣ ಪ್ರಗತಿಯಾಯಿತು. ಸುಪ್ರಸಿದ್ಧ ಕವಿಗಳಾದ ಜನ್ನ, ರುದ್ರಭಟ್ಟ, ರಾಜಾದಿತ್ಯ, ವಿದ್ಯಾ ಚಕ್ರವರ್ತಿ ಮೊದಲಾದವರು ವೀರಬಲ್ಲಾಳನ ಸಮಕಾಲೀನರಾಗಿದ್ದರು. ಜನ್ನನಿಗೆ ಬಲ್ಲಾಳನು 'ಉಭಯ ಕವಿಚಕ್ರವರ್ತಿ' ಎಂಬ ಬಿರುದನ್ನು ನೀಡಿ ಗೌರವಿಸಿದನು. ಬಲ್ಲಾಳನ ಮಂತ್ರಿಗಳಾದ ಚಂದ್ರಮೌಳಿ, ಬೂಚಿರಾಜ, ಅಮಿತಯ್ಯ ಮತ್ತಿತರರು ಪಾಂಡಿತ್ಯ ಮತ್ತು ಸಾಹಿತ್ಯದಲ್ಲಿ ವಿಶೇಷ ಅಭಿರುಚಿ ಹೊಂದಿದ್ದರು. ವಿದ್ಯಾಭ್ಯಾಸದ ಪ್ರಗತಿಗಾಗಿ ಅಗ್ರಹಾರಗಳನ್ನು, ಬ್ರಹ್ಮಪುರಿಗಳನ್ನು ಸ್ಥಾಪಿಸಲಾಯಿತು. ಅವನ ದಂಡನಾಯಕ ಎರೆಯಣ್ಣನು ತಿರುಮಕೂಡಲು ನರಸೀಪುರದ ಬಳಿ ಒಂದು ಪಾಠಶಾಲೆ ಯನ್ನು ಸ್ಥಾಪಿಸಿ ಅಲ್ಲಿ ಕನ್ನಡ, ಸಂಸ್ಕೃತ, ತಮಿಳು ಭಾಷೆಗಳಲ್ಲಿ ಬಾಲ ಶಿಕ್ಷಣ ವ್ಯವಸ್ಥೆ ಮಾಡಿದನು. ಪ್ರಜೆಗಳ ಮೇಲ್ಮೆಗಾಗಿ, ಕೃಷಿಯ ಅಭಿವೃದ್ಧಿಗಾಗಿ ಬಲ್ಲಾಳನು ಕೆರೆ, ಕಟ್ಟೆ, ಕಾಲುವೆ ಗಳನ್ನು ನಿರ್ಮಿಸಿದನು, ಕೃಷಿಭೂಮಿಯನ್ನು ವಿಸ್ತರಿಸಿದನು. ವ್ಯಾಪಾರ, ವಾಣಿಜ್ಯಕ್ಕೆ ಪ್ರೋತ್ಸಾಹ ನೀಡಿದನು. ಸ್ಥಳೀಯ ದೊಡ್ಡ ವ್ಯಾಪಾರಿಗಳನ್ನು ಪುರಸಭೆ ಮತ್ತು ನಾಡುಗಳ ಮುಖಂಡರನ್ನಾಗಿ ನೇಮಿಸಿ ಗೌರವಿಸಿದನು. ಹಳೇಬೀಡು, ಬೇಲೂರು, ಆಸಂದಿ, ಬಂಕಾಪುರ, ಭಟ್ಕಳ, ಶ್ರವಣ ಬೆಳಗೊಳ, ಮೇಲುಕೋಟೆ, ತಲಕಾಡು ಮತ್ತು

ಇತರ ಸ್ಥಳಗಳು ವ್ಯಾಪಾರ ಕೇಂದ್ರಗಳಾಗಿದ್ದವು. ವ್ಯವಸಾಯ, ವ್ಯಾಪಾರಕ್ಕೆ ನೀಡಿದ್ದ ಪ್ರೋತ್ಸಾಹ ಶ್ಲಾಘನೀಯವಾದುದು. ರೈತರ ಅಭಿವೃದ್ಧಿಗಾಗಿ ಸರ್ಕಾರದ ಮತ್ತು ದೇವಾಲಯದ ಖಜಾನೆಯಿಂದ ಮುಂಗಡ ಸಾಲ ನೀಡುವ ಪದ್ಧತಿ ಬಲ್ಲಾಳನ ಕಾಲದಲ್ಲಿ ಆಚರಣೆಯಲ್ಲಿತ್ತೆಂದು ಬೇಲೂರಿನ ಶಾಸನವೊಂದರಿಂದ ತಿಳಿದು ಬರುತ್ತದೆ.

ವೀರಬಲ್ಲಾಳನ ಕಾಲದಲ್ಲಿ ಕಲೆ ವಿಶೇಷ ಪುರೋಭಿವೃದ್ಧಿ ಪಡೆಯಿತು. ವಿಷ್ಣುವರ್ಧನನಿಂದ ನಿರ್ಮಿಸಲ್ಪಟ್ಟ ಬೇಲೂರು ಚೆನ್ನಕೇಶವ ದೇವಾಲಯವನ್ನು ವಿಸ್ತರಿಸಿ ಸುಂದರವಾಗಿ ಮಾಡಿದನಲ್ಲದೆ ಜಾಲಂದ್ರಗಳನ್ನು, ಶಿಲಾಬಾಲಿಕಾ ವಿಗ್ರಹಗಳನ್ನು ವಾಸುದೇವ ತೀರ್ಥವನ್ನು ನಿರ್ಮಿಸಿದನು. ಅವನ ಕಾಲದಲ್ಲಿ ಹಳೇಬೀಡಿನ ಕೇದಾರೇಶ್ವರ, ಅಮೃತಾಪುರದ ಅಮೃತೇಶ್ವರ, ಬೆಳವಾಡಿಯ ವೀರನಾರಾಯಣ, ಅರಸೀಕೆರೆಯ ಈಶ್ವರ ಹಾಗೂ ಸಹಸ್ರಕೂಟ ಜಿನಾಲಯ, ಸಿಂಧಗಟ್ಟದ ಲಕ್ಷ್ಮೀ ನಾರಾಯಣ ಮೊದಲಾದ ದೇವಾಲಯಗಳು ನಿರ್ಮಾಣವಾದವು. ವೀರಬಲ್ಲಾಳನು ವೈಷ್ಣವ ಪಂಥಾವಲಂಬಿಯಾಗಿದ್ದಾಗ್ಯೂ ಜೈನ ಮತ್ತು ಶೈವ ಪಂಥಗಳಿಗೂ ಸಮಾನವಾದ ಪ್ರೋತ್ಸಾಹ ನೀಡಿದನು. ಉದಾರ ನೀತಿಯ ಪ್ರತಿಪಾದಕನಾದ ಬಲ್ಲಾಳ ಪರಾಕ್ರಮ, ಶೌರ್ಯ, ಸಾಮರ್ಥ್ಯಕ್ಕೆ ಆದ್ಯತೆ ನೀಡಿದ್ದನೆಂಬುದಕ್ಕೆ ಸಮಾಜದ ನಾಲ್ಕನೇ ವರ್ಗದ ಅಮಿತಯ್ಯನನ್ನು ಸಚಿವ ಮತ್ತು ದಂಡನಾಯಕನಾಗಿ ನೇಮಿಸಿಕೊಂಡ ನದರ್ಶನವು ಸಾಕ್ಷಿಯಾಗಿದೆ.

ತನ್ನ ಅರ್ಧ ಶತಮಾನದ ವರ್ಣರಂಜಿತ ಆಳ್ವಿಕೆಯಲ್ಲಿ ಹೊಯ್ಸಳ ರಾಜ್ಯವನ್ನು ಸಾಮ್ರಾಜ್ಯವಾಗಿ ಮಾರ್ಪಡಿಸಿ ಹೊಯ್ಸಳರ ಪ್ರಭುತ್ವವನ್ನು ದಕ್ಷಿಣ ಭಾರತದಲ್ಲಿ ಅಜೇಯ ಸಾಮ್ರಾಜ್ಯವಾಗಿ ಮಾಡಿ ಧರ್ಮ, ಸಾಹಿತ್ಯ, ಕಲೆಗಳಿಗೆ ವಿಶೇಷ ಪ್ರೋತ್ಸಾಹ ನೀಡಿ ಪ್ರಜೆಗಳ ಮೇಲ್ಮೆಗೆ ಕಾರಣನಾದ ವೀರಬಲ್ಲಾಳನು ಕ್ರಿ.ಶ. 1220 ರಲ್ಲಿ ಕೀರ್ತಿಶೇಷನಾದನು. ಅವನ ಮರಣ ವಾರ್ತೆಯನ್ನು ತಿಳಿದ ಕೂಡಲೇ ಅವನ ಅನೇಕ ನೆಚ್ಚಿನ ಭಂಟರೂ, ಗರುಡರೂ (ಲೆಂಕರು) ಪ್ರಾಣಾರ್ಪಣೆ ಮಾಡಿಕೊಂಡರು. ಅವರಲ್ಲಿ ಕುವರ ಲಕ್ಷ್ಮನೆಂಬುವನು ಮುಖ್ಯನು. ವೀರಬಲ್ಲಾಳನು ಅನೇಕ ಬಿರುದುಗಳನ್ನು ಹೊಂದಿದ್ದನು. ಮಲೆಪೆರುಗಂಡ, ಗಿರಿದುರ್ಗಮಲ್ಲ, ಶನಿವಾರಸಿದ್ಧಿ, ಛಲದಂಕಮಲ್ಲ, ಸಮಸ್ತಭುವನಾಶ್ರಯ, ಶ್ರೀಪೃಥ್ವೀವಲ್ಲಭ, ಪರಮೇಶ್ವರ, ಪರಮಭಟ್ಟಾರಕ, ಯಾದವ ನಾರಾಯಣ, ತೆಂಕಣ ಚಕ್ರವರ್ತಿ, 'ಗಂಡುಬೇರುಂಡ' ಮೊದಲಾದವು ಅವನ ಬಿರುದು ಗಳಾಗಿದ್ದವು. ಕರ್ನಾಟಕ ಚಕ್ರವರ್ತಿಗಳಲ್ಲಿ 'ಗಂಡುಬೇರುಂಡ' ಎಂಬ ಬಿರುದನ್ನು ವಹಿಸಿದವರಲ್ಲಿ ವೀರಬಲ್ಲಾಳನೇ ಮೊದಲಿಗನು. ಕರ್ನಾಟಕ ರಾಜಧಾನಿ ಬೆಂಗಳೂರು ನಗರ ವೀರಬಲ್ಲಾಳನಿಂದಲೇ ತನ್ನ ಹೆಸರನ್ನು ಕೀರ್ತಿಯು ತನ್ನ ಉನ್ನತಿಯ ಉತ್ತುಂಗ ಶಿಖರವನ್ನು ಮುಟ್ಟಿತು. ಅವನ ಸಾಧನೆಗಳಿಂದ ಈ ಸಂತತಿಗೆ ಹೊಯ್ಸಳ ಬಲ್ಲಾಳ ಸಂತತಿ ಎಂಬ ಹೆಸರು ರೂಢನಾಮವಾಯಿತು.

ಎರಡನೇ ನರಸಿಂಹ (ಕ್ರಿ.ಶ. 1220-1235)

ಇಮ್ಮಡಿ ನರಸಿಂಹನನ್ನು ಪ್ರತಾಪ ನರಸಿಂಹ, ವೀರನರಸಿಂಹ ಎಂಬ ಹೆಸರುಗಳಿಂದಲೂ ಕರೆಯಲಾಗಿದೆ. ನರಸಿಂಹನು ಇಮ್ಮಡಿ ವೀರಬಲ್ಲಾಳನ ಪಟ್ಟದ ರಾಣಿಯಾದ

ಪದ್ಮಲದೇವಿಯು ಗರ್ಭದಲ್ಲಿ 1184ರಲ್ಲಿ ಹುಟ್ಟಿದನು. ವೀರನರಸಿಂಹನಿಗೆ ಯುವರಾಜ್ಯಾಭಿಷೇಕವನ್ನು ನೆರವೇರಿಸಿ ಬಾಲ್ಯದಲ್ಲಿ ರಾಜಯೋಗ್ಯವಾದ ಶಿಕ್ಷಣವನ್ನು ಒದಗಿಸಲಾಗಿತ್ತು. ಪ್ರಾಪ್ತ ವಯಸ್ಕನಾದ ಮೇಲೆ ನರಸಿಂಹನು, ವೀರಬಲ್ಲಾಳನು ಕೈಗೊಂಡ ಯುದ್ಧಗಳಲ್ಲಿ ಪಾಲ್ಗೊಂಡು ದಕ್ಷ ಯೋಧನೆನಿಸಿ ಕೊಂಡಿದ್ದನು. ಪ್ರಾಂತ್ಯಾಧಿಕಾರಿಯಾಗಿ ಆಡಳಿತದ ಅನುಭವ ಗಳಿಸಿದ್ದನು. ಯುವ ರಾಜನಾಗಿದ್ದಾಗಲೇ ತಂದೆಯ ಆಜ್ಞೆಯ ಮೇರೆಗೆ ಸೈನ್ಯ ಸಮೇತ ತಮಿಳುನಾಡಿಗೆ ಹೋಗಿ ಚೋಳರ ಶತ್ರುಗಳನ್ನು ಸೋಲಿಸಿ ರಾಜರಾಜನಿಗೆ ಸಿಂಹಾಸನವನ್ನು ದೊರಕಿಸಿಕೊಟ್ಟಿದ್ದನು. ಕ್ರಿ.ಶ. 1220ರಲ್ಲಿ ವೀರಬಲ್ಲಾಳನ ಮರಣದ ನಂತರ ಹೊಯ್ಸಳ ಚಕ್ರವರ್ತಿಯಾದನು.

ನರಸಿಂಹನ ಆಳ್ವಿಕೆಯ ಕಾಲದಲ್ಲಿ ಉತ್ತರದಲ್ಲಿ ದೇವಗಿರಿಯ ಸೇವುಣರು ತಮ್ಮ ಹಿಂದಿನ ಸೋಲಿಗೆ ಸೇಡು ತೀರಿಸಿಕೊಳ್ಳಲು ನಿರಂತರವಾಗಿ ಹವಣಿಸುತ್ತಿದ್ದರು. ದಕ್ಷಿಣದಲ್ಲಿ ತಮಿಳುನಾಡಿನ ರಾಜಕೀಯವು ಗೊಂದಲಮಯವಾಗಿತ್ತು. ನರಸಿಂಹನು ಅಧಿಕಾರವನ್ನು ವಹಿಸಿದ ಕೂಡಲೇ ತಮಿಳುನಾಡಿಗೆ ಧಾವಿಸಬೇಕಾಯಿತು. ಮಧುರೆಯ ಪಾಂಡ್ಯ ಸಂತತಿಯ ಮಾರವರ್ಮ ಸುಂದರ ಪಾಂಡ್ಯನು ತನ್ನ ಇತರ ಅನುಯಾಯಿಗಳೊಡನೆ ಸೇರಿ ರಾಜರಾಜನನ್ನು ಪುನಃ ಸೋಲಿಸಿದನು. ಪ್ರತಾಪ ನರಸಿಂಹನು ಕೂಡಲೇ ತಮಿಳುನಾಡಿಗೆ ಧಾವಿಸಿ ಪಾಂಡ್ಯ ರಾಜನನ್ನೂ ಅವನ ಮಿತ್ರರನ್ನೂ ಸೋಲಿಸಿ ರಾಜರಾಜನನ್ನು ಸಂತೈಸಿ ಅವನ ಸಿಂಹಾಸನವನ್ನು ಪುನಃ ದೊರಕಿಸಿಕೊಟ್ಟನು. ಆದರೆ ನರಸಿಂಹನು ಹೆಚ್ಚು ಕಾಲ ತಮಿಳುನಾಡಿನಲ್ಲಿರಲು ಅವಕಾಶವಾಗಲಿಲ್ಲ.

ಹೊಯ್ಸಳ ಚಕ್ರವರ್ತಿಯು ತಮಿಳುನಾಡಿಗೆ ಧಾವಿಸಿದ ಅವಕಾಶವನ್ನು ಉಪಯೋಗಿಸಿ ಕೊಂಡು ಸೇವುಣ ರಾಜನು ಪ್ರಬಲ ಸೈನ್ಯದೊಡನೆ ಹೊಯ್ಸಳರ ಉತ್ತರದ ಗಡಿಗಳನ್ನು ಮುತ್ತಿದನು. ಹೊಯ್ಸಳರ ರಾಜಧಾನಿಗೆ ಮುತ್ತಿಗೆ ಹಾಕುವುದು ಸೇವುಣ ರಾಜನ ಗುರಿಯಾಗಿತ್ತು. ಆದರೆ ಸೇವುಣರ ಆಕ್ರಮಣದ ಸುದ್ದಿ ತಿಳಿದ ಕೂಡಲೇ ಇಮ್ಮಡಿ ನರಸಿಂಹನು ತಮಿಳುನಾಡಿನಿಂದ ಧಾವಿಸಿ ಬಂದು ಸೇವುಣರನ್ನು ಬಳ್ಳಾರಿ ಜಿಲ್ಲೆಯಲ್ಲಿ ತುಂಗಭದ್ರಾ ಪ್ರದೇಶದಲ್ಲಿ ಎದುರಿಸಿದನು. ಪ್ರಬಲ ಹೋರಾಟವು ನಡೆದು ಸೇವುಣ ಬಲವು ಸೋತು ಹೋಯಿತು. ಸೇವುಣ ದಂಡನಾಯಕರಾದ ಪಾವುಸ ಮತ್ತು ವಿಕ್ರಮಪಾಲ ಎಂಬುವರು ಯುದ್ಧದಲ್ಲಿ ಮಡಿದರು. ಅಳಿದುಳಿದ ಸೇವುಣ ಬಲವು ಕಂಗೆಟ್ಟು ಓಡಿತು. ಈ ಯುದ್ಧವು ಸುಮಾರು ಕ್ರಿ.ಶ. 1222ರಲ್ಲಿ ನಡೆಯಿತೆಂದು ತಿಳಿದು ಬರುತ್ತದೆ. ನರಸಿಂಹ ಮತ್ತು ಅವನ ದಂಡನಾಯಕ ಅಡ್ಡಾಯದ ಹರಿಹರನು ಸೇವುಣ ಸೈನ್ಯದ ಮೇಲೆ ನಡೆಸಿದ ಅಪ್ರತಿಮ ಹೋರಾಟವನ್ನು ಅನೇಕ ಶಾಸನಗಳು ವರ್ಣಿಸುತ್ತವೆ. ತೀವ್ರ ಸೋಲನ್ನನುಭವಿಸಿದ ಸೇವುಣರು ಪ್ರತಾಪನರಸಿಂಹನ ಆಳ್ವಿಕೆಯ ಕಾಲದಲ್ಲಿ ಪುನಃ ಯುದ್ಧ ಹೂಡುವ ಸಾಹಸ ಮಾಡಲಿಲ್ಲ.

ಆ ವೇಳೆಗೆ ಪುನಃ ತಮಿಳುನಾಡಿನ ರಾಜಕೀಯವು ಗೊಂದಲಮಯವಾಗಿತ್ತು. ಕ್ರಿ.ಶ. 1224 ರಲ್ಲಿ ಪಾಂಡ್ಯ, ಮಗರ ಮತ್ತು ಕಡವ ಸಂತತಿಗಳ ರಾಜರು ಐಕ್ಯಮತ್ಯದಿಂದ

ಯುದ್ಧ ಮಾಡಿ ದುರ್ಬಲನಾದ ಮೂರನೇ ರಾಜರಾಜ ಚೋಳನನ್ನು ಸೋಲಿಸಿದರು. ಅವನು ತಲೆ ತಪ್ಪಿಸಿಕೊಂಡು ಹೋಗುವ ಪ್ರಯತ್ನದಲ್ಲಿದ್ದಾಗ ಅವನನ್ನು ಬಂಧಿಸಲಾಯಿತು. ಪ್ರತಾಪನರಸಿಂಹ ಮತ್ತು ಅವನ ದಂಡನಾಯಕರಾದ ಅಪ್ಪಯ್ಯ ಮತ್ತು ಗೋಪಯ್ಯ ಎಂಬುವರು ತಮಿಳುನಾಡಿಗೆ ಹೋಗಿ ಪಾಂಡ್ಯರನ್ನು, ಮಗರ ಮತ್ತು ಇತರ ಮಾಂಡಲಿಕರನ್ನು ಸೋಲಿಸಿ ರಾಜರಾಜನಿಗೆ ಅಧಿಕಾರವನ್ನು ದೊರಕಿಸಿಕೊಟ್ಟರು. ಕಂಚಿಯು ಸ್ವಲ್ಪ ಕಾಲ ನರಸಿಂಹನ ವಶವಾಗಿತ್ತು. ಅವನು ರಾಮೇಶ್ವರದವರೆಗೂ ದಂಡೆತ್ತಿ ಹೋಗಿ ವಿಜಯಸ್ತಂಭವನ್ನು ಸ್ಥಾಪಿಸಿದುದಾಗಿ ತಿಳಿದುಬರುತ್ತದೆ. ಆ ವೇಳೆಗೆ ನರಸಿಂಹನ ಸಹೋದರಿಯಾದ ಸೋವಲದೇವಿಯನ್ನು ಮೂರನೇ ರಾಜರಾಜನು ವರಿಸಿದ್ದನು. ಹೊಯ್ಸಳ ಮತ್ತು ಚೋಳ ರಾಜಮನೆತನಗಳ ಮಧ್ಯೆ ನಿಕಟವಾದ ಬಾಂಧವ್ಯವು ಏರ್ಪಟ್ಟಿತ್ತು. ಪುನಃ 1227ರಲ್ಲಿ ಪಾಂಡ್ಯರಿಂದ ರಾಜರಾಜನು ತೊಂದರೆಗೆ ಗುರಿಯಾದನು. ಆದರೆ ನರಸಿಂಹನು ರಾಜರಾಜನ ಸಹಾಯಕ್ಕೆ ಧಾವಿಸಿದನು. ರಾಜರಾಜನ ಸಂರಕ್ಷಣೆಗಾಗಿ ಒಂದು ಹೊಯ್ಸಳ ಸೈನ್ಯದ ತುಕಡಿಯನ್ನು ತಮಿಳುನಾಡಿನ ಶ್ರೀರಂಗಂ ಬಳಿಯಲ್ಲಿ ಸ್ಥಾಪಿಸಲಾಯಿತು. ಅದರ ವೆಚ್ಚಕ್ಕಾಗಿ ರಾಜ ರಾಜನು ಶ್ರೀರಂಗಂ ಸುತ್ತಮುತ್ತಲಿನ ಫಲವತ್ತಾದ ವಿಶಾಲ ಪ್ರದೇಶವನ್ನು ಹೊಯ್ಸಳರ ಆಳ್ವಿಕೆಗೆ ವಹಿಸಿದನು. ನರಸಿಂಹನ ಪುತ್ರನೂ ಯುವರಾಜನೂ ಆದ ವೀರಸೋಮೇಶ್ವರನು ಅಲ್ಲಿ ಒಂದು ರಾಜಧಾನಿಯನ್ನು ಸ್ಥಾಪಿಸಿಕೊಂಡು ಅಧಿಕಾರ ನಡೆಸುತ್ತಿದ್ದನು. ತಮಿಳುನಾಡಿನಲ್ಲಿ ಹೊಯ್ಸಳರ ಪ್ರಭಾವವು ವ್ಯಾಪಕವಾಗಿ ವಿಸ್ತರಿಸಿತು.

ಪ್ರತಾಪನರಸಿಂಹನು ಸೇವುಣರ ದಾಳಿಯಿಂದ ಸಾಮ್ರಾಜ್ಯವನ್ನು ಸಂರಕ್ಷಿಸಿದನು. ಪುನಃ ಪುನಃ ಸಂಭವಿಸಿದ ಚೋಳ-ಪಾಂಡ್ಯ ಘರ್ಷಣೆಗಳಿಂದ ಮೂರನೇ ರಾಜರಾಜ ಚೋಳನ ಅಧಿಕಾರವು ಚ್ಯುತಿಗಾಣದಂತೆ ಸಂರಕ್ಷಿಸಿದನು. ಪಾಂಡ್ಯರನ್ನು, ಮಗರರನ್ನು ಸದೆ ಬಡಿದನು. ಚೋಳ ರಾಜ್ಯ ಪ್ರತಿಷ್ಠಾಪನಾಚಾರ್ಯ, ಪಾಂಡ್ಯರಾಜ ಗಜಕೇಸರಿ, ಮಗರ ರಾಜ್ಯ ನಿರ್ಮೂಲನ ಎಂಬ ಬಿರುದುಗಳನ್ನು ಧರಿಸಿದನು. ತಮಿಳುನಾಡಿನ ಮೇಲೆ ಹೊಯ್ಸಳರ ರಾಜಕೀಯ ಪ್ರಭಾವವನ್ನು ಯಶಸ್ವಿಯಾಗಿ ಸ್ಥಾಪಿಸಿದನು. ಹರಿಹರ, ಪೊಲ್ವಾಳ, ಅಪ್ಪಯ್ಯ ಮತ್ತು ಗೋಪಯ್ಯ ಎಂಬುವರು ಎರಡನೇ ನರಸಿಂಹನ ಪ್ರಸಿದ್ಧ ಮಂತ್ರಿಗಳೂ ದಂಡನಾಯಕರೂ ಆಗಿದ್ದರು. ಪೊಲಾಳ್ವ, ದಂಡನಾಥನು ವೈಷ್ಣವ ಪಂಥಾವಲಂಬಿಯಾಗಿದ್ದು ಹರಿಹರದ ಪ್ರಸಿದ್ಧ ಹರಿಹರೇಶ್ವರ ದೇವಾಲಯವನ್ನು ಕಟ್ಟಿಸಿದನು. ನರಸಿಂಹನ ಆಳ್ವಿಕೆಯ ಕಾಲದಲ್ಲಿ ಬಸರಾಳಿನ ಮಲ್ಲಿಕಾರ್ಜುನ, ಬೆಳ್ಳೂರಿನ ಮೂಲ ಸಂಗೇಶ್ವರ, ಹಾರನಹಳ್ಳಿಯ ಕೇಶವ ಮೊದಲಾದ ಇತರ ಪ್ರಸಿದ್ಧ ದೇವಾಲಯಗಳು ನಿರ್ಮಾಣವಾದವು. ಅವನಿಗೆ ಸಮಸ್ತಭುವನಾಶ್ರಯ, ಶ್ರೀ ಪೃಥ್ವೀವಲ್ಲಭ, ಮಹಾರಾಜಾಧಿರಾಜ ಪರಮೇಶ್ವರ, ನಿಸ್ಸಂಕ ಪ್ರತಾಪ ಚಕ್ರವರ್ತಿ ಮೊದಲಾದ ಬಿರುದುಗಳಿದ್ದವು. ನರಸಿಂಹನು ಕ್ರಿ.ಶ. 1235ರಲ್ಲಿ ಮರಣ ಹೊಂದಿದನು. ಅನಂತರ ಇಮ್ಮಡಿ ನರಸಿಂಹ ಮತ್ತು ಪಟ್ಟಮಹಿಷಿ ಕಾಳಲದೇವಿ ಅವರ ಮಗನಾದ ಸೋಮೇಶ್ವರನು ಪಟ್ಟಕ್ಕೆ ಬಂದನು.

ವೀರ ಸೋಮೇಶ್ವರ (1236 ರಿಂದ 1255)

ಹೊಯ್ಸಳ ಸೋಮೇಶ್ವರನ ಆಳ್ವಿಕೆಯ ಕಾಲವು ಅನೇಕ ಘಟನಾವಳಿಗಳಿಂದ ಕೂಡಿದೆ. ಅವನು ತಮಿಳುನಾಡಿನ ರಾಜಕೀಯದಲ್ಲಿ ಹೆಚ್ಚು ಶ್ರಮಿಸಬೇಕಾಯಿತು. ಸೇವುಣರ ಆಕ್ರಮಣವನ್ನು ಎದುರಿಸಬೇಕಾಯಿತು. ಕೊನೆಯಲ್ಲಿ ಸಾಮ್ರಾಜ್ಯವನ್ನು ತನ್ನ ಇಬ್ಬರು ಮಕ್ಕಳಿಗೂ ವಿಭಜಿಸಿ ಕೊಡಬೇಕಾಯಿತು. ಪರಿಣಾಮಕಾರಿಯಾದ ಮೇಲ್ಕಂಡ ಘಟನೆಗಳಿಂದ ಸೋಮೇಶ್ವರನ ಆಳ್ವಿಕೆಯು ಪ್ರಮುಖವಾಗಿದೆ. ಹಲವು ವಿದ್ವಾಂಸರ ಪ್ರಕಾರ ಅವನ ಆಳ್ವಿಕೆಯು ತಮಿಳುನಾಡಿನಲ್ಲಿ ಹೊಯ್ಸಳರ ಪ್ರಭಾವದ ಉತ್ತುಂಗ ಕಾಲವಾಗಿತ್ತು. ಮತ್ತೆ ಹಲವು ವಿದ್ವಾಂಸರು ವೀರಸೋಮೇಶ್ವರನ ಆಳ್ವಿಕೆಯು ಹೊಯ್ಸಳ ರಾಜರ ಆಳ್ವಿಕೆಯುಲ್ಲೆಲ್ಲಾ ಚಿಂತಾಜನಕವಾದುದಾಗಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ವೀರಸೋಮೇಶ್ವರನ ತಾಯಿಯು ಅವನು ಇನ್ನೂ ಶಿಶುವಾಗಿದ್ದಾಗಲೇ ತೀರಿಕೊಂಡಳು. ಅವನು ತನ್ನ ಸೋದರತ್ತೆಯಾದ ಸೋವಲದೇವಿಯ ಪಾಲನೆಯಲ್ಲಿ ಕ್ರಿ.ಶ. 1223ರಿಂದ ತಮಿಳು ನಾಡಿನಲ್ಲಿ ಬೆಳೆದನು. ಕ್ರಿ.ಶ. 1228ರಲ್ಲಿ ತನ್ನ ತಂದೆಯಿಂದ ತಮಿಳು ಪ್ರದೇಶದ ಮೇಲ್ವಿಚಾರಣೆಗೆ ನೇಮಕಗೊಂಡನು. ಸೋಮೇಶ್ವರನು ಶ್ರೀರಂಗಂ ಬಳಿಯ ಕಣ್ಣಾನೂರಿನ ಸಮೀಪದಲ್ಲಿ ಹೊಸ ರಾಜಧಾನಿಯನ್ನು ಕಟ್ಟಿ ಅದನ್ನು ವಿಕ್ರಮಪುರ ಎಂದು ಕರೆದನು. ಅಲ್ಲಿ ಸುಂದರವಾದ ಒಂದು ಹೊಯ್ಸಳೇಶ್ವರ ದೇವಾಲಯವನ್ನೂ ಕಟ್ಟಿಸಿದನು. ತಮಿಳುನಾಡಿನ ರಾಜಕೀಯ ಸ್ಥಿತಿಗಳು ಅವನಿಗೆ ಬಾಲ್ಯದಿಂದಲೂ ಚಿರಪರಿಚಿತವಾಗಿದ್ದವು. ಕ್ರಿ.ಶ. 1236ರಲ್ಲಿ ಪ್ರತಾಪ ನರಸಿಂಹನ ಮರಣಾನಂತರ ದ್ವಾರಸಮುದ್ರದಲ್ಲಿ ಹೊಯ್ಸಳ ಸಿಂಹಾಸನವನ್ನೇರಿ ಚಕ್ರವರ್ತಿಯಾದನು. ವೀರ ಸೋಮೇಶ್ವರನ ಕಾಲದಲ್ಲಿ ತಮಿಳುನಾಡಿನ ರಾಜಕೀಯವು ಹೊಸ ತಿರುವು ಮುರುವುಗಳಿಂದ ಕೂಡಿ ಪ್ರಕ್ಷುಬ್ಧ ಸ್ಥಿತಿಯುಂಟಾಯಿತು.

ಮೂರನೇ ರಾಜರಾಜ ಚೋಳನು ಮರಣಹೊಂದಿ ಮೂರನೇ ರಾಜೇಂದ್ರ ಚೋಳನು ಚೋಳ ರಾಜನಾದನು. ಮೂರನೇ ರಾಜೇಂದ್ರನು ತೆಲುಗು ಚೋಳ ಗಂಡ ಗೋಪಾಲ ಮತ್ತು ಕಡವ ಕೋಪೆ ರುಂಜುಂಗನೊಡನೆ ಮೈತ್ರಿಯೇರ್ಪಡಿಸಿಕೊಂಡು ಹೊಯ್ಸಳ ಪರಮಾಧಿಕಾರವನ್ನು ಧಿಕ್ಕರಿಸಿದುದಲ್ಲದೆ ಪಾಂಡ್ಯರಾಜನಾದ ಮಾರವರ್ಮನ್ ಸುಂದರ ಪಾಂಡ್ಯನನ್ನು ಸೋಲಿಸಿ ಸ್ವತಂತ್ರವಾಗಿ ಆಳಲು ಆಕ್ರಮಿಸಿದನು ಯುದ್ಧ ದಲ್ಲಿ ಸೋತ ಮಾರವರ್ಮನ್ ಸುಂದರ ಪಾಂಡ್ಯನು ವೀರಸೋಮೇಶ್ವರನ ಸಹಾಯವನ್ನು ಯಾಚಿಸಿದನು. ಸೋಮೇಶ್ವರನು ರಾಜೇಂದ್ರನನ್ನು ಅವನ ಪಕ್ಷದ ಮಾಂಡಲಿಕರನ್ನು ಸೋಲಿಸಿ ಪಾಂಡ್ಯ ರಾಜನನ್ನು ಸಂತೈಸಿದನು. ಸೋಮೇಶ್ವರನ ಹತ್ತಿರದ ಸಂಬಂಧಿಯಾದ ಪಮ್ಮಿಯಕ್ಕನ್ ಎಂಬುವಳನ್ನು ಮಾರವರ್ಮನು ವರಿಸಿದ್ದನು. ವೀರ ಸೋಮೇಶ್ವರನು, “ಪಾಂಡ್ಯರಾಜ ಸ್ಥಾಪನಾಚಾರ್ಯ”, ಮತ್ತು “ಪಾಂಡ್ಯ ಕುಲ ಸಂರಕ್ಷಣಾ ದಕ್ಷಿಣಭುಜ” ಎಂಬ ಬಿರುದನ್ನು

ಧರಿಸಿದನು. ಚೋಳ ಮತ್ತು ಪಾಂಡ್ಯ ಸಂತತಿಗಳು ಹೊಯ್ಸಳ ಸಂತತಿಯೊಡನೆ ರಕ್ತ ಸಂಬಂಧವನ್ನೇರ್ಪಡಿಸಿ ಕೊಂಡಿದ್ದವು. ತಿರುಮಾಯಂ ಮತ್ತು ತಿನ್ನವೇಲಿ ಶಾಸನಗಳಲ್ಲಿ ಮೂರನೇ ರಾಜೇಂದ್ರ ಚೋಳನೂ ಮಾರವರ್ಮನ್ ಸುಂದರ ಪಾಂಡ್ಯನೂ ವೀರಸೋಮೇಶ್ವರನನ್ನು "ಮಾಮಾದಿಗಳ್" ಎಂಬುದಾಗಿ ಸಂಭೋದಿಸಿದ್ದಾರೆ. ಕನ್ನಡನಾಡಿನ ಹೆಚ್ಚು ಮಂದಿ ದಂಡನಾಯಕರೂ, ಅಧಿಕಾರಿಗಳೂ ತಮಿಳು ನಾಡಿನಲ್ಲಿ ಆಡಳಿತ ಮತ್ತು ಇತರ ಕಾರ್ಯಗಳಲ್ಲಿ ನಿಯೋಜಿತರಾಗಿದ್ದರು. ಆ ಕಾಲವು ತಮಿಳು ನಾಡಿನಲ್ಲಿ ಹೊಯ್ಸಳರ ಪ್ರಭಾವ ಮತ್ತು ಅಧಿಕಾರದ ಉತ್ತುಂಗಕಾಲವಾಗಿತ್ತು. ಕ್ರಿ.ಶ. 1251 ರವರೆಗೂ ತಮಿಳುನಾಡಿನಲ್ಲಿ ಹೊಯ್ಸಳರ ಅಧಿಕಾರಕ್ಕೆ ಯಾವ ವಿಧವಾದ ಚ್ಯುತಿಯೂ ಒದಗಲಿಲ್ಲ.

ವೀರ ಸೋಮೇಶ್ವರನು ತಮಿಳುನಾಡಿನ ರಾಜಕೀಯದಲ್ಲಿ ತೊಡಗಿದ್ದಾಗ ಹೊಯ್ಸಳ ಸಾಮ್ರಾಜ್ಯದ ಉತ್ತರ ಗಡಿಗಳನ್ನು ಸೇವುಣ ಕೃಷ್ಣಕಾಂಧಾರನು ಮುತ್ತಿದನು. ಅವನು ದ್ವಾರಸಮುದ್ರವನ್ನು ಮುತ್ತುವ ಹವಣಿಕೆಯಲ್ಲಿದ್ದನು. ಆದರೆ ಸುದ್ದಿ ತಿಳಿದ ಕೂಡಲೇ ವೀರ ಸೋಮೇಶ್ವರನು ತನ್ನ ಸಾಮ್ರಾಜ್ಯದ ಉತ್ತರ ಗಡಿಗೆ ಧಾವಿಸಿದನು. ವೀರಸೋಮೇಶ್ವರನು ಸೇವುಣ ಬಲವನ್ನು ಸೋಲಿಸಿ ಕೃಷ್ಣಾ ನದಿಯವರೆಗೂ ಹಿಮ್ಮೆಟ್ಟಿಸಿದನು. ಕಾಮೇಯ ನಾಯಕ ಎಂಬ ಹೊಯ್ಸಳ ದಂಡನಾಯಕನು ಸೇವುಣರೊಡನೆ ನಡೆದ ಯುದ್ಧದಲ್ಲಿ ವೀರಾವೇಶದಿಂದ ಹೋರಾಡಿದನು. ವೀರಸೋಮೇಶ್ವರನು ಸೇವುಣರನ್ನು ಹಿಮ್ಮೆಟ್ಟಿಸಿದ ಕೂಡಲೇ ಪುನಃ ತಮಿಳು ನಾಡಿಗೆ ಪ್ರಯಾಣ ಮಾಡಿದನು. ತಮಿಳುನಾಡಿನ ರಾಜಕೀಯವು ಸುಸೂತ್ರವಾಗಿ ಮುಂದುವರಿದಿದ್ದ ಪಕ್ಷದಲ್ಲಿ ಸೇವುಣರು ಹೊಯ್ಸಳರಿಂದ ಹೆಚ್ಚಿನ ಆಘಾತವನ್ನು ಅನುಭವಿಸಬೇಕಾಗುತ್ತಿತ್ತು.

ತಮಿಳುನಾಡಿನಲ್ಲಿದ್ದ ಸೌಹಾರ್ದ ಪರಿಸ್ಥಿತಿಯು ಹೆಚ್ಚು ಕಾಲ ಮುಂದುವರಿಯಲಿಲ್ಲ. ಅಲ್ಲಿ ಕ್ರಿ.ಶ. 1251ರಲ್ಲಿ ಪುನಃ ರಾಜಕೀಯ ಏರುಪೇರುಗಳುಂಟಾದವು. ಪಾಂಡ್ಯ ರಾಜನಾದ ಮಾರವರ್ಮನ್ ಸುಂದರ ಪಾಂಡ್ಯನು ಮಡಿದು ಜಟಾವರ್ಮನ್ ಸುಂದರ ಪಾಂಡ್ಯನು ರಾಜನಾದನು. ಅವನು ಪಾಂಡ್ಯ ಸಂತತಿಯ ಅತಿಪರಾಕ್ರಮಿ ರಾಜರಲ್ಲೊಬ್ಬನು. ಪಟ್ಟಕ್ಕೆ ಬಂದ ಕೂಡಲೇ ದಿಗ್ವಿಜಯದಲ್ಲಿ ತೊಡಗಿ ಚೇರ, ಚೋಳ ಮೊದಲಾದ ರಾಜರನ್ನೆಲ್ಲಾ ಸೋಲಿಸಿ ಪಾಂಡ್ಯ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಅವನು ಹೊಯ್ಸಳ ಸೈನ್ಯವನ್ನು ಸೋಲಿಸಿದನು. ಆದರೆ ಸೋಮೇಶ್ವರನು ತಮಿಳು ರಾಜಕೀಯದಲ್ಲಿ ಮೊದಲಿನಷ್ಟು ಪ್ರಭಾವವನ್ನು ಹೊಂದಲಾಗದಿದ್ದರೂ ಶ್ರೀರಂಗಂ ಸುತ್ತುಮುತ್ತಲಿನ ಪ್ರದೇಶದ ಮೇಲೆ ತನ್ನ ಆಳ್ವಿಕೆಯನ್ನು ಮುಂದುವರಿಸಿದನು. ಹೊಯ್ಸಳರು ತಮಿಳುನಾಡಿನಲ್ಲಿ ಹೊಂದಿದ್ದ ಪ್ರಭಾವವು ಕಡಿಮೆಯಾಯಿತು. ಆ ವೇಳೆಗೆ ಅನಾರೋಗ್ಯದಿಂದ ನರಳುತ್ತಿದ್ದ ಸೋಮೇಶ್ವರನು ಕ್ರಿ.ಶ. 1254ರಲ್ಲಿ ದ್ವಾರಸಮುದ್ರಕ್ಕೆ ಬಂದನು. ಅನಾರೋಗ್ಯದ ಪರಿಹಾರಾರ್ಥವಾಗಿ ಬೇಲೂರು ಮತ್ತು ದ್ವಾರಸಮುದ್ರದ ದೇವಾಲಯಗಳಿಗೆ ವಿಶೇಷ ದಾನಧರ್ಮಗಳನ್ನು ನೀಡಿದನು.

ವೀರ ಸೋಮೇಶ್ವರನು ತನ್ನ ಕೊನೆಗಾಲದಲ್ಲಿ ತಮಿಳುನಾಡಿನ ರಾಜಕೀಯದಲ್ಲುಂಟಾದ ಪರಾಜಯ ಮತ್ತು ಅನಾರೋಗ್ಯದ ಜೊತೆಗೆ ಕೌಟುಂಬಿಕ ತೊಂದರೆಯನ್ನು ಅನುಭವಿಸಬೇಕಾಯಿತು. ಅವನಿಗೆ ಬಿಜ್ಜಳ ಮಹಾದೇವಿ ಮತ್ತು ದೇವಲದೇವಿ ಎಂಬ ಇಬ್ಬರು ರಾಣಿಯರಿದ್ದರು. ಬಿಜ್ಜಳ ದೇವಿಗೆ ವೀರನರಸಿಂಹ ಎಂಬ ಪುತ್ರನೂ ದೇವಲದೇವಿಗೆ ವೀರರಾಮನಾಥ ಎಂಬ ಪುತ್ರನೂ ಇದ್ದರು. ಇಬ್ಬರೂ ಸಮವಯಸ್ಕರಾಗಿದ್ದು ಪರಸ್ಪರ ಸಂಶಯದಿಂದ ಕೂಡಿದ್ದರು. ಅವರಿಬ್ಬರು ಸುಮಾರು 15 ವರ್ಷ ವಯಸ್ಸಿನವರಾಗಿದ್ದರು. ಸಿಂಹಾಸನಕ್ಕಾಗಿ ಸ್ಪರ್ಧೆಯಲ್ಲಿ ತೊಡಗಿದ್ದರು. ಅವರ ಕಾದಾಟವನ್ನು ನಿವಾರಿಸಲು ವೀರಸೋಮೇಶ್ವರನು ಸಾಮ್ರಾಜ್ಯವನ್ನು ವಿಭಜಿಸಿ ಅವರಿಗೆ ಹಂಚಿ ಕ್ರಿ.ಶ. 1255ರಲ್ಲಿ ಮರಣ ಹೊಂದಿದನು. ಅವನ ಮರಣಾನಂತರ ದ್ವಾರಸಮುದ್ರದಲ್ಲಿ ವೀರನರಸಿಂಹನೂ, ತಮಿಳುನಾಡಿನಲ್ಲಿ ವೀರರಾಮನಾಥನೂ ಅಧಿಕಾರ ರೂಢರಾದರು.

ವೀರ ಸೋಮೇಶ್ವರನ ಆಳ್ವಿಕೆಯ ಕಾಲದಲ್ಲೂ ಹೊಯ್ಸಳ ಸಾಮ್ರಾಜ್ಯವು ಸುಭಿಕ್ಷೆಯಿಂದ ಕೂಡಿತ್ತು. ನುಗ್ಗೆಹಳ್ಳಿಯ ಲಕ್ಷ್ಮೀನರಸಿಂಹ ಮತ್ತು ಸದಾಶಿವ ಜಾವಗಲ್ಲಿನ ಲಕ್ಷ್ಮೀನರಸಿಂಹ, ಬೂದನೂರಿನ ಈಶ್ವರ, ತಂಡಗದ ಕೇಶವ, ಹೊಸಹೊಳಲಿನ ಲಕ್ಷ್ಮೀನಾರಾಯಣ, ಗೋವಿಂದನ ಹಳ್ಳಿಯ ಪಂಚಲಿಂಗೇಶ್ವರ ಮೊದಲಾದ ಸುಂದರ ದೇವಾಲಯಗಳು ವೀರ ಸೋಮೇಶ್ವರನ ಆಳ್ವಿಕೆಯಲ್ಲಿ ನಿರ್ಮಾಣವಾದವು. ಕೇರಳದಿಂದ ಬಂದು ಹೊಯ್ಸಳ ನಾಡಿನಲ್ಲಿ ನೆಲಸಿದ್ದ ವೊಡ್ಡ ವ್ಯವಹಾರಿಯೊಬ್ಬನ ಕುಮಾರಿ ಚಂದವ್ವೆ ಎಂಬುವಳಿಗೆ, ಅವಳು ನೃತ್ಯ ಮತ್ತು ಸಂಗೀತದಲ್ಲಿ ಹೊಂದಿದ್ದ ಪ್ರವೀಣತೆಗಾಗಿ 'ಗಾನಕುಮಾರಿ' ಎಂಬ ಬಿರುದನ್ನು ನೀಡಿ ಗೌರವಿಸಿದನು. ಸೋಮೇಶ್ವರನ ಆಸ್ಥಾನದಲ್ಲಿದ್ದ ಎರಡನೇ ವಿದ್ಯಾಚಕ್ರವರ್ತಿ ಎಂಬ ವಿದ್ವಾಂಸನು ಸಂಸ್ಕೃತ ಭಾಷೆಯಲ್ಲಿ 'ಗದ್ಯಕರ್ಣಾಮೃತ' ಎಂಬ ಗ್ರಂಥವನ್ನು ರಚಿಸಿದನು. ವೀರ ಸೋಮೇಶ್ವರನು ಹಿರಣ್ಯಗರ್ಭ ಮತ್ತು ತುಲಾಪುರುಷ ಯಜ್ಞಗಳನ್ನು ಮಾಡಿದನು. ಅವನು ಯೋಧನಾಗಿ ವೈರಿಗಳ ಮೇಲೆ ಜಯ ಗಳಿಸಿದನು. ಚತುರತೆಯಿಂದ ಆಡಳಿತ ನಡೆಸಿದನು. ಸೋಮೇಶ್ವರನ ವಿಭಜನೆಯಿಂದ ತನ್ನ ಮನೆತನದ ಪ್ರತಿಷ್ಠೆಯು ಏಳ್ಗೆ ಹೊಂದುವುದೆಂದು ಭಾವಿಸಿದ್ದನು. ಆದರೆ ಅದು ಅವನ ಎಣಿಕೆಗೆ ವಿರುದ್ಧವಾಗಿ ಮಾರ್ಪಾಡಾಯಿತು. ಆದ್ದರಿಂದ ಸೋಮೇಶ್ವರನ ಆಳ್ವಿಕೆಯನ್ನು ಹೊಯ್ಸಳ ಸಂತತಿಯ ಅತ್ಯಂತ ಪ್ರತಿಷ್ಠೆಯ ಕಾಲವೆಂದು ಪರಿಗಣಿಸಲಾಗದು ಅಂತೆಯೇ ಅವನ ಆಳ್ವಿಕೆಯು ಚಿಂತಾಜನಕ ವಾದುದೂ ಆಗಲಾರದು. ವೀರಸೋಮೇಶ್ವರನು ತನಗೆದುರಾದ ಶತ್ರುಗಳೊಡನೆ ವೀರಾವೇಶದಿಂದ ಹೋರಾಡಿದನು. ಸೇವುಣರನ್ನು ಸೋಲಿಸಿ ಹಿಮ್ಮೆಟ್ಟಿಸಿದನು. ತಮಿಳುನಾಡಿನಲ್ಲಿ ಉತ್ತಮವಾದ ರಾಜಕೀಯ ಸ್ಥಿತಿಯನ್ನು ಏರ್ಪಡಿಸಿದನು. ಆದರೆ ಜಟಾವರ್ಮನ್ ಸುಂದರ ಪಾಂಡ್ಯನನ್ನು ಅವನು ಜಯಿಸಲಾಗಲಿಲ್ಲ. ಭ್ರಾತೃ ಕಲಹದಿಂದ ಸಾಮ್ರಾಜ್ಯವನ್ನು ಸಂರಕ್ಷಿಸಲು ಅವನು ರಾಜ್ಯ ವಿಭಜನೆ ಮಾಡಲೇ ಬೇಕಾಯಿತು.

ಮೂರನೇ ವೀರನರಸಿಂಹ (1256–1291)

ಸೋಮೇಶ್ವರನು ಸಾಮ್ರಾಜ್ಯವನ್ನು ವಿಭಜಿಸಿ ತನ್ನ ಇಬ್ಬರೂ ಮಕ್ಕಳಿಗೂ ಕೊಟ್ಟನು. ಪಿತ್ರಾರ್ಜಿತವಾಗಿ ಬಂದಿದ್ದ ಭಾಗಗಳನ್ನು ನರಸಿಂಹನಿಗೂ ತಮಿಳುನಾಡಿನ ಪ್ರದೇಶವನ್ನು ರಾಮನಾಥನಿಗೂ ಕೊಟ್ಟನು. ಕನ್ನಡನಾಡಿನ ಪೂರ್ವಗಡಿಯ ಕೋಲಾರ ಮತ್ತು ಬೆಂಗಳೂರು ಜಿಲ್ಲೆಯ ಪ್ರದೇಶಗಳು ಮತ್ತು ತಮಿಳುನಾಡಿನ ಭಾಗಗಳು ರಾಮನಾಥನ ಆಳ್ವಿಕೆಗೆ ಸೇರಿದವು. ವೀರನರಸಿಂಹನು ದ್ವಾರಸಮುದ್ರದಲ್ಲೂ ವೀರರಾಮನಾಥನು ಕಣ್ಣಾನೂರಿನಲ್ಲೂ ಏಕ ಕಾಲದಲ್ಲಿ 1256ರಲ್ಲಿ ಅಧಿಕಾರ ವಹಿಸಿಕೊಂಡರು.

ವೀರನರಸಿಂಹನಿಗೂ ಮತ್ತು ವೀರರಾಮನಾಥನಿಗೂ ಸತತವಾಗಿ ದಾಯಾದಿ ಕಲಹಗಳು ನಡೆದವು. ರಾಜ್ಯದ ಹಂಚಿಕೆಯಿಂದ ಅತೃಪ್ತನಾದ ರಾಮನಾಥನು ಬೆಂಗಳೂರು ತುಮಕೂರಿನತ್ತ ರಾಜ್ಯ ವಿಸ್ತರಿಸಲು ಹವಣಿಸಿದನು. ಭ್ರಾತೃಕಲಹದಿಂದ ಬಲಹೀನಗೊಂಡಿದ್ದ ವೀರನರಸಿಂಹನ ರಾಜ್ಯವನ್ನು ಆಕ್ರಮಿಸಲು ಸೇವುಣರು ಮುಂದಾದರು. ನರಸಿಂಹನು ರಾಮನಾಥನನ್ನು ಸೋಲಿಸಿ ಹಿಮ್ಮೆಟ್ಟಿಸುವ ವೇಳೆಗೆ 1271ರಲ್ಲಿ ಸೇವುಣ ಮಹದೇವನು ಬಳ್ಳಾರಿ, ಚಿತ್ರದುರ್ಗ ಜಿಲ್ಲೆಗಳ ಮೇಲೆ ಆಕ್ರಮಣ ನಡೆಸಿದನು. ಆದರೆ ನರಸಿಂಹನೂ ಅವನ ದಂಡನಾಯಕನಾದ ಪೆರಮಾಳನೂ ಸೇವುಣರನ್ನು ಎದುರಿಸಿ ಸೋಲಿಸಿದರು. ಯುದ್ಧದಲ್ಲಿ ಸೇವುಣ ದಂಡನಾಯಕನಾದ ರತ್ನಪಾಲ ಎಂಬುವನು ಮರಣ ಹೊಂದಿದನು. ಸೇವುಣ ಒಲವು ಹಿಮ್ಮೆಟ್ಟಿತು.

ಸೇವುಣ ಮಹದೇವನ ತರುವಾಯ ಅಧಿಕಾರಕ್ಕೆ ಬಂದ ರಾಮಚಂದ್ರನು ಕ್ರಿ.ಶ. 1276ರಲ್ಲಿ ಪ್ರಬಲ ಸೈನ್ಯದೊಂದಿಗೆ ಮುಂದುವರಿದು ದ್ವಾರಸಮುದ್ರವನ್ನು ಮುತ್ತುವ ಹಂಚಿಕೆಯಲ್ಲಿದ್ದನು. ಸೇವುಣ ಬಲವು ಬೆಳವಾಡಿಯವರೆಗೂ ಬಂದಿತು. ಆ ವೇಳೆಯಲ್ಲಿ ರಾಮನಾಥನೊಡನೆ ಯುದ್ಧದಲ್ಲಿ ತೊಡಗಿದ್ದ ನರಸಿಂಹನು ಸೇವುಣರನ್ನು ಎದುರಿಸಲು ಧಾವಿಸಿದನು. ಸೈನ್ಯದ ನಾಯಕತ್ವವನ್ನು ವಹಿಸಿ ವೀರಾವೇಶದಿಂದ ಹೋರಾಡಿ ಜಯ ಗಳಿಸಿದನು. ನರಸಿಂಹನ ದಳಪತಿಗಳಾದ ಚಿಕ್ಕಕೇತಯ್ಯ ಮತ್ತು ಅಂಕಯ್ಯ ಮೊದಲಾದವರು ಜೀವದ ಹಂಗನ್ನು ತೊರೆದು ಶತ್ರುಗಳ ವಿರುದ್ಧ ಹೋರಾಡಿದರು. ಶತ್ರು ಸೈನ್ಯವು ಸೋತು ಓಡಿತು. ಹೊಯ್ಸಳ ಸೈನ್ಯವು ಅವರನ್ನು ಚಿತ್ರದುರ್ಗದವರೆಗೂ ಬೆನ್ನಟ್ಟಿತು. ಆನಂತರ ನರಸಿಂಹನು ಸೇವುಣರೊಡನೆ ಸಹಕರಿಸಿದ ನಡಗಲ್ ಚೋಳ ಮೊದಲಾದ ಸಾಮಂತರನ್ನು ಶಿಕ್ಷಿಸಿದನು. ಸೇವುಣರ ಆಕ್ರಮಣದಿಂದ ಹೊಯ್ಸಳ ರಾಜ್ಯವನ್ನು ಪಾರು ಮಾಡಿದನು.

ದಾಯಾದಿ ಕಲಹ ಮತ್ತು ಸೇವುಣರ ಆಕ್ರಮಣದಿಂದ ಹೊಯ್ಸಳರ ಪ್ರಾಬಲ್ಯವು ಬಲಹೀನವಾದಾಗ್ಯೂ ರಾಜ್ಯದಲ್ಲಿ ಅನೇಕ ಸುಂದರ ಮಂದಿರಗಳು ನಿರ್ಮಾಣಗೊಂಡವು. ಅವನ ಆಳ್ವಿಕೆಯ ಕೊನೆಗಾಲದಲ್ಲಿ ಯುವರಾಜ ಮೂರನೇ ಬಲ್ಲಾಳನು ತಂದೆಗೆ ಹೆಚ್ಚು ಸಹಕಾರಿಯಾಗಿದ್ದನು. ಪೆರುಮಾಳ ದಂಡನಾಯಕ ಮತ್ತು ಸೋಮ ದಂಡನಾಯಕರು

ನರಸಿಂಹನ ಪ್ರಸಿದ್ಧ ಸಚಿವರಾಗಿದ್ದರು. ಅವರು ಹಲವಾರು ಯುದ್ಧಗಳಲ್ಲಿ ಪಾಲ್ಗೊಂಡು ಜಯಗಳಿಸಿದುದಲ್ಲದೆ, ಅನೇಕ ದೇವಾಲಯಗಳನ್ನು ಕೆರೆ ಕಾಲುವೆಗಳನ್ನು ನಿರ್ಮಿಸಿದರು. ಪೆರಮಾಳ ದಂಡನಾಯಕನು ಚಿತ್ರದುರ್ಗ, ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಮೊದಲಾದ ಸ್ಥಳಗಳಲ್ಲಿ ದೇವಾಲಯಗಳನ್ನೂ, ಕೆರೆಗಳನ್ನೂ ಕಟ್ಟಿಸಿದನು. ಸೋಮ ದಂಡನಾಯಕನು ಸೋಮನಾಥಪುರದ ಸುಪ್ರಸಿದ್ಧ ಕೇಶವ ದೇವಾಲಯವನ್ನು ಕಟ್ಟಿಸಿದನು. ತುರುವೆಕೆರೆಯ ಕೇಶವ, ಸೆಟ್ಟಿಕೆರೆಯ ಯೋಗಮಾಧವ, ಹೊಳೆನರಸೀಪುರದ ಲಕ್ಷ್ಮೀನರಸಿಂಹ ಮೊದಲಾದ ಇತರ ದೇವಾಲಯಗಳೂ ನರಸಿಂಹನ ಕಾಲದಲ್ಲಿ ನಿರ್ಮಾಣವಾದುವು. ಆ ವೇಳೆಗೆ ಕನ್ನಡನಾಡಿನಿಂದ ಹೋಗಿ ಕಾಶಿಯಲ್ಲಿ ನೆಲಸಿದ್ದ ಬ್ರಾಹ್ಮಣ ಕುಟುಂಬಗಳ ಮೇಲ್ಮೆಗಾಗಿ ವೀರನರಸಿಂಹನು ಹಾಸನ ಜಿಲ್ಲೆಯ ಅನೇಕ ಗ್ರಾಮಗಳ ಹುಟ್ಟುವಳಿಯನ್ನು ದಾನವನ್ನು ನೀಡಿದನು. ಮಿಗಿಲಾಗಿ ಕನ್ನಡನಾಡಿನ ಯಾತ್ರಾರ್ಥಿಗಳ ಸಲುವಾಗಿ ವಿಷ್ಣುಗಯೆಯಲ್ಲಿ ಒಂದು ಧರ್ಮಶಾಲೆಯನ್ನು ಸ್ಥಾಪಿಸಿದನು.

ವೀರ ರಾಮನಾಥ (1256–1294)

ವೀರ ರಾಮನಾಥನು ಪ್ರಾರಂಭದಲ್ಲಿ ಕಣ್ಣಾನೂರನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಸ್ಥಾಪಿಸಿದನು. ಅವನು ಬಹುಬೇಗ ಜಟಾವರ್ಮನ್ ಸುಂದರ ಪಾಂಡ್ಯನಿಂದ ಪರಾಜಿತನಾಗಿ ತನ್ನ ರಾಜ್ಯದ ಹೆಚ್ಚು ಭಾಗವನ್ನೂ ಕೊನೆಗೆ ರಾಜಧಾನಿಯನ್ನು ಕಳೆದುಕೊಂಡನು. ಅನಂತರ ಹೊಸೂರು ಬಳಿಯ ಕುಂದಾಣಿ ಗ್ರಾಮವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ತನ್ನ ಸಹೋದರನಾದ ವೀರನರಸಿಂಹನ ರಾಜ್ಯದ ಮೇಲೆ ನಿರಂತರವಾದ ಆಕ್ರಮಣದಲ್ಲಿ ತೊಡಗಿದನು. ಅವನು ಕುಣಿಗಲ್‌ವರೆಗೂ ದಾಳಿಯನ್ನು ಮುಂದುವರಿಸಿದನು. ಆದರೆ ವೀರನರಸಿಂಹನಿಂದ ಪರಾಜಿತನಾಗಿ ಹಿಂದಿರುಗಬೇಕಾಯಿತು. ಆದರೂ ಆಕ್ರಮಣಗಳನ್ನು ಮುಂದುವರಿಸಿದನು. ಕ್ರಮೇಣ ವೀರನರಸಿಂಹನೂ ಅವನ ಮಗನಾದ ಮೂರನೇ ಬಲ್ಲಾಳನೂ ರಾಮನಾಥನ ಆಕ್ರಮಣವನ್ನು ಯಶಸ್ವಿಯಾಗಿ ಎದುರಿಸಿದರು. ತನ್ನ ರಾಜ್ಯದ ಬಹುಭಾಗವನ್ನು ಮತ್ತು ತನ್ನ ಪೂರ್ವಜರಿಂದ ಬಂದಿದ್ದ ಸಂಪತ್ತನ್ನು ಕಳೆದುಕೊಂಡಿದ್ದ ರಾಮನಾಥನು ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಲಾಗಲಿಲ್ಲ. ಅವನು 1294ರವರೆಗೂ ತನ್ನ ರಾಜಧಾನಿಯ ಸುತ್ತಮುತ್ತಲ ಪ್ರದೇಶಗಳ ಮೇಲೆ ಆಳ್ವಿಕೆ ಮುಂದುವರಿಸಿದನು.

ವೀರ ವಿಶ್ವನಾಥ (1294–1297)

ವೀರರಾಮನಾಥನ ಮರಣಾನಂತರ ಅವನ ಮಗನಾದ ವೀರವಿಶ್ವನಾಥನು ಕುಂದಾಣಿಯಿಂದ ಸ್ವಲ್ಪ ಕಾಲ ರಾಜ್ಯಭಾರ ಮಾಡಿದನು. ಆದರೆ ಆ ವೇಳೆಗೆ ದ್ವಾರಸಮುದ್ರದಲ್ಲಿ ಸಿಂಹಾಸನಕ್ಕೆ ಬಂದಿದ್ದ ಮೂರನೇ ಬಲ್ಲಾಳನು ರಾಜ್ಯ ವಿಸ್ತರಣೆಯಲ್ಲಿ ತೊಡಗಿ ಕುಂದಾಣಿಯನ್ನು ಆಕ್ರಮಿಸಿದನು. 1298ರ ವೇಳೆಗೆ ಬಲ್ಲಾಳನು ಪುನಃ ಅಖಂಡ ಹೊಯ್ಸಳ ರಾಜ್ಯದ ಅಧಿಪತಿಯಾದನು. ವಿಶ್ವನಾಥನ ಅಂತ್ಯವು ಎಲ್ಲಿ ಮತ್ತು ಯಾರಿಂದ ಸಂಭವಿಸಿತೆಂದು ತಿಳಿದು ಬರುವುದಿಲ್ಲ.

ಮೂರನೇ ವೀರಬಲ್ಲಾಳ (1292–1343)

ಮೂರನೇ ನರಸಿಂಹನ ಮಗನಾದ ಮೂರನೇ ವೀರಬಲ್ಲಾಳನು ಹೊಯ್ಸಳ ಸಂತತಿಯ ಅತಿ ಸಮರ್ಥ ರಾಜರಲ್ಲಿ ಒಬ್ಬನೂ ಹಾಗೂ ಆ ಸಂತತಿಯ ಕೊನೆಯ ಚಕ್ರವರ್ತಿಯೂ ಆಗಿದ್ದಾನೆ. ಅವನು ಪರಾಕ್ರಮಿಯೂ, ರಾಜತಂತ್ರ ನಿಪುಣನೂ ಆಗಿದ್ದನು. ಆದರೆ ಅವನ ಆಳ್ವಿಕೆಯ ಕಾಲವು ದಕ್ಷಿಣ ಭಾರತದ ಇತಿಹಾಸದಲ್ಲಿ ಜಟಿಲವೂ, ಸಂಧಿಗ್ಧವೂ ಆದ ಕಾಲವಾಗಿತ್ತು. ಇತಿಹಾಸ ಪ್ರಸಿದ್ಧವಾದ ಚೋಳ ಮನೆತನವು ಆ ವೇಳೆಗೆ ವಿನಾಶವಾಗಿತ್ತು. ಮಧುರೆಯ ಪಾಂಡ್ಯರ ಮನೆತನವು ವಿನಾಶದ ಅಂಚಿನಲ್ಲಿತ್ತು. ಆಂಧ್ರದ ಕಾಕತೀಯ ಮನೆತನವೂ ದುರ್ಬಲವಾಗಿತ್ತು. ದೇವಗಿರಿಯ ಸೇವುಣ ಸಂತತಿಯೂ ಸಹ ರಾಜಕೀಯ ಚಂಡ ಮಾರುತಕ್ಕೆ ಒಳಗಾಗಿತ್ತು. ದೆಹಲಿ ಸುಲ್ತಾನರು ದಕ್ಷಿಣ ಭಾರತದ ಮೇಲೆ ಸತತವಾಗಿ ಆಕ್ರಮಣ ನಡೆಸತೊಡಗಿದರು. ಅಂತಹ ದುರ್ಬರ ಸಮಯದಲ್ಲಿ ದಕ್ಷಿಣದ ರಾಜ್ಯಗಳೆಲ್ಲವೂ ಒಂದೊಂದಾಗಿ ನಿರ್ನಾಮವಾಗಿದ್ದವು. ವೀರಬಲ್ಲಾಳನು ಪರಾಕ್ರಮದಿಂದ ಹಾಗೂ ಜಾಣ್ಮೆಯಿಂದ ಆಗ ಸಂಭವಿಸಿದ ವಿಪ್ಲವದಿಂದ ತನ್ನ ಮನೆತನದ ಕೀರ್ತಿಯನ್ನು ಹೆಚ್ಚಿಸಿ ದಕ್ಷಿಣ ಭಾರತವನ್ನು ಉತ್ತರದ ದಂಡಯಾತ್ರೆಗಳಿಂದ ಪಾರು ಮಾಡಲು ಹೋರಾಡಿದನು. ಆದರೆ ಆಕಸ್ಮಿಕ ಹೊಡೆತದಿಂದ ತಾನೂ ಕಣ್ಮರೆಯಾದನು. ಹೊಯ್ಸಳ ಸಾಮ್ರಾಜ್ಯವೂ ಇತಿಹಾಸದಿಂದ ನಿರ್ಗಮಿಸಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಸಹಕಾರಿಯಾಯಿತು.

ಮೂರನೇ ವೀರಬಲ್ಲಾಳನು ಪಟ್ಟಕ್ಕೆ ಬರುವ ವೇಳೆಗೆ 28 ವರ್ಷಗಳ ವೀರ ಯುವಕನಾಗಿದ್ದನು. ಯುವರಾಜನಾಗಿದ್ದಾಗಲೇ ತಂದೆಗೆ ಸಹಾಯಕನಾಗಿ ಅನೇಕ ಯುದ್ಧಗಳಲ್ಲಿ ಭಾಗವಹಿಸಿ ರಾಜ್ಯಕ್ಕೊದಗಿದ ದುರ್ಗತಿಯನ್ನು ಅರಿತಿದ್ದನು. ಪಟ್ಟಕ್ಕೆ ಬಂದ ಕೂಡಲೇ ರಾಜ್ಯವನ್ನು ಸುವ್ಯವಸ್ಥೆಗೊಳಿಸಿ ತನ್ನ ಮನೆತನದ ಗತಿಸಿದ ಪ್ರಾಬಲ್ಯವನ್ನು ಪುನರುಜ್ಜೀವನಗೊಳಿಸಲು ಕಂಕಣಬದ್ಧನಾದನು. ದಾಯಾದಿ ಕಲಹದಿಂದ ರಾಜ್ಯವನ್ನು ಪಾರು ಮಾಡುವುದು ಅವನ ಮೊದಲ ಕರ್ತವ್ಯವಾಗಿತ್ತು. ಚಿಕ್ಕಪ್ಪನಾದ ರಾಮನಾಥನು ಸೀರೆನಾಡು ಮತ್ತು ಚಿತ್ರದುರ್ಗ ಜಿಲ್ಲೆಯವರೆಗೂ ಆಕ್ರಮಣಗಳನ್ನು ಮುಂದುವರಿಸಿದನು. ಬಲ್ಲಾಳನು ಕ್ರಿ.ಶ. 1394ರಲ್ಲಿ ಅವನ ಸೈನ್ಯವನ್ನು ಸೋಲಿಸಿ ಹಿಮ್ಮೆಟ್ಟಿಸಿದನು. ಆ ವೇಳೆಗೆ ರಾಮನಾಥನು ಗತಿಸಿ ಅವನ ಮಗನಾದ ವಿಶ್ವನಾಥನು ಅಧಿಕಾರ ವಹಿಸಿದನು. ಬಲ್ಲಾಳನಿಗೂ ವಿಶ್ವನಾಥನಿಗೂ ನಡೆದ ಯುದ್ಧಗಳ ಮಾಹಿತಿಯು ಲಭ್ಯವಿಲ್ಲ. ಆದರೆ ಕ್ರಿ.ಶ. 1300ರ ವೇಳೆಗೆ ವಿಶ್ವನಾಥನ ಅಧಿಕಾರವು ಕೊನೆಗೊಂಡು ವೀರಬಲ್ಲಾಳನು ಹೋಳಾಗಿದ್ದ ರಾಜ್ಯವನ್ನು ಪುನಃ ಒಂದುಗೂಡಿಸಿದನು. ಅನಂತರ ರಾಜ್ಯದ ಪಶ್ಚಿಮ ಹಾಗೂ ಉತ್ತರದ ಗಡಿಗಳಲ್ಲಿ ತಲೆದೋರಿದ್ದ ಅಭದ್ರತೆಯನ್ನು ಸರಿಪಡಿಸಲು ತೊಡಗಿದನು.

ದೇವಗಿರಿಯ ಸೇವುಣರು ಹೊಯ್ಸಳ ರಾಜ್ಯದ ಉತ್ತರ ಗಡಿಗಳನ್ನು ಆಕ್ರಮಿಸಿ ಉಪದ್ರವವನ್ನು ಮುಂದುವರಿಸುತ್ತಿದ್ದರು. ಬಲ್ಲಾಳನು ಸೇವುಣರ ಆಕ್ರಮಣವನ್ನು

ಕೊನೆಗಾಣಿಸಲು ಕ್ರಿ.ಶ.1301 ರಲ್ಲಿ ತನ್ನ ಸೈನ್ಯವನ್ನು ಕಳುಹಿಸಿದನು. ಸೇವುಣರನ್ನು ಎದುರಿಸಿ ಹೋರಾಡುತ್ತಿದ್ದ ಹೊಯ್ಸಳ ಮಾಂಡಲಿಕರಾದ ಹೊಸಗುಂದದ ಶಾಂತಾರರ ಸಹಾಯಕ್ಕಾಗಿ ಹೊಯ್ಸಳ ಸೈನ್ಯವು ಧಾವಿಸಿತು. ಆ ಸೈನ್ಯವು ವಿರೋಧಿಗಳನ್ನು ಹಾನಂಗಲ್ಲಿನ ಕದಂಬ ಮೊದಲಾದ ಸೇವುಣ ಮಾಂಡಲಿಕರನ್ನೂ ಸೋಲಿಸಿ ಸಿರಸಿಯವರೆಗೂ ಹೊಯ್ಸಳ ರಾಜ್ಯದ ಗಡಿಗಳನ್ನು ವಿಸ್ತರಿಸಲಾಯಿತು. ಕ್ರಿ.ಶ. 1303ರಲ್ಲಿ ಸೇವುಣ ದಂಡನಾಯಕ ಮುಮ್ಮಡಿ ಸೀಮಗೇಯ ನಾಯಕನ ಮಗ ಕಂಪಿಲನು ತುಂಗಭದ್ರಾ ತೀರದಲ್ಲಿ ಹೊಯ್ಸಳ ಸೈನ್ಯವನ್ನು ಎದುರಿಸಿದನು. ಬಲ್ಲಾಳನ ಭಾವಮೈದುನನೂ ದಂಡನಾಯಕನೂ ಆದ ಸೋಮೇಯ ದಂಡನಾಯಕನು ಕಂಪಿಲನನ್ನು ಎದುರಿಸಿ ವೀರಾವೇಶದಿಂದ ಯುದ್ಧಮಾಡಿ ಸೇವುಣ ಪಡೆಗಳನ್ನು ಸೋಲಿಸಿ ತಾನೂ ರಣರಂಗದಲ್ಲಿ ಅಸುನೀಗಿದನು. ಕೂಡಲೇ ಬಲ್ಲಾಳನು ಸೈನ್ಯದ ನಾಯಕತ್ವವನ್ನು ವಹಿಸಿ ಸೇವುಣ ಬಲವನ್ನು ಹಿಮ್ಮೆಟ್ಟಿಸಿದನು. ಕ್ರಿ.ಶ. 1305ರ ವೇಳೆಗೆ ಪುನಃ ಸೇವುಣ ರಾಜ ರಾಮಚಂದ್ರದೇವನು ಹೊಯ್ಸಳ ರಾಜ್ಯದ ಮೇಲೆ ಆಕ್ರಮಣಕ್ಕಾಗಿ ಸೈನ್ಯ ಕಳುಹಿಸಿದನು. ಬಲ್ಲಾಳನನ್ನು ಸೆರೆಹಿಡಿದು ತರಬೇಕೆಂದು ತನ್ನ ದಳಪತಿಗಳಿಗೆ ಆದೇಶ ನೀಡಿದ್ದನು. ಬಲ್ಲಾಳನು ಆ ವೇಳೆಗೆ ತುಂಗಭದ್ರಾ ತೀರದ ಕಂಪಿಲೆಯಲ್ಲಿ ಅಧಿಕಾರ ಸ್ಥಾಪಿಸಿದ್ದ ಕಂಪಿಲ ರಾಯನನ್ನೂ ಸೇವುಣ ಸೈನ್ಯವನ್ನೂ ಸೋಲಿಸಿ ಓಡಿಸಿದುದಲ್ಲದೆ ಬೆಳುವೊಲ ಪ್ರದೇಶವನ್ನು ಆಕ್ರಮಿಸಿ ಲೊಕ್ಕಿಗುಂಡಿವರೆಗೂ ರಾಜ್ಯವನ್ನು ವಿಸ್ತರಿಸಿದನು. ಸೇವುಣರಾಮಚಂದ್ರನು ಕರ್ನಾಟಕದ "ಹುಲಿಮರಿಯನ್ನು" (ಬಲ್ಲಾಳನನ್ನು) ಸೋಲಿಸಲು ಮಾಡಿದ ಪ್ರಯತ್ನವೆಲ್ಲ ನಿರರ್ಥಕವಾಯಿತು. ಅನಂತರ ಬಲ್ಲಾಳನು ರಾಜ್ಯ ವಿಸ್ತರಣಾ ಕಾರ್ಯದಲ್ಲಿ ತೊಡಗಿ ತನ್ನ ತಾತ–ಮುತ್ತಾತಂದಿರ ಕಾಲದ ಹೊಯ್ಸಳ ವೈಭವವನ್ನು ಸ್ಥಾಪಿಸುವ ಪ್ರಯತ್ನಶೀಲನಾಗಿ ತಮಿಳುನಾಡಿನತ್ತ ಗಮನ ಹರಿಸಿದನು.

ವೀರಬಲ್ಲಾಳನು ತಮಿಳುನಾಡಿನಲ್ಲಿ ಹೊಯ್ಸಳರ ಪ್ರಭಾವವನ್ನು ಸ್ಥಾಪಿಸುವ ಪ್ರಯತ್ನದಲ್ಲಿರುವಾಗ ದಕ್ಷಿಣ ಭಾರತಕ್ಕೆ ಹೊಸ ಉಪದ್ರವವು ತಲೆದೋರಿತು. ಕ್ರಿ.ಶ. 1311 ರಲ್ಲಿ ಅಲ್ಲಾವುದ್ದೀನನ ದಳಪತಿಯಾದ ಮಲ್ಲಿಕಾಫರನು ದಕ್ಷಿಣದ ರಾಜ ಮನೆತನಗಳನ್ನು ಸೋಲಿಸಿ ಅಪರಿಮಿತ ಐಶ್ವರ್ಯವನ್ನು ದೋಚುವ ಉದ್ದೇಶಕ್ಕಾಗಿ ನೇಮಕಗೊಂಡು ದೇವಗಿರಿಯ ಸೇವುಣರನ್ನು ಸೋಲಿಸಿ ದ್ವಾರಸಮುದ್ರ ಮತ್ತು ಮಧುರೆಯತ್ತ ಮುಂದುವರಿದನು. ಕಾಫರನು ಹೊಯ್ಸಳ ಗಡಿಗಳನ್ನು ಪ್ರವೇಶಿಸುವ ವೇಳೆಯಲ್ಲಿ ವೀರಬಲ್ಲಾಳನು ಸೈನ್ಯ ಸಮೇತನಾಗಿ ತಮಿಳುನಾಡಿನಲ್ಲಿದ್ದನು. ಪಾಂಡ್ಯರಾಜ ಕುಮಾರರು ಸಿಂಹಾಸನಕ್ಕಾಗಿ ಕಲಹದಲ್ಲಿ ತೊಡಗಿ ಅವರಲ್ಲೊಬ್ಬನು ಬಲ್ಲಾಳನ ಸಹಾಯವನ್ನು ಯಾಚಿಸಿದನು. ಇಂತಹ ಸಂದರ್ಭಕ್ಕಾಗಿ ಕಾಯುತ್ತಿದ್ದ ಬಲ್ಲಾಳನು ಮದುರೆಯತ್ತ ಧಾವಿಸಿದ್ದನು. ಮಲ್ಲಿಕಾಫರನ ದಂಡೆಯಾತ್ರೆಯ ಸುದ್ದಿ ತಿಳಿದೊಡನೆ ಅವನು ದ್ವಾರಸಮುದ್ರಕ್ಕೆ ಪ್ರಯಾಣ ಕೈಗೊಂಡ ಶತ್ರುವನ್ನು ತಡೆಯುವ ವಿಧಾನವನ್ನು ಯೋಚಿಸಿದನು. ಆ ವೇಳೆಗೆ ಹೊಯ್ಸಳ ಸೈನ್ಯವು ಗಡಿಪ್ರದೇಶದಲ್ಲಿ ಕಾಫರನಿಂದ ಪರಾಜಯಗೊಂಡಿತ್ತು. ಮಹಮ್ಮದೀಯ ಸೈನ್ಯವು ರಾಜಧಾನಿಯನ್ನು ಸಮೀಪಿಸಿತು. ಸುತ್ತಮುತ್ತಿನ ಪ್ರದೇಶಗಳು ಶತ್ರು ಸೈನ್ಯದ ದಾಳಿಗೆ ಸಿಕ್ಕಿ ಪಾಳುಬಿದ್ದವು. ಬಲ್ಲಾಳನು

ಅನಿರೀಕ್ಷಿತವಾಗಿ ಒದಗಿದ ಈ ದುರ್ಬರ ಸ್ಥಿತಿಯಿಂದ ರಾಜ್ಯವನ್ನು ರಕ್ಷಿಸಲು ಕಾಫರನೊಡನೆ ಒಪ್ಪಂದಕ್ಕೆ ಒಳಪಡಬೇಕಾಯಿತು. ಅವನಿಗೆ ವಿಶೇಷ ಐಶ್ವರ್ಯವನ್ನು ನೀಡುವುದರ ಮೂಲಕ ಯುದ್ಧವನ್ನು ಮತ್ತು ಭೀಕರ ಪರಿಣಾಮವನ್ನು ಪರಿಹರಿಸಿದನು. ಅನಂತರ ಮಹಮ್ಮದೀಯ ಸೈನ್ಯವು ಮಧುರ ಮತ್ತು ರಾಮೇಶ್ವರದವರೆಗೂ ದಾಳಿಮಾಡಿ ಶ್ರೀಮಂತಿಕೆಯ ಬೀಡಾಗಿದ್ದ ದೇವಾಲಯಗಳನ್ನು ಸೂರೆಮಾಡಿ ವಿಶೇಷ ಐಶ್ವರ್ಯದೊಡನೆ ಹಿಂದಿರುಗಿತು. ಹಿಂದಿರುಗಿ ಹೋಗುವಾಗ ಕಾಫರನ ಅಪೇಕ್ಷೆಯಂತೆ ವೀರಬಲ್ಲಾಳನು ತನ್ನ ಕುಮಾರನಾದ ನಾಲ್ಕನೇ ಬಲ್ಲಾಳನನ್ನು ಕಾಫರನೊಡನೆ ದೆಹಲಿಗೆ ಕಳುಹಿಸಿದನು. ಅಲ್ಲಾವುದ್ದೀನ್ ಖಿಲ್ಜಿಯು ಕುಮಾರ ಬಲ್ಲಾಳನನ್ನು ಗೌರವದಿಂದ ಬರಮಾಡಿಕೊಂಡು ಅವನಿಗೆ ಉಚಿತ ಉಡುಗೊರೆಯನ್ನು ನೀಡಿ ಹಿಂದಕ್ಕೆ ಕಳುಹಿಸಿದನು. ಕುಮಾರ ಬಲ್ಲಾಳನು ಕ್ರಿ.ಶ. 1313 ರಲ್ಲಿ ಹಿಂದಿರುಗಿ ಬಂದಾಗ ದ್ವಾರಸಮುದ್ರದಲ್ಲಿ ವಿಶೇಷ ಸಂಭ್ರಮಗಳು ಜರುಗಿದವು. ಮಹಮ್ಮದೀಯ ದಾಳಿಯಿಂದ ದೇವಗಿರಿಯ ಸೇವುಣ ಹಾಗೂ ಮಧುರೆಯ ಪಾಂಡ್ಯ ರಾಜಮನೆತನಗಳು ಅಂತ್ಯಗೊಂಡವು.

ಮಲ್ಲಿಕಾಫರನ ದಾಳಿಯಿಂದ ತತ್ತರಿಸಿ, ದೆಹಲಿಗೆ ತೆರಳಿದ್ದ ತನ್ನ ಕುಮಾರನ ಆಗಮನದಿಂದ ಆನಂದ ಪುಳಕಿತನಾದ ವೀರಬಲ್ಲಾಳನು ರಾಜ್ಯರಕ್ಷಣೆ ಮತ್ತು ಬಲ ಸಂವರ್ಧನೆಯ ಕಾರ್ಯದಲ್ಲಿ ವಿಶೇಷ ಆಸಕ್ತಿ ವಹಿಸಿದನು. ದಾಳಿಗೆ ಸಿಕ್ಕಿದ ಪ್ರದೇಶಗಳಿಗೆ ಭೇಟಿನೀಡಿ ಜನರಲ್ಲಿ ನೆಮ್ಮದಿಯನ್ನು ಮೂಡಿಸಿದನು. ದಾಳಿಯಿಂದುಟಾಗಿದ್ದ ನಷ್ಟವನ್ನು ಸರಿಪಡಿಸಿದ ನಂತರ ದೊಡ್ಡ ಸೈನ್ಯವನ್ನು ಕಟ್ಟಿ ತಮಿಳುನಾಡಿನಲ್ಲಿ ಕೈಬಿಟ್ಟು ಹೋಗಿದ್ದ ಪ್ರದೇಶಗಳ ಮೇಲೆ ಹೊಯ್ಸಳರ ಅಧಿಕಾರವನ್ನು ಪುನಃ ಸ್ಥಾಪಿಸಿದನು. ತುಂಗಭದ್ರಾ ತೀರದ ಸಣ್ಣಪುಟ್ಟ ಪಾಳೆಗಾರರನ್ನು ಸೋಲಿಸಿ ಅವರು ಹೊಯ್ಸಳರ ಪರಮಾಧಿಕಾರವನ್ನು ಒಪ್ಪುವಂತೆ ಮಾಡಿದನು. ಮುಮ್ಮಡಿ ವೀರಬಲ್ಲಾಳನು ಹೊಯ್ಸಳರ ಪ್ರಭುತ್ವವನ್ನು ದಕ್ಷಿಣ ಭಾರತದಲ್ಲಿ ಅಜೇಯ ಸಾಮ್ರಾಜ್ಯವನ್ನಾಗಿ ಮಾಡಲು ಪ್ರಯತ್ನಶೀಲನಾಗಿದ್ದಾಗ ಪುನಃ ಉತ್ತರದಿಂದ ಉಪದ್ರವ ತಲೆದೋರಿತು. ಆ ವೇಳೆಗೆ ಖಿಲ್ಜಿ ಮನೆತನದ ಆಳ್ವಿಕೆ ಕೊನೆಗೊಂಡು ತೊಗಲಕ್ ಮನೆತನದ ಆಳ್ವಿಕೆ ಉತ್ತರ ಭಾರತದಲ್ಲಿ ಪ್ರಾರಂಭವಾಗಿತ್ತು. ಮಹಮ್ಮದ್ ಬಿನ್ ತೊಗಲಕ್‌ನು ದಖನ್ ಪ್ರಸ್ಥಭೂಮಿಯವರೆಗೂ ರಾಜ್ಯವನ್ನು ವಿಸ್ತರಿಸಿದನು. ಅವನು ತನ್ನ ಹತ್ತಿರದ ಸಂಬಂಧಿ ಬಹಾವುದ್ದೀನ್‌ನನ್ನು ತನ್ನ ರಾಜ್ಯದ ದಕ್ಷಿಣ ಪ್ರದೇಶಗಳ ಮಾಂಡಲಿಕನಾಗಿ ನೇಮಿಸಿದನು. ಕ್ರಿ.ಶ. 1326ರಲ್ಲಿ ಬಹಾವುದ್ದೀನನು ಮಹಮ್ಮದ್ ಬಿನ್ ತೊಗಲಕ್‌ನ ವಿರುದ್ಧ ದಂಗೆಯೆದ್ದುದರಿಂದ ಅವನನ್ನು ಶಿಕ್ಷಿಸಲು ತೊಗಲಕ್‌ನು ದೊಡ್ಡ ಸೈನ್ಯವನ್ನು ಕಳುಹಿಸಿದನು. ಬಹಾವುದ್ದೀನನು ತೊಗಲಕ್‌ನ ಸೈನ್ಯದಿಂದ ಪರಾಜಿತನಾಗಿ ರಕ್ಷಣೆಗಾಗಿ ವಾರಂಗಲ್ಲಿಗೆ ಓಡಿಹೋದನು. ತೊಗಲಕ್‌ನ ಸೈನ್ಯವು ಅವನನ್ನು ಹಿಂಬಾಲಿಸಿ ವಾರಂಗಲ್ಲನ್ನು ಮುತ್ತಿ ನಾಶಪಡಿಸಿತು. ಬಹಾವುದ್ದೀನನು ಅಲ್ಲಿಂದ ಕಂಪಿಲಿರಾಯನ ಆಸ್ಥಾನಕ್ಕೆ ಓಡಿ ಬಂದನು. ತೊಗಲಕ್ ಸೈನ್ಯ ಕಂಪಿಲಿಯನ್ನು ಮುತ್ತಿ ಸರ್ವನಾಶಪಡಿಸಿತು. ಅನಂತರ ಬಹಾವುದ್ದೀನನ್ನು ಬಲ್ಲಾಳನ ರಾಜಧಾನಿಗೆ ಧಾವಿಸಿದನು. ವಾರಂಗಲ್ ಮತ್ತು ಕಂಪಿಲಿ ಮನೆತನಗಳಿಗೆ ಒದಗಿಸಿದ

ವಿನಾಶವನ್ನರಿತ ಬಲ್ಲಾಳನು ಬಹಾವುದ್ದೀನನನ್ನು ಬಂಧಿಸಿ ತೊಗಲಕ್‌ನ ಸೈನ್ಯಕ್ಕೆ ಒಪ್ಪಿಸಿದನು. ಬಹಾವುದ್ದೀನನನ್ನು ದೆಹಲಿಗೆ ಕರೆದುಕೊಂಡು ಹೋಗಿ ಅಲ್ಲಿ ಅವನನ್ನು ಚರ್ಮ ಸುಲಿಸಿ ಕೊಲ್ಲಲಾಯಿತು.

ತೊಗಲಕ್‌ನ ಆಳ್ವಿಕೆಯ ಕಾಲದಲ್ಲಿ ಹೊಯ್ಸಳ ಸಂತತಿಯ ಹೊರತಾಗಿ ದಕ್ಷಿಣ ಭಾರತದ ಎಲ್ಲ ಪ್ರಸಿದ್ಧ ರಾಜಮನೆತನಗಳೂ ನಿರ್ನಾಮವಾದವು. ದಕ್ಷಿಣ ಭಾರತವನ್ನು ಮಹಮ್ಮದೀಯರ ದಾಳಿಯಿಂದ ರಕ್ಷಿಸಲು ಬಲ್ಲಾಳನು ನಿರ್ಧರಿಸಿದನು. ಆಡಳಿತವನ್ನು ಸಜ್ಜುಗೊಳಿಸಿ ದಾಳಿಗಳನ್ನು ತಡೆಗಟ್ಟುವ ಅಜೇಯ ಸೈನ್ಯಶಕ್ತಿಯ ಸ್ಥಾಪನೆಗೆ ಬಲ್ಲಾಳನು ಹೆಚ್ಚು ಗಮನಕೊಟ್ಟನು. ರಾಜ್ಯದ ಅನೇಕ ಕಡೆಗಳಲ್ಲಿ ಸುಗಮ ರಕ್ಷಣಾ ವ್ಯವಸ್ಥೆಗಾಗಿ ಅನೇಕ ಉಪರಾಜಧಾನಿಗಳನ್ನು ಸ್ಥಾಪಿಸಿದನು. ತುಳುನಾಡಿನ ಬಾರಕನೂರು, ತಮಿಳುನಾಡಿನ ತಿರುವಣ್ಣಾಮಲೈ ಮತ್ತು ತುಂಗಭದ್ರಾ ತೀರದ ಹೊಸ ಪಟ್ಟಣಗಳನ್ನು ಉಪರಾಜಧಾನಿಗಳಾಗಿ ಮಾಡಿಕೊಂಡು ಅಲ್ಲಿ ಬಲವಾದ ರಕ್ಷಣಾ ಪಡೆಗಳನ್ನು ಸ್ಥಾಪಿಸಿದನು. ಸಾಮ್ರಾಜ್ಯದಲ್ಲಿ ವ್ಯಾಪಕವಾದ ಸಂಚಾರ ಕೈಗೊಂಡು ಸಂಸ್ಥಾನಿಕರಿಗೂ, ಮಾಂಡಲಿಕರಿಗೂ, ಪಾಳೆಯಗಾರರಿಗೂ ದಕ್ಷಿಣ ಭಾರತ ಎದುರಿಸಬೇಕಾಗಿದ್ದ ಉಪದ್ರವವನ್ನು ಮನವರಿಕೆ ಮಾಡಿಕೊಟ್ಟು ಐಕಮತ್ಯಕ್ಕಾಗಿ ಕರೆ ನೀಡಿದನು. ತಿರುಪತಿ, ಕಂಚಿ ಮೊದಲಾದ ಧರ್ಮ ಕ್ಷೇತ್ರಗಳಲ್ಲಿ ಸಂಚರಿಸಿ ವಿಶೇಷ ಪೂಜಾರ್ಚನೆಗಳನ್ನು ನೆರವೇರಿಸಿದನು. ಕ್ರಿ.ಶ. 1339ರಲ್ಲಿ ತುಂಗಭದ್ರಾ ತೀರದಲ್ಲಿ ಹೊಸ ಪಟ್ಟಣವನ್ನು ಸ್ಥಾಪಿಸಿ ಅಲ್ಲಿ ತನ್ನ ಕುಮಾರನಾದ ವಿಜಯ ವಿರೂಪಾಕ್ಷ ಬಲ್ಲಾಳನಿಗೆ ಪಟ್ಟಾಭಿಷೇಕ ಮಹೋತ್ಸವವನ್ನು ನೆರವೇರಿಸಿದನು. ವೀರಬಲ್ಲಾಳನು ತುಂಗಭದ್ರಾ ತೀರದಲ್ಲಿ ಸ್ಥಾಪಿಸಿದ ಪಟ್ಟಣವನ್ನು ಹೊಸಪಟ್ಟಣ, ವಿಜಯ ವಿರೂಪಾಕ್ಷಪುರ, ಹೊಸವೀಡು, ಹೊಸದುರ್ಗ ಎಂಬುದಾಗಿ ಶಾಸನಗಳಲ್ಲಿ ಹೆಸರಿಸಲಾಗಿದೆ. ಬಲ್ಲಾಳನು ಕಟ್ಟಿಸಿದ ಈ ಹೊಸ ಪಟ್ಟಣವೇ ಮುಂದೆ ವಿಜಯನಗರವೆಂದು ಪ್ರಸಿದ್ಧಿಗೆ ಬಂದಿತೆಂದು ಹಲವು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ವೀರಬಲ್ಲಾಳನು ನಿರಂತರ ಪ್ರಯಾಸದಿಂದ ಇಡೀ ದಕ್ಷಿಣ ಭಾರತದಲ್ಲಿ ಸಾರ್ವಭೌಮತ್ವವನ್ನು ಸ್ಥಾಪಿಸಿ ರಾಮೇಶ್ವರದಲ್ಲಿ ಒಂದು ವಿಜಯ ಸ್ತಂಭವನ್ನು ನಡೆಸಿದನು.

ಕ್ರಿ.ಶ. 1334ರ ವೇಳೆಗೆ ಮಧುರೆಯಲ್ಲಿ ಮಹಮ್ಮದೀಯ ಆಳ್ವಿಕೆ ಸ್ಥಾಪನೆಯಾಯಿತು. ಅಲ್ಲಿ ಹಲವೇ ವರ್ಷಗಳಲ್ಲಿ ಅನೇಕ ಸುಲ್ತಾನರು ಅಧಿಕಾರ ಲಾಲಸೆಯಿಂದ ಕೊಲೆಗೀಡಾದರು. ಕ್ರಿ.ಶ. 1342ರ ವೇಳೆಗೆ ಅಲ್ಲಿ ಘಿಯಾಸುದ್ದೀನ್ ಎಂಬುವನು ಸುಲ್ತಾನನಾಗಿದ್ದನು. ಅವನು ಹಿಂದೂಗಳಿಗೆ ಉಗ್ರದಂಡನೆ ನೀಡುತ್ತ ಮತಾಂಧನಾಗಿದ್ದನು. ಅವನ ಉಪದ್ರವವನ್ನು ಕುರಿತಾದ ವರದಿಗಳು ಬಲ್ಲಾಳನಗೆ ತಲುಪಿದವು. ಬಲ್ಲಾಳನು ಅಪರಿಮಿತ ಸೈನ್ಯಗಳೊಡನೆ ಮಧುರೆಯತ್ತ ಧಾವಿಸಿದನು. ಕೊಪ್ಪಂ ಕಣ್ಣಾನೂರಿನ ಬಳಿಯಲ್ಲಿ ಸುಲ್ತಾನನ ಸೈನ್ಯ ಬಲ್ಲಾಳನನ್ನು ಎದುರಿಸಿ ಸಂಪೂರ್ಣವಾಗಿ ಸೋತು ಶರಣಾಗತವಾಗಿ ಅಲ್ಲಿಂದ ಹೊರಟು ಹೋಗಲು ಹದಿನಾಲ್ಕು ದಿವಸಗಳ ಅವಧಿಯನ್ನು ಬೇಡಿತು. ಬಲ್ಲಾಳನು ಉದಾರವಾಗಿ ಅವರ ಬೇಡಿಕೆಗೆ ಒಪ್ಪಿಗೆ ನೀಡಿದನು. ಈ ಅವಧಿಯಲ್ಲಿ ಪಕ್ಕದ ಅರಣ್ಯದಲ್ಲಿ ಹೊಯ್ಸಳ ಸೈನ್ಯವು

ಶಿಬಿರವನ್ನೇರ್ಪಡಿಸಿಕೊಂಡಿತ್ತು. ಶತ್ರುಗಳ ಭೀತಿ ನಿವಾರಣೆಯಾಯಿತೆಂದು ಹೊಯ್ಸಳ ಸೈನ್ಯ ಅಜಾರೂಕತೆಯಿಂದ ನಿರಾಯುಧವಾಗಿದ್ದ ಸಮಯದಲ್ಲಿ ಸುಲ್ತಾನನ ಸೈನ್ಯ ಆಕ್ರಮಣ ಮಾಡಿತು. ಮುಂದಿನ ದುರಂತವನ್ನು ಪ್ರತ್ಯಕ್ಷದರ್ಶಿಯಾದ ಇಬನ್ ಬತೂತನು ಯಥಾವತ್ತಾಗಿ ವಿವರಿಸಿರುವನು. ಇವನ ಪ್ರಕಾರ ಮಧ್ಯಾಹ್ನದ ವೇಳೆಯಲ್ಲಿ ಹೊಯ್ಸಳ ಸೈನಿಕರು ಕುದುರೆಗಳನ್ನು ಮೇಯಲು ಬಿಟ್ಟು ವಿಶ್ರಾಂತಿ ಪಡೆಯುತ್ತಿದ್ದಾಗ ಈ ದಾಳಿ ನಡೆಯಿತು. ಮಹಮ್ಮದೀಯ ಸೈನ್ಯದ ಅನಿರೀಕ್ಷಿತ ದಾಳಿಯಿಂದ ಕಂಗೆಟ್ಟ ಹೊಯ್ಸಳ ಸೈನ್ಯವು ದಿಕ್ಕುದಿಕ್ಕಿಗೆ ಓಡತೊಡಗಿತು. ಸುಮಾರು 80 ವರ್ಷ ವಯಸ್ಸಿನ ವೀರಬಲ್ಲಾಳ ಚಕ್ರವರ್ತಿ ಕುದುರೆಯೇರಿ ಸೈನ್ಯದಲ್ಲಿ ಸ್ಥೈರ್ಯ ಮೂಡಿಸುವ ಪ್ರಯತ್ನದಲ್ಲಿದ್ದಾಗ ವೈರಿಗಳಿಗೆ ಸೆರೆ ಸಿಕ್ಕಿದನು. ವೃದ್ಧ ಬಲ್ಲಾಳನನ್ನು ಮಧುರೆಗೆ ಕರೆದುಕೊಂಡು ಹೋಗಿ ಸುಲ್ತಾನನ ಮುಂದೆ ನಿಲ್ಲಿಸಲಾಯಿತು. ಸುಲ್ತಾನನು ಹೇರಳವಾದ ಧನಕನಕವನ್ನು ದ್ವಾರಸಮುದ್ರದಿಂದ ತರಿಸಿಕೊಟ್ಟರೆ ಅವನನ್ನು ಬಿಡುಗಡೆ ಮಾಡುವುದಾಗಿ ತಿಳಿಸಿದನು. ಅಪರಿಮಿತ ಐಶ್ವರ್ಯವನ್ನು ಬಲ್ಲಾಳನಿಂದ ಪಡೆದ ಕೂಡಲೇ ವೃದ್ಧ ಚಕ್ರವರ್ತಿಯನ್ನು ಕೊಲ್ಲಿಸಿ ಅವನ ಚರ್ಮವನ್ನು ತೆಗೆಸಿ ಅದಕ್ಕೆ ದ್ರಾವಣಗಳನ್ನು ಸಿಂಪಡಿಸಿ ಮಧುರೆಯ ಕೋಟೆಯ ಗೋಡೆಯ ಮೇಲೆ ನೇತುಹಾಕಿಸಲಾಯಿತು. ಮೂರನೇ ವೀರ ಬಲ್ಲಾಳನು ಕೊಲೆಯಾದ ನಂತರ ಅವನ ಮಗ ವಿಜಯ ವಿರೂಪಾಕ್ಷ ಬಲ್ಲಾಳನು ನಾಲ್ಕನೇ ಬಲ್ಲಾಳ ಎಂಬ ಹೆಸರಿನಿಂದ ಸಿಂಹಾಸನಕ್ಕೆ ಬಂದರೂ ಹೊಯ್ಸಳ ರಾಜ್ಯ ರವಿಯು ಆಗಲೇ ಅಸ್ತಂಗತನಾಗಿದ್ದನು.

ಮುಮ್ಮಡಿ ವೀರಬಲ್ಲಾಳನು ಪರಾಕ್ರಮದಿಂದಲೂ ವಿಚಕ್ಷಣತೆಯಿಂದಲೂ ಸಾಮ್ರಾಜ್ಯದ ರಕ್ಷಣೆಗಾಗಿ ಕೊನೆಯವರೆಗೂ ಹೋರಾಡಿ ಹೋಳಾಗಿದ್ದ ರಾಜ್ಯವನ್ನು ಒಂದುಗೂಡಿಸಿದನು. ಕೈಬಿಟ್ಟು ಹೋಗಿದ್ದ ಪ್ರದೇಶಗಳನ್ನು ವಶಪಡಿಸಿಕೊಂಡನು. ದಕ್ಷ ಆಡಳಿತವನ್ನು ಸ್ಥಾಪಿಸಿದನು. ನಾಡಿನಲ್ಲಿ ನವಹುಮ್ಮಸ್ಸನ್ನು ಮೂಡಿಸಿದನು. ವಿಧಿವಿಪರ್ಯಾಸದಿಂದ ಮಡಿದನು. ದಕ್ಷಿಣ ಭಾರತವನ್ನು ಮಹಮ್ಮದೀಯ ದಾಳಿಗಳಿಂದ ರಕ್ಷಿಸಲು ಸಮರ್ಥ ಸಾರ್ವಭೌಮತ್ವವನ್ನು ಸ್ಥಾಪಿಸುವುದು ಅವನ ಸಂಕಲ್ಪವಾಗಿತ್ತು. ಅವನ ಸಂಕಲ್ಪ ಇನ್ನೇನು ನೆರವೇರಿತು ಎನ್ನುವಷ್ಟರಲ್ಲಿ ಅವನು ಹುತಾತ್ಮನಾದನು. ಆದರೆ ಅವನ ಸಂಕಲ್ಪಕ್ಕೆ ಚ್ಯುತಿ ಬರಲಿಲ್ಲ. ಅವನ ಧ್ಯೇಯ ವಿಜಯನಗರ ಸ್ಥಾಪನೆಯ ಮೂಲಕ ನೆರವೇರಿದಂತಾಯಿತು. ಮೂರನೇ ವೀರಬಲ್ಲಾಳನ ಮರಣವಾರ್ತೆಯು ಸಾಮ್ರಾಜ್ಯದಲ್ಲಿ ಪ್ರಸರಿಸುತ್ತಿದ್ದಂತೆಯೆ ಸಾಮ್ರಾಜ್ಯವು ಅದೃಶ್ಯವಾಯಿತು. ಅವನ ಮಗನಾದ ನಾಲ್ಕನೇ ಬಲ್ಲಾಳನು ವಿಜಯ ವಿರೂಪಾಕ್ಷ ಬಲ್ಲಾಳ ಎಂಬ ಹೆಸರಿನಿಂದ ತನ್ನ ಆಳ್ವಿಕೆಯನ್ನು ಪ್ರಾರಂಭಿಸಲೆತ್ನಿಸಿದನು. ಆದರೆ ಮೂರನೇ ವೀರಬಲ್ಲಾಳನ ಮರಣದೊಡನೆ ಹೊಯ್ಸಳ ಸಾಮ್ರಾಜ್ಯವು ಆಗ ತಾನೇ ಅಂಕುರಾರ್ಪಣವಾದ ವಿಜಯ ನಗರ ಸಾಮ್ರಾಜ್ಯದಲ್ಲಿ ಲೀನವಾಯಿತು.

ಸಾಮ್ರಾಜ್ಯದ ವೈಶಾಲ್ಯವೂ, ತಮಿಳುನಾಡಿನ ರಾಜಕೀಯದಲ್ಲಿ ಹೊಯ್ಸಳ ಸಾಮ್ರಾಟರ ವ್ಯಾಪಕವಾದ ತೊಡಗುವಿಕೆಯೂ, ಸೇವುಣ-ಹೊಯ್ಸಳ ಸಂತತಿಗಳ ಮಧ್ಯೆ ನಿರಂತರವಾಗಿ ನಡೆದ ಘರ್ಷಣೆಗಳೂ, ಸಾಮ್ರಾಜ್ಯವನ್ನು ವಿಭಜಿಸಿದುದೂ, ಅದಕ್ಷ ರಾಜರ ಆಳ್ವಿಕೆಯೂ ಮಿಗಿಲಾಗಿ ಉತ್ತರದಿಂದ ಪ್ರಾರಂಭವಾದ ಮಹಮ್ಮದೀಯ ಆಕ್ರಮಣಗಳೂ ಹೊಯ್ಸಳ ಸಾಮ್ರಾಜ್ಯದ ಮತ್ತು ಸಂತತಿಯ ವಿನಾಶಕ್ಕೆ ಸಹಕಾರಿಯಾದವು.

ಅಧ್ಯಾಯ - 2

2.1 ಹೊಯ್ಸಳ ರಾಜ ಮೂರನೇ ನರಸಿಂಹನ ಆಡಳಿತ

ಅಧ್ಯಾಯ–2

2.1 ಹೊಯ್ಸಳ ರಾಜ ಮೂರನೇ ನರಸಿಂಹನ ಆಡಳಿತ (1254–1291)

ನರಸಿಂಹನು ಕ್ರಿ.ಶ.1240ರ ಆಗಸ್ಟ್ 12 ರಂದು ಜನಿಸಿದನು. ಅವನ ತಂದೆ ತಾಯಿಗಳು ವೀರಸೋಮೇಶ್ವರ ಮತ್ತು ಬಿಜ್ಜಲರಾಣಿ ಗಂಡ ಗೋಪಾಲನ ವಿರುದ್ಧ ಮುನ್ನಡೆಯುತ್ತಿರುವಾಗ ಸೈನ್ಯ ಶಿಬಿರದಲ್ಲಿದ್ದಾಗ ಮಗನ ಜನನದ ಸುದ್ದಿಯನ್ನು ಪಡೆದನು. ಅವನೇ ಮೂರನೇ ನರಸಿಂಹ.

ನರಸಿಂಹನ ಮೊದಲನೆಯ ಶಿಲಾಲೇಖದ ದಿನಾಂಕವು ಕ್ರಿ.ಶ. 1254ರ ನವೆಂಬರ್ 26 ರಂದು ನಮೂದಿಸಲ್ಪಟ್ಟಿದೆ.[1] ಯುವರಾಜ ನರಸಿಂಹನು ಹದಿನಾಲ್ಕು ವರ್ಷಗಳ ಬಾಲಕನಾಗಿದ್ದಾಗಲೇ ಅತೃಪ್ತಿ ಮತ್ತು ಅಶಾಂತಿಯಿಂದ ಕೂಡಿದ ರಾಜ್ಯವೊಂದರ ಮೇಲೆ ಹಿಡಿತ ಸಾಧಿಸಿದ್ದನು. ನರಸಿಂಹನ ಸಿಂಹಾಸನರೋಹಣವನ್ನು ಪ್ರಜೆಗಳು ಸಂತೋಷದಿಂದಲೇ ಸ್ವಾಗತಿಸಿದರು. ಏಕೆಂದರೆ ಅವರಿಗೆ ತಮಿಳು ದೇಶದಲ್ಲೇ ಸದಾ ವ್ಯಸ್ತನಾಗಿರುತ್ತಿದ್ದ ಸೋಮೇಶ್ವರನ ಬಗ್ಗೆ ಬೇಸರವಿತ್ತು. ರಾಜಧಾನಿಯಾದ ದ್ವಾರಸಮುದ್ರವು ಹೆಸರಿಗೆ ಮಾತ್ರವಿತ್ತು ಮತ್ತು ಸೋಮೇಶ್ವರನು ಯಾವಾಗಲೂ ತಮಿಳುನಾಡಿನ ರಾಜಕೀಯದಲ್ಲಿಯೇ ಮುಳುಗಿರುತ್ತಿದ್ದನು. ಈ ಅವಕಾಶದ ಲಾಭ ಪಡೆದುಕೊಂಡು, ಸೆವುಣರು ಬಹಳ ಪ್ರಬಲರಾದರು ಮತ್ತು ಹೊಯ್ಸಳ ರಾಜ್ಯದ ಉತ್ತರದ ಭಾಗಗಳನ್ನು ಅತಿಕ್ರಮಿಸಲು ಪ್ರಯತ್ನಿಸುತ್ತಿದ್ದರು.

ಕ್ರಿ.ಶ.1254ರಲ್ಲಿ ನರಸಿಂಹನು ಬೇಲೂರಿನ ಚೆನ್ನಕೇಶವನ ದೇವಾಲಯದಲ್ಲಿ ಒಂದು ಸಹಾಯಧನದ ಘೋಷಣೆ ಹೊರಡಿಸಿದನು.[2] ಇದಕ್ಕೆ ಸೋಮೇಶ್ವರನು ಸಹಿ ಹಾಕಿದನು. ಇದರಿಂದ ಸೋಮೇಶ್ವರನು ತಾನಾಗಿಯೇ ತನ್ನ ಮಗನ ಪರವಾಗಿ ಸಿಂಹಾಸನವನ್ನು ಬಿಟ್ಟುಕೊಟ್ಟಿರುವುದನ್ನು ಸೂಚಿಸುತ್ತದೆ. ನರಸಿಂಹನ ದೃಢತೆಯಿಂದ ಅವನ ತಂದೆಯಾದ ಸೋಮೇಶ್ವರನು ಎಷ್ಟು ಪ್ರಭಾವಿತನಾದನೆಂದರೆ ತನ್ನ ತಂದೆಯ ಒಪ್ಪಿಗೆಯಿಂದಲೇ ನರಸಿಂಹನು ಹೊಯ್ಸಳ ರಾಜ್ಯದ ರಕ್ಷಣೆಗಾಗಿ ಸಿಂಹಾಸನವನ್ನೇರಿದನೆಂದು ಮತ್ತೊಂದು ದಾಖಲೆಯು ತಿಳಿಸುತ್ತದೆ. ಹೊಯ್ಸಳ ರಾಜ್ಯದ ವಿಭಜನೆಯು ಕ್ರಿ.ಶ.1253ಕ್ಕಿಂತ[3] ಮುಂಚಿತವಾಗಿಯೇ

ನಡೆಯಿತು. ಏಕೆಂದರೆ ಅದೇ ವರ್ಷದ ಶಿಲಾಲೇಖವು ತಿಳಿಸುವಂತೆ ನರಸಿಂಹ ಮತ್ತವನ ಮಲಸೋದರನಾದ ರಾಮನಾಥನು ಪರಸ್ಪರ ಹೊಡೆದಾಡುತ್ತಿರುವಾಗ ಇಮ್ಮಡಿ ಬಲ್ಲಾಳದೇವರಸ ಎನ್ನುವ ಯಾರೋ ಸಾಮಂತ ಮುಖ್ಯಸ್ಥನು ರಾಮನಾಥನನ್ನು ಬೆಂಬಲಿಸಿದನೆಂದು ತೋರುತ್ತದೆ. ಮೇಲೆ ತಿಳಿಸಿದ ಶಿಲಾಲೇಖವು ಸಾಮ್ರಾಜ್ಯದ ವಿಭಜನೆಯು ಕ್ರಿ.ಶ. 1253[4] ರ ಪ್ರಾರಂಭದಲ್ಲಿಯೇ ಅಥವಾ ಇನ್ನೂ ಮುಂಚಿತವಾಗಿಯೇ ನಡೆದಿರಬಹುದೆಂದು ಸುಳಿವನ್ನು ಕೊಡುತ್ತದೆ. ತನ್ನ ಹತ್ತಿರ ಮೂವತ್ತು ವರ್ಷಗಳ ದೀರ್ಘಾನುಭವದಲ್ಲಿ ವಿಶಾಲವಾದ ಸಾಮ್ರಾಜ್ಯವನ್ನು ಆಳುವುದು ಕಷ್ಟಸಾಧ್ಯ ಎಂಬುದನ್ನು ಸೋಮೇಶ್ವರನು ಮನಗಂಡಿದ್ದನು. ಉತ್ತರದಲ್ಲಿ ಸೇವುಣರು ಮತ್ತು ದಕ್ಷಿಣದಲ್ಲಿ ಪಾಂಡ್ಯರು ಹೊಯ್ಸಳ ರಾಜ್ಯವನ್ನು ಆಕ್ರಮಿಸುವ ಬೆದರಿಕೆಯೊಡ್ಡಿದಾಗ ಪರಿಸ್ಥಿತಿಯು ಇನ್ನೂ ಕಷ್ಟಕರವಾಗಿ ತೋರಿತು. ಈ ಕಷ್ಟಗಳ ಬಗೆಗಿನ ಮುಂದಾಲೋಚನೆಯಿಂದ ಸೋಮೇಶ್ವರನು ಆಡಳಿತದ ಅನುಕೂಲಕ್ಕಾಗಿ ಹೊಯ್ಸಳ ಸಾಮ್ರಾಜ್ಯವನ್ನು ವಿಭಜಿಸಿದನು. ಪೂರ್ವಿಕ ಭೂಭಾಗವು ಮೂರನೇ ನರಸಿಂಹನಿಗೆ ಕೊಡಲ್ಪಟ್ಟಿತು ಮತ್ತು ಕೋಲಾರ ಜಿಲ್ಲೆ ಮತ್ತು ತಮಿಳುನಾಡಿನ ಕೆಲ ಭಾಗಗಳನ್ನೊಳಗೊಂಡ ಭೂಭಾಗವು ರಾಮನಾಥನ ಪಾಲಾಯಿತು. ರಾಮನಾಥನ ತಮಿಳು ಪ್ರಾಂತ್ಯಗಳು ಈಗಿನ ಸೇಲಂ ಜಿಲ್ಲೆ, ಉತ್ತರ ಅರ್ಕಾಟಿನ ಪಶ್ಚಿಮಾರ್ಧ ಮತ್ತು ಚಿತ್ತೂರು, ಕರೂರ್, ತಂಜಾವೂರ್, ಪಾಪನಾಸಂ ಮತ್ತು ತಂಜಾವೂರಿನ ಮುನ್ನಾರ್‌ಗಡಿ ತಾಲ್ಲೂಕುಗಳನ್ನು ಬಿಟ್ಟು ಪೂರ್ಣ ತಿರುಚನಾಪಳ್ಳಿ ಇವುಗಳ ಬಹುಭಾಗಗಳು ಸೇರಿದ್ದವು. ಕುಂದನಿಯು ಅವನ ಪ್ರಾಂತೀಯ ರಾಜಧಾನಿಯಾಗಿತ್ತು. ಇದು ಹೊಸೂರು ತಾಲ್ಲೂಕಿನ ಕುಂದನಿ ಗ್ರಾಮದೊಂದಿಗೆ ಗುರುತಿಸಲಾಗಿದೆ. ಇದನ್ನು ದೇವಸಮುದ್ರಂ ಕುಂದನಿ ಅಥವಾ ದೇವರ ಕುಂದನಿ ಎಂದೂ ಹೇಳುವರು.

ನರಸಿಂಹನ ಪಟ್ಟಾಭಿಷೇಕದ ಸಮಾರಂಭದ ವಿವರಗಳು ದೊರೆತಿಲ್ಲ. ಆದರೆ ಕ್ರಿ.ಶ.1254ರ[5] ಶಿಲಾಲೇಖವೊಂದರ ಪ್ರಕಾರ ನರಸಿಂಹನ ಪಟ್ಟಾಭಿಷೇಕದ ಸಂದರ್ಭದಲ್ಲಿ ಅದೇ ವರ್ಷ ಅವನು ಬೇಲೂರಿನಲ್ಲಿರುವ ಬೊಪ್ಪದೇವ ದಂಡನಾಯಕನ ಬಸದಿಗೆ ಭೇಟಿ ಇತ್ತನು ಮತ್ತು ದೇವ ವಿಜಯ ಪಾರ್ಶ್ವನಿಗೆ ಕಾಣಿಕೆಯನ್ನಿತ್ತನು. ಅದೇ ಶಿಲಾಲಿಪಿಯು ಸೋಮೇಶ್ವರನು ಮುಕ್ಕೊಡೆ ಅಥವಾ ಮೂಗು ಕೊಡೆಗಳನ್ನು ವಿಜಯತೀರ್ಥಾದಿನಾಥ ಬಸದಿಯಲ್ಲಿ ಸ್ಥಾಪಿಸದನೆಂಬ ಅಂಶವನ್ನು ಬಹಿರಂಗಗೊಳಿಸುತ್ತದೆ. ಕೊಹಿಲೋರವರ ಅಭಿಪ್ರಾಯದಂತೆ ಮುಕ್ಕೊಡೆಯು ಸೋಮೇಶ್ವರ, ನರಸಿಂಹ ಮತ್ತು ರಾಮನಾಥ ಈ ಮೂವರ ಆಳ್ವಿಕೆಯ ಸಂಕೇತಸೂಚಕವಾಗಿದೆ. ಆದರೆ ಮುಕ್ಕೊಡೆಯು ಮೂರು ರತ್ನಗಳನ್ನು ಪ್ರತಿಬಿಂಬಿಸುವ ಒಂದು ಜೈನ ಸಂಪ್ರದಾಯವೆಂಬುದನ್ನು ಮನಗಾಣಬೇಕು. ಕ್ರಿ.ಶ.1255ರಲ್ಲಿ[6] ಯುವರಾಜ ಕುಮಾರ ನರಸಿಂಹದೇವನ ಉಪನಯನವು ಆಚರಿಸಲ್ಪಟ್ಟಿತು ಮತ್ತು ಈ ಸಂದರ್ಭದಲ್ಲಿ ಅವನು ಬೊಪ್ಪದೇವ ದಂಡನಾಯಕನ ವಿಜಯಪಾರ್ಶ್ವ ಬಸದಿಗೆ ಸಹಾಯಧನ ನೀಡಿದನು.

ದೇಶವು ರಾಜಕೀಯ ಅವ್ಯವಸ್ಥೆಯಲ್ಲಿದ್ದಾಗ ನರಸಿಂಹನು ಸಿಂಹಾಸನವನ್ನೇರಿದನು. ತಮಿಳುನಾಡಿನಲ್ಲಿ ಸೋಮೇಶ್ವರನ ಚಟುವಟಿಕೆಗಳಿಂದ ಸೇವುಣರು ಮೊದಲಾದ ಇತರ ಸಮಕಾಲೀನ ರಾಜರು ಬಹಳ ಪ್ರಬಲರಾಗಿದ್ದರು ಮತ್ತು ಯಾವಾಗಲೂ ಹೊಯ್ಸಳರ ಮೇಲೆ ರಾಜಕೀಯ ಪರಮಾಧಿಕಾರವನ್ನು ವಿಸ್ತರಿಸಲು ಕಾತುರರಾಗಿದ್ದರು. ನರಸಿಂಹನು ಸಮಕಾಲೀನ ರಾಜಕೀಯ ಪರಿಸ್ಥಿತಿಗೆ ಹೊಂದಿಕೊಳ್ಳುವ ಪ್ರಯತ್ನದಲ್ಲಿದ್ದಾಗಲೆ ಅವನ ಮಲಸಹೋದರನಾದ ರಾಮನಾಥನು ಅವನ ವಿರುದ್ಧ ದಂಗೆ ಎದ್ದನು. ರಾಮನಾಥನು ತನ್ನ ಪಾಲಿನ ಭೂಭಾಗದಿಂದ ತೃಪ್ತನಾಗದೇ ನರಸಿಂಹನ ರಾಜ್ಯದ ಒಂದು ಭಾಗವನ್ನು ಪಡೆದುಕೊಳ್ಳುವ ಕೆಲಸದಲ್ಲಿ ತೊಡಗಿದ್ದನು. ನರಸಿಂಹ ಮತ್ತು ರಾಮನಾಥರ ನಡುವಿನ ಯುದ್ಧದಲ್ಲಿ ಇಮ್ಮಡಿ ಬಲ್ಲಾಳದೇವರಸನಂತಹ ಸಾಮಂತ ಮುಖ್ಯಸ್ಥನು ರಾಮನಾಥನಿಗೆ ಸಹಾಯ ಮಾಡಿದನು. ಒಂದು ಶಿಲಾಲೇಖವು ತಿಳಿಸುವಂತೆ ಮಹಾಮಂಡಲೇಶ್ವರ ಕುಮಾರ ಇಮ್ಮಡಿ ಬಲ್ಲಾಳದೇವರಸ ಸೇತುವರೆಗೆ ಮುಂದುವರೆದನು ಮತ್ತು ತಮ್ಮ ಸಾಮಂತನಿಗೆ ರಾಮನಾಥನ ಪರವಾಗಿ ಹೋರಾಡಲು ಅಪ್ಪಣೆಯಿತ್ತನು. ಈ ಯುದ್ಧದಲ್ಲಿ ಬೀರನೆಂಬುವನು ತನ್ನ ಪ್ರಾಣ ಕಳೆದುಕೊಂಡನು.

ಈ ಶಿಲಾಲಿಪಿಯಲ್ಲಿ ಸ್ವಾರಸ್ಯಕರ ಅಂಶವೆಂದರೆ ಇದು ಹೊಯ್ಸಳ ರಾಜನ ಆಳ್ವಿಕೆಯ ಕಾಲಕ್ಕೆ ಸೇರಿಲ್ಲ. ಆದರೆ ಮಹಾಮಂಡಲೇಶ್ವರ ತಮ್ಮ ಸಾಮಂತನ ಆಳ್ವಿಕೆಯ ಹದಿಮೂರನೆಯ ವರ್ಷಕ್ಕೆ ಸೇರಿದುದಾಗಿದೆ. ಇದಕ್ಕೆ ಕಾರಣ ಬಹುಶಃ ಕಿರಿ ಮುಖ್ಯಸ್ಥರು ರಾಮನಾಥನ ಸಹಾಯದೊಂದಿಗೆ ಸ್ವತಂತ್ರರಾಗಲು ಪ್ರಯತ್ನಿಸಿದ್ದಿರಬಹುದು. ಯುದ್ಧವು ಮೂರನೆಯ ನರಸಿಂಹನ ಆಳ್ವಿಕೆಯ ಕಾಲದೊಳಗೆ ನಡೆದುದರಿಂದ ಭೂಭಾಗವು ರಾಮನಾಥನಿಂದ ಆಕ್ರಮಣಕ್ಕೊಳಗಾಗಿದ್ದಿರಬಹುದೆಂದು ಹೇಳಬಹುದು. ಸೋಮೇಶ್ವರನು ತನ್ನ ರಾಜ್ಯವನ್ನು ಒಳ್ಳೆಯ ನಿರ್ಧಾರದಿಂದಲೇ ವಿಭಜನೆ ಮಾಡಿದ್ದರು. ಅವನ ಕನಸು ನನಸಾಗಲೇ ಇಲ್ಲ. ಇಬ್ಬರು ಸಹೋದರರು ತಮ್ಮ ತಮ್ಮ ರಾಜ್ಯಗಳನ್ನು ಪರಸ್ಪರ ಸಹಕಾರದಿಂದ ಆಳುವುದರ ಬದಲು ಒಬ್ಬರಿಗೊಬ್ಬರು ತಮ್ಮ ಜೀವಮಾನದುದ್ದಕ್ಕೂ ಅಹಿತವನ್ನೇ ಸಾಧಿಸುತ್ತಲೇ ಬಂದರು. ಅವರಲ್ಲಿ ಪರಸ್ಪರ ತಿಳುವಳಿಕೆ ಸಾಮರಸ್ಯವಿದ್ದಿದ್ದರೆ, ಸಾಮ್ರಾಜ್ಯ ವಿಭಜನೆಯು ಹೆಚ್ಚು ಫಲಪ್ರದವಾಗಿರುತ್ತಿತ್ತು. ಪಾಂಡ್ಯನ ರಾಜ್ಯದಲ್ಲಿ ರಾಜರಲ್ಲಿ ಒಬ್ಬನನ್ನು ಸಾರ್ವಭೌಮನೆಂದು ಒಪ್ಪಲಾಗಿ ಇತರರು ಅವನಿಗೆ ಸಾಮಂತರಾಗಿದ್ದರು. ಬಹುಶಃ ಸೋಮೇಶ್ವರನು ರಾಜ್ಯ ವಿಭಜನೆಯನ್ನು ತೃಪ್ತಿಕರವಾಗಿ ಮಾಡಲಿಲ್ಲವೆಂದು ತೋರುತ್ತದೆ. ಅವನು ನರಸಿಂಹನನ್ನು ಮೇಲಿನ ಸ್ಥಾನದಲ್ಲಿರಿಸಿದುದನ್ನು ರಾಮನಾಥನು ಒಪ್ಪಲು ಸಿದ್ಧವಿರಲಿಲ್ಲ. ಸಾಮ್ರಾಜ್ಯ ವಿಭಜನೆಯು ಆಡಳಿತದ ಅನುಕೂಲಕ್ಕಾಗಿ ಮಾಡಿದ್ದಿರಬೇಕು. ವಿಭಜನೆಯ ನಂತರವೂ ಸೋಮೇಶ್ವರನು ಕಣ್ಣಾನೂರಿನಲ್ಲಿ ಆಳುತ್ತಿದ್ದನು. ಕ್ರಿ.ಶ. 1255ರ[7] ಒಂದು ಶಿಲಾಲಿಪಿಯು ಸೋಮೇಶ್ವರನು "ಹಿರಣ್ಯಗರ್ಭ" ಮತ್ತು "ತುಲಾಪುರುಷ"ಗಳನ್ನು ತನ್ನ ಸಾರ್ವಭೌಮತ್ವವನ್ನು ಸಾರಲು ಆಚರಿಸುತ್ತಿದ್ದನೆಂದು ತಿಳಿಸುತ್ತದೆ. ಮತ್ತೊಂದು ಶಿಲಾಲಿಪಿಯು ಕ್ರಿ.ಶ. 1256ನೇ[8]

ವರ್ಷಕ್ಕೆ ಸೇರಿದ ಇದು ಸೋಮೇಶ್ವರನು ತನ್ನ ರಾಜ್ಯವನ್ನು ಕಣ್ಣಾನೂರಿನಿಂದಲೇ ಆಳುತ್ತಿದ್ದನೆಂದು ತಿಳಿಸುತ್ತದೆ.

ಮೂರನೆಯ ನರಸಿಂಹನೊಂದಿಗೆ ಅವನ ಮೊದಲನೆಯ ಘರ್ಷಣೆಯ ನಂತರ ರಾಮನಾಥನು ಹೆಚ್ಚಾಗಿ ತನ್ನ ಚಟುವಟಿಕೆಗಳನ್ನು ತಮಿಳು ದೇಶದಲ್ಲಿಯೇ ಇಟ್ಟುಕೊಂಡನು. ರಾಮನಾಥನು ತನ್ನ.ತಂದೆ ಸೋಮೇಶ್ವರನ ಮೊದಲ ಎಂಟು ವರ್ಷಗಳ ಆಳ್ವಿಕೆಯಲ್ಲಿ ತನ್ನ ತಂದೆಯೊಂದಿಗೆ ರಾಜಪ್ರತಿನಿಧಿಯಾಗಿದ್ದನು ಮತ್ತು ಸೋಮೇಶ್ವರನ ಒಪ್ಪಂದಗಳು ರಾಮನಾಥನ ವಿಧಿ ಬರಹವನ್ನೇ ಬೇರೆಯಾಗಿಸಿತು. ಸೋಮೇಶ್ವರನು ಸಮಕಾಲೀನ ಚೋಳರಾಜನ ಮೂರನೇ ರಾಜರಾಜನನ್ನು ಕಡವರ ಆಕ್ರಮಣದ ವಿರುದ್ಧ ಬೆಂಬಲಿಸಿದನು ಮತ್ತು ತನ್ನನ್ನು ತಾನು "ಚೋಳ ಸಾಮ್ರಾಜ್ಯ ಸ್ಥಾಪಕ" ಎಂದು ಕರೆದುಕೊಂಡನು. ಹೀಗೆ ಸೋಮೇಶ್ವರನು ಬಿದ್ದುಹೋಗುತ್ತಿದ್ದ ಚೋಳರಾಜ್ಯಕ್ಕೆ ಹೊಸ ಜೀವವನ್ನು ನೀಡಿ ಆ ದೇಶದ ಮೇಲೆ ರಾಜಕೀಯ ಪ್ರಭಾವವನ್ನು ವಿಸ್ತರಿಸಲು ಸಮರ್ಥನಿದ್ದನು. ಸೋಮೇಶ್ವರನು ತನ್ನ ಮಗಳಾದ "ಪಮ್ಮಿಯಕ್ಕನ್"ಳನ್ನು ಎರಡನೇ ಸುಂದರ ಪಾಂಡ್ಯನಿಗೆ ಮದುವೆ ಮಾಡಿಕೊಟ್ಟು ಪಾಂಡ್ಯರ ಸಖ್ಯವನ್ನೂ ಸಹ ಬೆಳೆಸಿದನು. ಈ ವೈವಾಹಿಕ ಸಂಬಂಧವು ರಾಜಕೀಯ ಒಪ್ಪಂದಕ್ಕೂ ದಾರಿ ಮಾಡಿಕೊಟ್ಟಿತು ಮತ್ತು ಸೋಮೇಶ್ವರನು ತನ್ನ ಬಿರುದನ್ನು "ಪಾಂಡ್ಯ ದಿಸ್ಪತ್ತೆ" ದಿಂದ "ಪಾಂಡ್ಯರಾಜ್ಯ ಸ್ಥಾಪನಾಚಾರ್ಯ" ಎಂದು ಬದಲಿಸಿದನು. ಆದರೆ ಈ ಸ್ಥಿತಿಗತಿಗಳು ಬಹುಕಾಲ ಉಳಿಯಲಿಲ್ಲ. ಕ್ರಿ.ಶ.1251ರಲ್ಲಿ[9] ಜಾತವರ್ಮನ್ ಸುಂದರಪಾಂಡ್ಯನು ಪಾಂಡ್ಯ ಸಿಂಹಾಸನವನ್ನೇರಿದಾಗ ತಮಿಳು ದೇಶದಲ್ಲಿ ರಾಜಕೀಯವು ಒಂದು ಹೊಸರೂಪವನ್ನು ಪಡೆಯಿತು. ಅವನು ಮಹಾತ್ವಾಕಾಂಕ್ಷಿಯಾಗಿದ್ದನು ಮತ್ತು ಯುದ್ಧಪ್ರಿಯನಾಗಿದ್ದನು. ಸಮಕಾಲೀನ ದಕ್ಷಿಣ ಭಾರತದ ರಾಜ್ಯಗಳು ಬಹುಬೇಗ ಅವನ ತೋಳ್ಬಲವನ್ನು ಅನುಭವಿಸಿದವು. ಹೊಯ್ಸಳರು ಮತ್ತು ಚೋಳರು ಇವರಲ್ಲಿ ಮೊದಲಿಗರು. ಪಾಂಡ್ಯರು ಹೊಯ್ಸಳರಿಂದ ಶ್ರೀರಂಗಂನ್ನು ತೆಗೆದುಕೊಂಡರು. ಚೋಳರೂ ಸಹ ಕ್ರಿ.ಶ. 1254ರಲ್ಲಿ[10] ಸೋಮೇಶ್ವರನನ್ನು ಸೋಲಿಸಿ ಹೊಯ್ಸಳರನ್ನು ತಮ್ಮ ಪೂರ್ವಿಕರ ರಾಜ್ಯಗಳಿಂದ ಕಿತ್ತೊಗೆದರು. ಅದೇ ಸಮಯದಲ್ಲಿ ಚೋಳರೂ ಸಹ ಪಾಂಡ್ಯರಾಜ ಸುಂದರಪಾಂಡ್ಯನಿಂದ ಸೋಲಿಸಲ್ಪಟ್ಟರು. ಸೋಮೇಶ್ವರ ಮತ್ತು ರಾಮನಾಥ ಪಾಂಡ್ಯರ ಆಕ್ರಮಣವನ್ನು ಎದುರಿಸಲಾಗದೆ ಹೋದರು ಮತ್ತು ಅವರು ತಿರುವಣ್ಣಾಮಲೈನಲ್ಲಿ ಆಶ್ರಯ ಪಡೆದರು. ಇಡೀ ತಮಿಳು ದೇಶ ಮತ್ತು ತೆಲುಗು ಜಿಲ್ಲೆಗಳ ಕೆಲವು ಭಾಗಗಳು ಪಾಂಡ್ಯರ ಆಳ್ವಿಕೆಗೆ ಸೇರಿಹೋದವು.

ಹೊಯ್ಸಳರ ರಾಜಧಾನಿ ಕಣ್ಣಾನೂರ ಪಾಂಡ್ಯರಿಂದ ಆಕ್ರಮಿಸಲ್ಪಟ್ಟಿತು. ಶ್ರೀರಂಗಂನಲ್ಲಿ ದೊರೆತಿರುವ ದಿನಾಂಕರಹಿತ ಶಿಲಾಶಾಸನವೊಂದು "ಸುಂದರಪಾಂಡ್ಯನು ಕರ್ನಾಟಕ ದೇಶದ ಚಂದ್ರನನ್ನು ಬೇರೆ ಜಗತ್ತಿಗೆ ಕಳುಹಿಸಿಕೊಟ್ಟನು" ಎಂದು ದಾಖಲಿಸಿದೆ. ಆದರೆ ಈ ಹೇಳಿಕೆಯನ್ನು ದೊರೆತಿರುವ ಸಾಕ್ಷ್ಯಾಧಾರಗಳ ಮೇಲೆ ಸಾಬೀತು ಮಾಡಲಾಗುವುದಿಲ್ಲ. ಇದರ ಪ್ರಕಾರ ಸೋಮೇಶ್ವರನು ಕ್ರಿ.ಶ. 1262[11] ರವರೆವಿಗೂ ಜೀವಿಸಿದ್ದನೆಂದಾಗುತ್ತದೆ. ರಾಮನಾಥ ಮತ್ತು

ಸೋಮೇಶ್ವರನು ಪಾಂಡ್ಯರಿಂದ ಸೋಲಿಸಲ್ಪಟ್ಟರೂ ಶ್ರೀರಂಗಂನ್ನು ಅವರಿಗೇ ಬಿಟ್ಟುಕೊಡಲಾಯಿತು ಎನ್ನುವ ವಿಚಾರವು ರಾಮನಾಥನ ಆಳ್ವಿಕೆಯ ಎರಡನೆಯ, ಏಳನೆಯ, ಹದಿನೈದನೆಯ ಮತ್ತು ಹದಿನೇಳನೆಯ ವರ್ಷಗಳ ದಿನಾಂಕವೂ ನಮೂದಿಸಲ್ಪಟ್ಟಿರುವ ಅನೇಕ ಶಿಲಾಶಾಸನಗಳಿಂದ ಊಹಿಸಬಹುದಾಗಿದೆ. ಇದಕ್ಕೆ ಮೊದಲು ಚೋಳರು ಹೊಯ್ಸಳರೊಂದಿಗೆ ಒಪ್ಪಂದ ಮಾಡಿಕೊಂಡರು ಮತ್ತು ರಾಮನಾಥನು ವಂಶಪಾರಂಪರ್ಯ ಬಿರುದನ್ನು "ಚೋಳ ರಾಜ್ಯ ಸಂಸ್ಥಾಪಕ" ಎನ್ನುವ ಬಿರುದನ್ನು ಪಡೆದನು. ಹೀಗೆ ತನ್ನ ನೆರೆಯವರಾದ ಚೋಳ ಮತ್ತು ಪಾಂಡ್ಯರೊಂದಿಗೆ ಶಾಂತಿಯುತವಾಗಿ ಬಗೆಹರಿದ ಮೇಲೆ ರಾಮನಾಥನು ತನ್ನ ಮಲಸಹೋದರನಾದ ಮೂರನೆಯ ನರಸಿಂಹನ ಕಡೆ ಗಮನ ಹರಿಸಿದನು.

ರಾಮನಾಥನು ಕ್ರಿ.ಶ.1260ರಲ್ಲಿ[12] ನರಸಿಂಹನ ಭೂಭಾಗದ ಮೇಲೆ ಆಕ್ರಮಣ ಮಾಡಿದನು. ನರಸಿಂಹನು "ಅವನ ತಂದೆಯು ರಾಜ್ಯದ ಸಂಪತ್ತಿನೊಂದಿಗೆ ಪ್ರೀತಿಯಿಂದ ಹಂಚಿಕೊಂಡಿದ್ದ ಸಕಲ ಸಂಪದ್ಭರಿತ ದ್ವಾರಸಮುದ್ರದ ರಾಜಧಾನಿಯಲ್ಲಿ ತನ್ನದೇ ಆದ ದೇಶದಲ್ಲಿ ವಾಸಿಸುತ್ತಿದ್ದನು. "ರಾಮನಾಥನ ಸೈನ್ಯವು ಚನ್ನರಾಯಪಟ್ಟಣದವರೆಗೂ ಮುನ್ನಡೆದಿತ್ತು. ಎರಡೂ ಸೈನ್ಯಗಳ ಹೋರಾಟದಲ್ಲಿ ಕಂಬಾಳ ಇರಿಗೆಸೆಟ್ಟಿ ಹೋರಾಡಿ ಮಡಿದನು.

ಇದು ಒಂದು ಚಿಕ್ಕ ಹೋರಾಟ ಮಾತ್ರವಾಗಿತ್ತು ಮತ್ತು ರಾಮನಾಥನು ತನ್ನ ಪ್ರಯತ್ನದಲ್ಲಿ ನಷ್ಟವನ್ನು ಅನುಭವಿಸಿದನು. ಕ್ರಿ.ಶ. 1262[13] ರವರೆವಿಗೂ ರಾಮನಾಥನ ಚಟುವಟಿಕೆಗಳು ಕಣ್ಣಾನೂರಿನಲ್ಲಿ ಒಂದು ಸಣ್ಣ ಪ್ರದೇಶದವರೆಗೆ ಮಾತ್ರ ಸೀಮಿತವಾಗಿದ್ದವು. ಅವನ ಶಿಲಾಶಾಸನಗಳು ಕನ್ನಡ ರಾಜ್ಯದಲ್ಲಿ ಈ ದಿನಾಂಕದ ನಂತರವೇ ಕಂಡುಬಂದಿವೆ. ಡೆರೆಟರವರ ಅಭಿಪ್ರಾಯದಂತೆ ರಾಮನಾಥನು ಪಾಂಡ್ಯರ ಸಾಮಂತನಾಗಿದ್ದನು. ಆದುದರಿಂದ ಅವನು ಕುಂದಣಿಯಲ್ಲಿ ಮತ್ತೊಂದು ರಾಜಧಾನಿಯನ್ನು ಸ್ಥಾಪಿಸಿದನು ಮತ್ತು ತನ್ನ ಆಳ್ವಿಕೆಯ ಕೊನೆಯ ದಿನಗಳಲ್ಲಿ ಅಲ್ಲಿಯೇ ನೆಲಸಿದನು. ಕ್ರಿ.ಶ.1256ರಲ್ಲಿ[14] ರಾಮನಾಥ ಮತ್ತು ಸೋಮೇಶ್ವರರು ಸುಂದರಪಾಂಡ್ಯನಿಂದ ಸೋಲಿಸಲ್ಪಟ್ಟರೂ, ಅವರು ತಿರುಚನಾಪಳ್ಳಿ ಜಿಲ್ಲೆಯನ್ನು ಮೇಲಿನ ಅವರ ಹಿಡಿತ ಹಾಗೆಯೇ ಮುಂದುವರೆದಿತ್ತು ಮತ್ತು ಅನೇಕ ಶಿಲಾಶಾಸನಗಳು ಸೋಮೇಶ್ವರನ 25ನೆಯ ವರ್ಷದಿಂದ ಅವರ 29ನೇ ವರ್ಷದವರೆಗೆ ಅಂದರೆ ಕ್ರಿ.ಶ.1262[15] ರವರೆಗಿನ ದಿನಾಂಕಗಳ ಸಹಿತ ಇಲ್ಲಿ ದೊರೆತಿವೆ. ಜಾತವರ್ಮ ಸುಂದರಪಾಂಡ್ಯ ಮತ್ತೆ ಸೋಮೇಶ್ವರನ ಮೇಲೆ 1263ರಲ್ಲಿ ಆಕ್ರಮಣ ಮಾಡಿದನು ಮತ್ತು ಕಣ್ಣಾನೂರು ಅವನಿಂದ ಆಕ್ರಮಿಸಲ್ಪಟ್ಟಿತು. ಆದರೆ ತಿರುಚನಾಪಳ್ಳಿ ಜಿಲ್ಲೆ ತ್ರಿರುವೆಲ್ಲರಿ ಮತ್ತು ತಿರುಪತ್ತೂರುಗಳಲ್ಲಿ ರಾಮನಾಥನ ಶಿಲಾಶಾಸನಗಳು ರಾಮನಾಥನು ಕಣ್ಣಾನೂರು ಮತ್ತು ಅದರ ನೆರೆಹೊರೆಯ ರಾಜ್ಯಗಳ ಮೇಲೆ ತನ್ನ ಹಿಡಿತ ಸಾಧಿಸಿದ್ದನೆಂದೇ ಸೂಚಿಸುತ್ತದೆ. ಕ್ರಿ.ಶ.1262ರ ರಾಮನಾಥನ ಶಿಲಾಶಾಸನಗಳು ತಿರುಚನಾಪಳ್ಳಿಯಲ್ಲಿ ದೊರೆತಿವೆ ಮತ್ತು

ಅವುಗಳಲ್ಲಿ ಕೆಲವು ಶಿಲಾಶಾಸನಗಳು ಅವನನ್ನು "ಸಾರ್ವಭೌಮ ಚಕ್ರವರ್ತಿ ವೀರ ರಾಮನಾಥದೇವ" ಎಂದು ಕರೆದಿವೆ.

ಹಾನಗಲ್‌ನ ಕದಂಬರು ಎರಡನೇ ಬಲ್ಲಾಳ ಮತ್ತು ವಿಷ್ಣುವರ್ಧನನ ಕೈ ಕೆಳಗೆ ಸಾಮಂತರಸರಾಗಿದ್ದರು. ಎರಡನೇ ಬಲ್ಲಾಳನ ಕಾಲದಲ್ಲಿ ಕದಂಬರ ಮುಖ್ಯಸ್ಥನಾದ ಕಾಮದೇವನು "ಕದಂಬ ಚಕ್ರವರ್ತಿ" ಎಂಬ ಬಿರುದಿನೊಡನೆ ಸ್ವತಂತ್ರವಾಗಿ ಆಳುತ್ತಿದ್ದನು. ಕ್ರಿ.ಶ.1260ರಲ್ಲಿ[16] ಕಾಮದೇವರಸನು ಹಾನಗಲ್ ಮತ್ತು ಬನವಾಸಿ ಪ್ರಾಂತ್ಯಗಳ ರಾಜನ ಸಮಕಾಲೀನ ಅರಸನಾಗಿದ್ದನು. ಮೂರನೇ ನರಸಿಂಹನು ತನ್ನ ಸೇವುಣ ವಿರೋಧಿ ನೀತಿಗಳಲ್ಲಿ ಈ ವಂಶದ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಂಡು ಇವರನ್ನು ತನ್ನ ಅಧೀನಪಡಿಸಿಕೊಳ್ಳುವ ಸಲುವಾಗಿ ಕ್ರಿ.ಶ.1262ರಲ್ಲಿ ಅವರ ಮೇಲೆ ಯುದ್ಧ ಹೂಡಿದನು. ಪೂರ್ವದಲ್ಲಿ ನಿರಕಲ್‌ನಲ್ಲಿ ಶತ್ರುವನ್ನು ಸದೆಬಡಿದನು. ಕದನದಲ್ಲಿ ಒಬ್ಬ ಮಸಯನಾಯಕನು ಬಿದ್ದನು.

ಹಾನಗಲ್‌ನ ಕದಂಬರ ಮೇಲೆ ಆಕ್ರಮಣ ನಡೆಸಿದ ತಕ್ಷಣವೇ ಹೊಯ್ಸಳರ ಕೈಕೆಳಗೆ ಮುಖ್ಯ ಸಾಮಂತನಾಗಿದ್ದ ಹೊಸಗುಂಡದ ಬೀರಾರಸ ಸಂತರಸನ ಮಗನಾದ ನಂತರ ಮುಖ್ಯಸ್ಥನಾದ ಬೊಮ್ಮದೇವರಸನ ಮೇಲೆ ವಿಜಯದ ದಾಳಿಯನ್ನು ನಡೆಸಿದನು. ಅವನ ರಾಜಧಾನಿಯಾದ ಸಂತಲಿಗೆಯು ಉತ್ತರದಲ್ಲಿ ಸೇವುಣ ಸೈನ್ಯ ಮತ್ತು ದಕ್ಷಿಣದಲ್ಲಿ ಹೊಯ್ಸಳರ ನಡುವೆ ಒಂದು ಅಡ್ಡಗೋಡೆಯಂತಿತ್ತು. ಸೋಮೇಶ್ವರನ ಕಾಲದಲ್ಲಿ ಸಂತರಸರು ತಮ್ಮನ್ನು ತಾವು ಸ್ವತಂತ್ರರೆಂದು ಘೋಷಿಸಿದರು. ಆದುದರಿಂದ ಮೂರನೇ ನರಸಿಂಹನು ಪಟ್ಟಕ್ಕೆ ಬಂದಾಗ ತನ್ನ ಸಾಮಂತ ಮುಖ್ಯಸ್ಥರ ಮೇಲೆ ತನ್ನ ಅಧಿಕಾರವನ್ನು ಪುನಃ ಸ್ಥಾಪಿಸಲು ಕಾರ್ಯವನ್ನು ಕೈಗೊಂಡನು. ಈ ಸಮಯದಲ್ಲಿ ಸಂತರ ಮುಖ್ಯಸ್ಥನಾದ ಬೊಮ್ಮದೇವರಸನು ಸೇವುಣರ ಮೇಲೆ ಅವಲಂಬಿತನಾಗಿ ಹೊಸಗುಂಡದಲ್ಲಿ ಆಳುತ್ತಿದ್ದನು. ಕ್ರಿ.ಶ.1265ರಲ್ಲಿ[17] ನರಸಿಂಹನು ತನ್ನ ಸೇನಾನ ಸಿಂಗಯ ದಂಡನಾಯಕನನ್ನು ಸಂತಾರ ದೇಶವನ್ನು ದಾಳಿ ಮಾಡಲು ಕಳುಹಿಸಿದನು. ಸಂತಾರಾ ಕಡೆಯಿಂದ ನಲ್‌ಪ್ರಭು ಕಾಳಗೌಡ ಮತ್ತು ಮೈಜುರದ ಸ್ವಂತ ಸಿರಿಗೆಯ ದಂಡನಾಯಕನ ವಿರುದ್ಧ ಸಾಹಸದಿಂದ ಹೋರಾಡಿದನು. ಅವನು ಶತ್ರುವನ್ನು ವೊನ್ನಾಲಿಯ ಅಂದರೆ ಶಿವಮೊಗ್ಗ ಜಿಲ್ಲೆಯಲ್ಲಿ ಈಗಿನ ಹೊನ್ನಾಲಿಯ ಬಳಿ ಎದುರಿಸಿದನು ಮತ್ತು ಆನೆ ಮತ್ತು ಧನಗಳನ್ನು ವಾಪಸ್ಸು ತಂದನು. ಈ ದಾಳಿಯ ಸಮಯದಲ್ಲಿ ಸಂತಾರ ಬೊಮ್ಮದೇವರಸನು ಮಲೈನಲ್ಲಿ ತನ್ನ ರಾಜ್ಯದ ವಿರುದ್ಧದ ಕೊನೆಯಲ್ಲಿ ಕ್ರಿ.ಶ.1276ರ ಮೊದಲು ಹೊಂದಿರಲಿಲ್ಲ ಇರುಂಗೊಳನ ಉತ್ತರಾಧಿಕಾರಿ ಬೊಮ್ಮಿದೇವ ಹೊಯ್ಸಳರಿಂದ ಆಕ್ರಮಣವನ್ನು ಎದುರಿಸಬೇಕಾಯಿತು. ಕ್ರಿ.ಶ.1285ರಲ್ಲಿ ರಾಜಾನರಸಿಂಹನು ನಿಡುಗಲ್‌ಕೋಟೆಯ ವಿರುದ್ಧ ದಂಡೆತ್ತಿ ಹೋದನು ಮತ್ತು ಬಾಗೆಯ ಕೆರೆಯನ್ನು ವಶಪಡಿಸಿಕೊಂಡ ನಂತರ ಕೋಟೆಯನ್ನು ವಶಪಡಿಸಿಕೊಂಡನು. ಕ್ರಿ.ಶ.1286ರ ದಿನಾಂಕದಂದು ಒಂದು ವೀರಗಲ್ಲು, ನರಸಿಂಹನು ನಿಡುಗಲ್‌ಕೋಟೆ ವಶಪಡಿಸಿಕೊಳ್ಳುವಾಗ ಏಕ್ಕತಿ ರಾಮೇಯ ನಾಯಕನು ಮರಣ ಹೊಂದಿದ ಬಗ್ಗೆ ಪ್ರಸ್ತಾಪಿಸಿದೆ.

[illegible]

ಕ್ರಿ.ಶ.1289ರಲ್ಲಿ[18] ಬಿಟ್ಟಿನ ಕೋಟೆಯ ಮೇಲೆ ನರಸಿಂಹನು ದಾಳಿ ನಡೆಸಿದನು. ಮಹಾಸಾಸಯಿತ ಆಡಗಡಮ ಕದನಕ್ಕೆ ನುಗ್ಗಲು ಸೈನ್ಯಕ್ಕೆ ಅಪ್ಪಣೆ ಮಾಡಿದನು. ಬಸವನಹಳ್ಳಿ ಮತ್ತು ದೇವಲಿಂಗೆ ನಾಡಿನಲ್ಲಿ ಬೇಲೂರಿನ ಕೆಲ ಯೋಧರು ಕದನಕ್ಕೆ ನಡೆದರು ಮತ್ತು ರಾಮನಾಥನ ಸೈನ್ಯದ ವಿರುದ್ಧ ಹೋರಾಡಿದರು. ರಾಮನಾಥನು ಅವರನ್ನು ಅಡಗಿಸಿದನು. ಮುಂದಿನ ಹೋರಾಟವು ಕ್ರಿ.ಶ.1290ರಲ್ಲಿ ಈ ಸಹೋದರರ ನಡುವೆ ನಡೆಯಿತು. ಹೋರಾಟದ ದೃಶ್ಯವು ಈಗಿನ ತುಮಕೂರಿನ ಪೂರ್ವಭಾಗವಾಗಿತ್ತು. ಸನ್ನೆಹಳ್ಳಿಯ ಕಿರಿಯ ನಾಯಕನು ಒಂದು ಆನೆಯ ಕಾಲಿನ ಕೆಳಗೆ ಬಿದ್ದು ಸತ್ತುಹೋದನು. ಮೊದಲನೆಯ ಮತ್ತು ಎರಡನೆಯ ಪ್ರಯತ್ನದ ನಡುವಿನ ದೀರ್ಘ ವಿರಾಮವು ರಾಮನಾಥನು ತಮಿಳು ದೇಶದ ಕಡೆ ತನ್ನ ಗಮನವನ್ನು ಹೆಚ್ಚು ಕೇಂದ್ರೀಕರಿಸಿದ್ದನೆಂಬುದನ್ನು ಸೂಚಿಸುತ್ತದೆ.

ಈ ಕಾಲದ ರಾಜಕೀಯ ಇತಿಹಾಸದ ಅಧ್ಯಯನವು ರಾಮನಾಥನು ದಕ್ಷಿಣದಲ್ಲಿ ಹೊಯ್ಸಳರ ಸ್ವತ್ತನ್ನು ವಾಪಸ್ಸು ಪಡೆಯಲು ಹತಾಶ ಪ್ರಯತ್ನಗಳನ್ನು ಮಾಡಿದನೆಂಬುದನ್ನು ಸೂಚಿಸುತ್ತದೆ. ಕ್ರಿ.ಶ.1279ರಲ್ಲಿ ಮೂರನೇ ರಾಜೇಂದ್ರನ ಮರಣಾನಂತರ ಚೋಳ ಸಾಮ್ರಾಜ್ಯದ ಅವನತಿಯು ದಕ್ಷಿಣದಲ್ಲಿ ಹೊಯ್ಸಳರಿಗೆ ಒಂದು ಮಾರಣಾಂತಿಕ ಪೆಟ್ಟಾಗಿತ್ತು. ರಾಮನಾಥನ ತಮಿಳು ಪ್ರದೇಶಗಳು ಈ ಸಮಯದಲ್ಲಿ ಕೈಬಿಟ್ಟವು ರಾಮನಾಥನ ಮೂವತ್ತೆಂಟನೆಯ ಆಳ್ವಿಕೆಯ ಬಗ್ಗೆ ಅಂದರೆ 1292–93ರಲ್ಲಿ ತಿಳಿಸುವ ಅವನ ಒಂದೇ ಒಂದು ದಾಖಲೆಯು ಚಿತ್ತೂರು ಜಿಲ್ಲೆಯ ಪುಂಗನೂರು ಎಂಬಲ್ಲಿ ದೊರೆತಿದೆ. ಡಾ.ವೆಂಕಟರಾಮಯ್ಯ ನವರ "ಹೊಯ್ಸಳರು ಕರ್ನಾಟಕದಲ್ಲಿ ತಮ್ಮ ಪೂರ್ವಿಕರ ಭೂಪ್ರದೇಶಗಳಿಗಷ್ಟೇ ಮುಂದಿನ ಮೂವತ್ತು ವರ್ಷಗಳವರೆಗೆ ತೃಪ್ತರಾಗಿ ಉಳಿಯಬೇಕಾಯಿತು. ಏಕೆಂದರೆ ಬಲಶಾಲಿಯಾದ ಮುಂದುವರೆದ ಮಾರವರ್ಮ ಕುಲಶೇಖರನ ಆಳ್ವಿಕೆಯು ದಕ್ಷಿಣದಲ್ಲಿ ಅವರ ಭೂವಿಸ್ತರಣೆಯ ಕನಸನ್ನು ಅಸಾಧ್ಯ ಮಾಡಿಕೊಟ್ಟಿತು" ಎನ್ನುವ ಇವರ ಅಭಿಪ್ರಾಯವನ್ನು ನಾವು ಒಪ್ಪಿಕೊಳ್ಳಬಹುದಾಗಿದೆ.

ನರಸಿಂಹನ ಕೊನೆಯ ವರುಷಗಳು ರಾಮನಾಥನ ವಿರುದ್ಧ ಹೋರಾಡುತ್ತಲೇ ಕಳೆದವು ಮತ್ತು ಆಗಾಗ್ಗೆ ನಡೆದ ಈ ಯುದ್ಧಗಳು ಎರಡೂ ಕಡೆಗಳಲ್ಲೂ ಹೊಯ್ಸಳ ಬಲವನ್ನು ಕುಗ್ಗಿಸಿದವು. ಕ್ರಿ.ಶ.1291 ರಲ್ಲಿ ನರಸಿಂಹನ ಮಗನಾದ ಮೂರನೇ ಬಲ್ಲಾಳನು ಸಾರ್ವಭೌಮಿಕ ಬಿರುದುಗಳೊಂದಿಗೆ ರಾಜ್ಯವಾಳುವುದನ್ನು ಕಾಣುತ್ತೇವೆ. ಕ್ರಿ.ಶ.1281ರಲ್ಲಿ ಅವನು ಯುವರಾಜನಾಗಿದ್ದನು ಮತ್ತು ಮೂಡಬಿದರೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ತುಳುವರನ್ನು ಆಳಿದನು. ಕ್ರಿ.ಶ.1291ರಲ್ಲಿ ರಾಜಾನರಸಿಂಹನು ಮರಣ ಹೊಂದಿದನು. ಅದೇ ವರುಷ ಅವನ ಅಂಗರಕ್ಷಕರು ಆತ್ಮಾಹುತಿ ಹೊಂದಿದರು. ಅಗ್ರಹಾರ ನಚಲ್ಲಿಯಲ್ಲಿ ದೊರೆತಿರುವ ಶಿಲಾಶಾಸನವೊಂದು ರಂಗೇಯನಾಯಕ ತನ್ನ ಪತ್ನಿಯರಾದ ಕೇವತ್ಸೆನಾಯಕಿತಿ, ಹೊನ್ನವೆನಾಯಕಿತಿ, ಹತ್ತು ಲೆಂಕಿತಿಯರು ಮತ್ತು ಇಪ್ಪತ್ತೊಂದು ಲೆಂಕರು ನರಸಿಂಹನು ಸತ್ತಾಗ ಗರುಡರಾದರೆಂದು ತಿಳಿಸುತ್ತದೆ. ಇದು ಆ ದಿನಗಳ ಸಾಮಾನ್ಯ ಪದ್ಧತಿಯಾಗಿತ್ತು.

ರಾಜಾ ನರಸಿಂಹನು "ಶ್ರೀ ಪೃಥ್ವೀವಲ್ಲಭವ್, ಮಹಾರಾಜಾಧಿರಾಜವ್ ಪರಮೇಶ್ವರಮ್ ಪರಮಭಟ್ಟಾರಕಮ್', ದ್ವಾರಾವತಿಪುರವರಾಧೀಶ್ವರಮ್, ಸತ್ಯಾಶ್ರಯ ಕುಲತಿಲಕಮ್, ಯಾದವ, ಕುಲಂಬರ, ದ್ಯುಮಣಿ ಸರ್ವಜ್ಞ, ಚೂಡಾಮನಿ ಮಲೆರಾಜರಾಜ, ಮಲೆಪೆರಳ್‌ಗೊಂಡ, ಗಂಡುಬೇರುಂಡ, ಕದನ ಪ್ರಚಂಡ, ಆ ಸಹಾಯ ಶೂರ, ಏಕಾಂಗವೀರ ಸನವರಸಿದ್ಧಿ, ಗಿರಿದುರ್ಗಮಲ್ಲ, ಛಲದಂಕರಾಮ, ವೈರಿಭಕಂಠೀರವಮ್ ಚೋಳರಾಯ ಸ್ಥಾಪನಾಚಾರ್ಯ ಪಾಂಡ್ಯರಾಜ್ಯ ಪ್ರತಿಷ್ಠಾಹಾರ್ಯ ಮಗರರಾಯ ರಾಜ್ಯ ನಿರ್ಮೂಲನಂ, ಭುಜಬಲ ಪ್ರತಾಪಚಕ್ರವರ್ತಿನ್ ಎಂಬಿವೇ ಮೊದಲಾದ ಬಿರುದುಗಳನ್ನು ಹೊಂದಿದ್ದನು.

ಈ ಬಿರುದುಗಳ ಅರ್ಥವು "ಸಂಪತ್ತಿನೊಡೆಯ ಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾರ್ಕ" ದ್ವಾರಾವತಿಪುರದ ಒಡೆಯ, ಸತ್ಯಾಶ್ರಯ ಕುಲದ ಕೀರ್ತಿ, ಯಾದವಕುಲದ ಆಕಾಶದಲ್ಲಿ ಸೂರ್ಯ, ಸರ್ವಜ್ಞಾನಶಿರೋಮಣಿ, ಪುರುಷ ರಾಜರ ರಾಜ, ಮಲಪಾಸರಲ್ಲಿ ಅಗ್ರಗಣ್ಯ, ಗಂಡುಭೇರುಂಡ, ಯುದ್ಧದಲ್ಲಿ ಶೂರ, ಅಸಹಾಯಕ ಯೋಧ, ಏಕನಾಯಕ, ಶನಿವಾರಸಿದ್ಧ, ಗಿರಿದುರ್ಗಮಲ್ಲ, ಯುದ್ಧದಲ್ಲಿ ಶಕ್ತಿಯಲ್ಲಿ ರಾಮ, ಶತ್ರುಗಳಿಗೆ ಆನೆಗೆ ಸಿಂಹ, ಚೋಳರಾಯ ಸ್ಥಾಪಕ, ಪಾಂಡ್ಯರಾಯ ಸ್ಥಾಪಕ, ಮಗರರಾಯನ ಬುಡಮೇಲು ಮಾಡುವನ ಭುಜಬಲ ಪ್ರತಾಪ ಚಕ್ರವರ್ತಿ.

ಅಡಿಟಿಪ್ಪಣಿಗಳು

1) EC V, BI, 125
2) Ibid Cn. 269
3) Kuj. 1967, Vol.VIII, p.117, "Inscriptions from Saravati Valley", S.H.Ritti.
4) EC, X, MR.100. Rice identifies kundani with modern kundana near Devanahalli in the Bangalore District (See Rice, Mysore and Coorg, p.197). His reason for this suggestion is only phonetical resemblance between the two words. Krishnasastry identifies kundani with another place. Quoting Mr.J.F.Richards, he presumes that kundani has to be identified with the village above the ghats of the same name near Hosur in the Dharmapuri District. The place was also named as Hosur kundani. The place still shows ruins of fortifications and structural monuments indicating its past greatness.
5) EC., V. Bi. 125.
6) William Coelho: The Hoysalavamsa, p.199.
7) EC, V Bi. 126.
8) KUJ., 1967, VIII, Inscriptions from "Saravati Vally" article by S.H.Ritti. Tammasavanta was a subordinate officer under Ballaladevarasa, the Governor of Setu, who himself was a feudatory chief under the Hoysala king Ramanatha.
9) EC., V, Bi 125.
10) EP. Ind., III, p.8
11) ARSIE., 1911, 526, 527.
12) EP. IND., III, P.8
13) Rangacharya, "Inscriptions of Madras Presidency", p.1215.
14) EC., V, Cn.206.
15) ARSIE., 1908, No.590, Ibid, 1950, NO.542, V.R.II.
16) Ep.Ind., III, p.10
17) ARSIE, 1913, No.40, Ibid., 1914, No.163; Ibid, 1931, No.141.
18) EC., VI, TK 71. The kadambas ruled for centuries over the western districts of Karnataka in the Dharwar, Shimoga and Karwar districts and also in Gov.

ಅಧ್ಯಾಯ – 3

ಹೊಯ್ಸಳ ಅರಸ ಮೂರನೇ ನರಸಿಂಹನ ಕಾಲದಲ್ಲಿ ದಂಡನಾಯಕರು

3.1 ದಂಡನಾಯಕರ ಉದಯ

3.2 ದಂಡನಾಯಕ/ಮಂತ್ರಿಗಳ ಅರ್ಹತೆಗಳು

3.3 ದಂಡನಾಯಕರ ಅಧಿಕಾರಷಾಹಿ ಪ್ರತಿಷ್ಟರು

3.4 ಖಜಾನೆ

3.5 ಪೆರುಮಾಳ ದಂಡನಾಯಕ

3.6 ಮಹಾಪ್ರಧಾನ ಸೋಮೆಯ ದಂಡನಾಯಕ

3.7 ಸೋಮನಾಥ ದಂಡನಾಯಕನ ಬಿರುದುಗಳು ಮತ್ತು ಸಾಧನೆಗಳು

3.8 ಮಲ್ಲಿಕಾರ್ಜುನ ದಂಡನಾಯಕ

3.9 ಸೋಮಣ್ಣ ದಂಡನಾಯಕ

3.10 ಮಂಡೇಯ ಮಾರ್ನೇಯ ದಂಡನಾಯಕ

3.11 ಶ್ರೀರನ ರೇಚಮಯ ದಂಡನಾಯಕ

3.12 ಮಲ್ಲಿದೇವ ದಂಡನಾಯಕ

3.13 ಭೀಮಯ್ಯ ದಂಡನಾಯಕ

3.14 ಇತರ ಮುಖ್ಯ ದಂಡನಾಯಕರು

ಅಧ್ಯಾಯ–3

ಹೊಯ್ಸಳರಸ ಮೂರನೇ ನರಸಿಂಹನ ಕಾಲದಲ್ಲಿ ದಂಡನಾಯಕರು

3.1 ದಂಡನಾಯಕರ ಉದಯ

ದಂಡನಾಯಕ ಶಬ್ಧವು ಮಹಾಪ್ರಚಂಡ, ದಂಡನಾಥ, ರಾಯದಂಡನಾಥ, ದಂಡಹಿತ, ದಂಡಶಿಶಿರ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳಲು ಕಷ್ಟವಾಗಿದೆ. ಆದರೆ, ಆಲ್ತೇಕರ್‌ರವರು ಮಹಾಪ್ರಧಾನ ದಂಡನಾಯಕನು ಯುದ್ಧ ಮಂತ್ರಿಯೆಂದು ಚಿತ್ರಿಸಿದ್ದಾರೆ. ದಿನಕರ್‌ದೇಸಾಯಿಯವರು ಇದನ್ನು ಸಾಹಿತ್ಯಿಕವಾಗಿ ಸಿಬ್ಬಂದಿಗಳ ಪ್ರಸಿದ್ಧ ಸಮರ್ಥ ಒಡೆಯರೆಂದು ತರ್ಜುಮಿಸಿದ್ದರೆ. ದಂಡನಾಥರು ಸೈನ್ಯಾಧಿಕಾರಿಯಾಗಿದ್ದರು. ಹೊಯ್ಸಳರ ಕಾಲದಲ್ಲಿ ದಂಡನಾಯಕರ ಅತ್ಯಗತ್ಯವು ಹೊಯ್ಸಳರ ಆಡಳಿತದಲ್ಲಿ ತುಂಬ ಪ್ರಮುಖವಾದ ಸ್ಥಾನವನ್ನು ಆಕ್ರಮಿಸಿದೆ. ಆಗಾಗ್ಗೆ "ಮಹಾಪ್ರಧಾನ" ಮತ್ತು "ಸಂದಿವಿಗ್ರಹಿ" ಬಿರುದುಗಳನ್ನು ಹೊಂದಿದ್ದವರು ರಾಜ ಕುಟುಂಬದ ನಂಬಿಕಸ್ಥ ಸೇವಕರಾಗಿದ್ದರು. ಉದಾಹರಣೆಗೆ ವಿಷ್ಣುವರ್ಧನನ ಕಾಲದಲ್ಲಿ ಸಂದಿವಿಗ್ರಹಿಯಾಗಿದ್ದ, ಪುಣಸಯ್ಯ ದಂಡನಾಯಕ, 3ನೇ ನರಸಿಂಹನ ಕಾಲದಲ್ಲಿ ಮಹಾಪ್ರಧಾನನಾಗಿದ್ದ ಸೋಮಯ್ಯ ದಂಡನಾಯಕರು ಮತ್ತು "ಮಾಂಡಲಿಕರಜುಬು" "ಉದ್ಧಂಡ ಮಾಂಡಲಿಕರ ಗಂಡ" ಹಾಗೂ "ದಂಡನಾಥ ದೇವೇಂದ್ರ" ನಂತಹ ಬಿರುದುಗಳನ್ನು ಹೊಂದಿದ್ದನು.

ದಂಡನಾಯಕರು ರಾಜ್ಯದಲ್ಲಿ ಉನ್ನತ ದರ್ಜೆಯ ಕಛೇರಿ ಕೆಲಸದವರಾಗಿದ್ದರು. ಇವರ ಮುಖ್ಯ ಗುರಿಯು ರಾಜನಿಷ್ಠೆಯನ್ನು ಮತ್ತು ತಮ್ಮದೇ ಆದ ಸೈನ್ಯಗಳನ್ನು ಹೊಂದಿದ್ದು ನಾನಾ ರೀತಿಯ ಜಹಗೀರುದಾರರ ಸೈನ್ಯ ಸಹಾಯವನ್ನು ರಕ್ಷಿಸುವುದು ಮುಖ್ಯವಾಗಿತ್ತು. ವಿಷ್ಣುವರ್ಧನನ ಕಾಲದಲ್ಲಿ ಗಂಗರಾಜ, ಬೊಪ್ಪ, ಪುಣಸ, ಮಯ್ಯ, ಬಿಟ್ಟಿಯಣ್ಣ, ಮರಿಯಾನೆ, ಭರತ, ಒಂದನೇ ನರಸಿಂಹನ ಕಾಲದಲ್ಲಿ ಎರೆಯಂಗಮಯ್ಯ, ಪರಿಸಯ್ಯಕ, ಸಂತಿಯಣ್ಣ, ಹಿರಿಯ ಬೊಮ್ಮಯ್ಯ, ಇಮ್ಮಡಿ ಬಲ್ಲಾಳನ ಕಾಲದಲ್ಲಿ ಜೀವ ರಕ್ಷಕ ಸೈನ್ಯ ದಳದವರು ಮತ್ತು ಆಭರಣ ಕೋಶಾಧ್ಯಕ್ಷರಾಗಿದ್ದ ಅಮಿತಯ್ಯ, ಭರತಮಯ್ಯ, ಅಪಣ್ಣ, ಬಾಹುಬಲಿಯಂತಹ ಪ್ರಸಿದ್ಧ ರಾಜ ಪ್ರತಿನಿಧಿಗಳನ್ನು ಹೊಂದಿದ್ದರು.

3.2 ದಂಡನಾಯಕ/ಮಂತ್ರಿಗಳ ಅರ್ಹತೆಗಳು

'ಮಾನಸೋಲ್ಲಾಸ' ಗ್ರಂಥವು ಈ ಉನ್ನತ ಹುದ್ದೆಗಾಗಿ ಈ ಕೆಳಕಂಡ ಅರ್ಹತೆಗಳನ್ನು ಹೇಳಿದೆ.

1) ವ್ಯಕ್ತಿಯು ರಾಷ್ಟ್ರದ ಸ್ಥಳೀಯನಾಗಿರಬೇಕು.
2) ಉನ್ನತ ಕುಟುಂಬದಲ್ಲಿ ಜನಿಸಿರಬೇಕು.
3) ದೂರದೃಷ್ಟಿಯುಳ್ಳವನಾಗಿರಬೇಕು.
4) ಬುದ್ಧಿವಂತಿಕೆ ಹೊಂದಿರಬೇಕು.
5) ಉತ್ತಮ ಜ್ಞಾಪಕ ಶಕ್ತಿವಂತನಾಗಿರಬೇಕು.
6) ಹೆಚ್ಚು ದಕ್ಷನಾಗಿರಬೇಕು.
7) ವಾಕ್ಚುತರನಾಗಿರಬೇಕು.
8) ಧೈರ್ಯವಂತನಾಗಿರಬೇಕು.
9) ವಿಶೇಷ ಜ್ಞಾನವುಳ್ಳವನಾಗಿರಬೇಕು.
10) ಉತ್ಸಾಹ ಮತ್ತು ಗೌರವವನ್ನು ಹೊಂದಿದವನಾಗಿರಬೇಕು.
11) ಸಹನೆ, ತಾಳ್ಮೆಯ ಯೋಗ್ಯತೆ ಇರಬೇಕು.
12) ಕಾಯ, ವಾಚ, ಮನಸ, ಶುದ್ಧತೆಯುಳ್ಳವನಾಗಿರಬೇಕು.
13) ರಾಜನಿಗೆ ದೃಢವಾಗಿ ಸಮರ್ಪಿಸುವ ಮನೋಭಾವನೆ ಇರಬೇಕು.
14) ದೈವದತ್ತವಾದ ಚಾರಿತ್ರ್ಯ, ಶಕ್ತಿ, ಆರೋಗ್ಯ ಮತ್ತು ಉನ್ನತ ಸ್ಫೂರ್ತಿಗಳು ಇರಬೇಕು.
15) ಅಹಂಕಾರ ಮತ್ತು ಚಂಚಲತೆಯಿಂದ ಮುಕ್ತನಾಗಿರಬೇಕು.
16) ಪ್ರೀತಿಯಿಂದ ಮತ್ತು ರಾಜ ಉಲ್ಲಂಘಿಸಿದಾಗ ಹಗೆತನವನ್ನು ಅವಲಂಬಿಸಿದವನಾಗಿರಬೇಕು.

3.3 ದಂಡನಾಯಕರು: ಅಧಿಕಾರಷಾಹಿ ಪ್ರತಿಷ್ಠರು

ವಿವಿಧ ಶ್ರೇಣಿಗಳ ಮತ್ತು ಸ್ಥಾನಮಾನದ ದಂಡನಾಯಕರು ಮಾಂಡಲಿಕರು ಅಥವಾ ಸಾಮಂತರು ವಿವಿಧ ವಿಸ್ತೀರ್ಣಗಳ ಸಂಸ್ಥಾನವನ್ನು ಹೊಂದಿದ್ದರು. ಅಧಿಕಾರಷಾಹಿ ಪ್ರತಿಷ್ಠತೆಯನ್ನು ಒಳಗೊಂಡಿದ್ದರು. ದಂಡನಾಯಕರು ನಾಡನ್ನು ಆಳುವ ಮುಖ್ಯಸ್ಥರು ಶಾಸನಗಳು ಅವರನ್ನು ನಿಯಮಿತವಾಗಿ ಭೌಗೋಳಿಕ ಆಕಾರವನ್ನು ನಿಶ್ಚಯಿಸಿದ ನಾಡಾಳ್ವರು ಅಥವಾ ನಾಡುಗಳ ಪ್ರಾಂತ್ಯಾಧಿಕಾರಿಗಳು ಎಂದು ವಿವರಿಸಿದೆ. ಅಧಿಕಾರಷಾಹಿಯ ಕ್ರಮಗತವಾಗಿ ಇರುವ ವ್ಯವಸ್ಥೆಯಲ್ಲಿ ಅವರ ಶ್ರೇಣಿಗಳು ಮತ್ತು ಸ್ಥಾನಮಾನಗಳನ್ನು ಎರಡು ವಿಷಯಗಳ ಮೇಲೆ ನಿಶ್ಚಯಿಸಬಹುದು.

1) ದಂಡನಾಯಕರ ಕಛೇರಿಗೆ ಬಿರುದುಗಳನ್ನು ಸೇರಿಸಿದೆ.
2) ಅವರು ಬಹುನಾಡುಗಳನ್ನು ಹೊಂದಿದ್ದರು. ಶಾಸನಗಳಲ್ಲಿ ಮಹಾಪ್ರಧಾನ, ಸರ್ವಾಧಿಕಾರಿ, ಮಣ್ಣಿನ ಮಾಂಡಲಿಕ ಮಹಾಪಾಶಯತ ಮತ್ತು ಸಂಧಿವಿಗ್ರಹ

ಶಬ್ಧಗಳಿವೆ. ಆಕಾರ್ಯಾರ್ತ್ಮಕ ಬಿರುದುಗಳು ದಂಡನಾಯಕರ ಬಲವನ್ನು ತೋರಿಸುತ್ತದೆ. ಹೇಗಾದರೂ ಅವರು ಅಧಿಕಾರ ಶ್ರೇಣಿಗೆ ಮತ್ತು ಉನ್ನತ ಶ್ರೇಣಿಯ ರಾಜನಿಷ್ಠೆಯನ್ನು ತೋರಿಸಲು ಹತ್ತಿರವಾದವರು.

ಒಂದು ಸ್ವಾರಸ್ಯಕರವಾದ ಅಶ್ವದಳದ ದೃಶ್ಯವನ್ನು ಹೊಂದಿದೆ. ಅರಳಗುಪ್ಪೆಯಲ್ಲಿನ ಚನ್ನಕೇಶವ ದೇವಾಲಯದಲ್ಲಿ ಅಶ್ವಾರೋಹಿಗಳು ಮೊಣಕಾಲಿನವರೆಗೂ ಚರ್ಮದ ಕವಚವನ್ನೂ ಚಲ್ಲಣವನ್ನೂ ಧರಿಸಿದ್ದಾರೆ. ಅವರ ಕೈಗಳಲ್ಲಿ ಖಡ್ಗಗಳಿವೆ. ಅಶ್ವದಳವು ಅನಿರೀಕ್ಷಿತ ಆಕ್ರಮಣಗಳನ್ನು ಮಾಡುವುದರಲ್ಲಿ ಬಹಳ ಪರಿಣಾಮಕಾರಿಯಾಗಿತ್ತಲ್ಲದೆ ಚಲನೆಯಲ್ಲಿಯೂ ಶೀಘ್ರಗತಿ ಇತ್ತು. ಆ ಕಾಲದಲ್ಲಿ ಕುದುರೆ ಸವಾರಿಯಲ್ಲಿ ತರಬೇತಿ ಕೊಡಲು ಸಹಾನಿ ಎಂಬ ಅಧಿಕಾರಿ ಇದ್ದನು ಮತ್ತು ಅಶ್ವದಳವು ಅವನ ಅಧೀನದಲ್ಲಿತ್ತು. ಮಾದಿಹಳ್ಳಿಯಲ್ಲಿ ದೊರೆತಿರುವ ಒಂದು ವೀರಗಲ್ಲು, ಚಿಕ್ಕಕೇತೆಯ ದಂಡನಾಯಕನನ್ನು ಆಶ್ರಯಿಸಿದ. ಹೊಸಗುಂಡದ ಬೊಮ್ಮೆಯ ಸಹಾನಿಯ ಸಾಹಸ ಕೃತ್ಯಗಳನ್ನು ದಾಖಲಿಸಿದೆ.

ಗಜದಳವೂ ಹೊಯ್ಸಳ ಸೈನ್ಯದ ಒಂದು ಮುಖ್ಯ ವಿಭಾಗವಾಗಿತ್ತು. ಆನೆಗಳಿಗೆ ಒಳ್ಳೆಯ ತರಬೇತಿಯನ್ನು ಕೊಡಲಾಗುತ್ತಿತ್ತು. ಆದಾಗ್ಯೂ ಯುದ್ಧದಲ್ಲಿ ಅವು ಗೊಂದಲವನ್ನುಂಟು ಮಾಡುತ್ತಿದ್ದವೆನ್ನಲಾಗಿದೆ ಮತ್ತು ಸೇವುಣ ರಾಜನಾದ ಮಹದೇವನು ತನ್ನ ಆನೆಗಳಿಂದಲೇ ಗೊಂದಲವುಂಟಾದುದರಿಂದ ಯುದ್ಧ ಭೂಮಿಯಿಂದ ಪಲಾಯನ ಮಾಡಬೇಕಾಗಿ ಬಂತು. ಯುದ್ಧದಲ್ಲಿ ಆನೆಗಳ ಪ್ರಾಮುಖ್ಯತೆಯನ್ನು ಕಂಬಡಹಳ್ಳಿ ಹಳೇಬೀಡು, ನುಗ್ಗಿಹಳ್ಳಿ, ನಾಗಲಾಪುರ, ಸೋಮಲಾಪುರ, ಬೇಲೂರು, ಹಾರ್ನಹಳ್ಳಿ ಮೊದಲಾದ ಕಡೆ ದೇವಾಲಯಗಳ ಶಿಲ್ಪಕಲೆಗಳಲ್ಲಿ ಕೆತ್ತಲಾಗಿರುವ ಆಭರಣಗಳಿಂದ ಅಲಂಕೃತ ಆನೆಗಳನ್ನು ನೋಡಿ, ತೀರ್ಮಾನಿಸಬಹುದಾಗಿದೆ. ಆನೆಗಳನ್ನು ವಿಸ್ತಾರವಾಗಿ ಸಜ್ಜುಗೊಳಿಸಲಾಗಿದೆ. ಪ್ರಾಣಿಯ ತಲೆಯು ಮುತ್ತಿನ ಸರದಿಂದ ಅಲಂಕೃತವಾಗಿದೆ. ಅದರ ಅಕ್ಕಪಕ್ಕಗಳಲ್ಲಿ ಆಭರಣಗಳಿವೆ. ಪ್ರತಿ ಆನೆಯೂ ಇಬ್ಬರು ಯೋಧರನ್ನು ಹೊರುತ್ತಿತ್ತು. ಮುಂದಿನ ಯೋಧನನ್ನು ಅಂಕುಶಧಾರಿ ಎಂದು ಕರೆಯಲಾಗುತ್ತಿತ್ತು. ಏಕೆಂದರೆ ಅವನ ಕೈಯಲ್ಲಿ ಯಾವಾಗಲೂ ಪ್ರಾಣಿಗಳನ್ನು ಮುನ್ನಡೆಸಲು ಮತ್ತು ನಿರ್ದೇಶಿಸಲು ಅಂಕುಶವಿರುತ್ತಿತ್ತು. ಅವನ ಹಿಂದೆ ಶತ್ರುಗಳ ಕಡೆ ಭರ್ಜಿಯನ್ನು ಪ್ರಯೋಗಿಸುತ್ತ ಯೋಧನೋರ್ವರು ಕುಳಿತಿರುತ್ತಿದ್ದನು. ಅವರ ಉಡುಗೆಯ ಉದ್ದನೆಯ ತೋಳುಗಳುಳ್ಳ ಅಂಗಿಯೊಂದಿರುತ್ತಿತ್ತು. ಅವರ ವಸ್ತುಗಳು ದಪ್ಪನೆಯ ಪಂಚೆಯೊಂದರಿಂದ ಮುಚ್ಚಲ್ಪಟ್ಟು ಅವರ ಮೊಣಕಾಲುಗಳವರೆಗೆ ಮುಚ್ಚಿರುತ್ತಿತ್ತು. ಅವರು ಉದ್ದನೆಯ ದುಂಡನೆಯ, ಕಿವಿಯವರೆವಿಗೆ ಮುಚ್ಚುತ್ತಿದ್ದ ಶಿರಸ್ತ್ರಾಣವನ್ನು ಧರಿಸುತ್ತಿದ್ದರು. ಆನೆಗಳು ವಿವಿಧ ಭಾವಭಂಗಿ ಗಳಲ್ಲಿ ಚಿತ್ರಿಸಲ್ಪಟ್ಟಿವೆ. ಒಂದನ್ನೊಂದು ಹೋರಾಡುತ್ತಾ ಬಿಲ್ಲು ಬಾಣಗಳೊಂದಿಗೆ ಅಥವಾ ಭರ್ಜಿಗಳೊಂದಿಗೆ ಇರುವ ಮನುಷ್ಯರೊಂದಿಗೆ ಹೋರಾಡುತ್ತಾ ಶತ್ರುಗಳನ್ನು ತುಳಿಯುತ್ತಾ ಅಥವಾ ಕೊಲ್ಲುತ್ತಾ ಸವಾರರು ಹೋರಾಡಲು ಮುಂದೆ ಸಾಗುತ್ತ ಹೀಗೆ ಅನೇಕ ರೀತಿಗಳಲ್ಲಿ

ಚಿತ್ರಿತವಾಗಿವೆ. ಗಜಗಳ ದೊಡ್ಡ ಗಾತ್ರ ಮತ್ತು ಬಾಣಗಳಿಗೆ ಅವುಗಳ ಜಗ್ಗದಿರುವಿಕೆ ಯೋಧರಿಗೆ ಶತ್ರುಗಳ ಕಡೆ ಮುನ್ನುಗ್ಗಲು ಸಹಕಾರಿಯಾಗಿದ್ದವು. ಅಲ್ಲದೆ ಬಿಲ್ಲುಗಾರರಿಗೆ ತೆರೆದ ಬಯಲುಗಳಿಗೆ ದೂರದಿಂದ ಶತ್ರುಗಳನ್ನು ಆಕ್ರಮಣ ಮಾಡಲು ಅವು ಸುರಕ್ಷಿತವಾದ ನೆರಳಿನಂತೆ ತೋರುತ್ತಿದ್ದವು.

ಹೊಯ್ಸಳ ಯುದ್ಧ ತಂತ್ರದಲ್ಲಿ ರಥಗಳ ಬಳಕೆಯನ್ನು ಸೋಮನಾಥಪುರದ ಕೇಶವ ದೇವಾಲಯದಲ್ಲಿ ಹಳೇಬೀಡುವಿನ ಹೊಯ್ಸಳೇಶ್ವರ ದೇವಾಲಯದಲ್ಲಿ ಬೇಲೂರಿನ ಚನ್ನಕೇಶವ ದೇವಾಲಯದಲ್ಲಿ ಜಾವಗಲ್‌ನಲ್ಲಿರುವ ಲಕ್ಷ್ಮೀನರಸಿಂಹ ದೇವಾಲಯದಲ್ಲಿ ಕೆತ್ತಲ್ಪಟ್ಟಿರುವ ಅನೇಕ ಶಿಲ್ಪಕಲೆಗಳ ಮೂಲಕ ಗುರುತಿಸಬಹುದಾಗಿದೆ ಅಥವಾ ದೂರದಲ್ಲಿ ಶತ್ರುವನ್ನು ಆಕ್ರಮಣ ಮಾಡಲು ಬಹಳ ಉಪಯುಕ್ತವಾಗಿದ್ದವು.

ಅಶ್ವದಳವು ಸೈನ್ಯದ ಒಂದು ಮುಖ್ಯ ಭಾಗವಾಗಿತ್ತು. ಕುದುರೆಗಳು ಅರೇಬಿಯಾ ಮತ್ತು ಪರ್ಷಿಯಾ ದೇಶಗಳಿಂದ ವರ್ತಕರಿಂದ ಆಮದಾಗುತ್ತಿದ್ದವು. ದೇವಾಲಯಗಳ ಗೋಡೆಗಳ ಮೇಲಿನ ಶಿಲ್ಪಕಲೆಯು ಅಶ್ವಗಳ ಮತ್ತು ಕುದುರೆ ಸವಾರರ ಕವಚಗಳನ್ನು ತೋರುತ್ತದೆ. ಕುದುರೆ ಸವಾರರಲ್ಲಿ ಕೆಲವರು ಅವರ ಮೊಣಕಾಲುಗಳ ಕೆಳಗಿನವರೆಗೂ ಮುಟ್ಟುವಂತಿದ್ದ ಯುದ್ಧಕವಚದ ದೊಡ್ಡ ಹೊದಿಕೆಯೊಂದನ್ನು ಧರಿಸಿದ್ದರು. ಕುದುರೆಗಳ ತಲೆಗಳೂ ಸಹ ಚಪ್ಪಟೆಯಾದ ಶಿರಸ್ತ್ರಾಣವೊಂದರಿಂದ ಮುಚ್ಚಲ್ಪಟ್ಟಿವೆ. ಅಶ್ವದಳದ ಹೆಚ್ಚು ಸಂಖ್ಯೆಯ ದೃಶ್ಯಗಳು ಯುದ್ಧ ಪೋಷಾಕಿನಲ್ಲಿ ಬಸರಾಳ್, ಸೋಮನಾಥಪುರ, ನುಗ್ಗಿಹಳ್ಳಿ, ಬೇಲೂರು, ಕಂಬಡಹಳ್ಳಿ, ನಾಗಲಾಪುರ, ಹಳೇಬೀಡು, ಅರಳಗುಪ್ಪೆ ಮೊದಲಾದ ಕಡೆಗಳಲ್ಲಿರುವ ಹೊಯ್ಸಳ ದೇವಾಲಯಗಳಲ್ಲಿ ಶಿಲ್ಪಕಲೆಯಲ್ಲಿ ಬಿಂಬಿತವಾಗಿವೆ. ಸಾಮಾನ್ಯವಾಗಿ ಅಶ್ವಾರೋಹಿಗಳು ಉದ್ದನೆಯ ಭರ್ಜಿಗಳನ್ನು ಹಿಡಿದಿರುತ್ತಿದ್ದರು. ಅವರು ತಮ್ಮ ಸೊಂಟದ ಪಟ್ಟಿಯಲ್ಲಿ ಈಟಿಗಳನ್ನೂ ಅಥವಾ ಚಿಕ್ಕ ಖಡ್ಗಗಳನ್ನು ಸಹ ಹೊತ್ತುಕೊಂಡಿರುತ್ತಿದ್ದರು. ಅವರಲ್ಲಿ ಕೆಲವರು ರಾಜಕುಮಾರರು, ಹೇಗೆಂದರೆ ಛತ್ರಿಗಳನ್ನು ಅವರ ಮೇಲೆ ಕಾಲಾಳುಗಳು ಹಿಡಿದಿದ್ದಾರೆ. ಹಳೇಬೀಡುವಿನಲ್ಲಿ ಕೇದಾರೇಶ್ವರ ದೇವಸ್ಥಾನದಲ್ಲಿ ಕೆತ್ತಲ್ಪಟ್ಟಿರುವ ಕುದುರೆ ಸವಾರರ ಸಾಲು ರಾಜನು ನಿರಂಕುಶ ಪ್ರಭುವಾಗಿರಲಿಲ್ಲ. ಆದರೂ ಅವನ ಅಧಿಕಾರವು ಬಹು ಉಪಯುಕ್ತ ಮತ್ತು ಪ್ರಮುಖ ಪಾತ್ರವನ್ನು ವಹಿಸಿತ್ತು.

ಹೀಗೆ ರಾಜ ನರಸಿಂಹನು ಒಳ್ಳೆಯ ಆಡಳಿತವನ್ನೇ ನಡೆಸಿದನು ಮತ್ತು ತನ್ನ ರಾಜ್ಯದ ಮತ್ತು ಜನರ ಸೇವೆಗಾಗಿ ತನ್ನಿಂದ ಸಾಧ್ಯವಾದಷ್ಟೂ ಶ್ರಮಿಸಿದನು. ಕೆಲವೊಂದು ಭೂಮಿಯನ್ನು ಮೆಲ್ಲಂಗೆಯ ಮಹಾಜನಗಳಿಂದ ಮತ್ತು ದೇವಪ್ಪನಿಂದ ಕೊಂಡುಕೊಂಡು ಅದನ್ನೇ ಒಂದು ಪ್ರಾಥಮಿಕ ಶಾಲೆಯನ್ನು ಕೊಟ್ಟನು. ಉಪಾಧ್ಯಾಯನ ಜೀವನ ನಿರ್ವಹಣೆಗಾಗಿ ಸಹ ವಾರ್ಷಿಕ ಉತ್ಪತ್ತಿಗಾಗಿ ವ್ಯವಸ್ಥೆ ಮಾಡಲಾಯಿತು. ಒಂದು ವೇಳೆ ಅಧಿಕಾರಿಗಳು

ಕುದುರೆಯ ಸೇಸೆ, ಆನೆಯ ಸೇಸೆ ಮತ್ತು ಕಟಕ ಸೇಸೆ ಮೊದಲಾದ ತೆರಿಗೆಗಳನ್ನು ಕೇಳಿದಾಗ ಮಹಾಜನರು ಮತ್ತು ಆಡೆಪ್ಪ ಕೊಡಲೇಬೇಕಾಗುತ್ತಿತ್ತು ಮತ್ತು ಅದರ ಲೆಕ್ಕ ಚುಕ್ತ ಮಾಡಬೇಕಿತ್ತು. ಈ ದಾನವನ್ನು ಎಲ್ಲಾ ತೆರಿಗೆಗಳಿಂದ ಮುಕ್ತಗೊಳಿಸಬೇಕಿತ್ತು. ಕೋಟೆಗಳ ನಿರ್ವಹಣೆಗಾಗಿ ವಸೂಲಾಗುತ್ತಿದ್ದ ತೆರಿಗೆಯನ್ನು ಪುರದಹಡಿಕೆ ಎಂದು ಕರೆಯಲಾಗುತ್ತಿತ್ತು. ಸೈನ್ಯದ ನಿರ್ವಹಣೆಗಾಗಿ ವಿಧಿಸಲಾಗುತ್ತಿದ್ದ ತೆರಿಗೆಯನ್ನು ದಂಡಿನ ಅಭಯದಾಗೆ ಎಂದು ಕರೆಯಲಾಗುತ್ತಿತ್ತು.

3.4 ಖಜಾನೆ

ಹಣಕಾಸಿನ ವಿಷಯಗಳು ಮುಖ್ಯ ಲೆಕ್ಕಿಗರ ನೇರ ನಿಯಂತ್ರಣಕ್ಕೊಳಪಟ್ಟಿದ್ದವು. ಶ್ರೀಕರ್ಣ ಸರ್ವಾಧಿಕಾರಿ ಲೆಕ್ಕಪತ್ರದ ಇಲಾಖೆಯ ಮುಖ್ಯಸ್ಥನಾಗಿದ್ದನು. ಇವನ ಕೈಕೆಳಗೆ ಪ್ರತಿ ಜಿಲ್ಲೆಯಲ್ಲಿಯೂ ಶ್ರೀಕರ್ಣ ಹೆಗ್ಗಡೆ ಇರುತ್ತಿದ್ದನು ಮತ್ತು ಅವನ ಕೈಕೆಳಗೆ ಗಣಕರು ಇರುತ್ತಿದ್ದರು. ರಾಜ್ಯದಲ್ಲಿ ಎಲ್ಲಾ ಬೊಕ್ಕಸಗಳ ಮೇಲ್ವಿಚಾರಕನು ಹಿರಿಯ ಭಂಡಾರಿಯಾಗಿದ್ದನು. ರಾಜಧಾನಿಯಲ್ಲದೆ ಇನ್ನೂ ಅನೇಕ ಖಜಾನೆಯ ಕೇಂದ್ರಗಳಿದ್ದವು.

ಒಟ್ಟಿನಲ್ಲಿ ಮೂರನೇ ನರಸಿಂಹನ ಕಾಲದಲ್ಲಿ ಹೊಯ್ಸಳ ರಾಜ್ಯದಲ್ಲಿ ದಂಡನಾಯಕರು ಆಡಳಿತದಲ್ಲಿ ಬಹುಮುಖ್ಯ ಪಾತ್ರ ವಹಿಸಿದ್ದರು. ಆಗಾಗ್ಗೆ ಯುದ್ಧಗಳು ಮತ್ತು ವಿಜಯ ಗಳಿದ್ದರೂ ರಾಜ ಮೂರನೇ ನರಸಿಂಹನು ದಕ್ಷತೆಯಿಂದ ಆಳಿದನು.

3.5 ಪೆರುಮಾಳ ದಂಡನಾಯಕ

ಹೊಯ್ಸಳರಸ ಮೂರನೇ ನರಸಿಂಹನ ಕಾಲದಲ್ಲಿ ಪೆರುಮಾಳ ದಂಡನಾಯಕನು ಒಬ್ಬ ಪ್ರಮುಖ ಮಂತ್ರಿಯಾಗಿದ್ದನು. ರಾಜನು ಬಹುಸಂಖ್ಯೆ ಮಂತ್ರಿಗಳಿಂದ ಮತ್ತು ಅನೇಕ ಸ್ತರದ ಅಧಿಕಾರಿಗಳಿಂದ ಸಹಾಯ ಪಡೆಯುತ್ತಿದ್ದನು. ಈ ಮಂತ್ರಿಗಳು ಆಡಳಿತದಲ್ಲಿ ಉನ್ನತ ಸ್ಥಾನವನ್ನು ಪಡೆದಿದ್ದರು ಮತ್ತು ರಾಜನ ವಿಶ್ವಾಸವನ್ನು ಗಳಿಸಿದ್ದರು. ರಾಜನು ಪಂಚಪ್ರಧಾನರು ಅಥವಾ ಐವರು ಮಂತ್ರಿಗಳ ಮಂಡಲದಿಂದ ಆಡಳಿತದಲ್ಲಿ ನೆರವು ಪಡೆಯುತ್ತಿದ್ದನು. ಇವರುಗಳು ಮಹಾಪ್ರಧಾನ ಸರ್ವಾಧಿಕಾರಿ ಸಂಧಿವಿಗ್ರಹಿ ಸೇನಾಧಿಪತಿ ಮತ್ತು ಮಹಾಪಾಸಯಾತ.

ಹೊಯ್ಸಳರ ಕೈಕೆಳಗೆ ಮಹಾಪ್ರಧಾನ ಒಬ್ಬ ಮುಖ್ಯಮಂತ್ರಿಯಾಗಿದ್ದನು ಮತ್ತು ಸಾಮಾನ್ಯವಾಗಿ ಯಾವುದಾದರೊಂದು ಪ್ರಾಂತ್ಯದ ಒಬ್ಬ ರಾಜ್ಯಪಾಲನಾಗಿರುತ್ತಿದ್ದನು. ಅವನಿಗೆ ಅನೇಕ ರಾಜ್ಯ ಮತ್ತು ಸೈನಿಕ ಖಾತೆಗಳಿರುತ್ತಿದ್ದವು. ಅವರು ಪಾಳೆಯಗಾರರ ಕುಟುಂಬಗಳ ನಂಟು ಹೆಚ್ಚಿಗೆ ಇದ್ದುದರಿಂದ ಅವರು ರಾಜನಿಗೂ ಪಾಳೆಯಗಾರರ ರಾಜ್ಯಗಳಿಗೂ ಕೊಂಡಿಯಂತಿದ್ದರು.

ಮೂರನೇ ನರಸಿಂಹನ ಕೈಕೆಳಗೆ ಪೆರುಮಾಳ ದಂಡನಾಯಕನು ಒಬ್ಬ ಪ್ರಮುಖ ಮಂತ್ರಿಯಾಗಿದ್ದನು. ಅವನು ರಾಜಧಾನಿ ತೆರಕಣಾಂಬಿ ಗುಂಡ್ಲುಪೇಟೆ ತಾಲ್ಲೂಕಿನಿಂದ ಪಾಡಿನಲ್‌ಕುನಾಡ್‌ನ್ನು ಆಳುತ್ತಿದ್ದನು. ಇವನ ಹೆಚ್ಚುವರಿ ಧನಸಹಾಯಗಳೆಲ್ಲಾ ಮೈಸೂರು ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕು ಮತ್ತು ಚಿತ್ರದುರ್ಗಕ್ಕೆ ಸೀಮಿತವಾಗಿರುತ್ತಿದ್ದವು. ಅವನು ಈ ಎಲ್ಲ ಸ್ಥಳಗಳ ರಾಜ್ಯಪಾಲನಾಗಿದ್ದನು.

ಪೆರುಮಾಳನ ಆತ್ರೇಯಸಗೋತ್ರದ ಒಬ್ಬ ಶ್ರೀವೈಷ್ಣವ ಬ್ರಾಹ್ಮಣನಾಗಿದ್ದನು. ಇವನ ಬಿರುದುಗಳು 'ಮಹಾಮಂಡಲೇಶ್ವರ ರಾವುತರಾಯ', 'ಜವನಿಕೆ ನಾರಾಯಣ', ಚೋಳರ ಶಿಬಿರದ ಲೂಟಿಗಾರ ರಾಮಕೃಷ್ಣನ ಚರಣಕಮಲಗಳ ಪೂಜಾರಿ ಮಹಾಪ್ರಧಾನ, ಬ್ರಹ್ಮಾಧಿರಾಜ ಪೆರುಮಾಳೆ ದೇವರಸ ಪಾಂಡ್ಯನಾಡಿನಲ್ಲಿ ಕೋಲ್ಯಂಗತ್ತ ವ್ರಿತ್ತಿಯ ಒಡೆಯ ಆಗಿದ್ದವು.

ಪೆರುಮಾಳನು ಶಿಕ್ಷಣದ ಮಹಾಪೋಷಕನಾಗಿದ್ದನು. ಶಿಕ್ಷಣದಲ್ಲಿ ಆತನಿಗಿದ್ದ ಉತ್ಸಾಹದಿಂದ ಮಹಾವಿದ್ಯಾಲಯವನ್ನು ಪ್ರಾರಂಭಿಸುವ ಉದ್ದೇಶದಿಂದ ಮೈಲಂಗೆ ಎಂಬಲ್ಲಿ ಗೊತ್ತಾದ ಜಮೀನನ್ನು ಖರೀದಿಸಿದನು. ಇವನ ಸಾರ್ವಜನಿಕ ಸೇವೆಯಿಂದ ಪ್ರಭಾವಿತನಾಗಿ ರಾಜ ನರಸಿಂಹನು ಅವನಿಗಾಗಿ ಬೇಲೂರು ಗ್ರಾಮವನ್ನು ದಾನವಾಗಿ ನೀಡಿದನು. ಪೆರುಮಾಳನು ಅಗ್ರಹಾರವನರ್ನು ಉದ್ಭವ ನರಸಿಂಹಪುರ ಎಂದು ಹೆಸರಿಸಿ ಅದನ್ನು ವೇದ ವೇದಾಂಗಗಳಲ್ಲಿ ಪಾರಂಗತರಾದ ಬೇರೆ ಬೇರೆ ಗೋತ್ರಗಳ ಬ್ರಾಹ್ಮಣರಿಗೆ ದಾನ ಮಾಡಿದನು. ಅಲ್ಲದೆ ತನ್ನ ಮನೆಯಲ್ಲಿಯೇ ಹದಿನೈದು ಜನ ಬ್ರಾಹ್ಮಣರಿಗೆ ಊಟ ಹಾಕುವ ಸಲುವಾಗಿ ಒಂದು ಛತ್ರವನ್ನೇ ಸ್ಥಾಪಿಸಿದನು.

ಜನೋಪಕಾರಿಯಾಗಿ ಪೆರುಮಾಳ ದಂಡನಾಯಕನ ಸಾಧನೆಗಳು ಉನ್ನತವಾದವು. ಅವನಿಗೆ ತನ್ನ ಜನರ ಮತ್ತು ತನ್ನ ದೇಶದ ಕ್ಷೇಮಾಭ್ಯುದಯದ ಬಗ್ಗೆ ಬಹಳ ಆಸಕ್ತಿ ಇತ್ತು. ಅನೇಕ ಕೆರೆಗಳು ಅವನಿಂದ ಕಟ್ಟಲ್ಪಟ್ಟವು. ಕ್ರಿ.ಶ.1270ರಲ್ಲಿ[2] ನಾಗಮಂಗಲ ತಾಲ್ಲೂಕಿನ ಬೇಲೂರಿನಲ್ಲಿ ಅಲ್ಲಾಲಸಮುದ್ರ ಎಂಬ ಕೆರೆಯನ್ನು ಕಟ್ಟಿಸಿದ ಕ್ರಿ.ಶ.1287ರಲ್ಲಿ[3] ಚಿತ್ರದುರ್ಗ ಜಿಲ್ಲೆಯಲ್ಲಿ ಕುರುಬ ಕಾಲ್ಯೆ ಎಂಬ ಕೆರೆಯನ್ನು ಪುನಃ ಕಟ್ಟಿಸಿ ಅದನ್ನು ಪೆರುಮಾಳ ಸಮುದ್ರ ಎಂದು ಹೆಸರಿಸಿದನು.

ಅವನು ಒಬ್ಬ ವಿಶಿಷ್ಠ ಸೇನಾಧಿಕಾರಿಯಾಗಿದ್ದನು. ಕ್ರಿ.ಶ.1271ರಲ್ಲಿ ನಡೆದ ಸೇವುಣರು ಮತ್ತು ಹೊಯ್ಸಳರ ನಡುವೆ ನಡೆದ ಕದನದಲ್ಲಿ ಪ್ರಮುಖ ಪಾತ್ರ ವಹಿಸಿದ್ದನು. ಕ್ರಿ.ಶ.1271ರಲ್ಲಿ[4] ಸೇವುಣ ಸೈನ್ಯದ ದಂಡಾಧಿಪತಿಯಾದ ರತ್ನಪಾಲನನ್ನು ಪೆರುಮಾಳೆಯಿಂದ ಬಂಧಿಸಲ್ಪಟ್ಟಿದ್ದುದರಿಂದ "ಜವನಿಕೆ ನಾರಾಯಣ" ಎಂಬ ಬಿರುದನ್ನು ಪಡೆದನು.

ಪೆರುಮಾಳನು ಧಾರ್ಮಿಕ ಉತ್ಸಾಹಕ್ಕೂ ಹೆಸರುವಾಸಿಯಾಗಿದ್ದನು. ಪೆರುಮಾಳೆ ದಂಡನಾಯಕನು ಕೆತ್ತಿಸಿರುವ ಶಿಲಾಶಾಸನಗಳು ತಿಳಿಸುವಂತೆ ಇವನ ಗುರು ರಾಮಕೃಷ್ಣಪ್ರಭು

ಆಗಿದ್ದರು. ಇವನು ವೈಷ್ಣವ ಭಕ್ತನಾಗಿದ್ದನು ಮತ್ತು ಹೊಳೆನರಸೀಪುರದಲ್ಲಿರುವ ಲಕ್ಷ್ಮೀನರಸಿಂಹ ದೇವಾಲಯಕ್ಕೂ ಮತ್ತು ಕ್ರಿ.ಶ. 1286ರಲ್ಲಿ[5] ಬೆಮ್ಮತ್ತನೂರಿನ ರಂಗನಾಥ ದೇವರಿಗೂ ಧನಸಹಾಯ ಮಾಡಿದನು. ಚೋಳೇಂದ್ರ ಸಿಂಹ ಚತುರ್ವೇದಿ ಮಂಗಳಂನ ದೇವ ಕಪಾಲ್‌ನಿಗೆ ಧನಸಹಾಯ ಮಾಡಿರುವುದು ಇವರ ಅನ್ಯಮತ ಸಹಿಷ್ಣುತೆಗೆ ಸಾಕ್ಷಿಯಾಗಿದೆ. ಇವನು ರಾಜನಿಗೆ ಅತ್ಯಂತ ಪ್ರೀತಿ ಪಾತ್ರನಾಗಿದ್ದನು. ಇವನ ಕಾರ್ಯಗಳಿಂದ ಸುಪ್ರೀತನಾದ ರಾಜ ನರಸಿಂಹನು ಬೆಟ್ಟದಕೋಟೆ, ಬಿಲ್ಲೆ ಬೆಲಗುಂದ ಮತ್ತು ಅದರ ಸುತ್ತಮುತ್ತಲಿನ ಹಳ್ಳಿಗಳೊಡಗೂಡಿ ತಿಪ್ಪೂರನ್ನು ಇವನಿಗೆ ನೀಡಿದನು. ಈ ಗ್ರಾಮಗಳಿಮದ ಬಂದ ಆದಾಯದಿಂದ ದೇವಾಲಯಗಳಿಗೆ ಕಾಣಿಕೆಗಳನ್ನು ವ್ಯವಸ್ಥಿತಗೊಳಿಸಿದನು ಮತ್ತು ದೇವಾಲಯದ ಸೇವಕರ ಜೀವನಕ್ಕಾಗಿ ಸಂಬಳವನ್ನು ನಿಗದಿಗೊಳಿಸಿದನು. ಇವನು ಕಲಾಪೋಷಕನೂ ಆಗಿದ್ದನು ಮತ್ತು ಟಿ.ನರಸೀಪುರ ತಾಲ್ಲೂಕಿನ ಆಗೋಡಿನಲ್ಲಿ ಕೇಶವ ದೇವರಿಗೂ ರಂಗಮಂಟಪವೊಂದನ್ನು ಕಟ್ಟಿಸಿದನು.

ಪೆರುಮಾಳೆ ದಂಡನಾಯಕನು ಸೋಮೇಶ್ವರ, ಮೂರನೇ ನರಸಿಂಹ ಮತ್ತು ಮೂರನೇ ಬಲ್ಲಾಳರ ಕೈಕೆಳಗೆ ಮಂತ್ರಿಯಾಗಿದ್ದನು. ಕೊಕಲ್‌ವಾಡಿ ಗುಂಡ್ಲುಪೇಟೆ, ಪಿರಿಯಾಪಟ್ಟಣ ಶಿಲಾಶಾಸನಗಳಿಂದ ಈ ಕೆಳಕಂಡಂತೆ ಪೆರುಮಾಳೆಯ ಕುಟುಂಬದ ವಂಶಾವಳಿಯನ್ನು ನಾವು ಪಡೆಯಬಹುದಾಗಿದೆ. ಕ್ರಿ.ಶ.1310ರಲ್ಲಿ[6] ಪೆರುಮಳೆಯ ಮಗನಾದ ಮಾಧವ ದಂಡನಾಯಕರು ರಾಜಧಾನಿಯಿಂದ ತೆರಕಣಾಂಬಿಯಲ್ಲಿ ಪಾಡಿನಲ್‌ಕುಂದನ್ನು ಆಳುತ್ತಿದ್ದನು. ಅವನಿಗೆ ಇಬ್ಬರು ಗಂಡು ಮಕ್ಕಳಿದ್ದರು. ಭಾರತೀಯ ದಂಡನಾಯಕ ಕ್ರಿ.ಶ.1320 ರಲ್ಲಿ ಅದೇ ಭಾಗವನ್ನು ಆಳುತ್ತಿದ್ದನು. ಕೇತಯ ಕಣ್ಣನಾಯಕ ಅದೇ ಪ್ರದೇಶವನ್ನು ಕ್ರಿ.ಶ.1327ರಲ್ಲಿ ಮತ್ತು ಕ್ರಿ.ಶ.1332ರಲ್ಲಿ[7] ಆಳುತ್ತಿದ್ದನು.

3.6 ಮಹಾಪ್ರಧಾನ ಸೋಮೆಯ ದಂಡನಾಯಕ

ಮೂರನೆಯ ನರಸಿಂಹನ ಕೈಕೆಳಗೆ ಮಹಾಪ್ರಧಾನ ಸೋಮೆಯ ದಂಡನಾಯಕನು ಮತ್ತೊಬ್ಬ ಪ್ರಮುಖ ಮಂತ್ರಿಯಾಗಿದ್ದನು. ರಾಜ್ಯಾಡಳಿತ ಧರ್ಮ, ಶಿಕ್ಷಣ ಮತ್ತು ವಾಸ್ತುಶಿಲ್ಪ ಈ ಕ್ಷೇತ್ರಗಳಲ್ಲಿ ಇವನ ಕೊಡುಗೆಯು ಶ್ಲಾಘನೀಯವಾದುದು. ಕ್ರಿ.ಶ.1276ನೇ[8] ಇಸವಿಯ ಶಿಲಾಶಾಸನವೊಂದು ಮಹಾಪ್ರಧಾನ ಸೋಮದಂಡೇಶನನ್ನು ಬುದ್ಧಿವಂತರಲ್ಲಿ ಪ್ರಮುಖನೆಂದೂ ಜನರ ಮನಸ್ಸುಗಳನ್ನು ಅರ್ಥಮಾಡಿ ಕೊಳ್ಳುವುದರಲ್ಲಿ ಬುದ್ಧಿವಂತರಲ್ಲಿ ಪ್ರಮುಖನೆಂದೂ ಜನರ ಮನಸ್ಸುಗಳನ್ನು ಅರ್ಥಮಾಡಿಕೊಳ್ಳುವುದರಲ್ಲಿ ಸಮರ್ಥನೆಂದೂ, ಗಂಡ–ಪೆಂಡಾರ, ಮಾಂಡಲೀಕಪುಟವಮ್, ಹೆಮ್ಮೆಯ ಮುಖ್ಯಸ್ಥರಲ್ಲಿ ಅಗ್ರಗಣ್ಯನೆಂದೂ ಬಣ್ಣಿಸಿದೆ. ಸೇನಾಧಿಕಾರಿಗಳಲ್ಲಿ ದೇವೇಂದ್ರ, ಅನಿವರಸ್ವಯಂಪು, ಖಡ್ಗ ತ್ರಿನೇತರ ಮತ್ತು (ಹೆಮ್ಮೆಯ ದಂಡನಾಥ) ದಾವಣಗೆರೆಯ ಶಿಲಾಲೇಖನವೊಂದು ಸೋಮೆಯ ದಂಡನಾಯಕನ ವಂಶಾವಳಿಯನ್ನು ಹೇಗೆ ಪರಿಚಯಿಸುತ್ತದೆ.

ಅವನು ಹುಟ್ಟಿನಲ್ಲಿ ಶೂದ್ರನಾಗಿದ್ದನು. ಇವನ ಗುರು ವಿದ್ವಾಂಸರಾದ ಗಂಗಾಧರಯ್ಯನವರು ಇವನ ತಂದೆ ತಾಯಿಗಳು ಪರಗ್ಗಡೆ ನಾಯಕ ಮತ್ತು ರುಕ್ಮಾದೇವಿ ಇವನ ಅಜ್ಜ ಮೈಲಿಯ ನಾಯಕ ಚಾಲುಕ್ಯರಸ ಜಗದೇಕಮಲ್ಲನ ಬಳಿ ಮಂತ್ರಿಯಾಗಿದ್ದನು.

ಮಂತ್ರಿಯಾಗಿ ಸೋಮೆಯ ದಂಡನಾಯಕನು ಜನರ ಕ್ಷೇಮಾಭ್ಯುದಯವನ್ನು ಸಾಧಿಸುವುದರಲ್ಲಿ ಕ್ರಿಯಾತ್ಮಕ ಪಾತ್ರ ವಹಿಸಿದ್ದನು. ಶಿಕ್ಷಣದ ಕ್ಷೇತ್ರದಲ್ಲಿ ಮಹತ್ತರವಾದ ಪಾತ್ರ ವಹಿಸಿದ್ದನು. ಕ್ರಿ.ಶ.1258ರಲ್ಲಿ[9] ಇವನಿಂದ ಕಟ್ಟಲ್ಪಟ್ಟ ಸೋಮನಾಥಪುರ ಅಗ್ರಹಾರವು ಆ ಕಾಲದ ಅತ್ಯಂತ ಪ್ರಸಿದ್ಧ ಶೈಕ್ಷಣಿಕ ಕೇಂದ್ರವಾಗಿತ್ತು. ದಾಖಲೆಗಳು ಈ ಅಗ್ರಹಾರದ ಹಿರಿಮೆಯನ್ನು ಕಲಿಕೆಯ ಗಣಿ ಎಂದು ಎಷ್ಟು ಹೊಗಳುತ್ತವೆ. ಎಂದರೆ ಆ ಅಗ್ರಹಾರದಲ್ಲಿ ಗಿಳಿಗಳೂ ಸಹ ವೇದಗಳನ್ನೂ ಮತ್ತು ಮಂತ್ರಗಳನ್ನು ಪುನರುಚ್ಚರಿಸುತ್ತಿದ್ದವು ಎಂದು ಕೊಂಡಾಡಿವೆ. ಸೋಮನಾಥಪುರ ಅಗ್ರಹಾರವು ಇವನ ಹೆಸರಿನಲ್ಲಿಯೇ ವಿದ್ಯಾನಿಧಿ ಪ್ರಸನ್ನ ಸೋಮನಾಥಪುರ ಎಂದು ಕರೆಯಲ್ಪಡುತ್ತಿದ್ದುದು ಇವನ ಮಹಾ ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತದೆ. ಮೂರನೇ ನರಸಿಂಹನು ಈ ಅಗ್ರಹಾರದ ಯೋಗಕ್ಷೇಮದಲ್ಲಿ ಅಷ್ಟೇ ಆಸಕ್ತಿಯುಳ್ಳವನಾಗಿದ್ದು, ಈ ಅಗ್ರಹಾರದ ವೈಷ್ಣವ ಮತ್ತು ಶೈವ ದೇವಾಲಯಗಳಿಗೆ ಮತ್ತು ದೇವಸ್ಥಾನದ ಸೇವೆಯಲ್ಲಿ ತೊಡಗಿಸಿಕೊಂಡ ವಿದ್ವಾಂಸರ ಮತ್ತು ಬೋಧಕರ ಜೀವನ ನಿರ್ವಹಣೆಗೂ ಉದಾರವಾಗಿ ಧನಸಹಾಯ ಮಾಡುತ್ತಿದ್ದನು. ಕ್ರಿ.ಶ.1258ರಲ್ಲಿ[10] ಸೋಮೆಯದಂಡನಾಯಕನು ತುರುವೇಕೆರೆಯನ್ನು ಒಂದು ಅಗ್ರಹಾರವನ್ನಾಗಿ ಮಾಡಿ ಅದನ್ನು ವಿಜಯ ನರಸಿಂಹಪುರ ಎಂದು ಮರು ನಾಮಕರಣ ಮಾಡಿದನು. ನಂತರ ಹಳ್ಳಿಯಲ್ಲಿ ಕೇಶವ ಮತ್ತು ಸಂಕರೇಶ್ವರ ದೇವಾಲಯಗಳನ್ನು ಕಟ್ಟಿಸಿ ಆ ದೇವಾಲಯಗಳ ಅನುಕೂಲಕ್ಕಾಗಿ ಅದನ್ನು ಅನೇಕರಿಗೆ ದಾನ ಮಾಡಿದನು.

ರಾಜ್ಯದ ಆಡಳಿತದಲ್ಲಿ ಸೋಮೆಯ ದಂಡನಾಯಕನು ಮೂರನೇ ನರಸಿಂಹ ಮತ್ತು ಮೂರನೇ ಬಲ್ಲಾಳರಿಗೆ ಸಂಬಂಧಪಟ್ಟವನಾಗಿದ್ದನು. ಅವನ ಸೈನಿಕ ಸಾಧನೆಗಳಲ್ಲಿ ಹೆಚ್ಚಿದ ಮಾಹಿತಿ ಲಭ್ಯವಿಲ್ಲವಾದರೂ, ಅವನು ವಾಸ್ತವವಾಗಿ ಅನೇಕ ಕದನಗಳಲ್ಲಿ ಭಾಗವಹಿಸಿರುವ ನಿದರ್ಶನಗಳಿವೆ. ಮೂರನೇ ಬಲ್ಲಾಳನ ಕೈಕೆಳಗೆ ಇವನು ಸೇನಾಧಿಪತಿಯಾಗಿದ್ದು, ಕ್ರಿ.ಶ.1301ರಲ್ಲಿ[11] ಸೆವುಣರ ವಿರುದ್ಧ ಧೀರತನದಿಂದ ಹೋರಾಡಿದನು.

ಸೋಮೆಯ ದಂಡನಾಯಕನಿಗೆ ಧರ್ಮದಲ್ಲಿ ಬಹಳ ಆಸಕ್ತಿ ಇತ್ತು. ಕ್ರಿ.ಶ.1268ರಲ್ಲಿ[12] ಅವನು ಕಟ್ಟಿಸಿದ ಸೋಮನಾಥಪುರ ದೇವಾಲಯವು ಅವನ ಧಾರ್ಮಿಕ ಉತ್ಸಾಹಕ್ಕೆ ಇಂದಿಗೂ ಸಾಕ್ಷಿಯಾಗಿ ನಿಂತಿದೆ. ಅವನು ವೈಷ್ಣವನಾದರೂ ಶೈವ ಧರ್ಮ ಮತ್ತು ಜೈನಧರ್ಮಗಳೆರಡನ್ನೂ ಸಮಾನವಾಗಿ ಪ್ರೋತ್ಸಾಹಿಸಿದನು. ಸೋಮನಾಥಪುರದಲ್ಲಿ ಪಂಚಲಿಂಗೇಶ್ವರ ದೇವಾಲಯದ ನಿರ್ಮಾಣಕ್ಕೂ ಮತ್ತು ತುರುವೇಕೆರೆಯಲ್ಲಿ ಮೂಲೆ ಸಂಕೇಶ್ವರನ ದೇವಾಲಯದ ನಿರ್ಮಾಣಕ್ಕೆ ಇವನೇ ಮುಖ್ಯವಾಗಿ ಜವಾಬ್ದಾರನಾಗಿದ್ದಾನೆ.

ಸೋಮೆಯನು ಕ್ರಿ.ಶ.1263ರಲ್ಲಿ[13] ರಾಜನರಸಿಂಹನೊಂದಿಗೆ ಮಹಾನಂ ಸಿದ್ಧಾಂತ ಚಕ್ರವರ್ತಿಗೆ ತ್ರಿಕೂಟ ರೈನೇತ್ರಾಯ ಶಾಂತಿನಾಥ ಜಿನಾಲಯದ ದೇವಾಲಯದ ನಿರ್ವಹಣೆಗಾಗಿ ಕಾಲ್ಕೂನಿನಾಡಿನಲ್ಲಿ ಕಲ್ಲೆಂಗೆರೆಯನ್ನು ಅದರೊಂದಿಗೆ ಅದಕ್ಕೆ ಸೇರಿದ ಹದಿನಾಲ್ಕು ಕೊಪ್ಪಲುಗಳೊಂದಿಗೆ ದಾನ ಮಾಡಿದನು.

ಸೋಮೆಯ ದಂಡನಾಯಕನು ಕಲೆಯ ಪೋಷಕನೂ ಆಗಿದ್ದನು. ಅವನು ಸೋಮನಾಥಪುರದಲ್ಲಿ ಪ್ರಸಿದ್ಧ ಕೇಶವ ದೇವಾಲಯವನ್ನು ಸೋಮನಾಥಪುರದಲ್ಲಿ ಪಂಚಲಿಂಗೇಶ್ವರ ದೇವಾಲಯವನ್ನು ಮತ್ತು ತುರುವೇಕೆರೆಯಲ್ಲಿ ಚೆನ್ನಕೇಶ್ವರ ಮತ್ತು ಮೂಲೆಸಂಕೇಶ್ವರ ದೇವಾಲಯಗಳನ್ನೂ ನಿರ್ಮಿಸಿದನು. ಅಲ್ಲದೆ ಹರಿಹರ ದೇವಾಲಯದ ಪೂರ್ವದ ಬಾಗಿಲಿನಲ್ಲಿ ಅಂತಸ್ತುಗಳು ಮತ್ತು ಗೋಪುರಗಳನ್ನೂ ನಿರ್ಮಿಸಿ ಅದನ್ನು ಚಿನ್ನದ ಕಳಸದಿಂದ ಅಲಂಕರಿಸಿದನು.

ಸೋಮೆಯ ದಂಡನಾಯಕನ ಕುಟುಂಬಕ್ಕೆ ಮುಖ್ಯ ಅಧಿಕಾರಿಗಳಾಗಿ ರಾಜ್ಯಕ್ಕೆ ತಾವು ಸಲ್ಲಿಸಿದ ಸೇವೆಯ ಬಗ್ಗೆ ಬಹಳ ಹೆಮ್ಮೆ ಇತ್ತು. ಸೋಮೆಯ ದಂಡನಾಯಕನ ಹಿರಿಯ ಸಹೋದರನಾದ ಮಲ್ಲಯನು ಸೈನ್ಯದಲ್ಲಿ ಸೇನಾಧಿಪತಿಯ ಹುದ್ದೆಯನ್ನು ಅಲಂಕರಿಸಿದ್ದನು.

ಮಹಾಮಂತ್ರಿಯಾದ ಕುಮಾರ ದೊರಭಕ್ಕೆರೆ ದಂಡನಾಯಕನು ಸೋಮನ ಅಳಿಯನಾಗಿದ್ದನು. ಅವನಿಗೆ "ಗಯಿಗೋಪಾಲ" "ಗಂಡಪೆಂಡರ" ಮೊದಲಾದ ಬಿರುದುಗಳಿದ್ದವು. ಕುಮಾರ ಚಿಕ್ಕ ಕೇತೇ ದಂಡನಾಯಕನು ಆನೆ ಬಿದ್ದರಸಿನಾಡಿನ ರಾಜನು ತುಮಕೂರು ಜಿಲ್ಲೆಯ ಈಗಿನ ದೇವರಾಯದುರ್ಗ ಮಂತ್ರಿಮಾಣಿಕ್ಯ ಮತ್ತು ಮಂತ್ರಿ ಚೂಡಾಮಣಿ ಎಂದು ವರ್ಣಿಸಲ್ಪಡುತ್ತಿದ್ದನು. ಇವನು ಸೋಮೆಯ ದಂಡನಾಯಕನ ಸೋದರಳಿಯನಾಗಿದ್ದನು. ಇವನು ಕ್ರಿ.ಶ. 1276ರಲ್ಲಿ[14] ಸೇವುನಾಸರವರ ವಿರುದ್ಧ ಹೋರಾಡಿದನು. ಸೋಮೆಯನ ಸಹೋದರ ರೇಕವ್ವೆ ದನ್ನಾಯಕಿತಿ ಭೈರವೇಶ್ವರ ಎಂಬ ಶಿವಾಲಯವನ್ನು ಕಟ್ಟಿಸಿದಳು. ಸೋಮೆಯ ದಂಡಾಯಕನಿಗೆ ಇಬ್ಬರು ಗಂಡು ಮಕ್ಕಳಿದ್ದರು. ಸಿಂಗೇಯ ದಂಡನಾಯಕ ಮತ್ತು ಬಾಳಪ್ಪ ದಂಡನಾಯಕ.

3.7 ಸೋಮನಾಥ ದಂಡನಾಯಕನ ಬಿರುದುಗಳು ಮತ್ತು ಸಾಧನೆಗಳು

ಸೋಮನಾಥ ದಂಡನಾಯಕನ ಬಿರುದುಗಳು ಮತ್ತು ಸಾಧನೆಗಳಿಗೆ ಸಂಬಂಧಿಸಿದಂತೆ ದಾವಣಗೆರೆಯ ಅದೇ ಶಿಲಾಶಾಸನವು ಈ ಕೆಳಕಂಡಂತೆ ಮಾಹಿತಿಯನ್ನು ಒದಗಿಸುತ್ತದೆ.

"ಮಹಾಮಂತ್ರಿ ಮಂತ್ರಿಗಳ ಆಭರಣ, ನೀತಿಯಲ್ಲಿ ಚಾಣಕ್ಯ ವ್ಯಾಪಾರದಲ್ಲಿ ಯೋಗಂಧರ ತನ್ನ ಯಜಮಾನನ ಸಮಸ್ಯೆಗಳ ಹೊರೆ ಹೊತ್ತು ಅತೀ ದುಷ್ಟ ಕುದುರೆಗಳನ್ನು

ಸವಾರಿ ಮಾಡುವುದರಲ್ಲಿ ಒಬ್ಬ ರೇಖ ರೇವಂತ ವಿದೇಶಿ ಸೈನ್ಯಗಳಿಗೆ ಕೃತಾಂಶ, ಸ್ವಂತ ಗಳಿಕೆಯ ಲಾಭದಿಂದ ಮೇಲೇರುತ್ತ ಆಹಾರ, ಚಿನ್ನ, ಕನ್ಯೆಯರು, ಭೂಮಿ, ಗೋವುಗಳು ಮತ್ತಿತರ ಎಲ್ಲಾ ಉಡುಗೊರೆಗಳನ್ನು ಕೂಡುವುದರಲ್ಲಿ ಸಂತೋಷಿಸುತ್ತ ತನ್ನ ಗೋತ್ರವನ್ನು ಕಾಪಾಡುವವನು. ಸೇನಾನಾಯಕರಿಗೆ ಭಯ ಹುಟ್ಟಿಸುತ್ತ ಗಯಿ–ಗೋವಲ, ಗಂಡ–ಪೆಂಡಾರ ತನ್ನ ದೇವ ಸೋಮ–ದಂಡನಾಥನ ಭಕ್ತರಲ್ಲಿ ಅಗ್ರೇಸರ".

ಬಿರುದುಗಳು

"ಕಾವೇರಿಯ ದಡದಲ್ಲಿ ಸೋಮಪುರದಲ್ಲಿ ಮುರಹರ ಮತ್ತು ಯೋಗನಾರಾಯಣರೊಂದಿಗೆ ಪುರಹರ, ನರಸಿಂಹೇಶ್ವರ ಲಕ್ಷ್ಮೀನರಹರಿದೇವರುಗಳನ್ನೂ, ಆಗ್ನೇಯದಲ್ಲಿ ಬಿಜ್ಜಳೇಶ ಮತ್ತಿತರನ್ನೂ ಮಧ್ಯೆ, ಗೋಪಾಲ ಮತ್ತು ಜನಾರ್ಧನ ಮತ್ತು ಕೇಶವರೊಂದಿಗೆ, ಐದು ಪಂಚಾವಧಾನ, ಪ್ರಾಂಗಣದಲ್ಲಿ ಈ ಕಡೆ, ಮುರಹರ ಮತ್ತು ನಾರಾಯಣರೊಂದಿಗೆ ಮತ್ಸ್ಯ ಮತ್ತಿತರ ಹತ್ತು ಅವತಾರಗಳನ್ನೂ ಕೇಶವ ಮತ್ತಿತರನ್ನೂ, ವಿಶ್ವಕ್ಸೇನ ಮತ್ತಿತರರೊಂದಿಗೆ, ಶಂಕರಣ ಮತ್ತು ಇತರರನ್ನೂ, ಪದ್ಮಸೇನ, ಇಂದ್ರ ಮತ್ತಿತರರನ್ನೂ ಮತ್ತು ಗಿರನನ್ನೂ ಸ್ಥಾಪಿಸಿದನು.

"ಅವನ ಉಡುಗೊರೆಗಳು, ಸಂತೋಷದ ಕಾರಣ, ಆಶೀರ್ವಾದಗಳ ಮಹಾಪೂರದೊಂದಿಗೆ ಎಲ್ಲಾ ಹೊಗಳಿಕೆ ದೇವಗುಣಗಳ ಈ ಸಾಗರ, ಸೋಮೆಯ ದಂಡನಾಯಕ, ದೇವಗುಣಗಳ ಸಾಗರ, ಸೂರ್ಯ ಉದಯಿಸುವ ಪೂರ್ವದ ಪರ್ವತ, ಶೌರ್ಯದ ಬಾಹು, ಮುಖ್ಯಾಧಿಕಾರಿಗಳ ಚಾಲಕ, ಎಲ್ಲರ ಪ್ರಗತಿಯ ಮೂ.ಶತ್ರುಗಳ ಸಂಪತ್ತಿಗೆ ಮುತ್ತಿಗೆ ಹಾಕುವವ, ಗಯಿಗೋವಲ, ಗಂಡ–ಪೆಂಡಾರ, ಈ ಪ್ರಪಂಚದಲ್ಲಿ ಸೂರ್ಯ ಚಂದ್ರರಿರುವರೆಗೆ ದೇವರು ನಿನಗೆ ಸಂತೋಷವನ್ನೂ, ಕೀರ್ತಿಯನ್ನೂ, ದಯಪಾಲಿಸಲಿ ಸೋಮಣ್ಣನ್ನು ದೇವ ಹರಿಹರನ ಸೇವಕನೆಂದು ಬಣ್ಣಿಸಲಾಗಿದೆ.

ಕ್ರಿ.ಶ.1269ನೇ[15] ಇಸವಿಯ ಶಿಲಾ ಶಾಸನವೊಂದು ಮೂರನೇ ನರಸಿಂಹನ ಹೊಯ್ಸಳ ವಂಶಾವಳಿ ಮತ್ತು ಬಿರುದುಗಳನ್ನು ಬಣ್ಣಿಸುವಾಗ, ಹೊಯ್ಸಳ ರಾಜ್ಯದೊಂದಿಗೆ ಮತ್ತೊಬ್ಬ ರಾಜನಾದ ಗಂಡುಭೇರುಂಡನ ಹೆಸರನ್ನು ಆರೋಪಿಸುತ್ತದೆ. ಗಂಡುಭೇರುಂಡ ಒಂದು ಪೌರಾಣಿಕ ಪಕ್ಷಿ–ಶೌರ್ಯದ ಸಂಕೇತ ರೋಮನ್ನರೂ ಸಹ ಈ ಪಕ್ಷಿಯ ಚಿಹ್ನೆಯನ್ನು ಹೊಂದಿದ್ದರು. ಹೊಯ್ಸಳರ ನಂತರದ ಕಾಲದಲ್ಲಿ ವಿಶೇಷವಾಗಿ ಕೆಳದಿಯ ನಾಯಕರ ಮತ್ತು ಮೈಸೂರಿನ ಒಡೆಯರು ಕೆಳಗೆ ಗಂಡುಭೇರುಂಡ ಪಕ್ಷಿಯು ರಾಜ ಚಿಹ್ನೆಯಂತೆ ಪ್ರಧಾನವಾಗಿ ಮೆರೆಸಲ್ಪಡುತ್ತಿತ್ತು. ಕೆಳದಿಯ ಕಾಲಕ್ಕೆ ಸೇರಿದ ರಾಮೇಶ್ವರ ದೇವಸ್ಥಾನದಲ್ಲಿ ದೇವಸ್ಥಾನದ ಛಾವಣಿಯಲ್ಲಿ ಗಂಡುಭೇರುಂಡ ಪಕ್ಷಿಯನ್ನು ಕೆತ್ತಿರುವುದನ್ನು ಕಾಣುತ್ತೇವೆ. ಒಡೆಯರ ಆಳ್ವಿಕೆಯಲ್ಲಿ ಮೈಸೂರು ಸರ್ಕಾರದ ಚಿಹ್ನೆಯು ಇದೇ ಆಗಿತ್ತು. ಕರ್ನಾಟಕದಲ್ಲಿ

ಬಾಳಗಾವೆಯಲ್ಲಿ ದೊರೆತ ಮುರಿದ ಸ್ಥಂಭವೊಂದು, ಕಲ್ಯಾಣಿಯ ಪಶ್ಚಿಮ ಚಾಲುಕ್ಯರು ಇದೇ ಚಿಹ್ನೆಯನ್ನು ಬಳಸುತ್ತಿದ್ದಿರಬಹುದೆಂದು ದೃಢಪಡಿಸಿದೆ.

ದಾವಣಗೆರೆಯಲ್ಲಿ ದೊರೆತ ಶಿಲಾಶಾಸನವೊಂದು ಒದಗಿಸಿದ ಮೇಲಿನ ಈ ಎಲ್ಲ ವಿವರಗಳಲ್ಲದೆ ಇದರ ಜೊತೆಗೆ ಸೋಮನಾಥಪುರದಲ್ಲಿಯೇ ದೊರೆತ ಶಿಲಾಶಾಸನವೊಂದು ಸೋಮನಾಥ ದಂಡನಾಯಕನೇ ದೊಡ್ಡ ಅಗ್ರಹಾರವನ್ನು ಸ್ಥಾಪಿಸಿದುದಾಗಿ ದಾಖಲಿಸಿದೆ. ಇದರಲ್ಲಿ ಸೋಮನಾಥ ದಂಡನಾಯಕನು ಶ್ರೀ ವೈಷ್ಣವ ಧರ್ಮಕ್ಕೆ ಸೇರಿದ ಅಸಂಖ್ಯಾತ ದೇವರುಗಳನ್ನು ಸ್ಥಾಪಿಸಿದನು. ಅಷ್ಟೇ ಅಲ್ಲ, ಅವನು ವೈಷ್ಣವ ಮತ್ತು ಶೈವರಿಗೂ ಆ ಸ್ಥಳದಲ್ಲಿ ವಸತಿಗಳನ್ನು ಸ್ಥಾಪಿಸಿದನು. ಅದೇ ಶಿಲಾಶಾಸನವು ಈ ಗಣನೀಯ ವ್ಯಕ್ತಿಯ ಬಿರುದುಗಳನ್ನು ಹೀಗೆ ತಿಳಿಸುತ್ತದೆ.

"ಮಹಾಪ್ರಧಾನ ಗಯಿ-ಗೋಪಾಲ, ಗಂಡಪೆಂಡಾರ, ಮಾಂಡಲೀಕ ಜಬಾ, ಹೆಮ್ಮೆಯ ನಾಯಕರಲ್ಲಿ ಅಗ್ರಗಣ್ಯ ಸೇನಾಧಿಕಾರಿಗಳ ದೇವೇಂದ್ರ ಅಸಿವರಸ್ವಯಂಭು, ಖಡ್ಗ-ತ್ರಿನೇತ್ರ (ಆಯುಧಗಳನ್ನು ಬಳಸುವುದರಲ್ಲಿ ಶಿವ ಮತ್ತು ಬ್ರಹ್ಮ) ಒಬ್ಬ ರೇವಂತ (ಸೂರ್ಯನ ಮಗ) ಅತ್ಯಂತ ದುಷ್ಟ ಕುದುರೆಗಳನ್ನು ಸವಾರಿ ಮಾಡುತ್ತ ಭವ್ಯ ನಿಲುವಿನ ಸೂರ್ಯಪುತ್ರ, ಶತ್ರು ಸೈನ್ಯಗಳಿಗೆ ಯಮ ಸ್ವೀಕಾರ ಸರ್ವೋದಯ (ಅಮೂಲ್ಯ ವಸ್ತುಗಳನ್ನು ಸ್ವೀಕರಿಸುವವ) ಅನ್ನದಾನ ವಿನೋದ (ಆಹ್ವವನ್ನು ಇತರರಿಗೆ ಕೊಡುವುದರಲ್ಲಿ ಸಂತೋಷ ಕಾಣುವ) ಚಿನ್ನದ ಉಡುಗೊರೆಗಳನ್ನು ನೀಡುವುದಲ್ಲಿ ನಿಸ್ಸೀಮ (ಸುವರ್ಣದಾನಶೂರ), ಹೆಮ್ಮೆಯ ದಂಡನಾಯಕ ಮನ್ಮಥ, ಅತುಲವಾದ ಸಂಪತ್ತಿನೊಡೆಯ, ಆ ಪ್ರದೇಶಗಳ ವರಮಾನವನ್ನು ಉಡುಗೊರೆಯಾಗಿ ನೀಡಿದನು.

ಬಿ.ಎಲ್.ರೈಸ್‌ರವರ ಪ್ರಕಾರ ದೇಶದ ಆಡಳಿತದಲ್ಲಿ ಮೂರನೇ ನರಸಿಂಹನ ಮಗನಾದ ಬಲ್ಲಾಳನೊಂದಿಗೆ ಸೋಮನಾಥ ದಂಡನಾಯಕನ ಹೆಸರು ಕೇಳಿ ಬರುತ್ತದೆ ಮತ್ತು ಸೈನ್ಯವನ್ನು ಮುನ್ನಡೆಸಿದನು.

ವಿಲಿಯಂ ಕೊಹಿಲೋ ಹೇಳುವಂತೆ "ಈ ಶ್ರೇಷ್ಠ ವ್ಯಕ್ತಿಯು ಅವನ ಸೈನಿಕ ಸಾಧನೆಗಳಲ್ಲಿ ಹೆಚ್ಚು ಕೀರ್ತಿಶಾಲಿಯಾಗಿರದಿದ್ದರೂ, ಆಸ್ಥಾನದಲ್ಲಿ ಅವನ ಉನ್ನತ ಸ್ಥಾನ, ಜೊತೆಗೆ ಆಳುವ ಅರಸನ ಸೋದರಳಿಯನೆನ್ನುವ ವಿಷಯವು ಜನರ ದೃಷ್ಟಿಯಲ್ಲಿ ಅವನನ್ನು ಹೆಚ್ಚು ಗೌರವ ಪಾತ್ರನನ್ನಾಗಿ ಮಾಡಿದವು. ಅವನು ಅತ್ಯಂತ ಧಾರ್ಮಿಕ ಮನುಷ್ಯನಾಗಿದ್ದನು. ಅವನೇ ಕಟ್ಟಿಸಿದ ಸೋಮನಾಥಪುರ ದೇವಾಲಯವು ಅವನ ಔದಾರ್ಯಕ್ಕೂ ಮತ್ತು ಹೊಯ್ಸಳ ವಾಸ್ತುಶಿಲ್ಪದ ಪರಿಪೂರ್ಣತೆಗೆ ಇಂದಿಗೂ ಸಾಕ್ಷಿಯಾಗಿ ನಿಂತಿದೆ. ದೇವಾಲಯವು ಮತ್ತು ಅದಕ್ಕೆ ಹೊಂದಿಕೊಂಡಂತಿರುವ ಅಗ್ರಹಾರವು ಕ್ರಿ.ಶ.1268ರಲ್ಲಿ[16] ಸೋಮಯ್ಯನ ಇಬ್ಬರು

ಹೆಣ್ಣುಮಕ್ಕಳ ಸೈನ್ಯದಲ್ಲಿ ಅಧಿಕಾರಿಯಾದ ಮಲ್ಲಿದೇವ ಮತ್ತು ರಾಜನು ತನ್ನ ಸ್ವಂತ ಮಗನೆಂದೇ ಭಾವಿಸಿ ಬೆಳೆಸಿದ ಚಿಕ್ಕ ಕೇತಯ್ಯ ದಂಡನಾಯಕರೊಂದಿಗೆ ನಡೆದ ವಿವಾಹ ಸಂದರ್ಭದಲ್ಲಿ ರಾಜನ ನೆರವಿನೊಂದಿಗೆ ಕಟ್ಟಲ್ಪಟ್ಟವು. ಮಲ್ಲಿದೇವ ಮತ್ತು ಚಿಕ್ಕಕೇತಯ್ಯ ಇಬ್ಬರೂ ಕುಮಾರರೆಂದೇ ಗೌರವಕ್ಕೆ ಪಾತ್ರರಾಗಿದ್ದರು ಮತ್ತು ರಾಜಕುಮಾರನೆಂದೇ ಹೇಳಲ್ಪಡುತ್ತಿದ್ದರು.

ಬಿ.ಎಲ್.ರೈಸ್‌ರವರ ಪ್ರಕಾರ, ವಿದ್ವಾಂಸರಾದ ಗಂಗಾಧರಯ್ಯ ಸೋಮೆಯ ದಂಡನಾಯಕನ ಗುರುಗಳಾಗಿದ್ದವು. ಅನ್ಯಧರ್ಮಗಳ ಬಗ್ಗೆ ಅವರಿಗೆ ಅಸಹನೆ ಇದ್ದಿತ್ತು. ಅವರು ತಮ್ಮನ್ನು ತಾವು ಕತ್ತಲೆಗೆ ಒಬ್ಬ ಸೂರ್ಯ ಈಗಿನ ಚಾರುವಾಕ ಮತ್ತು ಬುದ್ಧ ಪ್ರಜ್ವಲಿಸುವ ಜೈನ ಮತ ಸಾಗರವನ್ನು ನುಂಗಿಬಿಡುವ ಸಾಮರ್ಥ್ಯವುಳ್ಳ ಅಗಸ್ತ್ಯನ ಪ್ರತಿರೂಪ ಎಂದು ಸ್ತುತಿಸಿಕೊಂಡಿದ್ದಾರೆ.

ಸೋಮೆಯನಿಗೆ ಮಲಯನೆಂಬ ಒಬ್ಬ ಹಿರಿಯ ಸಹೋದರನಿದ್ದ ಈತನು ಸೈನ್ಯದಲ್ಲಿ ಸೇನಾಧಿಕಾರಿಯ ಹುದ್ದೆಯನ್ನು ಪಡೆದಿದ್ದ ಮಲ್ಲಿದೇವ ಮತ್ತು ಚಿಕ್ಕ ಕೇತಯ್ಯರಲ್ಲದೆ, ಸೋಮೆಯನಿಗೆ ಗಯಿ–ಗೋಮಲನೆಂಬ ಮತ್ತೊಬ್ಬ ಅಳಿಯನಿದ್ದ. ಗಂಡ–ಪೆಂಡಾರ, ಮಾಂಡಲೀಕ ಜುಬು ಕುಮಾರ ದೂರಭಕ್ತ ದಂಡನಾಯಕ ಪೂರ್ವದಲ್ಲಿ ಒಂದು ರಾಜ್ಯವನ್ನು ಆಳುತ್ತಿದ್ದ.

ಸೋಮನಾಥ ದಂಡನಾಯಕನ ಹೆಸರು ಹೊಯ್ಸಳ ರಾಜ್ಯದಲ್ಲಿ ಅಲ್ಲಿ ಇಲ್ಲಿ ಕೆಲವು ಪವಿತ್ರ ಕೆಲಸಗಳನ್ನು ಮಾಡಿರುವುದರಲ್ಲಿಯೂ ಕೇಳಿಬರುತ್ತದೆ. ತುಮಕೂರು ಜಿಲ್ಲೆಯ ತುರುವೇಕೆರೆಯಲ್ಲಿ ಕಂಡುಬಂದಿರುವ ಕೆಲವು ಶಿಲಾಶಾಸನಗಳಲ್ಲಿ ಹದಿಮೂರನೇ ಶತಮಾನದ ಮಧ್ಯಭಾಗದಲ್ಲಿ ತನ್ನ ಒಡೆಯ ಮೂರನೇ ನರಸಿಂಹನ ನೆನಪಿನಲ್ಲಿ ತುರುವೇಕೆರೆಯನ್ನು ಸರ್ವಜ್ಞ ಶ್ರೀ ವಿಜಯ ನರಸಿಂಹಪುರ ಎಂಬ ಹೆಸರಿನಲ್ಲಿ ಒಂದು ಅಗ್ರಹಾರವನ್ನಾಗಿ ಸ್ಥಾಪಿಸಿರುವುದರ ಬಗ್ಗೆ ದಾಖಲೆ ಇದೆ. ಅದೇ ಶಿಲಾಶಾಸನಗಳು ತುರುವೇಕೆರೆಯಲ್ಲಿ ಚೆನ್ನಕೇಶವ ಮತ್ತು ಮೂಲೆ ಶಂಕರೇಶ್ವರ ದೇವಾಲಯಗಳನ್ನು ಇವನು ಕಟ್ಟಿಸಿರುವುದಾಗಿ ತೀರ್ಮಾನಿಸಲು ಸಹಾಯ ಮಾಡುತ್ತವೆ ಮತ್ತು ಇವು ಹೊಯ್ಸಳ ಶೈಲಿಯಲ್ಲಿವೆ.

ಮೇಲೆ ತಿಳಿಸಿದಂತೆ ಸೋಮನಾಥ ದಂಡನಾಯಕನಿಗೆ ಸಂಬಂಧಪಟ್ಟಂತೆ ಸಾಕ್ಷ್ಯಾಧಾರಗಳ ಪರಿಶೀಲನೆಯಿಂದ ಅನೇಕ ತೀರ್ಮಾನಗಳನ್ನು ಕೈಗೊಳ್ಳಬಹುದಾಗಿದೆ. ಮೊದಲನೆಯದಾಗಿ ಚಿತ್ರದುರ್ಗ ಜಿಲ್ಲೆಯ ದಾವಣಗೆರೆ ತಾಲ್ಲೂಕಿನ ಶಿಲಾಶಾಸನವೊಂದು[17] ಸೋಮನಾಥ ದಂಡನಾಯಕನ ಕುಟುಂಬದ ವಂಶಾವಳಿಯ ಬಗ್ಗೆ ಇವನ ಪೂರ್ವಿಕರು ಕಲ್ಯಾಣದ ಪಶ್ಚಿಮ ಚಾಲುಕ್ಯರ ರಾಜ್ಯ ಸೇವೆ ಸಲ್ಲಿಸಿದುದರ ಬಗ್ಗೆ ತಿಳಿಸುತ್ತದೆ. ಉದಾಹರಣೆಗೆ ರುದ್ರ ಕಲ್ಯಾಣದ ಪ್ರಭು, ರಾಜ ಹರ್‌ಮಾಡಿಯ ಬಳಿ ಮಂತ್ರಿಯಾಗಿದ್ದ ಕುಟುಂಬದ ಸಾಲಿನಲ್ಲಿ ಹೆಗ್ಗಡನಾಯಕನೆಂಬ ಮತ್ತೋರ್ವ ವಂಶಸ್ಥನು, ಕಲ್ಯಾಣದ ಪ್ರಭುವಿನ ಬಳಿ

[illegible]

[illegible]

[illegible]

[illegible]

ಸಾಮಂತನಾಗಿದ್ದನು. ಅಲ್ಲದೆ ಅದೇ ಕುಟುಂಬದ ಮಲ್ಲಯನಾಯಕನೆಂಬುವನು ಚಾಲುಕ್ಯ ರಾಜನಾದ ಜಗದೇಕಮಲ್ಲನ ಬಳಿ ಸೇವೆ ಸಲ್ಲಿಸಿದ್ದನು. ಹೀಗೆ ಕೊನೆಯ ಪಕ್ಷ ಈ ಕುಟುಂಬದ ಮೂವರು ವ್ಯಕ್ತಿಗಳು ಕಲ್ಯಾಣಿ ಚಾಲುಕ್ಯ ಅರಸರ ಬಳಿ ಸೇವೆ ಸಲ್ಲಿಸಿದ್ದರು. ಆದರೆ ಸೋಮನಾಥ ದಂಡನಾಯಕ, ಬಹುಶಃ ಕಲ್ಯಾಣಿಯ ಪಶ್ಚಿಮ ಚಾಲುಕ್ಯರ ಪ್ರಾಬಲ್ಯ ಕಡಿಮೆಯಾಗುತ್ತಿದ್ದರಂತೆ ತುಂಗಭದ್ರದ ದಕ್ಷಿಣದಲ್ಲಿ ಪ್ರಬಲರಾಗಿದ್ದ ದ್ವಾರಸಮುದ್ರದ ಹೊಯ್ಸಳರ ಕೈಕೆಳಗೆ ಸೇವೆ ಸಲ್ಲಿಸತೊಡಗಿದರೆಂದು ತೋರುತ್ತದೆ. ಆದುದರಿಂದ ಕುಟುಂಬವು ಮೂಲತಃ ಉತ್ತರ ಕರ್ನಾಟಕದಾಗಿದ್ದು, ನಂತರ ಹೊಯ್ಸಳರ ರಾಜ್ಯಕ್ಕೆ ವಲಸೆ ಬಂದಿತು. ಅವರು ತಮ್ಮೊಂದಿಗೆ ಶೈವಮತಾನುಯಾಗಿಗಳನ್ನು ಬಹಳಷ್ಟು ಸಂಖ್ಯೆಯಲ್ಲಿ ತಂದಿರುವುದರ ಬಗ್ಗೆ ದೊರೆತಿರುವ ಸಾಕ್ಷಿಯಲ್ಲಿ ವಿಷಯವನ್ನು ಸಂಗ್ರಹಿಸಬಹುದಾಗಿದೆ.

ಎರಡನೇಯದಾಗಿ, ಸೋಮನಾಥ ದಂಡನಾಯಕನ ಕುಟುಂಬದ ಸದಸ್ಯನು ಹೊಂದಿದ್ದ ಬಿರುದುಗಳು ಸ್ವಾರಸ್ಯಕರವಾಗಿವೆ. ಉದಾಹರಣೆಗೆ ರುದ್ದಿನಾಯಕನು ಗಂಡ-ಪೆಂಡಾರನೆಂಬ ಬಿರುದನ್ನು ಪಡೆದಿದ್ದನು. ಮಲ್ಲಯನಾಯಕನು ಗಯಿ-ಗೋವಲನೆಂಬ ಬಿರುದನ್ನು ಪಡೆದಿದ್ದನು. ಇವು ನಿಶ್ಚಯವಾಗಿಯೂ, ರಾಜರ ಬಿರುದುಗಳಾಗಿದ್ದವು ಮತ್ತು ಚಾಲುಕ್ಯ ಚಕ್ರವರ್ತಿಗಳು ಬಹುಶಃ ತಮಗೆ ಇವರುಗಳು ಅತ್ಯುತ್ತಮ ಸೇವೆಯನ್ನು ಸಲ್ಲಿಸಿದುದಕ್ಕಾಗಿ, ಚಾಲುಕ್ಯ ಪ್ರಭುಗಳು ಈ ಬಿರುದುಗಳನ್ನಿಟ್ಟುಕೊಳ್ಳಲು ಅವರಿಗೆ ಅವಕಾಶ ಕೊಟ್ಟಿದ್ದಿರಬಹುದು. ಇದರಿಂದ ಚಾಲುಕ್ಯರ ರಾಜ್ಯದಲ್ಲಿ ಇವರು ಹೆಚ್ಚಿನ ಮನ್ನಣೆಗೆ ಪಾತ್ರರಾಗಿದ್ದರು. ಹೀಗೆ ಸೋಮನಾಥ ದಂಡನಾಯಕನು ತನ್ನ ಕುಟುಂಬವು ಅತ್ಯಂತ ಉನ್ನತ ಮೂಲದಿಂದ ಬಂದಿರುವುದಾಗಿ ಹೇಳಿಕೊಳ್ಳಬಹುದಿತ್ತು. ಅಲ್ಲದೆ ಅವನು ತನ್ನ ಕುಟುಂಬದ ಸತ್‌ಕೀರ್ತಿಯನ್ನು ಕಾಪಾಡುವ ನಿರೀಕ್ಷೆಯನ್ನು ಸಫಲಗೊಳಿಸಿದನು.

ಮೂರನೆಯದಾಗಿ ಸೋಮನಾಥನ ಕುಟುಂಬದ ಸದಸ್ಯರು ಪಡೆದ ಬಿರುದುಗಳನ್ನು ದ್ವಾರಸಮುದ್ರದ ಹೊಯ್ಸಳರೂ ಬಳಸಿದ್ದರು. ಇದು ಹೊಯ್ಸಳರ ಮೇಲೆ ಕಲ್ಯಾಣಿಯ ಪಶ್ಚಿಮ ಚಾಲುಕ್ಯರು ಬೀರಿದ ಪ್ರಭಾವವನ್ನು ತೋರಿಸುತ್ತದೆ. ನಿಶ್ಚಯವಾಗಿಯೂ, ಹೊಯ್ಸಳರು ರಾಜ್ಯದ ಮತ್ತು ಸಂಸ್ಕ್ರತಿಯ ಅನೇಕ ಸಂಗತಿಗಳಿಗೆ ಸಂಬಂಧಪಟ್ಟಂತೆ ಮಾದರಿಗಳನ್ನು ಚಾಲುಕ್ಯರಿಂದ ಪಡೆದಿದ್ದಾರೆ.

ನಾಲ್ಕನೆಯದಾಗಿ ಸೋಮನಾಥಪುರ ದೇವಾಲಯ ಸಂಕೀರ್ಣದ ವಾಸ್ತುಶಿಲ್ಪಿಯ ಬಗ್ಗೆ ಸ್ವಾರಸ್ಯಕರ ವಿವರಗಳು ಸೋಮನಾಥಪುರ ಶಿಲಾಶಾಸನಗಳಲ್ಲಿ ಮಾತ್ರವಲ್ಲ ಚಿತ್ರದುರ್ಗ ಜಿಲ್ಲೆಯ ದಾವಣಗೆರೆ ತಾಲ್ಲೂಕಿನಲ್ಲಿ ದೊರೆತಿರುವ ಶಿಲಾಲೇಖಗಳಲ್ಲಿ ಮತ್ತು ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನಲ್ಲಿಯೂ ದೊರೆತಿವೆ. ಅವು ಹೊಯ್ಸಳರ ಕಾಲದ ಈ. ವಿಭಿನ್ನ ವಿಶಿಷ್ಟ ವ್ಯಕ್ತಿತ್ವದ ವ್ಯಕ್ತಿಯ ಆಡಳಿತಾತ್ಮಕ ಸಾಮರ್ಥ್ಯಗಳ ಬಗ್ಗೆ ಮತ್ತು ಸಾಂಸ್ಕೃತಿಕ ಕೊಡುಗೆಗಳ ಬಗ್ಗೆ ಬೆಳಕು ಚೆಲ್ಲುತ್ತವೆ.[18]

ಆಡಳಿತಾತ್ಮಕ ಸಾಮರ್ಥ್ಯಗಳ ಬಗ್ಗೆ ಸಂಬಂಧಪಟ್ಟುದಾದರೆ ಚಿತ್ರದುರ್ಗ ಜಿಲ್ಲೆಯ ದಾವಣಗೆರೆ ತಾಲ್ಲೂಕಿನ[19] ಹರಿಹರದ ಶಿಲಾಶಾಸನವೊಂದರಿಂದ ಈ ಕೆಳಕಂಡಂತೆ ಮಾಹಿತಿಯು ನಮಗೆ ಲಭ್ಯವಾಗಿದೆ. ಈತನನ್ನು "ಮಂತ್ರಿಗಳ ಆಭರಣ" ಎಂದು ಕರೆಯಲಾಗುತ್ತಿತ್ತು. ಇದರ ಈತನ ಪ್ರಭುವಾದ ಮೂರನೇ ನರಸಿಂಹನು ತನ್ನ ಮಂತ್ರಿಮಂಡಲದಲ್ಲಿ ಅನೇಕ ಮಂತ್ರಿಗಳನ್ನು ಹೊಂದಿದ್ದನು ಎಂಬುದನ್ನು ಸೂಚಿಸುತ್ತದೆ. ಸೋಮನಾಥ ದಂಡನಾಯಕನು ಬಹುಶಃ ಇವರಲ್ಲಿ ಮುಖ್ಯಸ್ಥನಾಗಿದ್ದನೆಂದು ತೋರುತ್ತದೆ. ಆದುದರಿಂದಲೇ "ಮಂತ್ರಿಗಳ ಆಭರಣ" ಎಂದು ಕರೆದಿರುವುದು ಇದು ಕೇವಲ ಔಪಚಾರಿಕ ಅಭಿವ್ಯಕ್ತಿಯಲ್ಲಿ ಇದು ಸೋಮನಾಥ ದಂಡನಾಯಕನು ಉನ್ನತ ಸ್ಥಾನವನ್ನು ಸಾಧಿಸಿದ್ದುದರ ಸೂಚನೆಯಷ್ಟೆ.

ಶಿಲಾಶಾನಸದಲ್ಲಿ[20] ಕಂಡುಬರುವ ಮತ್ತೊಂದು ಅಭಿವ್ಯಕ್ತಿ ಎಂದರೆ "ನೀತಿಯಲ್ಲಿ ಚಾಣಕ್ಯ" ಇಲ್ಲಿ ಚಾಣಕ್ಯನೆಂದರೆ ಮತ್ತಾರೂ ಅಲ್ಲ. ಅರ್ಥಶಾಸ್ತ್ರದ ಲೇಖಕನಾದ ವಿಷ್ಣುಶರ್ಮನೇ ಚಂದ್ರಗುಪ್ತ ಮೌರ್ಯನಲ್ಲಿ ಮಂತ್ರಿಯಾಗಿದ್ದನು. ಪ್ರಾಚೀನ ಕಾಲದಿಂದಲೂ ರಾಜ್ಯನೀತಿಗೆ ಸಂಬಂಧಿಸಿದುದರೆ ಚಾಣಕ್ಯ ನೀತಿಯೇ ಭಾರತದ ಆಡಳಿತಗಾರರಿಗೆಲ್ಲಾ ಮಾದರಿಯಾಗಿರುವುದು. ಈ ಅಭಿವ್ಯಕ್ತಿಯು ಸೋಮನಾಥ ದಂಡನಾಯಕನ ರಾಯಭಾರದಲ್ಲಿ ಬುದ್ಧಿವಂತಿಕೆಯ ಪರಿಪಕ್ವತೆಯನ್ನು ಸೂಚಿಸುತ್ತದೆ. ಈ ಅಭಿವ್ಯಕ್ತಿಯನ್ನು ಬರಿದೇ ಗುಣವಿಶೇಷಣವೆಂದು ಬದಿಗೆ ಸರಿಸಲಾಗದು. ಸೋಮನಾಥ ದಂಡನಾಯಕನು ಮೂರನೇ ನರಸಿಂಹನೊಡನೆ ಅಂತಹ ಆಪ್ತ ಸಂಬಂಧಗಳನ್ನು ಇರಿಸಿಕೊಂಡಿದ್ದನೆಂಬ ವಿಷಯವು ವಿದ್ವಾಂಸರ ಮನಸ್ಸಿನಲ್ಲಿ ಎಂತಹ ಸಂದೇಹವನ್ನಾದರೂ ಸ್ಪಷ್ಟೀಕರಣಗೊಳಿಸುವುದು (ದೂರ ಮಾಡುವುದು).

ಅದೇ ಶಿಲಾಶಾಸನದಲ್ಲಿ ಬಳಸಲಾಗಿರುವ ಮತ್ತು ಒಂದು ಶಬ್ಧವು ಅವನನ್ನು ವ್ಯವಹಾರದಲ್ಲಿ ಯೋಗಂಧರ ಎಂದು ವರ್ಣಿಸುತ್ತದೆ. ಯೋಗಂಧ ಎಂದರೆ ಬಹುಶಃ ಭಾಸನು ಬರೆದ, ಪ್ರಸಿದ್ಧ ಸಂಸ್ಕøತ ನಾಯಕ ಸ್ವಪ್ನ ವಾಸವದತ್ತದ ಒಂದು ಪ್ರಮುಖ ಪಾತ್ರ ಯೋಗಂಧ ನಾರಾಯಣ ತನ್ನ ಕುಶಲಮತಿಯಿಂದ ತನ್ನ ಪ್ರಭುವಾದ ವಾಸವದತ್ತನನ್ನು ರಕ್ಷಿಸುತ್ತಾನೆ. ಯೋಗಂಧನಾರಾಯಣ ವೃತ್ತಿಯಲ್ಲಿ ವರ್ತಕನಾಗಿದ್ದನು. ವ್ಯಾಪಾರ ವ್ಯವಹಾರಗಳಲ್ಲಿ ಕುಶಾಗ್ರಮತಿಯಾಗಿದ್ದನು. ಅದೇ ರೀತಿ ಸೋಮನಾಥ ದಂಡನಾಯಕನು ಶಿಲಾಶಾಸನಗಳಲ್ಲಿ ದಾಖಲಾಗಿರುವಂತೆ ರಾಜ್ಯದ ವ್ಯಾಪಾರದ ವ್ಯವಹಾರಗಳ ಪರಿಣಿತನಾಗಿದ್ದನು.[21]

"ತನ್ನ ಪ್ರಭುವಿನ ದ್ರೋಹಿಗಳ ಮೆಲೆ ನಾಯಕ"ನೆನ್ನುವ ಬಿರುದು. ಮೂರನೇ ನರಸಿಂಹನಿಗೆ ಈಗಿನ ನಿಷ್ಠೆಯನ್ನು ಸೂಚಿಸುತ್ತದೆಯಷ್ಟೆ. ಸೋಮನಾಥ ದಂಡನಾಯಕನ

ಇತರ ಬಿರುದುಗಳಿಗೆ ಸಂಬಂಧಪಟ್ಟಂತೆ ಹೇಳುವುದಾದರೆ ಈ ಮಟ್ಟದ ವ್ಯಕ್ತಿಗೆ ಆ ಬಿರುದುಗಳು ಸರಿಯಾಗಿಯೇ ಇವೆ. ಅವುಗಳಲ್ಲಿ ಕೆಲ ಬಿರುದುಗಳಾದ ಗೇಯಿ ಗೋಪಾಲ ಗಂಡ-ಪೆಂಡೇಲ ಮೊದಲಾದವು ಬಹುಶಃ ಅವನ ಪೂರ್ವಿಕರಿಂದ ಬಂದವಾಗಿರಬೇಕು ಮತ್ತು ಅವನ ಒಡೆಯನಾದ ಮೂರನೇ ನರಸಿಂಹನು ಅವುಗಳನ್ನು ದೃಢಪಡಿಸಿರಬೇಕು. ಗಯೀ-ಗೋಪಾಲ ಎಂದರೆ ಗೋವುಗಳ ರಕ್ಷಕನೆಂದರ್ಥ ಮತ್ತು ಆ ಕಾಲದ ರಾಜಕೀಯ ನೀತಿಯಲ್ಲಿ ಗೋ ರಕ್ಷಣೆ ಒಬ್ಬ ಕ್ಷತ್ರಿಯನ ಬಹುಮುಖ್ಯ ಕರ್ತವ್ಯವಾಗಿತ್ತು. ಗಂಡಪೇಂದ್ರ ಮತ್ತೊಂದು ರೀತಿಯಲ್ಲಿ ವ್ಯಕ್ತಿಯ ಧೈರ್ಯ ಸಾಹಸಗಳ ಗುಣವನ್ನು ಸೂಚಿಸುತ್ತದೆ. ಅವನಿಗೆ ಮಾಂಡಲೀಕರಿಂದ ಜ್ಯೂಬ ಎಂಬ ಮತ್ತೊಂದು ಬಿರುದಿತ್ತು. ನರಸಿಂಹಾಚಾರ್ಯ ಅವರಿಂದ ಜ್ಯೂಬ ಎನ್ನುವ ಪದವು ತ್ಯಾಗಮಯ ಹುದ್ದೆ ಎಂಬುದಾಗಿ ಅನುವಾದಗೊಂಡಿದೆ. ಇದರರ್ಥ ತನ್ನ ಒಡೆಯನ ರಾಜಕೀಯ ಅಧಿಕಾರದ ವಿಧಾನ ಮತ್ತು ವಿಸ್ತರಣೆ ಎಂದು ಸೋಮನಾಥ ದಂಡನಾಯಕ ಮಾಂಡಲೀಕರಿಗೆ ಅಥವಾ ಪಾಳೆಯಗಾರರಿಗೆ ಒಂದು ತ್ಯಾಗಮಯ ಹುದ್ದೆಯಲ್ಲಿದ್ದನು.

ಮಂಡಲ ಎನ್ನುವ ಪದವು ಬಹಳ ಸ್ವಾರಸ್ಯಕರವಾಗಿದೆ ಮತ್ತು ಈ ಪಾರಿಭಾಷಿಕ ಶಬ್ಧವನ್ನು ರಾಜ್ಯಶಾಸ್ತ್ರದ ಮಹಾನ್ ಲೇಖಕರಾದ ಮತ್ತು ಚಿಂತಕರಾದ ಕೌಟಿಲ್ಯ, ಶುಕ್ರ, ಕಮಂಡಕೆ, ಯಾಜ್ಞವಲ್ಕ್ಯ ಮತ್ತು ಮನು ಮೊದಲಾದವರು ತಮ್ಮ ಕೃತಿಗಳಲ್ಲಿ ಬಳಸಿದ್ದಾರೆ. ಶತ್ರುಗಳಾದ ಮಾಂಡಲೀಕರನ್ನು ಮಣಿಸದೇ ಓರ್ವ ರಾಜನು ಸಾರ್ವಭೌಮ ಅಧಿಕಾರದ ಅಂತಸ್ತನ್ನು ಪಡೆಯುವುದು ಸಾಧ್ಯವಿಲ್ಲ. ಸೋಮನಾಥ ದಂಡನಾಯಕನು ತನ್ನ ಒಡೆಯನಿಗಾಗಿ ಈ ದಿಕ್ಕಿನಲ್ಲಿ ಕೆಲಸ ಮಾಡಿದನು. ಅಂದರೆ ಗರ್ವಿಷ್ಟ ಮಾಂಡಲೀಕರನ್ನು ಇವನು ಅಡಗಿಸಿದನು ಮತ್ತು ಬಹುಶಃ ಹಾಗೆ ಬೇರೆ ರೀತಿಯಲ್ಲಿ ಮಣಿಸಲಾಗದ ಕೆಲವು ಮಾಂಡಲೀಕರನ್ನು ಕೊಂದನು.

ಸೋಮನಾಥ ದಂಡನಾಯಕನ ಮತ್ತೊಂದು ಬಿರುದೂ ಸಹ ಸ್ವಾರಸ್ಯಕರವಾಗಿದೆ. ಅದೇನೆಂದರೆ ದಂಡನಾಥರಲ್ಲಿ ದೇವೇಂದ್ರನೆಂದು ಇದರ ಅರ್ಥ. ಹೊಯ್ಸಳ ಸಾಮ್ರಾಜ್ಯದ ವಿವಿಧ ಭಾಗಗಳಲ್ಲಿದ್ದ ಅನೇಕ ದಂಡನಾಯಕರ ಮುಖಂಡನೆಂದು ಇದರ ಇನ್ನೊಂದು ಅರ್ಥವೂ ಹೀಗಿದೆ. ಇವನು ಸೈನಿಕ ಬಲಗಳ ಅತ್ಯುನ್ನತ ನಾಯಕನೆಂದು ಈ ಸ್ಥಾನವು ಇವನ ಒಡೆಯ ಮೂರನೇ ನರಸಿಂಹನ ನಂತರ ಎರಡನೆಯ ಸ್ಥಾನವಷ್ಟೆ. ತನ್ನ ಒಳ್ಳೆಯ ಖಡ್ಗದೊಂದಿಗೆ ಒಬ್ಬ ಸ್ವಯಂ ಖಡ್ಗವನ್ನು ಬೀಸುವುದರಲ್ಲಿ ಒಬ್ಬ ಕುತಂತ್ರಿ. ಈ ರೀತಿಯ ಇತರ ಹಲವಾರು ಬಿರುದುಗಳು ಸುಮ್ಮನೆ ಸೋಮನಾಥ ದಂಡನಾಯಕನ ಧೈರ್ಯ ಪರಾಕ್ರಮಗಳನ್ನು ಬಣ್ಣಿಸುತ್ತವೆ. ಹೀಗೆ ಸೋಮನಾಥಪುರ ದೇವಾಲಯ ಸಂಕೀರ್ಣದ ವಾಸ್ತುಶಿಲ್ಪಿಯಾದ ಸೋಮನಾಥ ದಂಡನಾಯಕನ ಪ್ರತಿಭೆ ಮತ್ತು ಸಾಧನೆಗಳನ್ನು ಅರ್ಥಮಾಡಿಕೊಳ್ಳುವುದರಲ್ಲಿ ಈ ಬಿರುದುಗಳ ಪಾತ್ರ ಮಹತ್ವದ್ದಾಗಿದೆ.

[illegible]

[illegible]

[illegible]

ಐದನೆಯದಾಗಿ ಸೋಮನಾಥ ದಂಡನಾಯಕನ ವ್ಯಕ್ತಿತ್ವದ ಸಂಗತಿಗಳನ್ನು ಇಲ್ಲಿ ಗಮನಿಸಬಹುದಾಗಿದೆ. ಸೋಮನಾಥಪುರದಲ್ಲಿ ಕೇಶವನ ಮತ್ತು ಪಂಚಲಿಂಗನ ಎರಡು ದೇವಾಲಯಗಳನ್ನು ಕಟ್ಟಿಸಿದುದಲ್ಲದೆ ಕೆಲವು ಇತರ ದೇವಾಲಯಗಳನ್ನೂ ಮತ್ತು ಹೊಯ್ಸಳ ರಾಜ್ಯದ ವಿವಿಧ ಭಾಗಗಳಲ್ಲಿ ಅಗ್ರಹಾರವನ್ನು ಸ್ಥಾಪಿಸಿರುವುದರ ಗೌರವಕ್ಕೂ ಪಾತ್ರವಾಗಿದ್ದಾನೆ.

ಇವನು ತುಮಕೂರು[22] ಜಿಲ್ಲೆಯಲ್ಲಿ ತುರುವೇಕೆರೆ ಅಗ್ರಹಾರವನ್ನು ಸ್ಥಾಪಿಸಿದನು. ಆ ಅಗ್ರಹಾರದ ಹೆಸರು ಅವನ ಒಡೆಯನಾದ ಮೂರನೇ ನರಸಿಂಹನ ಹೆಸರಿನಲ್ಲಿ ಸರ್ವಜ್ಞ ಶ್ರೀ ವಿಜಯ ನರಸಿಂಹಪುರ ಎಂದಾಗಿತ್ತು. ಈ ಅಗ್ರಹಾರವು ಹದಿಮೂರನೇ ಶತಮಾನದ ಮಧ್ಯಭಾಗದಲ್ಲಿ ಸ್ಥಾಪಿಸಲ್ಪಟ್ಟಿತು. ಇದರೊಂದಿಗೆ ಚನ್ನಕೇಶವ ಮತ್ತು ಮೂಲೆ ಶಂಕರೇಶ್ವರ ದೇವಾಲಯಗಳನ್ನು ಅದೇ ಸ್ಥಳದಲ್ಲಿ ಕಟ್ಟಿಸಿದನು. ಈ ದೇವಾಲಯಗಳು ಹೊಯ್ಸಳ ಶೈಲಿಯಲ್ಲಿವೆ. ಕ್ರಿ.ಶ.1268ರಲ್ಲಿ[23] ಸೋಮನಾಥ ದಂಡನಾಯಕನು ಚಿತ್ರದುರ್ಗ ಜಿಲ್ಲೆಯ ದಾವಣಗೆರೆ ತಾಲ್ಲೂಕಿನ ಹರಿಹರದಲ್ಲಿ ಹರಿಹರದ ದೇವಾಲಯದ ಹೊರದ್ವಾರದಲ್ಲಿ ಚಿನ್ನದ ಕಲಶದೊಂದಿಗೆ ಗೋಪುರವನ್ನು ಕಟ್ಟಿಸಿದನು. ಗೋಪುರವು ಎತ್ತರದಲ್ಲಿ ಐದು ಅಂತಸ್ತುಗಳನ್ನೊಳಗೊಂಡಿತ್ತು.

ಹೀಗೆ ಸೋಮನಾಥ ದಂಡನಾಯಕನ ವಿಶಿಷ್ಟ ವ್ಯಕ್ತಿತ್ವವು ಮತ್ತು ದೃಷ್ಟಿಕೋನವು ಸೋಮನಾಥಪುರದಲ್ಲಿ ಮಾತ್ರವಲ್ಲ ಇನ್ನಿತರ ಅನೇಕ ಸ್ಥಳಗಳಲ್ಲಿ ದೊರೆತಿರುವ ಶಿಲಾಶಾಸನಗಳಲ್ಲಿ ಪ್ರತಿಬಿಂಬಿತವಾಗಿವೆ. ಅವನು ಹೊಯ್ಸಳ ವಂಶದ ಚರಿತ್ರೆಯಲ್ಲಿ ಬಹುಮುಖ್ಯ ಸ್ಥಾನವನ್ನು ಪಡೆದಿದ್ದಾನೆ. ಅವನ ಹೆಸರು ಸೋಮನಾಥಪುರ ದೇವಾಲಯದ ಸಂಕೀರ್ಣದ ನಿರ್ಮಾಣದಿಂದ ಅಜರಾಮರವಾಗಿದೆ. ಈ ಸ್ಮಾರಕಗಳು ಈ ಮನುಷ್ಯನ ಜಾತ್ಯಾತೀತ ದೃಷ್ಟಿಕೋನವನ್ನು ಸೂಚಿಸುತ್ತವೆ. ಅವನ ಪ್ರಭು ಮೂರನೇ ನರಸಿಂಹನಿಗೆ ಅವನ ಅರ್ಪಣಾ ಮನೋಭಾವ ಮತ್ತು ನಿಷ್ಠೆಯು ಈ ಸ್ಮಾರಕಗಳಿಂದ ದೃಢಪಟ್ಟಿವೆ. ಅವನು ಎಂದಿಗೂ ಹರಿ ಮತ್ತು ಹರರಲ್ಲಿ ಭೇದಭಾವ ಕಾಣಲಿಲ್ಲ. ಸೋಮನಾಥಪುರದಲ್ಲಿ ಪಂಚಲಿಂಗ ದೇವಾಲಯದ ನಿರ್ಮಾಣವು ಶೈವಧರ್ಮದ ಕಡೆ ಅವನ ವೈಯಕ್ತಿಕ ಒಲವಿರುವುದಕ್ಕೆ ಸಾಕ್ಷಿ ಹೇಳುತ್ತದೆಯಾದರೂ ಅವನು ಉದಾರವಾಗಿ ವೈಷ್ಣವ ದೇವಾಲಯ ವಾಸ್ತುಶಿಲ್ಪವನ್ನೂ ಪ್ರೋತ್ಸಾಹಿಸಿದನು.

ಸೋಮನಾಥ ದಂಡನಾಯಕನ ಕುಟುಂಬವು ಉತ್ತರ ಕರ್ನಾಟಕಕ್ಕೂ ಮತ್ತು ದಕ್ಷಿಣ ಕರ್ನಾಟಕದ ನಡುವೆ ಕೊಂಡಿಯಂತೆ ಕೆಲಸ ಮಾಡಿದೆಯಲ್ಲದೆ ಕಲ್ಯಾಣದ ಪಶ್ಚಿಮದ ಚಾಲುಕ್ಯರಿಗೂ ಮತ್ತು ದ್ವಾರಸಮುದ್ರದ ಹೊಯ್ಸಳರ ನಡುವೆ ಸಹ ಸೇತುವೆಯಂತಿತ್ತು. ಅವನ ಪೂರ್ವಿಕರು ಕಲ್ಯಾಣಿಯ ಪಶ್ಚಿಮ ಚಾಲುಕ್ಯರ ಸರ್ಕಾರದಲ್ಲಿ ಸೇವೆ ಸಲ್ಲಿಸುತ್ತಿದ್ದರೆಂಬ ವಿಷಯದಿಂದಲೇ ಇದು ಸ್ಪಷ್ಟವಾಗಿದೆ. ಈ ಕುಟುಂಬವು ವಿಶೇಷವಾಗಿ ಸೋಮನಾಥನ ಹೆಸರಿನಲ್ಲಿ ಶಿವನ ಆರಾಧನೆಗೆ ಅರ್ಪಿತರಾಗಿದ್ದರೆಂದು ತಿಳಿದುಬರುತ್ತದೆ. ಸೋಮನಾಥ

ಪಂಥವು ನಿಶ್ಚಯವಾಗಿಯೂ ಉತ್ತರ ಕರ್ನಾಟಕದಿಂದ ದಕ್ಷಿಣ ಕರ್ನಾಟಕಕ್ಕೆ ಈ ಕುಟುಂಬದಿಂದಲೇ ತರಲ್ಪಟ್ಟಿತು. ಸೋಮನಾಥ ಪಂಥವು ಪಶ್ಚಿಮ ಚಾಲುಕ್ಯರ ರಾಜ್ಯದಲ್ಲಿ ಜನಪ್ರಿಯವಾಗಿತ್ತು. ಈ ಪಂಥದ ವಲಸೆಯು ಗುಜರಾತಿನ ಸೌರಾಷ್ಟ್ರದಿಂದ ಕರ್ನಾಟಕದ ಧಾರವಾಡ ಜಿಲ್ಲೆಯಲ್ಲಿ ಪುಲಿಗೆರೆಗೆ ಸ್ಪಷ್ಟವಾಗಿತ್ತು. ಈ ಸಮಸ್ಯೆಯ ಮುಖವನ್ನು ಇನ್ನೆಲ್ಲಿಯಾದರೂ ಚರ್ಚಿಸಲಾಗುವುದು.

ಧರ್ಮನಿರಪೇಕ್ಷತೆಯ ದೃಷ್ಟಿಕೋನದ ಗುಣದ ಜೊತೆಗೆ ಸೋಮನಾಥ ದಂಡನಾಯಕನು ಅರ್ಥಶಾಸ್ತ್ರ ಅಥವಾ ನೀತಿಶಾಸ್ತ್ರದ ತತ್ವಗಳನ್ನು ಚೆನ್ನಾಗಿ ಬಲ್ಲವನಾಗಿದ್ದನು. ಅವನ ಅನೇಕ ಬಿರುದುಗಳು ಈ ಅಂಶವನ್ನು ಪುಷ್ಟಿಗೊಳಿಸುತ್ತವೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಸೋಮನಾಥ ದಂಡನಾಯಕನು ಹದಿಮೂರನೆಯ ಶತಮಾನದಲ್ಲಿ ಹೊಯ್ಸಳ ಸಾಮ್ರಾಜ್ಯದ ಆಧಾರಸ್ಥಂಭವಾಗಿದ್ದನು.

3.8 ಮಲ್ಲಿಕಾರ್ಜುನ ದಂಡನಾಯಕ

ಮಲ್ಲಿಕಾರ್ಜುನ ದಂಡನಾಯಕನೂ ಸಹ ಒಬ್ಬ ಮಹಾಪ್ರಧಾನ ಮತ್ತು ಸರ್ವಾಧಿಕಾರಿಯಾಗಿದ್ದನು. ಡೆರೆಟ್‌ರವರ ಪ್ರಕಾರ ಸರ್ವಾಧಿಕಾರಿಯು ಪ್ರತಿಯೊಂದು ಇಲಾಖೆಯಲ್ಲಿಯೂ, ದಲ್ಲಾಳಿಯೊಂದಿಗೆ ಕಾರ್ಯ ನಿರ್ವಹಿಸುವ ಒಬ್ಬ ಅಧಿಕಾರಿಯಾಗಿದ್ದನು. ಅವನು ಪೌರ ಮತ್ತು ಸೈನಿಕ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ತನ್ನ ಖಾತೆಯನ್ನು ಹೊಂದಿರುತ್ತಿದ್ದನು. ಸಾಮಾನ್ಯವಾಗಿ ದೇವಾಲಯಗಳಿಗೆ ಭೂಮಿ ಮತ್ತು ಹಣದ ಉಡುಗೊರೆಗಳಿಗೆ ಸಂಬಂಧಿಸಿದ ಹಣಕಾಸಿನ ವ್ಯವಹಾರಗಳಲ್ಲಿ ಸರ್ವಾಧಿಕಾರಿಗಳ ಹೆಸರು ಕಂಡುಬಂದಿದೆ. ಆಲ್ತೇಕರ್‌ರವರ ಪ್ರಕಾರ ಇಡೀ ಆಡಳಿತದ ಮೇಲೆ ಈ ಅಧಿಕಾರಿ ಅಧಿಕಾರವಿರುತ್ತಿತ್ತು. ಸುಂಕದ ಅಧಿಕಾರಿ. ನರನದೇವ ಮತ್ತು ಸರ್ವಾಧಿಕಾರಿ ಸಮಸ್ತ ಸೇನಾಧಿಪತಿ ಮುಲ್ಲುದೇವರ್, ತೇರುವಲಾನ್‌ದುರೈ ಎಮೆಪ್ತರೂರ್‌ನ ಉದೈಯಾರ್, ಇವರುಗಳ ಹೆಸರುಗಳು ನಮಗೆ ಕಂಡುಬಂದಿವೆ. ಸರ್ವಾಧಿಕಾರಿ ಅಲ್ಲಾಳದೇವ ಕನ್ನಾಯಕ ಒಬ್ಬ ಮಹಾಪ್ರಧಾನಿಯಾಗಿದ್ದನು.

3.9 ಸೋಮಣ್ಣ ದಂಡನಾಯಕ

ಸೋಮಣ್ಣ ದಂಡನಾಯಕನು ಒಬ್ಬ ಸಂಧಿವಿಗ್ರಹಿಯಾಗಿದ್ದನು. (ಯುದ್ಧ ಮತ್ತು ಶಾಂತಿಯ ಮಂತ್ರಿ) ಮಾನಸೋಲ್ಲಾಸರವರು ಅಭಿಪ್ರಾಯ ಪಡುವಂತೆ ಒಬ್ಬ ಆದರ್ಶ ಸಂಧಿವಿಗ್ರಹಿಯು ಧೈರ್ಯಶಾಲಿ, ಬುದ್ಧಿವಂತ ಮತ್ತು ಎಲ್ಲಾ ಭಾಷೆಗಳಲ್ಲೂ ಪರಿಣಿತ ಅವನಿಗೆ ಯುದ್ಧ ಮತ್ತು ಶಾಂತಿಯ ಪ್ರಾಮುಖ್ಯತೆಯನ್ನು ಚೆನ್ನಾಗಿ ಗೊತ್ತಿರುವುದು ಅವಶ್ಯಕವಿತ್ತು ಮತ್ತು ಧರ್ಮಶಾಸ್ತ್ರದ ಬಗ್ಗೆ ಜ್ಞಾನ ಅವಶ್ಯವಿತ್ತು ಮತ್ತು ಅವುಗಳನ್ನು ಓದುವುದು ಗೊತ್ತಿರಬೇಕಿತ್ತು.

ಅವನು ಆರು ರೀತಿಯ ಪದ್ಧತಿಗಳ ತತ್ವಗಳನ್ನು ತಿಳಿದಿರಲೇಬೇಕು. ಸಂಧಿವಿಗ್ರಹಿ ಸಂಪನ್ನ ವಿಶ್ವನಾಥದೇವರ್ ಅವರು ಮಹಾಪಸಯಿತ ಎಂದರೆ ವಸ್ತ್ರಗಳ ಒಡೆಯ ಎಂದರ್ಥ.

ಆದರೆ ಮಹಾಪಸಯಿತನು ಅರಮನೆಯ ವ್ಯವಹಾರಗಳಿಗೆ ಸಂಬಂಧಪಟ್ಟವನು ಮಾತ್ರವಲ್ಲ ಸಚಿವ ಸಂಪುಟದ ಮಂತ್ರಿಯೂ ಆಗಿದ್ದು, ರಾಜನಿಗೆ ವಿಶ್ವಾಸ ಪಾತ್ರನಾಗಿ, ಆಡಳಿತದಲ್ಲಿಯೂ ಹೆಚ್ಚು ಪ್ರಭಾವಶಾಲಿಯಾಗಿರುತ್ತಿದ್ದನೆಂದು ಶಿಲಾಶಾಸನಗಳಲ್ಲಿ ದೊರೆತಿರುವ ಸಾಕ್ಷ್ಯಗಳು ಸಾಬೀತುಗೊಳಿಸಿವೆ. ನಮಗೆ ಮಹಾಪಸಯಿತ ಕುಲ್ತಾನ ಹೆಗ್ಗಡೆ ಮಹಾಪಸಯಿತ ಸಾಮಣ್ಣ ಮಹಾಪಸಯಿತ ಬಚಣ್ಣ ಮಲ್ಲಣ್ಣ ಇವರ ಹೆಸರುಗಳು ದೊರಕಿವೆ.

3.10 ಮೆಂಡೇಯ ಮಾರ್ನೇಯ ದಂಡನಾಯಕ

ರಾಜ ಮೂರನೇ ನರಸಿಂಹನ ಕಾಲದಲ್ಲಿ ಮೆಂಡೇಯು ಮಾರ್ನೇಯು ದಂಡನಾಯಕನು ಹಿರಿಯ ಭಂಡಾರಿಯಾಗಿದ್ದನು. ಹಿರಿಯ ಭಂಡಾರಿಯು ಬೊಕ್ಕಸದ ಮುಖ್ಯಸ್ಥನಾಗಿರುತ್ತಿದ್ದನು. ಖಜಾಂಚಿ ಸಿಂಗೇಯ ಮತ್ತು ಮೇಗೆದೇವ, ಕಂದಾಯ ಇಲಾಖೆಗೆ ಸಂಬಂಧಪಟ್ಟಂತೆ ಮುಖ್ಯ ಅಧಿಕಾರಿಗಳಾಗಿದ್ದರು.

3.11 ಶ್ರೀರನ ರೇಚಮಯ ದಂಡನಾಯಕ

ಈ ದಂಡನಾಯಕನು ಭಂಡಾರಿಗೆ ಸೇರಿದಂತೆ ಪಂಚಪ್ರಧಾನರಲ್ಲಿ ಒಬ್ಬನಾಗಿದ್ದನು. ಅಧಿಕಾರಿಗಳು ಅಪರಾಧಿಗಳೆಂದು ತಿಳಿದುಬಂದಲ್ಲಿ ಅವರನ್ನು ಕಠಿಣವಾಗಿ ಶಿಕ್ಷಿಸಲಾಗುತ್ತಿತ್ತು. ಕ್ರಿ.ಶ.1279ರ ಶಿಲಾಶಾಸನವೊಂದು ರಾಜ ನರಸಿಂಹನು ಖಜಾಂಚಿಯಾದ ಮಾಯದೇವನನ್ನು ಕೆಲಸದಿಂದ ತೆಗೆದುಹಾಕಿದುದರ ಬಗ್ಗೆ ತಿಳಿಸುತ್ತದೆ.

3.12 ಮಲ್ಲಿದೇವ ದಂಡನಾಯಕ

ಈತನು ಒಬ್ಬ ಸೈನ್ಯಾಧಿಕಾರಿಯಾಗಿದ್ದನು ಮತ್ತು ಇವನ ಮೂವರು ಗಂಡುಮಕ್ಕಳು ಅಪ್ಪಯ, ಗೋಪ ಮತ್ತು ಮಹದೇವ ಇವರೂ ಸಹ ಮೂರನೇ ನರಸಿಂಹನ ಕೈಕೆಳಗೆ ಸೈನ್ಯಾಧಿಕಾರಿಗಳಾಗಿದ್ದರು. ಅವರು ರಾಜನಿಂದ ಗ್ರಾಮ ಒಂದನ್ನು ಪಡೆದು ಅಲ್ಲಿ ಲಕ್ಷ್ಮೀನಾರಾಯಣ ಮಂದಿರವನ್ನು ಕಟ್ಟಿದರು. ಮಾಚಯ್ಯ ಮಹಾಪ್ರಧಾನನಾಗಿ ಸೈನ್ಯಾಧಿಕಾರಿಯೂ ಆಗಿದ್ದನು. ಇವನ ಶಿಲಾಶಾಸನಗಳಲ್ಲಿ ಕಂಡುಬಂದಿದೆ.

3.13 ಭೀಮಯ್ಯ ದಂಡನಾಯಕ

ಈತನು ಮೂರನೇ ನರಸಿಂಹನ ಕೈಕೆಳಗೆ ಒಬ್ಬ ಮುಖ್ಯಮಂತ್ರಿಯಾಗಿದ್ದನು. ಮಲ್ಲಿಕಾರ್ಜುನ ಹರೆಗೆಡೆ ಕಲ್ಲಯ್ಯ, ಸೆರುಪಾಯಿ ದಂಡನಾಯಕ, ಹಿರಿಯ ಕೇತೆಯ ಕನ್ನಾಯಕ, ಮಡುಗೇಗ ದಂಡನಾಯಕರಂತಹ ಮಂತ್ರಿಗಳು ಮತ್ತು ಪರಮೇಶ್ವರನಂತಹ ಮಂತ್ರಿಗಳು ಇವರೆಲ್ಲಾ ಮುಖ್ಯಮಂತ್ರಿಗಳಾಗಿದ್ದರು ಮತ್ತು ಹೊಯ್ಸಳ ರಾಜ ಮೂರನೇ ನರಸಿಂಹನ ಕೈಕೆಳಗೆ ಮುಖ್ಯವಾದ ಪಾತ್ರವನ್ನು ವಹಿಸಿದ್ದರು.

[illegible]

[illegible]

[illegible]

[illegible]

[illegible]

[illegible]

3.14 ಇತರ ಮುಖ್ಯ ದಂಡನಾಯಕರು

ಮಾಯದೇವ ಅಕರ ಮಾಂಡಲೀಕ (ಗಣಿಗಳ ಮೇಲಾಧಿಕಾರಿ) ಅಂಕೇಯ ದಂಡನಾಯಕ ಸೈನ್ಯದ ಸಮವಸ್ತ್ರದ ಮೇಲ್ವಿಚಾರಕ ವೈದ್ಯನಾಥ ದೇವರಾಜ ಧನ್ವಂತ್ರಿಯಂತಿದ್ದನು. ಅವನು ತನ್ನ ಹೊಸ ಔಷಧಿಗಳಿಗೆ ಹೆಸರು ಪಡೆದಿದ್ದನು.

ನಾಡಪ್ರಭು, ನಾಡಗೌಡ ಮತ್ತು ನಾಡಸೇನಾ ಬೋವ ಮೊದಲಾದ ಅಧಿಕಾರಿಗಳು ಕಿರಿದಾದ ಸಾಮ್ರಾಜ್ಯದ ಭೂಮಿಯ ಘಟಕಗಳಾದ ನಾಡುವಿನ ಆಡಳಿತವನ್ನು ನಿರ್ವಹಿಸುತ್ತಿದ್ದರು. ಬಸವಗೌಡ ದೇವಲಿಗೆ ನಾಡುವಿನ ನಾಡಪ್ರಭುವಾಗಿದ್ದನು. ನಾಗಯ ನಾಡನೇನ ಬೋವನಾಗಿದ್ದನು. ಮಹಾಪ್ರಧಾನ ಸೋಮೆಯ ದಂಡನಾಯಕನ ಭಾವ ಮೈದುನನಾದ ಬೊಮ್ಮಣ್ಣನು ಒಂದು ನಾಡುವಿನ ಅಧಿಕಾರಿಯಾಗಿದ್ದನು ಮತ್ತು ನಾಡುವಿನ ಶಿವಮಂದಿರಕ್ಕಾಗಿ ಕೆಲವು ತೆರಿಗೆಗಳನ್ನು ಕಳುಹಿಸಿಕೊಟ್ಟಿದ್ದನು. ಮಂಚಯನು ಹಿರಿಯ ನಾಡುವಿನ ಮಹಾಪ್ರಭುವಾಗಿದ್ದನು.

ಪಟ್ಟಣಸ್ವಾಮಿಯು ಪಟ್ಟಣದ ಮುಖ್ಯಾಧಿಕಾರಿಯಾಗಿದ್ದನು. ಅವನ ಜೊತೆಗೆ ಹೆಗ್ಗಡೆಯವರು ಸ್ಥಾನಪತಿಗಳು ಮತ್ತು ಸೇನಾ ಬೋವರಂತಹ ಅಧಿಕಾರಿಗಳಿದ್ದರು. ಹೆಗ್ಗಡೆ ನೇಚನ್ನು ಸುಂಕದ ಅಧಿಕಾರಿಯಾಗಿದ್ದನು. ಬೇಲೂರಿನಲ್ಲಿ ಕ್ರಿ.ಶ.1277ರಲ್ಲಿ[24] ಸರ್ಕಾರಿ ಅಧಿಕಾರಿಯನ್ನು ಅಧಿಕಾರಿ ಎಂದು ಕರೆಯುತ್ತಿದ್ದರು. ತಲಕಾಡಿನಲ್ಲಿ ಸ್ಥಾನಪತಿ ಎಂದು ಕರೆಯಲಾಗುತ್ತಿತ್ತು. ನಮಗೆ ಗೌಡಗೆರೆಯ ಗಂಪಟ್ಟಣಸ್ವಾಮಿ ನಿಲುಗಂದದ ಚಾವುಂಡಿಸೆಟ್ಟಿ ಪಟ್ಟಣಸ್ವಾಮಿಯ ಬಗ್ಗೆ ದಾಖಲಾತಿಗಳು ದೊರೆತಿವೆ.

ಗಂಡ ಮತ್ತು ಸೇನಾಬೋವ ಹಳ್ಳಿಯ ಮುಖ್ಯ ಅಧಿಕಾರಿಗಳಾಗಿದ್ದರು. ಸಿದಿಯಾತ್ರ ಮಲ್ಲ ಗವುಂಡರ್, ಸೇನಾಬೋವನಮೇಯ ಸೇನಬೋವ ಬೊಮಣ್ಣ ಕೆಲವು ಹಳ್ಳಿಯ ಅಧಿಕಾರಿಗಳಲ್ಲಿ ಕೆಲವರಾಗಿದ್ದರು. ಮಂತ್ರಿಮಂಡಲವು ನಾಡು ಮತ್ತು ಗ್ರಾಮದ ಇತರ ಮುಖ್ಯ ಅಧಿಕಾರಿಗಳೊಂದಿಗೆ ದೇಶದ ಆಡಳಿದ ಜವಾಬ್ದಾರಿಯನ್ನು ಹೊತ್ತಿತ್ತು. ಜನಹಿತಕ್ಕಾಗಿ ಅವರುಗಳು ಸಲ್ಲಿಸಿದ ಸೇವೆಗಳ ಪ್ರಭಾವೀಪೂರ್ಣ ದಾಖಲೆಗಳನ್ನು ತಮ್ಮ ಹಿಂದೆ ಬಿಟ್ಟು ಹೋಗಿದ್ದಾರೆ. ಅವರು ಸಮರ್ಪಕವಾಗಿ ರಾಜನಿಂದ ವಿಶಿಷ್ಟ ಬಿರುದುಗಳು ಮತ್ತಿತರ ದಾಖಲೆಗಳೊಂದಿಗೆ ಸನ್ಮಾನಿತರಾಗಿದ್ದರು.

ಅಡಿಟಿಪ್ಪಣಿಗಳು

1) E.C. VIII. SB. 348
2) E.C. XII TM. 9
3) E.C. VI, KD. 32
4) E.C. XII, TP 101
5) E.C. V AK 41
6) E.C II SB 349
7) E.C V, HN 66
8) E.C. III TN 97
9) IBID
10) Indian Archaeology – 1959-60 NO.42
11) E.C. XII, TP 2
12) Rice, Mysore Inscriptions p.7
13) M.A.R., 1932, p.39
14) Ibid, 1939, p.75
15) Ibid, 1912, p.48
16) E.C. XI Dg. 36
17) Ibid
18) Ibid IX Kn 72
19) Ibid III, Md 1
20) MAR, 1911-12 p.45
21) E.C. VI Sg.1
22) Ibid VIII Sa 140
23) Ibid VI K.R.Pet, 100
24) MAR, 1943, p.63

3ನೇ ನರಸಿಂಹನ ಕಾಲದ ದಂಡನಾಯಕರು

ಕ್ರ.ಸಂ.	ದಂಡನಾಯಕರ ಹೆಸರು	ಸ್ಥಳ	ಕಾಲಾವಧಿ
1	ಪೆರುಮಾಳ ದೇವ ದಂಡನಾಯಕ	ಅಳತ್ತೂರು	ಕ್ರಿ.ಶ.1205
2	ಪೆರುಮಾಳ ದೇವ ದಂಡನಾಯಕ	ನಾಗಮಂಗಲ	ಕ್ರಿ.ಶ.12ನೇಶತಮಾನ
3	ಬೊಪ್ಪದೇವ ದಂಡನಾಯಕ	ಬಸ್ತಿಹಳ್ಳಿ	ಕ್ರಿ.ಶ.1254
4	ಕನ್ನೆಯ ನಾಯಕ	ಅಗ್ರಹಾರ ಬಾಚಳ್ಳಿ	ಕ್ರಿ.ಶ.1256
5	ಮಂಚಿನಾಯಕ	ತಿಪಟೂರು ತಾಲ್ಲೂಕು	ಕ್ರಿ.ಶ.1260
6	ಭಾರತೀಯ ದಂಡನಾಯಕ	ಚಿಕ್ಕನಾಯಕನಹಳ್ಳಿ ತಾಲ್ಲೂಕು	ಕ್ರಿ.ಶ.1261
7	ಕಟಿಯ ದಂಡನಾಯಕ	ವೈದ್ಯನಾಥಪುರ	ಕ್ರಿ.ಶ.1261
8	ಹರೆಯ ನಾಯಕ	ಬಸವಪಟ್ನ	ಕ್ರಿ.ಶ.1261
9	ಪೆರುಮಾಳ ದೇವ ದಂಡನಾಯಕ	ಬೇಲೂರು	ಕ್ರಿ.ಶ.1261
10	ಸೋಮಣ್ಣ ದಂಡನಾಯಕ	ತಿಪಟೂರು ತಾಲ್ಲೂಕು	ಕ್ರಿ.ಶ.1263
11	ಗವಾಯಿ ದಂಡನಾಯಕ	ಕಂಕಣಹಳ್ಳಿ ತಾಲ್ಲೂಕು	ಕ್ರಿ.ಶ.1265
12	ಸೋಮಯ್ಯ ದಂಡನಾಯಕ	ಬೇಲೂರು	ಕ್ರಿ.ಶ.1265
13	ಸೋಮಣ್ಣ ದಂಡನಾಯಕ	ತಿಪಟೂರು ತಾಲ್ಲೂಕು	ಕ್ರಿ.ಶ.1267
14	ಸೋಮ ದಂಡನಾಯಕ	ದಾವಣಗೆರೆ ತಾಲ್ಲೂಕು	ಕ್ರಿ.ಶ.1268
15	ಅಪ್ಪಯ ನಾಯಕ	ತುಮಕೂರು	ಕ್ರಿ.ಶ.1269
16	ಪೆರುಮಾಳ ದೇವ ದಂಡನಾಯಕ	ಬೇಲೂರು	ಕ್ರಿ.ಶ.1269
17	ಪೆರುಮಾಳ ದೇವ ದಂಡನಾಯಕ	ಬೇಲೂರು	ಕ್ರಿ.ಶ.1270
18	ಬೊಮ್ಮಯ ನಾಯಕ	ಹಳೇಬೀಡು	ಕ್ರಿ.ಶ.1271
19	ಪೆರುಮಾಳ ದೇವ ದಂಡನಾಯಕ	ಬೇಲೂರು	ಕ್ರಿ.ಶ.1271
20	ಬಾಚಿಯ ದಂಡನಾಯಕ	ಹುಲಿಕೆರೆ	ಕ್ರಿ.ಶ.1273
21	ಮಾರತಮ್ಮ	ದನಗೂರು	ಕ್ರಿ.ಶ.1274
22	ಪೆರುಮಾಳ ದೇವ ದಂಡನಾಯಕ	ದೇವಗಳ್ಳಿ	ಕ್ರಿ.ಶ.1276

23	ದುಗ್ಗಯ್ಯ ನಾಯಕ	ಕಟ್ಟಿ ಬೊಮ್ಮನಹಳ್ಳಿ	ಕ್ರಿ.ಶ.1276
24	ಮಲ್ಲಿದೇವ ದಂಡನಾಯಕ	ಹಳೇಬೀಡು	ಕ್ರಿ.ಶ.1276
25	ಚಿಕ್ಕಕೇಟಿಯ ದಂಡನಾಯಕ	ಭೈರದೇವನ ಗುಡ್ಡ	ಕ್ರಿ.ಶ.1276
26	ಚಿಕ್ಕಕೇಟಿಯ ದಂಡನಾಯಕ	ಬೇಲೂರು	ಕ್ರಿ.ಶ.1276
27	ಪೆರುಮಾಳ ದೇವ ದಂಡನಾಯಕ	ಹೊಳೆನರಸೀಪುರ	ಕ್ರಿ.ಶ.1276
28	ಅಂಕೆಯ ದಂಡನಾಯಕ	ಕಟ್ಟಿ ಸೋಮನಹಳ್ಳಿ	ಕ್ರಿ.ಶ.1276
29	ಸೊಮಯ ದಂಡನಾಯಕ	ಕಂಕಣಹಳ್ಳಿ ತಾಲ್ಲೂಕು	ಕ್ರಿ.ಶ.1277
30	ಪೆರುಮಾಳ ದೇವ ದಂಡನಾಯಕ	ಬೇಲೂರು	ಕ್ರಿ.ಶ.1277
31	ಚಿಕ್ಕ ಕೇಟಿಯ ದಂಡನಾಯಕ	ಚನ್ನಪಟ್ಟಣ ತಾಲ್ಲೂಕು	ಕ್ರಿ.ಶ.1278
32	ಪ್ರಗ್ಗಾಯ ಪೆರುಮಾಳದೇವನಾಯಕ	ವೈದ್ಯನಾಥಪುರ	ಕ್ರಿ.ಶ.1278
33	ಪೆರುಮಾಳ ದೇವ ದಂಡನಾಯಕ	ಬೇಲೂರು	ಕ್ರಿ.ಶ.1289
34	ಮಾಚಣ್ಣ ದಂಡನಾಯಕ	ಉಪ್ಪಿನಹಳ್ಳಿ	ಕ್ರಿ.ಶ.1278
35	ಸೊವ ದಂಡನಾಯಕ	ಮೂಗೂರು	ಕ್ರಿ.ಶ.1279
36	ತಾರೆಯಣ್ಣ ದಂಡನಾಯಕ	ದಾಸನೂರು	ಕ್ರಿ.ಶ.1278
37	ಪೆರುಮಾಳ ದೇವ ದಂಡನಾಯಕ	ನರಸೀಪುರ	ಕ್ರಿ.ಶ.1280
38	ವಾಸುದೇವ ದಂಡನಾಯಕ	ಅಗಸರಹಳ್ಳಿ	ಕ್ರಿ.ಶ.1280
39	ಪರಮೇಶ್ವರ ನಾಯಕ	ನಾರಾಯಣಪುರ	ಕ್ರಿ.ಶ.1281
40	ತಿಪ್ಪೆಯ ನಾಯಕ	ಹಿರಿಯೂರು ತಾಲ್ಲೂಕು	ಕ್ರಿ.ಶ.1281
41	ತಿರಿನಲ್ಲೂರು ನಾಯಕ	ಹಳೇಬೀಡು	ಕ್ರಿ.ಶ.1284
42	ಬಮ್ಮಣ ದಂಡನಾಯಕ	ಹಳೇಬೀಡು	ಕ್ರಿ.ಶ.1284
43	ಪೆರುಮಾಳ ದೇವ ದಂಡನಾಯಕ	ಬೇಲೂರು	ಕ್ರಿ.ಶ.1285
44	ಮಲ್ಲಿಯ ನಾಯಕ	ನೆಡುತ	ಕ್ರಿ.ಶ.1285
45	ಪೆರುಮಾಳ ದೇವ ದಂಡನಾಯಕ	ತಾಯೂರು	ಕ್ರಿ.ಶ.1285
46	ಪೆರುಮಾಳ ದೇವ ದಂಡನಾಯಕ	ಕೈಗೊಂಡು	ಕ್ರಿ.ಶ.1285
47	ಕಂದಣ್ಣ ನಾಯಕ	ಚಿತ್ರದುರ್ಗ ತಾಲ್ಲೂಕು	ಕ್ರಿ.ಶ.1285

48	ಪೆರುಮಾಳ ದೇವ ದಂಡನಾಯಕ	ಚಿತ್ರದುರ್ಗ ತಾಲ್ಲೂಕು	ಕ್ರಿ.ಶ.1286
49	ಕಂದಣ್ಣ ನಾಯಕ	ಗುಬ್ಬಿ ತಾಲ್ಲೂಕು	ಕ್ರಿ.ಶ.1286
50	ಕಂಬಯ ದಂಡನಾಯಕ	ಕುಂಡನಿ	ಕ್ರಿ.ಶ.1287
51	ಪೆರುಮಾಳ ದೇವ ದಂಡನಾಯಕ	ತಡಿಮಾಲಂಗಿ	ಕ್ರಿ.ಶ.1290
52	ನಾಯಕ ದೇವರು	ಹೊಸಕೋಟೆ	ಕ್ರಿ.ಶ.1291
53	ದಂಡನಾಯಕ ನಾಯಕದೇವರು	ಹೊಸಕೋಟೆ	ಕ್ರಿ.ಶ.1291-92
54	ಮಾರಪ್ಪ ನಾಯಕಿತ್ತಿ	ಅಗ್ರಹಾರ ಬಾಚಳ್ಳಿ	ಕ್ರಿ.ಶ.1291
55	ಸೋಮೆಯ ದಂಡನಾಯಕ	ಬೇಲೂರು	ಕ್ರಿ.ಶ.1297
56	ಸೋಮೆಯ ದಂಡನಾಯಕ	ಬೇಲೂರು	ಕ್ರಿ.ಶ.1297
57	ಸೋಮೆಯ ದಂಡನಾಯಕ	ಬೇಲೂರು	ಕ್ರಿ.ಶ.1298
58	ಬಾಚಯ ದಂಡನಾಯಕ	ತಿಪಟೂರು ತಾಲ್ಲೂಕು	ಕ್ರಿ.ಶ.1325
59	ಪೆರುಮಾಳದೇವ ದಂಡನಾಯಕ	ಬೇಲೂರು	ಕ್ರಿ.ಶ.1309
60	ಬಾಳಪ್ಪ ದಂಡನಾಯಕ	ಚಿತ್ರದುರ್ಗ ತಾಲ್ಲೂಕು	ಕ್ರಿ.ಶ.1328
61	ಸಿಂಗೆಯ ದಂಡನಾಯಕ	ತಿಪಟೂರು ತಾಲ್ಲೂಕು	ಕ್ರಿ.ಶ.1333
62	ಪೆರುಮಾಳದೇವ ದಂಡನಾಯಕ	ಕಾಳಿಂಗನಹಳ್ಳಿ	ಕ್ರಿ.ಶ.13ನೇ ಶತಮಾನ
63	ಪೆರುಮಾಳದೇವ ದಂಡನಾಯಕ	ಬೇಲೂರು	ಕ್ರಿ.ಶ.13ನೇ ಶತಮಾನ
64	ಸಿಂಗಪ್ಪನಾಯಕ	ಬೇಲೂರು	ಕ್ರಿ.ಶ.13ನೇ ಶತಮಾನ
65	ಪೆರುಮಾಳದೇವ ದಂಡನಾಯಕ	ಹಳೇಬೀಡು	ಕ್ರಿ.ಶ.13ನೇ ಶತಮಾನ
66	ಸೋಮೆಯ ದಂಡನಾಯಕ	ಬೇಲೂರು	ಕ್ರಿ.ಶ.13ನೇ ಶತಮಾನ
67	ಮಾಧವ ದಂಡನಾಯಕ	ಹುಲಿಕೆರೆ	ಕ್ರಿ.ಶ.13ನೇ ಶತಮಾನ
68	ಸೋಮೆಯ ದಂಡನಾಯಕ	ಬೇಲೂರು	ಕ್ರಿ.ಶ.13ನೇ ಶತಮಾನ
69	ಬಿಬ್ಬೆಯ ನಾಯಕ	ಬೇಲೂರು	ಕ್ರಿ.ಶ.13ನೇ ಶತಮಾನ
70	ಪೆರುಮಾಳದೇವ ದಂಡನಾಯಕ	ಹನುಗಳ್ಳು	ಕ್ರಿ.ಶ.13ನೇ ಶತಮಾನ
71	ಕುರೆಯ ನಾಯಕ	ಅಗ್ರಹಾರ ಬಾಚಳ್ಳಿ	ಕ್ರಿ.ಶ.13ನೇ ಶತಮಾನ
72	ಕಲೆಯ ನಾಯಕ	ತೆಂಜಿನಹಟ್ಟಿ	ಕ್ರಿ.ಶ.13ನೇ ಶತಮಾನ
73	ದಂಡನಾಯಕ ಬಿಟ್ಟಿಮಯ	ಮದ್ದೂರು	ಕ್ರಿ.ಶ.13ನೇ ಶತಮಾನ
74	ಪೆರುಮಾಳದೇವ ದಂಡನಾಯಕ	ಯಲಂದೂರು	ಕ್ರಿ.ಶ.13ನೇ ಶತಮಾನ

75	ಕೆಟೆಯ ದಂಡನಾಯಕ	ಕುಲಗನ	ಕ್ರಿ.ಶ.13ನೇ ಶತಮಾನ
76	ಲಕಾನ ನಾಯಕ	ಬೇಲೂರು	ಕ್ರಿ.ಶ.13ನೇ ಶತಮಾನ
77	ಚಕೇಯ ನಾಯಕ	ಬೇಲೂರು	ಕ್ರಿ.ಶ.13ನೇ ಶತಮಾನ
78	ಭೂಪತಿ ನಾಯಕ	ಘಟ್ಟದಹಳ್ಳಿ	ಕ್ರಿ.ಶ.13ನೇ ಶತಮಾನ
79	ಬೊಮಿಚ ನಾಯಕ	ಹಳೇಬೀಡು	ಕ್ರಿ.ಶ.13ನೇ ಶತಮಾನ
80	ಗಲಗೆಯ ನಾಯಕ	ಬೇಲೂರು	ಕ್ರಿ.ಶ.13ನೇ ಶತಮಾನ
81	ಕನದದೆ ಪೆರುಮಲೆದೇವ	ಬೇಲೂರು	ಕ್ರಿ.ಶ.13ನೇ ಶತಮಾನ
82	ಮುನಿಸಮ	ಬೇಲೂರು	ಕ್ರಿ.ಶ.13ನೇ ಶತಮಾನ
83	ಲಕಾನ ನಾಯಕ	ಬೇಲೂರು	ಕ್ರಿ.ಶ.13ನೇ ಶತಮಾನ
84	ಮುದಯ ದಂಡನಾಯಕ	ಬೇಲೂರು	ಕ್ರಿ.ಶ.13ನೇ ಶತಮಾನ
85	ಚಿಕ್ಕಮೆಲೆಯ ದಂಡನಾಯಕ	ಹೆರಿಯೂರು	ಕ್ರಿ.ಶ.13ನೇ ಶತಮಾನ
86	ಕರಿಕುಡಿ ದಂಡನಾಯಕ	ತೊಣ್ಣೂರು	ಕ್ರಿ.ಶ.13ನೇ ಶತಮಾನ
87	ಕುಟ್ಟಂದಿ ದಂಡನಾಯಕ	ತೊಣ್ಣೂರು	ಕ್ರಿ.ಶ.13ನೇ ಶತಮಾನ
88	ಬಸವಪ್ಪ ನಾಯಕ	ಕಿಕ್ಕೇರಿ	ಕ್ರಿ.ಶ.13ನೇ ಶತಮಾನ
89	ರಂಗಯ್ಯ ನಾಯಕ	ಸಿಂಧುಘಟ್ಟ	ಕ್ರಿ.ಶ.13ನೇ ಶತಮಾನ
90	ಸಿಂಗಪ್ಪ ನಾಯಕ	ಕಟ್ಟೆನಹಳ್ಳಿ	ಕ್ರಿ.ಶ.13ನೇ ಶತಮಾನ
91	ಕುರುಲೇಯ ನಾಯಕ	ನಾಯಕನಹಳ್ಳಿ	ಕ್ರಿ.ಶ.13ನೇ ಶತಮಾನ
92	ಕಲೇಯ ನಾಯಕ	ತೊಂಗಿನಘಟ್ಟ	ಕ್ರಿ.ಶ.13ನೇ ಶತಮಾನ
93	ಹಿರಿಯ ದಂಡನಾಯಕ	ತಿಪ್ಪೂರು	ಕ್ರಿ.ಶ.13ನೇ ಶತಮಾನ
94	ಮಾದಯ್ಯ ದಂಡನಾಯಕ	ಕೃಷ್ಣರಾಜನಗರ	ಕ್ರಿ.ಶ.13ನೇ ಶತಮಾನ
95	ಬಿಟ್ಟಿಮಯ್ಯ	ಕುಮಾರಬೀಡು	ಕ್ರಿ.ಶ.13ನೇ ಶತಮಾನ
96	ಮಹಾಪ್ರಧಾನ ದಂಡನಾಯಕ	ಕುಮಾರಬೀಡು	ಕ್ರಿ.ಶ.13ನೇ ಶತಮಾನ
97	ಭರತೇಶ್ವರ ದಂಡನಾಯಕ	ದೊಡ್ಡಬೆಟ್ಟ	ಕ್ರಿ.ಶ.13ನೇ ಶತಮಾನ
98	ಭರತೇಶ್ವರ ದಂಡನಾಯಕ	ದೊಡ್ಡಬೆಟ್ಟ	ಕ್ರಿ.ಶ.13ನೇ ಶತಮಾನ
99	ಮಲ್ಲಿಕಾರ್ಜುನ ದಂಡನಾಯಕ	ಹಳೇಪುರ	ಕ್ರಿ.ಶ.13ನೇ ಶತಮಾನ
100	ಭೀಮ ದಂಡನಾಯಕ	ಹೆಮ್ಮರಗಾಲ	ಕ್ರಿ.ಶ.13ನೇ ಶತಮಾನ
101	ಹೆಸಯ ನಾಯಕ	ಬಂದೂರು	ಕ್ರಿ.ಶ.13ನೇ ಶತಮಾನ

ಅಧ್ಯಾಯ - 4

4.1 ಹೊಯ್ಸಳ ರಾಜ್ಯದಲ್ಲಿ ದಂಡನಾಯಕರ ಪಾತ್ರ

4.2 ಪ್ರಾಂತೀಯ ಆಡಳಿತ

4.3 ನ್ಯಾಯಾಡಳಿತ

4.4 ಸೈನಿಕ ಆಡಳಿತ

ಅಧ್ಯಾಯ–4

4.1 ಹೊಯ್ಸಳ ರಾಜ್ಯದಲ್ಲಿ ದಂಡನಾಯಕರ ಪಾತ್ರ

ದಕ್ಷಿಣ ಭಾರತದ ಇತಿಹಾಸದಲ್ಲಿ ಬೇರೆ ಬೇರೆ ಕಾಲಗಳಲ್ಲೆಲ್ಲಾ ಮಂತ್ರಿಮಂಡಲವು ಸರ್ಕಾರದ ಮುಖ್ಯ ಅಂಗವಾಗಿ ಕಾರ್ಯ ನಿರ್ವಹಿಸಿದೆ. ದಾಖಲೆಗಳಲ್ಲಿ ನಿಚ್ಚಳವಾಗಿ ಪಂಚಪ್ರಧಾನರ ಬಗ್ಗೆ ಎದ್ದು ತೋರುವ ಸಂಗತಿ ಎಂದರೆ ಮಂತ್ರಿಮಂಡಲದ ಬಲವು. ತುರ್ತು ಅಗತ್ಯದ ನಿಮಿತ್ತ ಮತ್ತು ಸಂಪ್ರದಾಯದಂತೆ ಸಹ ಐವರು ಮಂತ್ರಿಗಳಿಗೆ ಮಾತ್ರ ಸೀಮಿತವಾಗಿತ್ತು. ಈ ಪಂಚಪ್ರಧಾನರು ಸಂಧಿವಿಗ್ರಹಿ ಶ್ರೀ ಕರ್ಣಾಧಿಕಾರಿ, ಹಿರಿಯ ಭಂಡಾರಿ ಸೇನಾಧಿಪತಿ ಮತ್ತು ಮಹಾಪಸವತರುಗಳಾಗಿದ್ದು, ರಾಜ್ಯದ ಆಂತರಿಕ ಮತ್ತು ವಿದೇಶಿ ವ್ಯವಹಾರಗಳ ಇಲಾಖೆಗಳಿಗೆ ಮುಖ್ಯಸ್ಥರಾಗಿರುತ್ತಿದ್ದರು. ಈ ಇಲಾಖೆಗಳು ಕ್ರಮವಾಗಿ ರಾಜ್ಯ ಕಾರ್ಯದರ್ಶಿ ಕೋಶಾಧಿಕಾರಿ ಸೈನ್ಯ ಮತ್ತು ರಾಜ್ಯಾಡಳಿತವಾಗಿರುತ್ತಿದ್ದವು. ಮಾನಸೋಲ್ಲಾಸರವರ ಪ್ರಕಾರ ರಾಜನು ತನ್ನ ಸಚಿವರೊಂದಿಗೆ ಸಮಾಲೋಚನೆ ನಡೆಸಿದ ನಂತರವಷ್ಟೆ ತಾನು ಕೆಲವು ಖಚಿತ ನಿರ್ಧಾರಗಳನ್ನು ಕೈಗೊಳ್ಳಬೇಕು. ಸೂಕ್ತ ಸುಧಾರ್ನವ ತಿಳಿಸುವಂತೆ ರಾಜನು ಒಬ್ಬನೇ ಕಾರ್ಯೋನ್ಮುಖನಾಗಬಾರದು. ಯಾವುದೇ ತೀರ್ಮಾನ ಕೈಗೊಳ್ಳುವ ಮೊದಲು ಮಂತ್ರಿಗಳ ಸಲಹೆಯನ್ನು ತೆಗೆದುಕೊಳ್ಳಲೇಬೇಕು. ಮಂತ್ರಿಮಂಡಲಕ್ಕೆ ಆಯ್ಕೆಯು ಸಂಪೂರ್ಣವಾಗಿ ಪ್ರತಿಭೆಯನ್ನೇ ಆಧರಿಸಿತ್ತು. ಮಹಾಪ್ರಧಾನ ಅಥವಾ ಪ್ರಧಾನಮಂತ್ರಿಯ ಅತ್ಯಂತ ಮುಖ್ಯ ಸ್ಥಾನದಲ್ಲಿದ್ದು, ಆಡಳಿತದಲ್ಲಿ ಅತ್ಯಂತ ಪ್ರಭಾವಶಾಲೀ ವ್ಯಕ್ತಿಯಾಗಿದ್ದನು. ಶಿಲಾಶಾಸನಗಳಲ್ಲಿ ಈ ವ್ಯಕ್ತಿಯನ್ನು ಸರ್ವಾಧಿಕಾರಿ, ಮಹಾಮಾತ್ಯ, ಮಹಾಪ್ರಧಾನ ಮೊದಲಾದ ಹೆಸರುಗಳಿಂದ ಕರೆಯಲಾಗಿದೆ. ಪ್ರಧಾನಮಂತ್ರಿಯು ರಾಜ್ಯದ ಸಾಮಾನ್ಯ ಆಡಳಿತದ ಜವಾಬ್ದಾರಿಯನ್ನು ಹೊರುವುದಲ್ಲದೆ ಅರಮನೆಗೆ ಸಂಬಂಧಪಟ್ಟಂತೆ ಸ್ವಲ್ಪ ಹೆಚ್ಚುವರಿ ಕೆಲಸವನ್ನು ನಿರ್ವಹಿಸುತ್ತಿದ್ದನು. ಮಹಾಪ್ರಧಾನ ಎಂಬ ಪದವು ಬೇರೆ ಬೇರೆ ರೀತಿಯಲ್ಲಿ ವ್ಯಾಖ್ಯಾನಿಸಲ್ಪಟ್ಟಿದೆ. ಮಹಾಪ್ರಧಾನರು ಪಾಳೆಯಗಾರರ ಕುಟುಂಬಗಳ ಸಹವರ್ತಿಗಳಾಗಿರುತ್ತಿದ್ದರು. ಹೆಚ್ಚುಕಡಿಮೆ ಪಾಳೆಯಗಾರರ ಕುಟುಂಬಗಳ ಸಹವರ್ತಿಗಳಾಗಿರುತ್ತಿದ್ದರು. ಹೆಚ್ಚುಕಡಿಮೆ ಪಾಳೆಯಗಾರರಷ್ಟೇ ಸ್ಥಾನಮಾನ ಹೊಂದಿರುತ್ತಿದ್ದರು ಮತ್ತು ಅವರು ಪಾಳೆಯಗಾರರ ಬಿರುದುಗಳನ್ನೂ ಹೊಂದಿದ್ದು, ರಾಜನ ಸರ್ಕಾರಕ್ಕೂ ಮತ್ತು ಪಾಳೆಯಗಾರರಿಗೂ ಕೊಂಡಿಯಂತಿದ್ದರು. ಡೆರೆಟ್‌ರವರ ಪ್ರಕಾರ ಈ ಪದವು ಮಹಾಪ್ರಧಾನ ಎಂದು ಕರೆಯಲ್ಪಡುವ ಉನ್ನತ ಸ್ಥಾನದ ಅಧಿಕಾರಿಗಳ ಒಂದು ಸಮಿತಿಯನ್ನು

ಪ್ರತಿನಿಧಿಸುತ್ತಿತ್ತು. ಏಕೆಂದರೆ ಆ ಹೆಸರಿನ ಹುದ್ದೆಯ ಅನೇಕ ಅಧಿಕಾರಿಗಳಿದ್ದರು. ಮಂತ್ರಿಗಳನ್ನು ಅವರವರ ಸಾಮರ್ಥ್ಯ, ಪ್ರತಿಭೆ, ರಾಜ್ಯಶಾಸ್ತ್ರದಲ್ಲಿ ಪರಿಣತಿ, ಜ್ಞಾನ ಇವುಗಳ ಆಧಾರದ ಮೇಲೆ ನೇಮಿಸಲಾಗುತ್ತಿತ್ತು. ಸಾಮಾನ್ಯತಃ ಅವರು ಯುದ್ಧದ ಸಮಯದಲ್ಲಿ ಸೈನಿಕ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದ ಸೈನಿಕ ಅಧಿಕಾರಿಗಳೇ ಆಗಿರುತ್ತಿದ್ದರು. ಮಾನಸೋಲ್ಲಾಸರವರು ಮಂತ್ರಿಗಳ ಆಯ್ಕೆಗೆ ಅರ್ಹತೆಗಳನ್ನು ಪಟ್ಟಿ ಮಾಡುತ್ತಾರೆ. ದೇಶದ ನಿವಾಸಿಯಾಗಿದ್ದು ಅವನು ಗೌರವಾನ್ವಿತ ಕುಟುಂಬದಿಂದ ಬಂದವನಾಗಿರಬೇಕು. ಅವನು ದೂರದೃಷ್ಟಿಯುಳ್ಳವನೂ ಬುದ್ಧಿವಂತನೂ, ಒಳ್ಳೆಯ ನೆನಪಿನ ಶಕ್ತಿಯುಳ್ಳವನೂ, ಸದಾ ಜಾಗೃತನೂ, ಧೈರ್ಯಶಾಲಿಯೂ ಸದಾ ಉತ್ಸಾಹಿಯೂ, ಗೌರವಾನ್ವಿತನೂ, ಸಹನಾಶೀಲನು, ಮನಸ್ಸು ಮತ್ತು ಕ್ರಿಯೆಯಲ್ಲಿ ಶುದ್ಧನೂ, ವಾಕ್ಚತುರನೂ, ರಾಜಭಕ್ತನೂ, ಶಾರೀರಿಕ ಬಲ, ಆರೋಗ್ಯ ಉಳ್ಳವನಾಗಿ, ಉತ್ಸಾಹದ ಚಿಲುಮೆಯು, ನಿರ್ಗವಿಯೂ, ಚಿತ್ತಚಾಂಚಲ್ಯದಿಂದ ದೂರ ಇರುವವನೂ, ಇತರರಲ್ಲಿ ಪ್ರೀತಿ ಭಾವವುಳ್ಳವನೂ, ಅಲ್ಲದೆ ರಾಜನಿಂದೇನಾದರೂ ಅಪಮಾನಿತನಾದರೂ, ದ್ವೇಷಭಾವವನ್ನು ಹೊಂದದಿರುವವನೂ, ಉದ್ವೇಗರಹಿತನೂ ಆಗಿರಬೇಕಿತ್ತು. ಮಲ್ಲಿಕಾರ್ಜುನನ ಸೂಕ್ತಿ ಸುಧಾರಣಾದ ಪ್ರಕಾರ ಒಬ್ಬ ಮಂತ್ರಿಯು ಚತುರೋಪಾಯಗಳನ್ನೂ ಚೆನ್ನಾಗಿ ಬಲ್ಲವನಾಗಿರಬೇಕು. ಅವು ಸಾಮ, ದಾನ, ಭೇದ ಮತ್ತು ದಂಡ ಇವೇ ಆ ನಾಲ್ಕು ಚತುರೋಪಾಯಗಳು ಮತ್ತು ರಾಜನಿಗೆ ದಂಡ ನೀತಿಯನ್ನು ಅಥವಾ ಹಿಂಸಾನೀತಿಯನ್ನು ಅನುಸರಿಸುವಂತೆ ಮೊದಲ ಬಾರಿಗೇ ಸಲಹೆ ಕೊಡುವವನಾಗಿರಕೂಡದ ಮಂತ್ರಿ ಪದವಿಯು ವಂಶಪಾರಂಪರ್ಯವಾಗಿ ಬಂದ ನಿದರ್ಶನಗಳೂ ಉಂಟು. ಮಂತ್ರಿಗಳ ಗಂಡು ಮಕ್ಕಳು ಮತ್ತು ಸಂಬಂಧಿಕರು ಆಯ್ಕೆಯಾಗುತ್ತಿದ್ದುದು ನಿಜ. ಆದರೆ ಅವರಲ್ಲಿ ಅಗತ್ಯವಿದ್ದ ಅರ್ಹತೆಗಳಿದ್ದಲ್ಲಿ ಮಾತ್ರ ಆ ಕಾಲದ ಶಿಲಾಶಾಸನಗಳು ಈ ಪದ್ಧತಿಯು ಇದ್ದಿತೆಂಬುದಕ್ಕೆ ಸಾಕ್ಷ್ಯ ಒದಗಿಸಿವೆ. ಕ್ರಿ.ಶ.1276ರ[1] ಶಿಲಾಶಾಸನವೊಂದು ಮಹಾಪ್ರಧಾನ ಸೋಮ ದಂಡೇಶನ ಬಗ್ಗೆ ತಿಳಿಸುತ್ತಾ ಅವನನ್ನು "ಬುದ್ಧಿವಂತರಲ್ಲಿ ಅಗ್ರಗಣ್ಯನೆಂದೂ ಜನರ ಮನಸ್ಸುಗಳನ್ನು ಅರ್ಥಮಾಡಿಕೊಳ್ಳುವುದರ ಮೊದಲಿಗನೆಂದೂ, ಗಂಡ ಪೆಂಡಾರ, ನರಸಿಂಹರಾಜನ ಪ್ರೀತಿಪಾತ್ರ ಮತ್ತು ದಂಡನಾಥರ ದೇವೇಂದ್ರ"ನೆಂದು ಬಣ್ಣಿಸಿದೆ. ಅವನ ಸೋದರಳಿಯನಾದ ಮಲ್ಲಿದೇವ ದಂಡನಾಯಕನು ಸೈನ್ಯಾಧಿಕಾರಿಯಾಗಿದ್ದನು. ತನ್ನ ಖಡ್ಗದ ಬಲದಿಂದ "ಶತ್ರುರಾಜರ ಧೈರ್ಯವೆಂಬುವ ಜ್ವಾಲೆಗಳನ್ನು ನಂದಿಸಿಬಿಡುತ್ತಿದ್ದನು" ಅವನ ಸಹೋದರನಾದ ಚಿಕ್ಕಕೇತಯ್ಯ ದಂಡನಾಯಕನು ಮತ್ತೊಬ್ಬ ಶಕ್ತಿಶಾಲಿಯಾದ ಸೇನಾಧಿಪತಿಯಾಗಿದ್ದನು ಮತ್ತು ರಾಜಾ ನರಸಿಂಹನು ಇವನನ್ನು ತನ್ನ ಮಗನಂತೆಯೇ ಕಾಣುತ್ತಿದ್ದನು.

ಮಹಾಪ್ರಧಾನ ಅಥವಾ ಪ್ರಧಾನಮಂತ್ರಿಯು ಎಲ್ಲಾ ಮಂತ್ರಿಗಳಿಗಿಂತ ಹೆಚ್ಚು ಅಧಿಕಾರವನ್ನು ಪಡೆದಿದ್ದನು. ಮಹಾಪ್ರಧಾನರೆನಿಸಿ ತಮ್ಮ ಕರ್ತವ್ಯಗಳ ಜೊತೆಗೆ ಸರ್ವಾಧಿಕಾರಿ ಮಹಾಮಾತ್ಯ ಸೇನಾಪತಿ ಮೊದಲಾದವರ ಕಛೇರಿಗಳ ಕೆಲಸವನ್ನೂ ನಿಭಾಯಿಸುತ್ತಿದ್ದನು. ಅವನು ದಂಡನಾಯಕನಂತೆಯೂ ವರ್ತಿಸಿ, ಯುದ್ಧದಲ್ಲಿ ಸೈನ್ಯವನ್ನು ಮುನ್ನಡೆಸುತ್ತಿದ್ದನು.

ಪೆರುಮಾಳ ದಂಡನಾಯಕನು ಒಬ್ಬ ವಿಶಿಷ್ಟ ಸೈನ್ಯಾಧಿಕಾರಿ ಯಾಗಿದ್ದು, ಕ್ರಿ.ಶ.1271ರಲ್ಲಿ[2] ನಡೆದ ಸೆವುಣರ ಮತ್ತು ಹೊಯ್ಸಳರ ನಡುವಿನ ಕದನದಲ್ಲಿ ಒಂದು ಪ್ರಮುಖ ಪಾತ್ರವಹಿಸಿದ್ದನು. ಅವನು ಅತ್ಯಂತ ಕುಶಲ ವ್ಯಕ್ತಿಯಾಗಿ ಮತ್ತು ಸೆವುಣರ ಸೇನಾಧಿಪತಿ ರತ್ನಪಾಲನನ್ನು ಸೋಲಿಸಿ, ಜವನಿಕನಾರಾಯೆ ಎಂಬ ಬಿರುದನ್ನು ಪಡೆದನು. ಪ್ರಧಾನಮಂತ್ರಿಯೊಂದಿಗೆ ಎಲ್ಲಾ ರೀತಿಯ ಧನಸಹಾಯಕ್ಕೂ ಸಮಾಲೋಚನೆ ನಡೆಯುತ್ತಿತ್ತು ಮತ್ತು ಪ್ರತಿ ಆಡಳಿತದ ಪ್ರತಿ ವಿಭಾಗದಲ್ಲೂ ಅವನದೇ ಪರಮಾಧಿಕಾರವಿರುತ್ತಿತ್ತು. ಒಬ್ಬ ಪ್ರಧಾನಮಂತ್ರಿಯಾಗಿ ಜನರ ಕ್ಷೇಮಾಭ್ಯುದಯವನ್ನು ಸಾಧಿಸುವುದರಲ್ಲಿ ಪೆರುಮಾಳ ದಂಡನಾಯಕನು ಪ್ರಗತಿಪರನಾಗಿದ್ದನು. ಅವನು ದೊಡ್ಡ ಶಿಕ್ಷಣ ತಜ್ಞನೂ, ಜನಪರನೂ ಮತ್ತು ಅಷ್ಟೇ ಸಮನಾಗಿ ಒಬ್ಬ ಧಾರ್ಮಿಕ ಮನುಷ್ಯನೂ ಆಗಿದ್ದನು. ಮಹಾಪ್ರಧಾನ ಸೋಮೆಯ ದಂಡನಾಯಕನು ಮೂರನೇ ನರಸಿಂಹನ ಕಾಲದಲ್ಲಿ ಮತ್ತೋರ್ವ ಪ್ರಮುಖ ಪ್ರಧಾನ ಮಂತ್ರಿಯಾಗಿದ್ದನು. ಆಡಳಿತ ಧರ್ಮ, ಶಿಕ್ಷಣ ಮತ್ತು ವಾಸ್ತುಶಿಲ್ಪಗಳಲ್ಲಿ ಅವನ ಕೊಡುಗೆಯು ಗಮನಾರ್ಹವಾದುದು.

ಸೇನಾಪತಿ ಅಥವಾ ಸೈನ್ಯಾಧಿಕಾರಿಯು ಮಂತ್ರಿ ಸಂಪುಟದಲ್ಲಿ ವಿಶಿಷ್ಠ ಸ್ಥಾನವನ್ನು ಪಡೆದಿದ್ದನು. ಎಷ್ಟೋ ಸಂದರ್ಭಗಳಲ್ಲಿ ಪ್ರಧಾನ ಮಂತ್ರಿಯೇ ಖುದ್ದಾಗಿ ಸೈನ್ಯದ ಮುಂದಾಳಾಗಿರುತ್ತಿದ್ದನು. ಶಿಲಾಶಾಸನ ಗಳಲ್ಲಿ ಸೇನಾಪತಿಯನ್ನು ದಂಡನಾಯಕನೆಂದು ಅರ್ಥೈಸಲಾಗಿದೆ. ಫ್ಲೀಟ್‌ರವರ ಅಭಿಪ್ರಾಯದಂತೆ ಈ ಪದದ ಅರ್ಥವು ಸೇನೆಗಳ ಮುಖಂಡ ಎಂದು ಜಯಸ್ವಾಲ್‌ರವರು ಅಭಿಪ್ರಾಯಪಡುವಂತೆ ಈ ಪದದ ಅರ್ಥವು ಆಡಳಿತದ ಪ್ರಭು ಎಂದು, ಆದರೆ ಶಿಲಾಶಾಸನಗಳ ಸಾಕ್ಷ್ಯವು ಸಾಬೀತುಪಡಿಸುವಂತೆ ಅವರೆಲ್ಲರೂ ರಾಜ್ಯದ ಆಡಳಿತಗಾರರು ಮತ್ತು ಮಹಾಲಿಂಗಂರವರು ಸ್ಪಷ್ಟಪಡಿಸಿರುವಂತೆ ರಾಜ್ಯ ಮತ್ತು ಸೈನಿಕ ಇಲಾಖೆಗಳ ನಡುವೆ ಸ್ಪಷ್ಟ ಅಂತರವಿರಲಿಲ್ಲ ಮತ್ತು ದಂಡನಾಯಕ ಎಂಬ ಪದವು ಬರಿ ಆಡಳಿತಾಧಿಕಾರಿಯನ್ನು ಮಾತ್ರ ಸೂಚಿಸುತ್ತಿತ್ತು. ಚಿಕ್ಕಕೇತಯ್ಯ ದಂಡನಾಯಕನು ಮಂತ್ರಿಗಳಲ್ಲಿ ರತ್ನವಿದ್ದಂತಿದ್ದನು. ಅವನ ತೋಳ್ಬಲದೆದುರು ನಿಲ್ಲುವವರಾರು ಇರಲಿಲ್ಲ. ರಾಜ ನರಸಿಂಹನು ಅವನನ್ನು ತನ್ನ ಮಗನೆಂದೇ ಭಾವಿಸಿದ್ದನು. ಪೌರ ಮತ್ತು ಸೈನಿಕ ಇಲಾಖೆಗಳ ನಡುವೆ ಸ್ಪಷ್ಟವಾದ ಅಂತರವಿರಲಿಲ್ಲ. ಸರ್ಕಾರದ ಸೇವಕರೆಲ್ಲರೂ ಅದರಲ್ಲೂ ಉನ್ನತ ಸ್ತರದವರು ಯಾವುದಾದರೂ ಸೈನಿಕ ಕರ್ತವ್ಯಗಳನ್ನು ಅಥವಾ ಇನ್ನಿತರ ಕೆಲಸಗಳನ್ನು ನಿರ್ವಹಿಸಬೇಕಾಗುತ್ತಿತ್ತು. ಅವನು ಅನೇಕ ಪಾಳೆಯಗಾರರ ಮುಖ್ಯಸ್ಥರ ಸೈನಿಕ ಸಹಾಯವನ್ನೂ, ಅವರ ನಿಷ್ಠೆಯನ್ನೂ ಪಡೆಯುತ್ತಿದ್ದನು. ಈ ಪಾಳೆಯಗಾರರು ತಮ್ಮದೇ ಆದ ಸೈನ್ಯವನ್ನಿಟ್ಟುಕೊಂಡಿರುತ್ತಿದ್ದರು. ಹೊಯ್ಸಳರ ಕೈಕೆಳಗೆ "ಗರುಡರು" ತಮ್ಮ ನಿಷ್ಠೆ ಶ್ರದ್ಧಾಭಕ್ತಿಗಳಿಂದ ರಾಜನಿಗೆ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡಿದ್ದರು ಮತ್ತು ರಾಜನನ್ನು ರಕ್ಷಿಸಲು ಕಾಪಾಡಲು ಎಲ್ಲವನ್ನೂ ತಮ್ಮ ಪ್ರಾಣವನ್ನೂ ಸಹ ರಾಜನಿಗಾಗಿ ತ್ಯಾಗ ಮಾಡಲು ಸಿದ್ಧರಿದ್ದರು. ಅಂತಹವರಿಗೆ ಬಿರುದು ಬಾವಲಿಗಳು ಮತ್ತು ರಾಜ ಮರ್ಯಾದೆಗಳು ಸಲ್ಲುತ್ತಿದ್ದವು.

ಸಂಧಿವಿಗ್ರಹಿ ವಿದೇಶಾಂಗ ವ್ಯವಹಾರಗಳ ಮಂತ್ರಿಯಾಗಿದ್ದನು. ಅವನ ಮುಖ್ಯ ಕೆಲಸ ಮುಖ್ಯಮಂತ್ರಿಗೂ ಮತ್ತು ರಾಜನಿಗೂ ಇತರ ರಾಜ್ಯಗಳೊಂದಿಗೆ ಯಾವ ರೀತಿಯ ಸಂಬಂಧವಿರಿಸಿಕೊಳ್ಳ ಬೇಕೆಂಬುದರ ಬಗ್ಗೆ ಸಲಹೆ ಕೊಡುವುದೇ ಆಗಿತ್ತು. ಹರಿಹರದ ಮಹಾಪ್ರಧಾನ ಸೋವನ್ನ ಶಾಂತಿ ಮತ್ತು ಯುದ್ಧದ ಮಂತ್ರಿ ಆಗಿದ್ದನು. ಧನಸಹಾಯಕ್ಕೆ ಅನುಮೋದನೆ ನೀಡುವುದು ಸಂಧಿವಿಗ್ರಹಿಯ ಅಧಿಕಾರದ ವ್ಯಾಪ್ತಿಯಲ್ಲಿತ್ತು. ವಿಜ್ಞಾನೇಶ್ವರನು ತನ್ನ ಮಿತಾಕ್ಷರದಲ್ಲಿ ಈ ಮಂತ್ರಿಗಳು ತಾವೇ ತಾಮ್ರತಟ್ಟೆಗಳು ಮತ್ತು ಶಾಸನವನ್ನು ಸೇರಿಸುವ ಮತ್ತು ಅನುಮೋದಿಸುವ ಪದ್ಧತಿಯ ಬಗ್ಗೆ ಉಲ್ಲೇಖಿಸಿರುತ್ತರೆ. ಈ ಕೆಲಸವನ್ನು ವಿದೇಶಾಂಗ ಸಚಿವರಿಗೆ ಒಪ್ಪಿಸಲಾಗುತ್ತಿತ್ತು. ಬಹುಶಃ ಏಕೆಂದರೆ ಈ ಸನ್ನದು ಧನಸಹಾಯ ಪಡೆಯುವವನ ವಂಶಾವಳಿಯನ್ನೂ ಮತ್ತು ಅದರ ಉದ್ದೇಶಗಳನ್ನೂ ಮತ್ತವನ ಕುಟುಂಬದ ವಿವರಗಳನ್ನೂ ವರ್ಣಿಸಬೇಕಿತ್ತು ಮತ್ತು ವಿದೇಶಾಂಗ ಖಾತೆಯು ಈ ಅಂಶಗಳ ಬಗ್ಗೆ ಪೂರ್ಣ ನಂಬಲರ್ಹ ಮತ್ತು ಇತ್ತೀಚಿನ ಮಾಹಿತಿಯನ್ನು ಪಡೆದಿರುತ್ತಿತ್ತು. ಈ ಮಂತ್ರಿಯ ಮತ್ತೊಂದು ಮುಖ್ಯ ಕಾರ್ಯವೆಂದರೆ ವಿದೇಶಗಳಿಂದ ಸಂದೇಶಗಳನ್ನು ಪಡೆಯುವುದು ಮತ್ತು ಕಳುಹಿಸುವುದು. ಸಂಧಿವಿಗ್ರಹಿಯ ಹುದ್ದೆಯು ಬಹುಮುಖ್ಯವಾಗಿದ್ದಿತು. ಏಕೆಂದರೆ ಶಾಂತಿ, ಸುವ್ಯವಸ್ಥೆ, ಪ್ರಗತಿ ಅಲ್ಲದೆ ದೇಶದ ಕ್ಷೇಮಾಭ್ಯುದಯವೆಲ್ಲವೂ ಬಹುತೇಕ ಈ ಮಂತ್ರಿಯ ಕುಶಲತೆ, ಸಾಮರ್ಥ್ಯ ಸಮಸ್ಯೆಗಳನ್ನು ಬಿಡಿಸುವ ಕಲೆಗಾರಿಕೆ, ಸೂಕ್ತ ತೀರ್ಮಾನಗಳನ್ನು ಕೈಗೊಳ್ಳುವುದರಲ್ಲಿ ಚಾಣಾಕ್ಷತೆ ಈ ಎಲ್ಲವುಗಳನ್ನೇ ಅವಲಂಬಿಸಿತ್ತು.

ಶ್ರೀ ಕರ್ಣಾಧಿಕಾರಿ, ರಾಜ ಬೊಕ್ಕಸ ಮತ್ತು ಲೆಕ್ಕಪತ್ರಗಳನ್ನು ನೋಡಿಕೊಳ್ಳುವ ಮಂತ್ರಿಯಾಗಿದ್ದನು. ರೇಚಿಮಯ್ಯ ದಂಡನಾಯಕ ಈ ಕಾಲದ ಶ್ರೀಕರ್ಣಾಧಿಕಾರಿಯಾಗಿದ್ದನು. ಅವನು ಅರ್ಥಸಚಿವನಾಗಿದ್ದನು. ಆದುದರಿಂದ ಹೆಚ್ಚು ಪ್ರಭಾವಶಾಲಿಯಾಗಿದ್ದನು. ಕಂದಾಯವನ್ನು ಸಂಗ್ರಹಿಸುವುದು ಮತ್ತು ಲೆಕ್ಕ ಪತ್ರಗಳನ್ನಿಡುವುದು ಈ ಎರಡೂ ಅವನ ಮುಖ್ಯ ಕರ್ತವ್ಯಗಳಾಗಿದ್ದವು. ಅವನು ಖಜಾನೆಯನ್ನು ನೋಡಿಕೊಳ್ಳುವವನೂ ಆಗಿದ್ದನು. ಅಧಿಕಾರಿಗಳು ಅಪರಾಧಿಗಳೆಂದು ಕಂಡುಬಂದಲ್ಲಿ ಕಠಿಣ ಶಿಕ್ಷೆಗೊಳಗಾಗುತ್ತಿದ್ದರು. ಬೇಲೂರಿನ ಒಂದು ದಾಖಲೆಯು ಮಾಯಾದೇವನೆಂಬ ಖಜಾಂಜಿಯನ್ನು ಕೆಲಸದಿಂದ ತೆಗೆದುಹಾಕಿದುದರ ಬಗ್ಗೆ ತಿಳಿಸುತ್ತದೆ.

ಹಿರಿಯ ಭಂಡಾರಿ ಎಂಬ ಸಚಿವಾಲಯವು ದಾಖಲೆಗಳನ್ನು ಕಾಯ್ದಿರಿಸುವ ಕೆಲಸವನ್ನು ವಹಿಸಿಕೊಂಡಿತ್ತು. ಸರ್ಕಾರದಿಂದ ವಿಧಿಸಿದ ಯಾವುದೇ ತೆರಿಗೆಯನ್ನು ಸರ್ಕಾರಕ್ಕೆ ತಿಳಿಸಿ ಕಳುಹಿಸುವುದು ಅವನ ಕರ್ತವ್ಯವಾಗಿತ್ತು. ಭೀರಪುರದಲ್ಲಿ ದೊರೆತಿರುವ ದಾಖಲೆಯೊಂದು ಮೆಂಡೆಯ ಮಾರೆಯ ನಾಯಕನು ಹಿರಿಯ ಭಂಡಾರಿ ಎಂಬುದಾಗಿ ಹೇಳಿದೆ.

ಮಹಾಪಾಸಯಿತ ರಾಜರ ವಸ್ತ್ರಗಳ ಒಡೆಯನಾಗಿದ್ದನು. ಶಿಲಾಶಾಸನಗಳು ಕುಟ್ಟಣ ಹೆಗ್ಗಡೆ, ಮಹಾ ಪಾಸಯತ ಬಚಣ್ಣ ಮಲ್ಲಣ, ಮಹಾಪಾಸಯಿತ ಸಂಧಿವಿಗ್ರಹಿ, ಸಿರ್ಸ್ವಣ್ಣ ವೈವನಾಥದೇವ ಮೊದಲಾದ ಬಹುಸಂಖ್ಯೆಯ ಅಧಿಕಾರಿಗಳನ್ನು ಹೆಸರಿಸುತ್ತವೆ. ಮಹಾಪಾಸೆಯಿತ ಅರಮನೆಯ ವ್ಯವಹಾರಗಳಿಗೆ ಮಾತ್ರ ಸಂಬಂಧಪಟ್ಟವನಾಗಿರದೆ, ಇತರ ಕೆಲವು ಮುಖ್ಯ ಸ್ಥಾನಗಳನ್ನು ಹೊಂದಿದ್ದು, ಆಡಳಿತದಲ್ಲಿ ಸಾಕಷ್ಟು, ಪ್ರತಿಭಾ ವ್ಯವಸ್ಥೇ ಬೀರಬಲ್ಲವನಾಗಿದ್ದನು. ವೈದ್ಯನಾಥಪುರದಲ್ಲಿ ದೊರೆತಿರುವ ಶಿಲಾಶಾಸನದ ಪ್ರಕಾರ ಮರುದುರದ ದೇವ ವೈದ್ಯನಾಥ ಅಥವಾ ನರಸಿಂಹ ಚತುರ್ವೇದಿ ಮಂಗಳನಿಗೆ ಸರ್ವಾಧಿಕಾರಿ ಮಹಾ ಪಸಾಯಿತನು ಒಂದು ಉಡುಗೊರೆಯನ್ನು ಕೊಟ್ಟಿರುವುದನ್ನು ದಾಖಲಿಸಿದೆ.

ರಾಜಗುರುವೂ ಸಹ ರಾಜನ ಮಂತ್ರಿ ಸಂಪುಟದಲ್ಲಿ ಉನ್ನತ ಸ್ಥಾನವನ್ನು ಪಡೆದಿದ್ದರು ಮತ್ತು ರಾಜನಗೆ ಧಾರ್ಮಿಕ ವಿಷಯಗಳಲ್ಲಿ ಉಪದೇಶಿಸುವುದಲ್ಲದೆ ರಾಜನ ಪಟ್ಟಾಭಿಷೇಕವೂ ಸೇರಿದಂತೆ ಅರಮನೆಯ ಎಲ್ಲಾ ಸಾಮಾಜಿಕ ಸಮಾರಂಭಗಳಲ್ಲೂ ಸಹವರ್ತಿಗಳಾಗಿರುತ್ತಿದ್ದನು. ಅವರ ಅತ್ಯುನ್ನತ ಬೌದ್ಧಿಕ ಮತ್ತು ಆಧ್ಯಾತ್ಮಿಕ ಸಾಧನೆಗಳ ದೆಸೆಯಿಂದ ಅವರು ರಾಜನ ಸಂಪೂರ್ಣ ಗೌರವ ಮತ್ತು ಭಕ್ತಿಗಳಿಗೆ ಪಾತ್ರನಾಗಿದ್ದರು. ನರಸಿಂಹನ ಕಾಲದಲ್ಲಿ ರುದ್ರಾಕ್ಷಿ ದೇವ ರಾಜಗುರುವಾಗಿದ್ದರು. ಮೂರನೇ ನರಸಿಂಹನಿಗೆ ಮಘಾನಂದಿಯೂ ಗುರುಗಳಾಗಿ ಆ ಕಾಲದ ಕೆಲವು ಬಹುಮುಖ್ಯ ಶಿಲಾಶಾಸನಗಳಲ್ಲಿ ಕಂಡು ಬಂದಿರುವಂತೆ ಮಂತ್ರಿಗಳ ಹುದ್ದೆ ಮತ್ತು ಕರ್ತವ್ಯಗಳು ಆ ದಿನಗಳ ಸರ್ಕಾರದ ಕಾರ್ಯಾಂಗದ ಸಂಘಟನೆಯ ಬಗ್ಗೆ ನಮಗೆ ಸ್ಪಷ್ಟ ಚಿತ್ರಣ ದೊರೆಯುತ್ತದೆ. ಮಂತ್ರಿಗಳು ಯೋಧರೂ ಆಗಿದ್ದು, ಅಷ್ಟೇ ಸಮನಾಗಿ ಕಲೆ ಮತ್ತು ಸಾಹಿತ್ಯದಲ್ಲಿ ವಿಶಾರದರ ಆಗಿದ್ದು, ಸಂಸ್ಕೃತಿಯ ಪ್ರಸಾರದಲ್ಲಿ ಅತ್ಯಂತ ಆಸಕ್ತಿ ಯುಳ್ಳವರಾಗಿದ್ದರು.ಯುದ್ಧ ಮತ್ತು ಶಾಂತಿಯ ಮಂತ್ರಿಯಾದ ಸೋಮಣ್ಣ ಅಥವಾ ಹರಿಹರನು ಪಾಲ್ಗುಣೇಶ್ವರರ ದೇವರ ಮುಂದೆ ಮಂಟಪವನ್ನು ಕಟ್ಟಿಸಿದನು. ಮಂತ್ರಿಯಾದ ಸೋಮೆಯ ದಂಡನಾಯಕನು ಸೋಮನಾಥಪುರವನ್ನು ಒಂದು ಅಗ್ರಹಾರವನ್ನಾಗಿ ಮಾಡಿದ ಮೇಲೆ ಹೊಯ್ಸಳ ವಾಸ್ತುಶಿಲ್ಪದ ಅತ್ಯಂತ ಸುಂದರ ನಮೂನೆಯಾದ ಭವ್ಯವಾಗಿ ಕೇಶವ ದೇವಾಲಯವನ್ನು ಕಟ್ಟಿಸಿದನು. ಪೆರುಮಾಳಯೂ ಸಹ ಅಲುಗೋಡಿನ ದೇವ ಕೇಶವನಗಾಗಿ ಅಥವಾ ಸರ್ವಜ್ಞ ಪ್ರಸನ್ನ ಚೆನ್ನಕೇಶವಪುರನಿಗಾಗಿ ರಂಗಮಂಟಪವನ್ನು ಕಟ್ಟಿಸಿದನು. ಶ್ರೀರಂಗಪಟ್ಟಣದ ದೇವಾಲಯದ ನಾಲ್ಕನೆಯ ಪ್ರಾಕಾರದ ಬಳಿ ಒಂದು ಆಸ್ಪತ್ರೆಯ ತಳಪಾಯವನ್ನು ಹಾಕಿಸಲು ಸಿಂಗಣ ದಂಡನಾಯಕನು ಜವಾಬ್ದಾರನಾಗಿದ್ದನು. ಸೇನಾಪತಿ ವಾಸುದೇವ ಪೆರುಮಾಳ ಆಳ್ವಾರ್ ತಿರುವನಂದಿ, ಅನೇಕ ದೇಶಗಳ ಎಲ್ಲಾ ವರ್ತಕರಿಂದ ಹಣ ಪಡೆದು ಮುಂಬಲ್ಲಿಯಲ್ಲಿ ಮುಖ್ಯ ರಸ್ತೆಯಲ್ಲಿ ಪಲ್ಲಾಯತ್ ದೇವಾಲಯದ ಸುತ್ತ ಕಟಕಟೆಯನ್ನು ಕಟ್ಟಿಸಲು ಸ್ವಲ್ಪ ಭೂಮಿಯನ್ನು ಖರೀದಿಸಿದನು. ಸಿಲಾ ಬರಹಗಳಲ್ಲಿ ಸ್ಪಷ್ಟವಾಗುವುದೇನೆಂದರೆ ಮಂತ್ರಿಗಳ ಕರ್ತವ್ಯಗಳು ತಮ್ಮ ಹುದ್ದೆಗಳಲ್ಲಿ ಗೊತ್ತುಪಡಿಸಿದ್ದುದೇ ಅಲ್ಲದೆ ಇನ್ನೂ ಇತರ ಅನೇಕ ಕೆಲಸಗಳನ್ನು ಮಾಡುವುದು ಒಳಗೊಂಡಿತ್ತು.

4.2 ಪ್ರಾಂತೀಯ ಆಡಳಿತ

ಮಂತ್ರಿ ಸಂಪುಟದ ನಂತರ ಪ್ರಾಂತ್ಯಾಡಳಿತದಲ್ಲಿ ರಾಜ್ಯಪಾಲರ ಹೆಚ್ಚಿನ ಪಾತ್ರ ವಹಿಸಿದ್ದರು. ರಾಜ್ಯವು ಅನೇಕ ಪ್ರಾಂತ್ಯಗಳಾಗಿ ವಿಭಜಿಸಲ್ಪಟ್ಟಿತ್ತು ಮತ್ತು ಆ ಪ್ರಾಂತ್ಯಗಳು ರಾಜನಿಂದ ನೇಮಿಸಲ್ಪಟ್ಟ ರಾಜ್ಯಪಾಲರ ಆಳ್ವಿಕೆಗೆ ಒಳಪಟ್ಟಿದ್ದವು. ಕೆಲವು ವೇಳೆ ಯುವರಾಜನು ಗೌರ್ನರ್‌ನಂತೆ ಪಾತ್ರ ವಹಿಸುತ್ತಿದ್ದರು. ಯುವರಾಜನಾದ ಮೂರನೇ ಬಲ್ಲಾಳನು ತುಳುವ ರಾಜ್ಯದ ಗೌರ್ನರ್ ಆಗಿ ಅವನ ಕಾರ್ಯಾಲಯವು ಮೂಡಬಿದಿರೆಯಾಗಿತ್ತು. ರಾಜ್ಯಪಾಲನೂ ಸಹ ದಂಡನಾಯಕ ಎಂಬ ಹೆಸರಿಗೆ ಪಾತ್ರನಾಗಿದ್ದುದು ಮತ್ತು ಪೌರ ಮತ್ತು ಸೈನಿಕ ಇಲಾಖೆಗಳ ಮುಖ್ಯಸ್ಥನಾಗಿದ್ದರು. ಈ ರಾಜ್ಯಪಾಲರು ಜನರಿಗೂ ಮತ್ತು ರಾಜನಿಗೂ ನಡುವೆ ಕೊಂಡಿಯಂತೆ ಕಾರ್ಯ ನಿರ್ವಹಿಸುತ್ತಿದ್ದರು. ಕೇಂದ್ರ ಸರ್ಕಾರದ ಮುಖ್ಯ ಅಣತಿಗಳನ್ನು ಜಾರಿಗೊಳಿಸುವುದೇ ಅವರ ಮುಖ್ಯ ಕಾರ್ಯವಾಗಿತ್ತು. ಅವರು ಕಂದಾಯ ಇಲಾಖೆಯ ಮುಖ್ಯಸ್ಥನಾಗಿದ್ದನು. ಗ್ರಾಮಗಳ ಮತ್ತು ತನ್ನ ಅಧಿಕಾರ ವ್ಯಾಪ್ತಿಗೆ ಬರುವ ಭೂಮಿಯ ಕಂದಾಯವನ್ನು ಇತ್ಯರ್ಥಗೊಳಿಸುವುದು ಇವರ ಮುಖ್ಯ ಕೆಲಸವಾಗಿತ್ತು ಮತ್ತು ಇದನ್ನು ಸ್ಥಳೀಯ ಸಂಸ್ಥೆಗಳ ನೆರವಿನಿಂದ ಪೂರ್ಣಗೊಳಿಸುತ್ತಿದ್ದರು. ಪ್ರಾಂತೀಯ ಗೌರ್ನರ್‌ಗಳು ತಮ್ಮ ಕೆಳಗೆ ದೊಡ್ಡ ಸೈನಿಕ ಬಲಗಳನ್ನಿಟ್ಟುಕೊಂಡಿದ್ದರು. ಆಂತರಿಕ ಶಾಂತಿ ಮತ್ತು ವ್ಯವಸ್ಥೆಯನ್ನು ಕಾಪಾಡುವ ಸಲುವಾಗಿ ಶಾಂತಿಯ ಸಮಯದಲ್ಲಿ ಬಳಸುತ್ತಿದ್ದರು.

ಪೆರುಮಾಳ ದಂಡನಾಯಕನು ಪದಿನಾಲ್ಕು ನಾಡಿನ ರಾಜ್ಯಪಾಲನಾಗಿದ್ದನು.[3] ಸಿಂಗೇಯ ದಂಡನಾಯಕನು ಪುಷ್ಪಗಿರಿಯ ರಾಜ್ಯಪಾಲನಾಗಿದ್ದನು. ಸೋವಿದೇವ ಮಾಚಿದೇವನಗೆ ನೀಲಗಿರಿ ಸದರ ಕನೇಯಲಾತುರ ಮೊದಲಾದ ಬಿರುದುಗಳೊಂದಿಗೆ ಸರಗೂರನ್ನು ಆಳುತ್ತಿದ್ದನು. ಚಿಕ್ಕಕೇತಯ್ಯನು ಮುರುನಾಡುವಿನ ರಾಜ್ಯಪಾಲನಾಗಿದ್ದನು.

ದಕ್ಷಿಣದಲ್ಲಿ ಪಾಂಡ್ಯರು ಮತ್ತು ಕಡವರ ವಿರುದ್ಧ ಹೊಯ್ಸಳ ಹಿತಾಸಕ್ತಿಗಳನ್ನು ರಕ್ಷಿಸುವ ಉದ್ದೇಶದಿಂದ ಚೋಳ ದೇಶದ ವಿವಿಧ ಭಾಗಗಳಲ್ಲಿ ಕೆಲವು ರಾಜ್ಯಪಾಲರನ್ನು ಇರಿಸಲಾಗಿತ್ತು. ಹೀಗೆ ಸಿಂಘಣ ದಂಡನಾಯಕ ಪುದುಕೋಟೈನಲ್ಲಿ, ಸೋಮಯ್ಯ-ದಂಡನಾಯಕನನ್ನು ತಿರುಚನಾಪಳ್ಳಿಯಲ್ಲಿ ಮತ್ತು ಕಂಪಯ್ಯ ದಂಡನಾಯಕನನ್ನು ತಂಜಾವೂರಿನಲ್ಲಿರುವುದರ ಬಗ್ಗೆ ನಾವು ಕೇಳಿದ್ದೇವೆ.

ಬಡ್ತಿ ಮತ್ತು ವರ್ಗಾವಣೆಗಳನ್ನೂ ಕೂಡ ರಾಜನೇ ಮಾಡುತ್ತಿದ್ದನು. ನಂದಗೆರೆಯ ಬೇಚಿಯರಸನು ಯಲಹಂಕದ ರಾಜ್ಯಪಾಲನ ಇನ್ನೂ ದೊಡ್ಡದಾದ ಪ್ರಾಂತ್ಯಗಳಿಗೆ ವರ್ಗಾಯಿಸಲ್ಪಟ್ಟನು.

ಮಹಾಮಂಡಲೇಶ್ವರರೂ ಸಹ ಸ್ಥಳೀಯ ಗೌರ್ನರ್‌ಗಳಂತೆ ಕಾರ್ಯನಿರ್ವಹಿಸುತ್ತಿದ್ದರು. ಮಹಾಮಂಡಲೇಶ್ವರರು ಒಮ್ಮೆ ಸ್ವತಂತ್ರರಾಗಿದ್ದ

[illegible]

ಯುವರಾಜರಾಗಿದ್ದಿರಬಹುದು. ಅಥವಾ ಇವರ ಪೂರ್ವಿಕರು ಚಾಳುಕ್ಯ ಇಲ್ಲವೇ ರಾಷ್ಟ್ರಕೂಟ ಚಕ್ರವರ್ತಿಗಳ ಕೈಕೆಳಗೆ ಹಿಡುವಳಿದಾರರಲ್ಲಿ ಮುಖ್ಯಸ್ಥರೂ ಆಗಿದ್ದಿರಬಹುದಿತ್ತು. ಮಹಾಮಂಡಲೇಶ್ವರ ಬೇಚಿ ದೇವರಸ "ನಂದಿಗಿರಿಯ ಒಡೆಯ" ಎಂಬ ಬಿರುದಿನೊಂದಿಗೆ ಬೆಂಗಳೂರಿನ ಉತ್ತರ ಭಾಗದಲ್ಲಿ ಯಲಹಂಕದಲ್ಲಿ ತನ್ನ ನಿವಾಸದೊಂದಿಗೆ ಸ್ಥಳೀಯ ಗೌರ್ನರ್ ಆಗಿದ್ದನು.

ಈ ಕಾಲದಲ್ಲಿ ಎರಡು ರೀತಿಯ ಗೌವರ್ನರ್‌ಗಳಿದ್ದರು. ಒಂದು ವಂಶಪಾರಂಪರ್ಯವಾಗಿ, ಮತ್ತೊಂದು ರೀತಿಯಲ್ಲಿ ರಾಜ್ಯದ ಅಧಿಕಾರಿಗಳಾಗಿ ವಂಶಪಾರಂಪರ್ಯವಾಗಿ ಬಂದ ಗೌವರ್ನರ್‌ಗಳನ್ನು ಸಾಮಂತರೆಂದು ಕರೆಯುತ್ತಿದ್ದರು. ಗೌವರ್ನರ್‌ಗಳಿಗೆ ತಮ್ಮ ಕೈಕೆಳಗಿನವರನ್ನು ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮದ ಮಟ್ಟಗಳಲ್ಲಿ ನೇಮಿಸುವ ಅಧಿಕಾರವಿತ್ತು.

ಗೌವರ್ನರ್‌ಗಳು ತಮ್ಮ ನಿಯಂತ್ರಣದಲ್ಲಿ ಅನೇಕ ಅಧಿಕಾರಿಗಳನ್ನು ಹೊಂದಿದ್ದರು. ಅವರುಗಳು ಹೆಗ್ಗಡೆ ಸುಂಕವರ್ಗ್ಗಡೆ ಮಾಣಿಕ್ಯ ಭಂಡಾರಿ ಮನ್ನೇಯ ನಾಡಗೌಂಡ, ಗೌಂಡ, ಸೇನಾ ಬವೋಲಿ ಮೊದಲದವರಿದ್ದರು. ಹೆಗ್ಗಡೆಯವರು ಎಂದರೆ ರಾಜ್ಯದ ಆದಾಯವನ್ನು ನಿರ್ವಹಿಸುವುದರೊಂದಿಗೆ ಸಾಮಾನ್ಯ ಆಡಳಿತವನ್ನೂ ನಡೆಸುವ ಕೆಲಸವನ್ನು ಈ ಅಧಿಕಾರಿಗಳಿಗೆ ಒಪ್ಪಿಸಲಾಗಿತ್ತು. ಪರ್ಗಗಳಲ್ಲಿ ಹೆಗ್ಗಡೆ, ನಾಡ ಪ್ರಭುಗಳು ಮತ್ತು ಮಹಾಪ್ರಭುಗಳು, ಆದಾಯದ ವಿಷಯಗಳಲ್ಲಿ ತಮ್ಮ ಕಾರ್ಯವನ್ನು ನಿರ್ವಹಿಸುತ್ತಿದ್ದರು. ಪರಗ್ಗಡಡೆ ನಾಯಕ ಸೋಮದಂಡನಾಯಕನ ತಂದೆಯಾದ ಇವನು ರಾಜ್ಯದ ಕಂದಾಯ ಸಚಿವನಾಗಿದ್ದನು. ಪೆರುಮಗವುಂಡ ಕಿರುಗತೂರಿನ ಹೆಗ್ಗಡೆಯಾಗಿದ್ದನು. ಬೆಳ್ಳೂರಿನಲ್ಲಿ ದೊರೆತಿರುವ ಶಿಲಾಶಾಸನವೊಂದು ವಿಠಣ್ಣ ಮಹಾಪ್ರಧಾನ ಹೆಗ್ಗಡೆಯಾಗಿದ್ದಾಗ ಪೆರುಮಾಳದೇವ, ಬೆಳ್ಳೂರಿ ಮಹಾಜನರಿಗೆ ಕೆಲವು ಗ್ರಾಮಗಳನ್ನು ದಾನ ಮಾಡಿರುವುದಾಗಿ ತಿಳಿಸುತ್ತದೆ. ಹೀಗೆ ಪ್ರಾಂತೀಯ ಗವರ್ನರ್‌ಗಳು ದೊಡ್ಡ ಸಿಬ್ಬಂದಿಯೊಂದಿಗೆ ಸರ್ಕಾರಕ್ಕೆ ಅನುವಾಗಿ ಕಾರ್ಯ ನಿರ್ವಹಿಸುತ್ತಿದ್ದರು.

4.3 ನ್ಯಾಯಾಡಳಿತ

ನ್ಯಾಯಾಡಳಿತದಲ್ಲಿ ರಾಜನ ಪಾತ್ರವು ಬಹುಮುಖ್ಯವಾದುದಾಗಿತ್ತು. ಅವನು ಐವರು ಮಂತ್ರಿಗಳ ಸಹಾಯದಿಂದ (ಪಂಚಪ್ರಧಾನರು) ಮೊರೆಹೋಗುವ ಅಂತಿಮ ನ್ಯಾಯಾಲಯವಾಗಿ, ಮುಖ್ಯವಾದ ವಿವಾದಗಳನ್ನು ತೀರ್ಮಾನಿಸುತ್ತಿದ್ದನು. ಜನರು ಮಾಡುತ್ತಿದ್ದ ಅಪರಾಧಗಳು ಮತ್ತು ಅವರಿಗೆ ಕೊಡಲಾಗುತ್ತಿದ್ದ ಶಿಕ್ಷೆಗಳು ಶಿಲಾಬರಹಗಳಲ್ಲಿ ಉಲ್ಲೇಖಿಸಲ್ಪಟ್ಟಿವೆ. ಕಠಿಣ ಪರೀಕ್ಷೆಗೊಳಪಡಿಸಿ ವಿಚಾರಣೆ ನಡೆಸುವುದೇ ಅಂದಿನ ರೀತಿಯಾಗಿತ್ತು. ಪಕ್ಷಗಳು ಮೊಕದ್ದಮೆಯೊಂದರಲ್ಲಿ ಮೂಲಭೂತ ಅಂಶವನ್ನು ಒಪ್ಪದೇ

ಹೋದಲ್ಲಿ ಅಥವಾ ಪರಸ್ಪರ ಕಠಿಣ ಪರೀಕ್ಷೆಯೊಂದಕ್ಕೆ ಆಹ್ವಾನ ನೀಡಿದಲ್ಲಿ ಅಥವಾ ಫಿರ್ಯಾದಿಯ ಮತ್ತು ಆಪಾದಿತನ ಸಾಕ್ಷಿಯು ಮತ್ತು ಅವರಿಗೆ ಸಂಬಂಧಿಸಿದ ಇತರ ಸಾಕ್ಷಿಗಳು ಮೊಕದ್ದಮೆಯನ್ನು ರುಜುವಾತು ಪಡಿಸಲು ಅಸಮರ್ಥವಾದಲ್ಲಿ ಕಠಿಣ ಪರೀಕ್ಷೆಗಳು ನಡೆಯುತ್ತಿದ್ದವು. ಕಠಿಣ ಪರೀಕ್ಷೆಯು ಪ್ರಾರಂಭಗೊಳ್ಳುವ ಮೊದಲು ದೇವಸ್ಥಾನದಲ್ಲಿ ದೇವರನ್ನು ಪೂಜಿಸಲಾಗುತ್ತಿತ್ತು. ಸಂಬಂಧಿಸಿದ ವ್ಯಕ್ತಿಯ ವಿರುದ್ಧ ಹೊರಿಸಲಾದ ಆಪಾದನೆಯ ರೀತಿಯನ್ನೊಳಗೊಂಡ ಚೀಟಿಯೊಂದನ್ನು ಆಪಾದಿತನ ತಲೆಯ ಮೇಲೆ ನ್ಯಾಯಾಧೀಶನಿಂದ ಇಡಲಾಗುತ್ತಿತ್ತು. ನಂತರ ನ್ಯಾಯಾಧೀಶನು ಕೆಲವು ಮಂತ್ರಗಳನ್ನು ಪಠಿಸುತ್ತಿದ್ದನು. ನಂತರ ಕಠಿಣ ಪರೀಕ್ಷೆಯು ಪ್ರಾರಂಭವಾಗುತ್ತಿತ್ತು. ನ್ಯಾಯಾಧೀಶನು ಆಪಾದಿತನು ಅಪರಾಧಿಯು ಹೌದೇ ಅಲ್ಲವೇ ಎಂಬುದರ ಫಲಿತಾಂಶವನ್ನು ಪರೀಕ್ಷಿಸಿ ನಂತರ ತನ್ನ ತೀರ್ಮಾನವನ್ನೊಳಗೊಂಡ ಪ್ರಮಾಣಪತ್ರವನ್ನು ಕೊಡುತ್ತಿದ್ದನು. ಎಲ್ಲೆಯ ಎಲ್ಲಾ ವಿವಾದಗಳನ್ನೂ ರಾಜನೂ ಮತ್ತು ಅವನ ಸಚಿವ ಸಂಪುಟವೂ ನಿರ್ಧರಿಸುತ್ತಿದ್ದರು. ಕ್ರಿ.ಶ.1275ರಲ್ಲಿ[4] ಗರುಡನಹಳ್ಳಿಯ ನಿವಾಸಿಗಳಿಗೂ ಮತ್ತು ಮಾರುಡಿಪುರ ನಿವಾಸಿಗಳ ನಡುವೆ ತಮ್ಮ ಗ್ರಾಮಗಳ ಗಡಿಗಳ ಬಗ್ಗೆ ವಿವಾದ ತಲೆದೋರಿತು. ರಾಜನಿಗೆ ಈ ವಿವಾದವನ್ನು ಬಗೆಹರಿಸಲು ಸರಿಯಾದ ಸಾಕ್ಷ್ಯಾಧಾರಗಳಿರಲಿಲ್ಲ. ರಾಜಧಾನಿಯಲ್ಲಿ ಹೊಯ್ಸಳೇಶ್ವರನ ದೇವಾಲಯದ ಮುಂದೆ ಕಠಿಣ ಪರೀಕ್ಷೆಯನ್ನು ನಡೆಸಲಾಯಿತು ಮತ್ತು ಗರುಡನಹಳ್ಳಿಯ ಪ್ರತಿನಿಧಿಗಳು ಪರೀಕ್ಷೆಯಲ್ಲಿ ಜಯಗಳಿಸಿದ್ದರಿಂದ ರಾಜನರಸಿಂಹನು ಅವರಿಗೆ ಕೊಡುಗೆಯ ಒಂದು ಪ್ರಮಾಣಪತ್ರವನ್ನು ಕೊಟ್ಟನು. ಗಡಿ ವಿವಾದದ ಮತ್ತೊಂದು ದೃಷ್ಟಾಂತವನ್ನು ಇಲ್ಲಿ ಕೊಡಬಹುದು. ಹಳೇಬೀಡುವಿನಲ್ಲಿ ದೊರೆತಿರುವ ದಾಖಲೆಯ ಪ್ರಕಾರ ದೇವಣ್ಣನು ಭಂಡಾರಿ ಆದಿಯಣ್ಣನಿಗೆ ನಿವೇಶನವೊಂದನ್ನು ಮಾರಿದನು ಮತ್ತು ಕಾಲಾನುಕ್ರಮದಲ್ಲಿ ಅವನ ಮಕ್ಕಳಾದ ನಾಯಣ್ಣ ಮತ್ತು ಸೋಮಣ್ಣನು ಇದನ್ನು ತಿಳಿಯದೆ ಆ ನಿವೇಶನವನ್ನು ತಮ್ಮದಾಗಿಸಿಕೊಳ್ಳಲು ಪ್ರಯತ್ನಿಸಿದರು. ದೂರು ರಾಜನಲ್ಲಿಗೆ ಹೋಯಿತು. ಕೇಸು ಪ್ರತಿವಾದಿಗಳ ಪರ ತೀರ್ಮಾನಿಸಲ್ಪಟ್ಟಿತು ಮತ್ತು ಅವರು ತಮ್ಮ ತಂದೆಯವರ ಇಚ್ಛೆಯನ್ನು ಪೂರೈಸಲೇಬೇಕಾಗಿ ಬಂದಿತು.

ಶಿಕ್ಷೆಗಳು ಕಠಿಣವಾಗಿದ್ದವು. ಮಂತ್ರಿ ಭಾರತೇಯ ದಂಡನಾಯಕನಿಂದ ರಂಧ್ರ ಕೊರೆದು ಅದರ ಮೂಲಕ ಕನ್ನ ಹಾಕಿದ ತಪ್ಪಿಗೆ ಓರ್ವ ವ್ಯಕ್ತಿಯು ಕೊಲ್ಲಲ್ಪಟ್ಟನು. ಅರಕಲಗೂಡಿನ ತಾಲ್ಲೂಕಿನಲ್ಲಿ ದೊರೆತಿರುವ ಶಿಲಾಶಾಸನವು ರಾಜಧನವನ್ನು ಅತಿಕ್ರಮಿಸಿದ್ದಕ್ಕೆ ಶಿಕ್ಷೆಯನ್ನು ನೀಡಲಾಗಿದ್ದುದರ ಬಗ್ಗೆ ತಿಳಿಸುತ್ತದೆ. ದಾನವಾಗಿ ನೀಡಲಾದ ಭೂಮಿಯನ್ನು ದುರುಪಯೋಗಪಡಿಸಿಕೊಂಡರೆ ಅಥವಾ ರಾಜಾಜ್ಞೆಯನ್ನು ಉಲ್ಲಂಘಿಸಿದರೆ ಅದನ್ನು ಪಾಪವೆಂದು ಪರಿಗಣಿಸಲಾಗುತ್ತಿತ್ತು ಮತ್ತು ದೈಹಿಕ ಶಿಕ್ಷೆಗೆ ಗುರಿಯಾಗಬೇಕಾಗುತ್ತಿತ್ತು. ಕೆಲವು ಅಪರಾಧಗಳಿಗೆ ದಂಡವನ್ನು ವಿಧಿಸಲಾಗುತ್ತಿತ್ತು ಅಥವಾ ವೃತ್ತಿಯಿಂದ ಉಚ್ಚಾಟನೆಯಾಗುತ್ತಿತ್ತು.

ಕೊಲೆ ಅಪರಾಧಿಗಳಿಗೆ ರಾಜನಿಂದಲೇ ಖುದ್ದಾಗಿ ಅಥವಾ ಜಿಲ್ಲೆಯನ್ನು ಆಳುವವರ ರಾಜನ ಅಧಿಕಾರಿಗಳಿಂದ ಶಿಕ್ಷೆ ವಿಧಿಸಲಾಗುತ್ತಿತ್ತು.

ಹೀಗೆ ರಾಜನೇ ನ್ಯಾಯಕ್ಕಾಗಿ ಪ್ರಾರ್ಥಿಸಬೇಕಾದಲ್ಲಿ ಅತ್ಯುನ್ನತ ಅಥವಾ ಉಚ್ಚತಮ ನ್ಯಾಯಾಲಯವಾಗಿದ್ದ ಮತ್ತು ಅವನೇ ಸಾರ್ವಭೌಮವಾದುದರಿಂದ ಅವನಲ್ಲಿ ನ್ಯಾಯಕ್ಕಾಗಿ ಮೊರೆ ಹೋದಾಗ ಯಾವುದೇ ಕೇಸನ್ನಾದರೂ ಅವನು ವಿಚಾರಿಸಬಹುದಿತ್ತು.

4.4 ಸೈನಿಕ ಆಡಳಿತ

ರಾಜಾ ನರಸಿಂಹನು ಸುಸಂಘಟಿತ ಸೈನ್ಯ ಬಲವನ್ನು ಹೊಂದಿದ್ದನು. ಇಲ್ಲದಿದ್ದಲ್ಲಿ ಶತ್ರುಗಳ ಮೇಲೆ ದಿಗ್ವಿಜಯುವನ್ನು ಸಾಧಿಸಲಾಗುತ್ತಿರಲು ರಾಜನೇ ಮುಖ್ಯ ಸೇನಾಧಿಪತಿಯಾಗಿದ್ದನು ಮತ್ತು ಅವನೇ ಖುದ್ದಾಗಿ ಶತ್ರುಗಳ ವಿರುದ್ಧ ದಂಡೆತ್ತಿ ಹೋಗುತ್ತಿದ್ದನು. ನರಸಿಂಹನೇ ನಿಡುಗಲ್ ಚೋಳರ ವಿರುದ್ಧ ಸೈನ್ಯವನ್ನು ನಡೆಸಿದ್ದನು.

ರಾಜನಿಂದ ನೇಮಿಸಲ್ಪಟ್ಟ ಅನೇಕ ಸೈನಿಕ ಅಧಿಕಾರಿಗಳಿದ್ದ ದಂಡನಾಯಕನು ಒಬ್ಬ ಮುಖ್ಯ ಸೈನಿಕ ಅಧಿಕಾರಿಯಾಗಿದ್ದನು. ಮಹಾಪ್ರಧಾನರು ಮತ್ತು ಸರ್ವಾಧಿಕಾರಿಗಳೆಂಬ ಪೌರ ಅಧಿಕಾರಿಗಳು ಸಹ ಸೈನಿಕ ಕರ್ತವ್ಯಗಳಲ್ಲಿ ಬಹಳ ದಕ್ಷರಾಗಿದ್ದರು. ಸೈನ್ಯವು ಕಾಲಾಳುಗಳು, ಅಶ್ವದಳ, ಗಜದಳ ಮತ್ತು ರಥಗಳನ್ನೂ ಮತ್ತು ಪಾಳೆಯಗಾರರಿಂದ ಸೈನಿಕರನ್ನೂ ಒಳಗೊಂಡಿತ್ತು.

ಹೊಯ್ಸಳ ಸೈನ್ಯದಲ್ಲಿ ಅತಿ ದೊಡ್ಡ ಘಟಕವೆಂದರೆ ಪದಾತಿ ಸೈನ್ಯ ಕೋಟೆಗಳನ್ನು ರಕ್ಷಿಸಲು ಬಿಲ್ಲು ಬಾಣಗಳನ್ನು ಮತ್ತು ಮುಖಾಮುಖಿ ಹೋರಾಟದಲ್ಲಿ ಅವರು ಭರ್ಜಿಗಳನ್ನು ಖಡ್ಗ ಮತ್ತು ಗುರಾಣಿಗಳನ್ನು ಬಳಸುತ್ತಿದ್ದರು. ಅನೇಕ ಪದಾತಿ ದಳಗಳ ದೃಶ್ಯಗಳು, ಹಳೇಬೀಡು, ಸೋಮನಾಥಪುರ, ಬೇಲೂರಿನಲ್ಲಿರುವ ಹೊಯ್ಸಳ ದೇವಾಲಯಗಳಲ್ಲಿ ಕೆತ್ತಲ್ಪಟ್ಟವೆ. ಸೋಮನಾಥಪುರದಲ್ಲಿರುವ ಕೇಶವ ದೇವಾಲಯದ ಕೆತ್ತಿರುವ ಗುಹೆಯೊಂದರಲ್ಲಿ ಕದನಕ್ಕೆ ಪಥಸಂಚಲನೆ ಮಾಡುತ್ತಿರುವ ಪದಾತಿಗಳ ದೃಶ್ಯವೊಂದಿದೆ. ಅವರು ತಮ್ಮಲ್ಲಿ ಗುರಾಣಿಗಳು, ಖಡ್ಗಗಳು, ಬಲ್ಲುಬಾಣಗಳು ಮತ್ತು ಭರ್ಜಿಗಳನ್ನು ಹಿಡಿದಿರುವಂತೆ ತೋರಿಸಲಾಗಿದೆ. ಸೈನಿಕರು ಸಾಮಾನ್ಯವಾಗಿ ಚಪ್ಪಟೆಯಾದ ಒಂದು ಶಿರಸ್ತ್ರಾಣವನ್ನು ಕಿವಿಗಳವರೆಗೂ, ಕೆಳಕ್ಕೆ ಬರುವಂತೆ ಧರಿಸುತ್ತಿದ್ದರು. ಅವರ ಉಡುಗೆಯು ಹೆಚ್ಚು ಕಡಿಮೆ ತೊಡೆಯ ಮಧ್ಯಭಾಗದವರೆಗೂ ತಲುಪಬಹುದಾದಷ್ಟು ಉದ್ದನೆಯ ತೋಳುಗಳುಳ್ಳ ಒಂದು ಒಳಅಂಗಿಯನ್ನು ಒಳಗೊಂಡಿತ್ತು. ಕಾಲ್ಗಳು ಮತ್ತು ತೊಡೆಗಳು ಮೊಣಕಾಲಿನ ಕೆಳಗಿನವರೆವಿಗೂ ತಲುಪುವ ದಪ್ಪನೆಯ ಧೋತಿಯೊಂದಿಗೆ ಮುಚ್ಚಲ್ಪಟ್ಟಿದ್ದವು ಮತ್ತು ತುದಿಗಳು ನೆಲದವರೆವಿಗೂ ಕೆಳಗೆ ತೂಗಾಡುತ್ತಿದ್ದವು. ಮೊಣಕಾಲ್ಗಳ ಕೆಳಗೆ ಕಾಲುಗಳು ಬೆತ್ತಲೆಯಾಗಿದ್ದವು. ಸೈನಿಕರಲ್ಲಿ

ಕೆಲವರು ತಮ್ಮ ಎಡಗೈಯಲ್ಲಿ ಗುರಾಣಿಗಳನ್ನು ಹಿಡಿದಿರುವಂತೆ ಮತ್ತು ಖಡ್ಗವನ್ನು ಬಲಗೈಯಲ್ಲಿ ಹಿಡಿದಿರುವಂತೆ ತೋರಿಸಲಾಗಿದೆ. ಗುರಾಣಿಗಳು ಚೌಕದ ವಿಧದಲ್ಲಿದ್ದವು ಮತ್ತು ಖಡ್ಗಗಳು ಒಂದೇ ಅಲಗನ್ನು ಹೊಂದಿದ್ದವು. ಕೆಲವು ಸೈನಿಕರು ಬಿಲ್ಲು ಮತ್ತು ಬಾಣಗಳನ್ನು ಹೊಂದಿರುವಂತೆ ತೋರಿಸಲಾಗಿದೆ. ಕೆಲವರು ಉದ್ದನೆಯ ಮತ್ತು ಮೊನಚಾದ ಭರ್ಜಿಗಳನ್ನು ಎರಡೂ ಕೈಗಳಲ್ಲಿ ಹಿಡಿದಿದ್ದಾರೆ. ಸೈನ್ಯದಲ್ಲಿ ಬಿಲ್ಲುಗಾರರು ಒಂದು ಮುಖ್ಯ ಘಟಕವಾಗಿದ್ದರು.

ಅಡಿಟಿಪ್ಪಣಿಗಳು

1) E.C. V. A.K 49
2) Ibid III Ms 79
3) Ibid IV Ng 49
4) Ibid III Md 79

ಅಧ್ಯಾಯ – 5

5.1 ಧರ್ಮ

5.2 ಶೈವ ದೇವಾಲಯಗಳಿಗೆ ದಾನಿಗಳಾದ ದಂಡನಾಯಕರು

5.3 ದಂಡನಾಯಕರು ದೇವಾಲಯ ನಿರ್ಮಾಣದ ಚಟುವಟಿಕೆಗಳನ್ನು ಪ್ರೋತ್ಸಾಹಿಸಿದರು

5.4 ವಾಸ್ತುಶಿಲ್ಪ

5.4.1 ಮಾಧವರದ ದೇವಾಲಯ

5.4.2 ಲಕ್ಷ್ಮೀನರಸಿಂಹ ದೇವಾಲಯ

5.4.3 ಮೂಲೆ ಶಂಕರೇಶ್ವರ ದೇವಾಲಯ

5.4.4 ಮಲ್ಲೇಶ್ವರ ದೇವಾಲಯ

5.4.5 ಪಂಚಲಿಂಗೇಶ್ವರ ದೇವಾಲಯ

5.4.6 ಜೈನಮತ

ಅಧ್ಯಾಯ–5

ಹೊಯ್ಸಳ ರಾಜ ಮೂರನೇ ನರಸಿಂಹ ಆಳ್ವಿಕೆಯ ಕಾಲದಲ್ಲಿ ದಂಡನಾಯಕರ ಸಾಂಸ್ಕೃತಿಕ ಕೊಡುಗೆ

5.1 ಧರ್ಮ

ಹೊಯ್ಸಳರ ಕಾಲವು ಕ್ರಿ.ಶ. 11, 12 ಮತ್ತು 13ನೆಯ ಶತಮಾನಗಳಲ್ಲಿ ಸಂಪೂರ್ಣ ಧಾರ್ಮಿಕ ಸಹಿಷ್ಣುತೆಯನ್ನು ಕಂಡಿತು. ಹಿಂದೂ, ಜೈನ, ಶೈವ, ವೈಷ್ಣವ ಮತ್ತು ವೀರಶೈವ ಧರ್ಮಗಳು ಹೊಯ್ಸಳ ಸಾಮ್ರಾಜ್ಯದಲ್ಲಿ ವಿಶ್ವಾಸನೀಯ ವಾತಾವರಣವನ್ನು ಕಂಡೆವು. ಹೊಯ್ಸಳರು ಗಂಗ, ರಾಷ್ಟ್ರಕೂಟ ಮತ್ತು ಚಾಲುಕ್ಯರ ಹಾದಿಯನ್ನೇ ಅನುಸರಿಸಿದರು ಮತ್ತು ಹಿಂದಿನ ಕ್ರಮದ ಪರಂಪರೆಯನ್ನೇ ಮುಂದುವರೆಸಿದರು. ಅವರು ವೈಷ್ಣವ ಧರ್ಮ ಮತ್ತು ವೀರಶೈವಧರ್ಮದ ಪ್ರಭಾವದ ಹೊಸ ಅಲೆಗೆ ರಕ್ಷಣೆ ನೀಡಿದರು. ಧರ್ಮಪೂಜೆ ಮತ್ತು ನಂಬಿಕೆಗಳ ಸ್ವಾತಂತ್ರ್ಯವು ವಿಭಿನ್ನ ಧರ್ಮಗಳನ್ನು ಅನುಸರಿಸಿಯೂ, ಶಾಂತಿಯುತ ಜೀವನವನ್ನು ನಡೆಸಲು ದಾರಿ ಮಾಡಿತು.

ಹೊಯ್ಸಳರು ಎಲ್ಲಾ ಧರ್ಮಗಳಿಗೂ ಸಮಾನವಾದ ರಾಜಾಶ್ರಯವನ್ನಿತ್ತರು. ಹೊಯ್ಸಳರ ಧಾರ್ಮಿಕ ಔದಾರ್ಯವನ್ನು ಮಂದಿರ ನಿರ್ಮಾಣದ ಅನೇಕ ಚಟುವಟಿಕೆಗಳಲ್ಲಿ ನಾವು ಕಾಣಬಹುದು. ದೇವಾಲಯಗಳ ನಿರ್ಮಾಣಕ್ಕೆ ಭೂದಾನ ಅಲ್ಲಿ ಪೂಜಾ ವಿಧಿವಿಧಾನಗಳನ್ನು ಅನುಸರಿಸಲು ಧನಸಹಾಯ ಅವುಗಳ ರಿಪೇರಿ, ನವೀಕರಣಕ್ಕಾಗಿ ಹಣ ಮತ್ತು ದೇವಾಲಯಗಳ ರಕ್ಷಣೆ ಹೀಗೆ ಅವರ ಇನ್ನೂ ಹಲವು ಕಾರ್ಯಕ್ರಮಗಳನ್ನು ನಾವು ಗಮನಿಸಬಹುದಾಗಿದೆ. ಆ ಕಾಲದ ಹೊಯ್ಸಳ ಶಿಲಾಲೇಖಗಳಲ್ಲಿ ಹೊಯ್ಸಳರ ಕಾಲ ಅನ್ಯಮತ ಸಹಿಷ್ಣುತಾ ಭಾವಕ್ಕೆ ಸಾಕಷ್ಟು ಪುರಾವೆಗಳನ್ನು ಒದಗಿಸಿವೆ.

5.2 ಶೈವ ದೇವಾಲಯಗಳಿಗೆ ದಾನಗಳಾದ ದಂಡನಾಯಕರು

ಪೆರುಮಾಳದೇವ ದಂಡನಾಯಕನು ಹೊಯ್ಸಳ ವೀರನರಸಿಂಹನಿಂದ ತಾಮ್ರಪತ್ರ ಸನ್ನದಿನ ಮೂಲಕ ಬೆಟ್ಟದ ಕೋಟೆ, ಬಿಲ್ಲಬೆಳಗುಂಡ ಮತ್ತು ತಿಪ್ಪೂರ್‌ಗಳೆಂಬ ಮೂರು ಗ್ರಾಮಗಳನ್ನು ಪಡೆದನು. ಪೆರುಮಾಳನು ಈ ಎಲ್ಲಾ ಸ್ಥಳಗಳ ಮತ್ತು ಎಲ್ಲಾ 31 ನಿಯೋಗಗಳ ಒಡೆಯನಾಗಿದ್ದನು.

ಪೆರುಮಾಳನು ರಾಮಕೃಷ್ಣದೇವರ ಭಕ್ತನಾಗಿದ್ದನು. ಪ್ರಸನ್ನ ಮಾಧವ, ರಾಮಕೃಷ್ಣ ಮತ್ತು ವರದ ಅಲ್ಲಾಳನಾಥ ದೇವರುಗಳಿಗಾಗಿ ಬೈಚೇಯನಾಯಕ, ಬಲ್ಲೇಯ ನಾಯಕ, ರಂಗೇಯನಾಯಕ, ಹರಿಯಾಣನಾಯಕ, ಕಚೇಯನಾಯಕ ಇವರೆಲ್ಲರೂ ಗಾನಸಮುದ್ರದ ದೊಡ್ಡಕೆರೆಯ ಕೆಳಗಡೆ ಕೃಷಿ ಭೂಮಿಯ ಮೂರು ಭಾಗಗಳನ್ನು ಭೂಮಿಯನ್ನು ದಾನವಾಗಿ ಕೊಟ್ಟರು.

1) ಸಿಂಗೇಯ ದಂಡನಾಯಕನು ಬೆಮ್ಮತ್ತನ ಕಲ್ಲುವಿನಲ್ಲಿ ಸ್ಥಾಪಿಸಲ್ಪಟ್ಟ ಸೋಮನಾಥ ದೇವರಿಗಾಗಿ ಕಾಣಿಕೆಗಳನ್ನು ನೀಡಲು ಧನಸಹಾಯ ಮಾಡಿದನು.[1]
2) ಮಹಾಪ್ರಧಾನ ಹರಿಹರ ದಂಡನಾಯಕರಿಂದ ನಾದ-ದೆರೆ ಮಗ್ಗದ ಮೇಲಣ ತೆರಿಗೆ ಮೊದಲಾದ ತೆರಿಗೆಗಳಿಂದ ಬಂದ ಆದಾಯದ ಬಹುಭಾಗವನ್ನು ಕಾಲಕುನಿಯ ದೇವರಾದ ನಾಗೇಶ್ವರದೇವನ ಪೂಜೆಗಾಗಿ ಸ್ಥಾನಿಕರಾದ ಬಿಲ್ಲಯ್ಯರಿಗೆ ಒಪ್ಪಿಸಲಾಯಿತು.
3) ಕೇತೇಯ ದಂಡನಾಯಕನು ದೇವ ಅಲ್ಲಾಲನಾಥನಿಗಾಗಿ ಕೇತಮ್ಮಹಳ್ಳಿ ಗ್ರಾಮವನ್ನು ಉಡುಗೊರೆಯಾಗಿ ಕೊಟ್ಟನು.
4) ಪೆರುಮಾಳ ದಂಡನಾಯಕನು ಪಡಿನಾಡಿನ ಎಲ್ಲಾ ಪ್ರಭು ಗೋಮುದರೊಡಗೂಡಿ ಸಭೆ ಸೇರಿ ಇದ್ಯೆಯೂರ್ ಗ್ರಾಮವನ್ನು ದೇವದಾನವಾಗಿ ಮೂಗೂರಿನ ಪ್ರದೇಶಿನಾಯಕದೇವ ದೇವನಿಗಾಗಿ ಇತ್ತನು.[2]
5) ನರಸಿಂಹದೇವರಸನು ಸಹಾನುಭೂತಿಯಿಂದ ಸ್ಥಾನದ ದೇವ ಕಾಳಿದೇವನ ಸಿಂದೇಶ್ವರ ಮಂಡಲೇಶ್ವರ ಸ್ವರದೇವ ಮತ್ತು ನೀರ್‌ಬ್ಬಾನದೇವನ ಸ್ಥಾನಿಕಗಳನ್ನು ಪೆರುಮಾಳದೇವ ದಂಡನಾಯಕನಿಗೆ ದಾನವಾಗಿ ಕೊಟ್ಟನು.
6) ಬೊಮ್ಮೆಯ ನಾಯಕನಿಂದ ದೇವ ಬಿಲ್ಲೇಶ್ವರನಿಗೆ ಸಂದ ದಾನ.
7) ದುಮ್ಮೆಯನಾಯಕನು ಓರ್ವ ಶಿವನಾಗಿದ್ದನು.
8) ಬೊಮ್ಮಣ ದಂಡನಾಯಕನು ದೇವಸ್ಥಾನದ ಬೋಧಕರು ಮೊದಲಾದ ಮಹಾಜನರಿಗೆ ವಾರ್ಷಿಕ ಬಡ್ಡಿಯ ದರದಲ್ಲಿ ಪ್ರಸಿದ್ಧ ದೇವರಾದ ಹೊಯ್ಸಳೇಶ್ವರ ದೇವಾಲಯದ ಪಂಚಿಕೇಶ್ವರನಿಗೆ ಧಾವಿಸೇಯ ಪೂಜೆಗಾಗಿ ಹತ್ತು ಗದಯನಗಳನ್ನು ದಾನ ಮಾಡಿದನು.
9) ಬೊಮ್ಮಣ ದಂಡನಾಯಕನು ಭೂಮಿಯ 95 ಕಂಬಗಳನ್ನು ರಾಮನಾಥದೇವನ ಪೂಜೆಗಾಗಿ ಹೂದೋಟವನ್ನು ನಿರ್ಮಿಸಲು ದಾನ ಮಾಡಿದನು.
10) ಮಲ್ಲಿದೇವ ದಂಡನಾಯಕನು ದೇವರುಗಳಾದ ನಗರೇಶ್ವರ ಮತ್ತು ತಿಮ್ಮೇಶ್ವರರಿಗಾಗಿ ಗೌಡಿಕೇಯ ಕೊಡುಗೆಯಿಂದ ದಾನ ಮಾಡಿದನು.

5.3 ದಂಡನಾಯಕರು ದೇವಾಲಯ ನಿರ್ಮಾಣದ ಚಟುವಟಿಕೆಗಳನ್ನು ಪ್ರೋತ್ಸಾಹಿಸಿದರು

1) ಸೋಮ ದಂಡನಾಯಕನು ಐದು ದೇವಾಲಯಗಳನ್ನು ಕಟ್ಟಿಸಿದುದಕ್ಕೆ ಜವಾಬ್ದಾರನಾಗಿದ್ದನು. ಇವುಗಳಲ್ಲಿ ಪ್ರತಿಯೊಂದು ಹೊಯ್ಸಳ ವಾಸ್ತುಶಿಲ್ಪಕ್ಕೆ ಬಹುಮುಖ್ಯ ಉದಾಹರಣೆಯಾಗಿದೆ. ಈ ಕಟ್ಟಡಗಳು ತುರುವೇಕೆರೆಯಲ್ಲಿರುವ ಚೆನ್ನಿಗರಾಯ ಮತ್ತು ಸಂಕರೇಶ್ವರ ದೇವಾಲಯಗಳು (1260) ಹರಿದರಲ್ಲಿರುವ ಹರಿಹರೇಶ್ವರ ದೇವಾಲಯ (1268) ಸೋಮನಾಥಪುರದಲ್ಲಿರುವ ಕೇಶವ ಮತ್ತು ಪಂಚಲಿಂಗೇಶ್ವರ ದೇವಾಲಯಗಳನ್ನೊಳಗೊಂಡಿವೆ.

2) ಮಾನವೆಗ್ಗಡೆ ಕುಂದಮಾರನು ಮಹಾಮಾತ್ಯ ಮತ್ತು ಮಹಾಪ್ರಧಾನ ಖಾತೆಗಳನ್ನು ಹೊಂದಿದ್ದನು. ಒಂದು ಶೈವ ದೇವಾಲಯವನ್ನು ಕಟ್ಟಿಸುವ ಉದ್ದೇಶದಿಂದ ಒಂದು ಕೆರೆಯನ್ನು ಕಟ್ಟಿಸಿ ಮಂಡೇಶ್ವರನಗಾಗಿ ಆಹಾರ ಸಮರ್ಪಿಸಲು ಭೂಮಿಯನ್ನು ದೇವಾಲಯಕ್ಕೆ ದಾನವಾಗಿ ನೀಡಿದನು ಮತ್ತು ಕಾಳಿದೇವನ ಸೇವೆಗಾಗಿ ಭೂಮಿಯ ಒಂದು ಪಾಲನ್ನು ದಾನವಾಗಿ ನೀಡಿದನು.

3) ಪೆರುಮಲ್–ದೇವ ದಂಡನಾಯಕನ ಸಹೋದರಿಯಾದ ಬಸವಿಯಕ್ಕೆ ಎಂಬಾಕೆಯು ಬ್ರಾಹ್ಮಣರಿಂದ ಸ್ವಲ್ಪ ಭೂಮಿಯನ್ನು ಕೊಂಡಳು ಮತ್ತು ಕ್ರಿ.ಶ.1271ರಲ್ಲಿ[3] ಆ ಭೂಮಿಯನ್ನೇ ಬೇಲೂರಿನ ದೇವಪ್ರಸನ್ನ ಮಾಧವನ ದೇವಾಲಯದ ಅಡಿಗೆ ಕೋಣೆಯ ಲೇಪನಕ್ಕಾಗಿ ಬಳಸಲೇ ಬೇಕೆಂಬ ಕರಾರಿನೊಂದಿಗೆ ದಾನ ಮಾಡಿದಳು.

ಕ್ರಿ.ಶ.1258ರಲ್ಲಿ[4] ವೀರ ನರಸಿಂಹನ ಕಾಲದಲ್ಲಿ ಬಹುಶಃ ಹಿರಿಯ ಭಂಡಿ ಕಂಬಿ ಸೆಟ್ಟಿಯ ಅಳಿಯನಾದ ಕಂದನಂಬಿಶೆಟ್ಟಿ ಎಂಬ ವರ್ತಕನು ತಾನು ದಾನವಾಗಿ ಕೊಟ್ಟ ಭೂಮಿಯನ್ನು ದೇವ ಕುಂಜೇಶ್ವರನ ಉತ್ಸವ ವಿಧಿಗಳಿಗೆ ಉಪಯೋಗಿಸಿಕೊಳ್ಳುವ ಪೂರ್ಣ ಆರ್ಥಿಕ ಸ್ವಾತಂತ್ರ್ಯವನ್ನು ಚಂದವ್ವೆ ಎಂಬ ಮಹಿಳೆಗೆ ವಹಿಸಿಕೊಟ್ಟನು ಮತ್ತು ಅದೇ ದಾನಿಯು ಮತ್ತೆ ಬಾಡಿಗೆ ರಹಿತ ತೋಟವನ್ನು ಅವನಿಂದ ಪಡೆಯಲು ಮತ್ತೋರ್ವ ಮಹಿಳೆ ಸೋವಿಯಕ್ಕಳೇ ಯೋಗ್ಯಳೆಂದು ಯೋಚಿಸಿದನು. ಇದನ್ನು ಆಗಿನ ಸ್ತ್ರೀಯರು ಅನುಭವಿಸುತ್ತಿದ್ದ ಆರ್ಥಿಕ ಹಕ್ಕುಗಳ ಬಗ್ಗೆ ಮತ್ತು ಹಣಕಾಸಿನ ವ್ಯವಹಾರವನ್ನು ನಿಭಾಯಿಸುವುದರಲ್ಲಿ ಸ್ತ್ರೀಯರಲ್ಲಿದ್ದ ಸಾಮರ್ಥ್ಯ ಮತ್ತು ಪ್ರಾಮಾಣಿಕತೆಗಳ ಬಗ್ಗೆ ಶ್ರೀಮಂತ ದಾನಿಗಳು ಇಟ್ಟಿದ್ದ ನಂಬಿಕೆಗೆ ಒಂದು ಉದಾಹರಣೆಗಾಗಿ ತೆಗೆದುಕೊಳ್ಳಬಹುದು.

ಹೊಯ್ಸಳರಸ ನರಸಿಂಹನ ಕೈಕೆಳಗೆ ವಸ್ತ್ರಗಳ ಒಡೆಯನಾದ ಕುವನ ಹೆಗ್ಗಡೆ ಮೊದಲು ತನ್ನ ಪತ್ನಿಯ ಒಪ್ಪಿಗೆಯನ್ನು ತನ್ನ ಗಂಡು ಮಕ್ಕಳೊಂದಿಗೆ ಮತ್ತು ಬಂಧುಗಳೊಂದಿಗೆ ಪಡೆದು ನಂತರ ಕ್ರಿ.ಶ.1286ರಲ್ಲಿ ರಾಜಗುರು ರುದ್ರ ಶಕ್ತಿದೇವ ಮತ್ತು ಮೊಸಲೆಯ ರೈತರ ಹಾಜರಿಯಲ್ಲಿ ಮಲ್ಲೇಯನ ಹಳ್ಳಿಯಲ್ಲಿ ತಾನು ಕಟ್ಟಿಸಿದ ಚನ್ನಕೇಶವ ದೇವಾಲಯವನ್ನು

ಉಡುಗೊರೆಯಾಗಿ ನೀಡಿದ ಮತ್ತು ಮಾಸಲೆಯ ಕೆಲವು ಗ್ರಾಮಗಳನ್ನು ದೇವರಿಗಾಗಿ ಮಹಾಮಂತ್ರಿ ಭೀಮಯ್ಯ ದಂಡನಾಯಕನ ತಾಯಿಗೆ ವ್ಯಕ್ತಿಗತ ವೈದ್ಯರಾದ ದೇವಪಿಲ್ಲೆಯಣ್ಣರವರ ಮಗನಾದ ಸಿದ್ದಣ್ಣನಿಗೆ ಸ್ವಲ್ಪ ಧನದೊಂದಿಗೆ ಉಡುಗೊರೆಗಳಾಗಿ ನೀಡಿದನು. ಇದೇ ಹೆಗ್ಗಡೆಯ ತನ್ನ ಪತ್ನಿಯ ಒಪ್ಪಿಗ ಪಡೆದು ಮಲ್ಲೇಯನ ಹಳ್ಳಿಯಲ್ಲಿ ಕೊಡಗಿ ಭೂಮಿಯನ್ನು ಮತ್ತು ಕಲ್ಲಿನ ಮನೆಯನ್ನು ಮತ್ತು ಮಾಸಲೆ ಎಂಬ ಸಣ್ಣ ಹಳ್ಳಿಯನ್ನು ಎಲ್ಲಾ ಹಕ್ಕುಗಳೊಂದಿಗೆ ನೀಡಿದನು.

ಪೆರುಮಳದೇವನ ತಾಯಿಯಾದ ಮಾಚಿಯಕ್ಕಳು ಕ್ರಿ.ಶ.1280ರಲ್ಲಿ[5] ನರಸಿಂಹ ದೇವರಿಗಾಗಿ ಸುಗಂಧಯುಕ್ತ ಪುಷ್ಪಗಳನ್ನು ಅರ್ಪಿಸಲು ಮತ್ತು ಬೃಂದಾವನಗಳನ್ನು (ತುಳಸಿ ಗಿಡಗಳನ್ನು) ಬೆಳೆಯಿಸುವ ಮತ್ತು ದೇವರ ಹೆಸರಿನಲ್ಲಿ ನಲವತ್ತು ಜನರಿಗೆ ಅನ್ನಸಂತರ್ಪಣೆ ಮಾಡಲು ಮತ್ತು ನಲವತ್ತು ಜನರಿಗೆ ಅಲ್ಲಿ ಆರಾಮಾಗಿ ಇರಲು ಬೇಕಾದ ಸೌಲಭ್ಯಗಳನ್ನು ಕಲ್ಪಿಸಲು ಅಲ್ಲದೆ ದೇವರಿಗೆ ನಾನಾ ರೀತಿಯ ಕಾಣಿಕೆಗಳನ್ನು ಅರ್ಪಿಸಲು ಇವೇ ಮೊದಲಾದ ಸದುದ್ದೇಶಗಳಿಗಾಗಿ ವಿಜಯನರಸಿಂಹಪುರದ ವೈಷ್ಣವ ಬ್ರಾಹ್ಮಣರಿಂದ ಆ ಕಾಲದ ಸರಿಯಾದ ಕ್ರಯ ಕೊಟ್ಟು ಸ್ವಲ್ಪ ಭೂಮಿಯನ್ನು ಕೊಂಡುಕೊಂಡಳು.

ಮರಿಯಾನೆ ದಂಡನಾಯಕನು ಸಿಂಧಘಟ್ಟ ಎಂಬಲ್ಲಿ ಪಾರ್ಶ್ವನಾಥನಿಗಾಗಿ ಅನೇಕ ಐದು ಗೋಪುರಗಳುಳ್ಳ ಭೂಮಿಯ ಮೇಲಿರುವ ಎಲ್ಲರೂ ಹೊಗಳುವಂತಹ ಸುಂದರವಾದ ಆಲನವೊಂದನ್ನು ಕಟ್ಟಿಸಿದನು ಮತ್ತು ಭೂಮಿಯ ಮೇಲೆ ಅದು ಪರಿಪೂರ್ಣ ನಿವಾಸವಾಗಿ ಕಂಡಿತು.

ಮಲ್ಲಿದೇವ ದಂಡನಾಯಕ ನಾಗೇಶ್ವರ ದೇವಾಲಯವನ್ನು ಕಟ್ಟಿಸಿದನು ಮತ್ತು ದೇವರ ಮತ್ತು ದೇವಾಲಯದ ಅಲಂಕಾರ ಮತ್ತು ದೀಪೋತ್ಸವಕ್ಕಾಗಿ ಗೋಲಿಯ ಸೋಮೇಯನ ಹಳ್ಳಿಯ ಪ್ರವೇಶದ್ವಾರದಲ್ಲಿ ಕಟ್ಟಲ್ಪಟ್ಟ ಕೆರೆಯ ಕೆಳಗಡೆ ಇದ್ದ ಗೌಡಿಕೆಯ ಕಛೇರಿಗೆ ಸೇರಿದ್ದ ತೋಟವೊಂದನ್ನು ಕಾಣಿಕೆಯಾಗಿ ನೀಡಿದನು.

ಪೆರುಮಾಳ ದಂಡನಾಯಕನು ಎಲ್ಲರಿಂದ ಅಗ್ರಹಾರವೆಂದು ಗೌರವಿಸಲ್ಪಟ್ಟು, ದಕ್ಷಿಣಕಾಶಿ ಎಂದು ಪರಿಗಣಿಸಲ್ಪಟ್ಟಿದ್ದ ಅಲುಗೋಡು ಅಥವಾ ಸರ್ವಜ್ಞಪ್ರಸನ್ನ ಚೆನ್ನಕೇಶವಪುರ ಎಂಬಲ್ಲಿ ಕೇಶವದೇವ ಮತ್ತು ರಂಗನಾಥ ದೇವಾಲಯಗಳ ರಂಗಮಂಟಪಗಳನ್ನು ಕಟ್ಟಿಸಿದನು. ಅಲ್ಲದೆ ಆ ಗ್ರಾಮದ ಈಶಾನ್ಯ ಭಾಗದಲ್ಲಿ ದೇವ ಮೂಲಸ್ಥಾನ ರಂಗನಾಥನ ರಂಗಮಂಟಪವನ್ನೂ ಮತ್ತು ಅದೇ ಗ್ರಾಮದ ಸಭಾಂಗಣವನ್ನೂ ಕಟ್ಟಿಸಿದನು.

ಅನಿಲೇಶ್ವರ ದೇವಾಲಯದ ನಿರ್ಮಾಣಕ್ಕಾಗಿ ಮತ್ತು ಕಂಬಹಳ್ಳಿ ಎಂಬಲ್ಲಿ ನಿರಂತರ ಅಗ್ನಿಯ ದಹನಕ್ಕೆ ಭೂಮಿಯನ್ನು ಉಡುಗೊರೆಯಾಗಿ ಮಾಧವ ದಂಡನಾಯಕನಿಂದ ಕೊಡಲ್ಪಟ್ಟಿತು.

ಪ್ರಸಿದ್ಧ ಮಹಾಪ್ರಧಾನ ಶಂಕರ ದಂಡನಾಯಕನಿಗೆ ಸೇರಿದ ನರಗುಂದ ನಾಡುವಿನಲ್ಲಿ ಹೊನ್ನಾಪುರ ಅಗ್ರಹಾರದ ಮೂಲಸ್ಥಾನ ಮಹಾದೇವನ ದೇವಾಲಯದಲ್ಲಿ ಕಂಡಮರಿಗಲದ ಸುರಿಗೇಯ ಗಂಗಣ್ಣನು ಕೈವರು ನಾಡಿನಲ್ಲಿ ನಾಡಿಯ ಮೂರ್ತಿಯನ್ನು ದೇವರ ಮುಂದೆ ಪ್ರತಿಷ್ಠಾಪಿಸಿರುವುದಾಗಿ ತಿಳಿದು ಬರುತ್ತದೆ.

ಹೀಗೆ ದಂಡನಾಯಕರನ್ನು ಕುರಿತ ಈ ಪ್ರಸಂಗಗಳು ಅವರ ಬಹುಮುಖ್ಯ ವಿಚಾರಗಳನ್ನು ಅದರಲ್ಲೂ ಮತೀಯ ಸಹಿಷ್ಣುತೆಯನ್ನು ಬಹಿರಂಗಗೊಳಿಸುತ್ತವೆ. ದಕ್ಷತೆಯ ಆಡಳಿತದ ದೃಷ್ಟಿಯಿಂದ ಹೊಯ್ಸಳರು ತಮ್ಮ ಹಿಂದಿನವರ ನೀತಿಯನ್ನೇ ಅನುಸರಿಸಿದರು ಮತ್ತು ಹೊಯ್ಸಳ ರಾಜ್ಯದಲ್ಲಿ ಪ್ರತಿ ಮೂಲೆ ಮೂಲೆಯಲ್ಲಿಯೂ ಶತಮಾನಗಳಿಂದಲೂ ದೇವಾಲಯಗಳನ್ನು ಕಟ್ಟುವ ಚಟುವಟಿಕೆಗಳ ಮೂಲಕ ಎಲ್ಲಾ ಪಂಗಡದ ಜನರಿಗೂ ರಾಜಾಶ್ರಯ ನೀಡಿದರು.

ಅವನು ವಿಜಯನಗರ ವಂಶದ ಮೊದಲನೇ ಹರಿಹರನ ಮಗಳನ್ನು ಮದುವೆಯಾದನು. ಸಿಂಗೇಯ ದಂಡನಾಯಕನು ಮೂರನೇ ನರಸಿಂಹನ ಕೈಕೆಳಗೆ ಸೇನಾಧಿಕಾರಿಯಾಗಿದ್ದನು ಮತ್ತು ಸಂತರ ಮತ್ತು ರಮಾನಾಥನ ವಿರುದ್ಧ ನಡೆದ ಕದನಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದನು.

ಮೂರನೇ ನರಸಿಂಹನ ಕೈಕೆಳಗೆ ಸೋಮೆಯ ದಂಡನಾಯಕನು ಸಮರ್ಥ ಮಂತ್ರಿಗಳಲ್ಲಿ ಒಬ್ಬನಾಗಿದ್ದನು. ತನ್ನ ಶಕ್ತಿ ಸಾಮರ್ಥ್ಯ ಮತ್ತು ಸಂಘಟನಾ ಬಲದಿಂದ ಅವನು ಆಡಳಿತದಲ್ಲಿ ಸಹಾಯ ಮಾಡಿದನು. ಅವನ ಕಾರ್ಯಗಳಲ್ಲಿ ಅವನು ದಣಿವನ್ನೇ ಕಾಣುತ್ತಿರಲಿಲ್ಲ. ತನ್ನ ದೇಶದ ಕ್ಷೇಮಾಭ್ಯುದಯದ ಗಮನಹರಿಸುವ ಅವನ ಉತ್ಸಾಹಕ್ಕೆ ಎಂದೂ ಕುಂದು ಬರಲಿಲ್ಲ. ಕ್ರಿ.ಶ.1258 ರಿಂದ 1303 ರವರೆಗೆ ದೇಶದ ಆಡಳಿತದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದನು. ಮೂರನೇ ನರಸಿಂಹ ಮತ್ತು ಮೂರನೇ ಬಲ್ಲಾಳನ ಕೈಕೆಳಗೆ ಅವನು ಮಂತ್ರಿಯಾಗಿದ್ದನು. ಅವನು ಬೆಮ್ಮತೂರ ದುರ್ಗ (ಚಿತ್ರದುರ್ಗ)ದ ರಾಜ್ಯಪಾಲನಾಗಿದ್ದನು. ಕ್ರಿ.ಶ.1303ರಲ್ಲಿ ಸೇವುಣ ಸೈನ್ಯಾಧಿಕಾರಿಯಾದ ಕಂಪಿಲದೇವನ ವಿರುದ್ಧ ಶೌರ್ಯದಿಂದ ಹೋರಾಡಿದ. ಹೀಗೆ ದೇಶದ ಆಡಳಿತದಲ್ಲಿ 45 ವರ್ಷಗಳ ದೀರ್ಘ ಆಯಸ್ಸನ್ನು ಕಳೆದ ಈ ಮಹಾನ್ ಸೇನಾಧಿಕಾರಿಯ ಜೀವನವು ಕೊನೆಗೊಂಡಿತು. ಮತ್ತೊಬ್ಬ ಸೈನ್ಯಾಧಿಕಾರಿಯಾದ ಬೀರೆಯ ದಂಡನಾಯಕ ಹೆಸರು ನರಸಿಂಹನ ಕೈಕೆಳಗೆ ಮಂತ್ರಿಯಾಗಿದ್ದನೆಂದು ಅನೇಕ ಶಿಲಾಶಾಸನಗಳಲ್ಲಿ ದಾಖಲೆಯಾಗಿದೆ.

5.4 ವಾಸ್ತುಶಿಲ್ಪ

ಮೂರನೇ ನರಸಿಂಹನ ಕಾಲದಲ್ಲಿ ಅನೇಕ ದೇವಾಲಯಗಳು ಕಟ್ಟಲ್ಪಟ್ಟವು ಮತ್ತು ಕೆಲವು ಹೊಯ್ಸಳ ಕಾಲದ ವಾಸ್ತುಶಿಲ್ಪದ ಕೊನೆಯ ವೈಭವೋಪೇತ ಘಟ್ಟವಾಗಿತ್ತು. ಮೂರನೇ

ನರಸಿಂಹನು ಎಲ್ಲಾ ಮತಧರ್ಮಗಳಲ್ಲೂ ಸಹಿಷ್ಣುತೆಯನ್ನು ತೋರಿ ಮಂದಿರಗಳ ಮತ್ತು ಅಗ್ರಹಾರಗಳ ನಿರ್ವಹಣೆಗೆ ಉದಾರವಾಗಿ ನೆರವು ನೀಡಿದನು. ದಂಡನಾಯಕರು ಈ ಕಾಲದಲ್ಲಿ ಮಂದಿರಗಳನ್ನು ನಿರ್ಮಿಸಿದರು.

ಈ ಕಾಲದಲ್ಲಿ ದಂಡನಾಯಕರಿಂದ ಈ ಕೆಳಕಂಡ ದೇವಾಲಯಗಳು ನಿರ್ಮಾಣಗೊಂಡವು.

5.4.1 ಮಾಧಾವರದ ದೇವಾಲಯ, ಬೆಳ್ಳೂರು, ಮಂಡ್ಯ ಜಿಲ್ಲೆ

ಆಧುನಿಕ ಬೆಳ್ಳೂರು ಮೂರನೇ ನರಸಿಂಹನಿಂದ ಒಂದು ಅಗ್ರಹಾರವಾಗಿ ಮಾಡಲ್ಪಟ್ಟಿತು. ಅದು ಉದ್ಭವ ನರಸಿಂಹಪುರ ಎಂದು ಹೆಸರಿಸಲ್ಪಟ್ಟಿತು. ಉದ್ದನೆಯ ಶಿಲಾಲೇಖದ ಪ್ರಕಾರ ಪೆರುಮಾಳ ದಂಡನಾಯಕನ ಪ್ರೋತ್ಸಾಹದಿಂದ ಈ ದೇವಾಲಯವು ಕ್ರಿ.ಶ.1284ರಲ್ಲಿ ಕಟ್ಟಲ್ಪಟ್ಟಿತು.[6] ಈತನು ಹತ್ತಿರದ ಕೆಲವು ಗ್ರಾಮಗಳನ್ನು ಪ್ರೀತಿಯ ಕೊಡುಗೆಯಾಗಿ (ಪ್ರೀತಿ–ದಾನ) ರಾಜನಿಂದ ಪಡೆದನು. ಸಿದ್ಧಯಬನ, ಅಭ್ಯಾಗತೆ, ಹೊಡಕೆ, ಕತಕಸೆಸೆ, ಆನೆಯಸೆಸೆ, ಕುದುರೆಯಸೆಸೆ ಮೊದಲಾದ ಅನೇಕ ತೆರಿಗೆಗಳು ಮನ್ನಾ ಆಗಿದ್ದವು. ಇದು ವೇದ ಮತ್ತಿತರ ಶಾಸ್ತ್ರಗಳಲ್ಲಿ ಪಾರಂಗತರಾದ ಅನೇಕ ಬ್ರಾಹ್ಮಣರನ್ನು ನೋಡಿಕೊಳ್ಳಲು ಸಹಕಾರಿಯಾಗಿತ್ತು. ಹೀಗೆ ಮಾಧವರಾಯ ದೇವಾಲಯವು ಬೆಳ್ಳೂರಿನಲ್ಲಿ ಶಿಲ್ಪಕಲೆಯ ಕೇಂದ್ರ ಮಾತ್ರವಲ್ಲ, ಕಲಿಕೆಯ ಕೇಂದ್ರವೂ ಆಗಿತ್ತು. ಈ ದೇವಾಲಯವು ತ್ರಿಕೂಟಚಲವಾಗಿದ್ದು ಇಡೀ ದೇವಾಲಯವನ್ನು ಬಳಪದಕಲ್ಲಿನಿಂದ ಕಟ್ಟಲಾಗಿದೆ. ಅದು ಒಂದು ಗರ್ಭಗೃಹ, ಒಂದು ಸುಖನಾಸಿ, ಒಂದು ಚದುರ ನವರಂಗ ಮತ್ತು 6 ಚದುರಗಳ ಒಂದು ಮಂಟಪವನ್ನು ಹೊಂದಿದೆ. ಕೊನೆಯದೊಂದು ವಿಶೇಷವಾಗಿದೆ. ಏಕೆಂದರೆ ಸಾಮಾನ್ಯವಾಗಿ ಹೊಯ್ಸಳ ಮಂಟಪಗಳ ಚದುರವನ್ನು ಹೊಂದಿರುತ್ತವೆ. ಇಡೀ ದೇವಾಲಯವು ನಕ್ಷತ್ರಾಕಾರದ ವೇದಿಕೆಯ ಮೇಲೆ ನಿಂತಿದೆ. ಅದು ಐದು ಕಾರ್ನಿಸುಗಳನ್ನು ಹೊಂದಿದೆ. ಇವುಗಳಲ್ಲಿ ಮೇಲ್ಭಾಗದ ಮೂರು ಗೋಡೆಗಳು ಶಿಲ್ಪಕೆಯಿಂದ ಅಲಂಕೃತವಾಗಿದೆ ಮತ್ತು ಕೆಳಗಿನವೆರಡು ಸರಳವಾಗಿವೆ. ಗೋಡೆಗಳೂ ಶಿಲ್ಪಕಲೆಯಿಲ್ಲದೆ ಸಾಧಾರಣವಾಗಿವೆ. ಆದರೆ ಗೋಡೆಯೊಂದಿಗಿರುವ ಚೌಕ ಸ್ಥಂಭಗಳು ಕಲಾತ್ಮಕವಾಗಿದ್ದು, ಇವುಗಳ ಮೇಲೆ ಸಣ್ಣ ಗೋಪುರಗಳಿವೆ. ಶಿಖರ ಸಹ ಸಾಧಾರಣವಾಗಿದ್ದು, ಶಿಲ್ಪಕಲಾ ರಹಿತವಾಗಿದೆ. ಆದರೆ ಸಣ್ಣ ಸಣ್ಣ ನಾಲ್ಕು ಸಾಲಿನ ಗೋಪುರಗಳಿವೆ.

ಮಂಟಪವು ಹೊಯ್ಸಳ ಕೈಕೆಲಸದ ವಿಶಿಷ್ಟ ಶೈಲಿಯ ಗಂಟೆಯಾಕಾರದ ಸ್ಥಂಭಗಳನ್ನು ಹೊಂದಿದೆ. ಅವು ಚಪ್ಪಟೆಯಾಕಾರದ ಮೇಲ್ಭಾವಣಿಯನ್ನು ಹೊಂದಿವೆ. ನವರಂಗವು ಸರಳವಾದ ಕಮಲದ ಚಿತ್ರವನ್ನು ಪ್ರತಿನಿಧಿಸುವ ಒಂಭತ್ತು ಛಾವಣಿಗಳಿವೆ. ದಕ್ಷಿಣದ ಗರ್ಭಗೃಹವು ವೇಣುಗೋಪಾಲನ ಮೂರ್ತಿಯನ್ನು ಹೊಂದಿದೆ. ಈ ಮೂರ್ತಿಯು ಐದು ಅಡಿ ಎತ್ತರವಿದ್ದು ಬಹಳ ನವಿರಾಗಿ ಕೆತ್ತಲ್ಪಟ್ಟಿದೆ. ಉತ್ತರ ಗರ್ಭಗೃಹವು ಜನಾರ್ಧನನ ಮೂರ್ತಿಯನ್ನು ಹೊಂದಿದೆ. ಇದರ ಮೇಲೆ ಸರ್ಪಾಕಾರದ ತೋರಣವಿದ್ದು ಅದರ ಮೇಲೆ ದಶಾವತಾರದ ಚಿತ್ರಗಳಿವೆ.

ಮುಖ್ಯ ಗರ್ಭಗೃಹವನ್ನು ಸುಖನಾಸಿಯ ಮೂಲಕ ಪ್ರವೇಶಿಸಬಹುದಾಗಿದೆ. ಈ ಗರ್ಭಗೃಹವು ಶಂಖ, ಚಕ್ರ, ಗಧಾ, ಪದ್ಮದಾರಿಯಾದ ಮಾಧವನ ಮೂರ್ತಿಯನ್ನು ಹೊಂದಿದೆ ಮತ್ತು ಪ್ರಭಾವಳಿಯ ಮೇಲೆ ಅವನ ಸಂಗಾತಿಗಳ ಚಿತ್ರಗಳನ್ನೂ ಮತ್ತು ದಶಾವತಾರಗಳನ್ನೂ ಕೆತ್ತಲಾಗಿದೆ. ಈ ಮೂರ್ತಿಯ ವಿಶೇಷತೆ ಏನೆಂದರೆ ಇದು ಚಪ್ಪಟೆಯಾಗಿದೆಯಲ್ಲದೆ ದಕ್ಷಿಣದ ಗರ್ಭಗೃಹದಲ್ಲಿರುವ ವೇಣುಗೋಪಾಲ ಮೂರ್ತಿಯಲ್ಲಿನ ಸೂಕ್ಷ್ಮತೆಯನ್ನು ಕಾಣಲಾಗುವುದಿಲ್ಲ. ಹೀಗೆ ಬೆಳ್ಳೂರಿನಲ್ಲಿರುವ ಮಾಧವ ದೇವಾಲಯವು ಸರಳವಾಗಿದ್ದರೂ ಗತಕಾಲದ ಸುಂದರವಾದ ಹೊಯ್ಸಳ ದೇವಾಲಯವಾಗಿದೆ.

5.4.2 ಲಕ್ಷ್ಮೀನರಸಿಂಹ ದೇವಾಲಯ, ವಿಘ್ನಸಂತೆ, ತುಮಕೂರು ಜಿಲ್ಲೆ

ತುಮಕೂರಿನಲ್ಲಿ ವಿಘ್ನಸಂತೆಯು ಸೊಗಸಾದ ತ್ರಿಕೂಟಾಚಲ ಹೊಂದಿದ್ದು, ಲಕ್ಷ್ಮೀನರಸಿಂಹನಿಗೆ ಅರ್ಪಿತವಾಗಿದೆ. ಒಂದು ಶಿಲಾಶಾಸನದ ಪ್ರಕಾರ ಈ ದೇವಾಲಯವು ಕ್ರಿ.ಶ.1286ರಲ್ಲಿ[7] ರಾಜನರಸಿಂಹನ ಅಪ್ಪಣೆಯ ಮೇರೆಗೆ ಸೇನಾಧಿಪತಿ ಮಲ್ಲಿದೇವನ ಮಕ್ಕಳಾದ ಅಪ್ಪೇಯ ಗೋಪಾಲ ಮತ್ತು ಮಾಧವರಿಂದ ಕಟ್ಟಲ್ಪಟ್ಟಿತು. ದೇವಾಲಯವು ಪೂರ್ಣವಾಗಿ ಬಳಪದಕಲ್ಲಿನಿಂದ ಕಟ್ಟಲ್ಪಟ್ಟಿದೆ. ಅದು ಮೂರು ಗರ್ಭಗೃಹಗಳು, ಒಂದು ಸುಖನಾಸಿ, ನವರಂಗ ಮತ್ತು ಒಂದು ಮಂಟಪವನ್ನು ಹೊಂದಿದೆ. ಹೊರ ಗೋಡೆಯು ಸಮತಲದಲ್ಲಿ ಐದು ಕಾರ್ನೀಸುಗಳಾಗಿ ವಿಭಜಿಸಲ್ಪಟ್ಟು, ಪ್ರತಿಯೊಂದು ಭಾಗದಲ್ಲಿಯೂ ಚಿತ್ರಗಳ ಸರಣಿಯು ಹೂದಾನಿಯ ಆಕಾರದಲ್ಲಿರುವ ಕೆತ್ತನೆಯ ಕೆಲಸಗಳು ಅದರೊಂದಿಗೆ ಲೋಲಕವು, ಮಕರಗಳ ಸಾಲು ಮತ್ತು ಪುಷ್ಪಗಳ ಅಲಂಕಾರದಿಂದ ಚಿತ್ರಿಸಲ್ಪಟ್ಟಿವೆ. ಗೋಡೆಗಳ ಗೂಡಿನಲ್ಲಿ ಕುಳಿತಿರುವ ಯಕ್ಷರು ಮತ್ತಿತರ ದೇವರುಗಳು ಕಂಡುಬರುತ್ತರೆ. ಶಿಖರದ ಅನುಪವು ಕೈಕೆಲಸದ್ದಾಗಿದೆ. ಪುಷ್ಪಗಳ ಚಿತ್ರಗಳು ಅತ್ಯಂತ ಸುಂದರವಾಗಿ ಕೆತ್ತಲ್ಪಟ್ಟಿವೆ. ಕೀರ್ತಿಮುಖಗಳು ಚೆನ್ನಾಗಿ ಕೆತ್ತಲ್ಪಟ್ಟಿವೆ. ಶಿಖರವು ಸುಖನಾಸಿಯ ಮೇಲೆ ಚಾಚಿಕೊಂಡಂತೆ ಗೋಪುರಗಳ ಗರುಡನ ಚಿತ್ರ ಇರುವ ದೊಡ್ಡದಾದ ಕೀರ್ತಿಮುಖವಿದೆ. ಚೌಕಸ್ಥಂಭಗಳು ಮತ್ತು ಸಣ್ಣಸಣ್ಣ ಗೋಪುರಗಳಲ್ಲದೆ ಶಿಖರವನ್ನು ಅಲಂಕರಿಸಿರುವ ಬಹುಸಂಖ್ಯೆ ಶಿಲ್ಪಕಲೆಗಳಿವೆ. ಪೂರ್ವಭಾಗದಲ್ಲಿ ಉಗ್ರನರಸಿಂಹ, ಗೋವರ್ಧನಧಾರಿ, ನರ್ತಿಸುವ ಪಾರ್ವತಿ ಮತ್ತು ನಾರಾಯಣರು ಕಂಡುಬರುತ್ತಾರೆ. ದಕ್ಷಿಣ ಭಾಗದಲ್ಲಿ ಯೋಗನರಸಿಂಹ, ವಾಮನ, ನರ್ತಿಸುವ ವೇಣುಗೋಪಾಲ, ನರ್ತಿಸುವ ಲಕ್ಷ್ಮಿ ಮತ್ತು ನಿಂತಿರುವ ವಿಷ್ಣುವಿನ ಮೂರ್ತಿಗಳಿವೆ. ಮಂಟಪದ ಪಶ್ಚಿಮಕ್ಕೆ ಮಹಿಷಾಸುರಮರ್ಧಿನಿಯ ಒಂದು ಮೂರ್ತಿ ಇದೆ. ಮಂಟಪವು ವಿಶಾಲವಾಗಿಲ್ಲವಾದರೂ ಪುಷ್ಪಗಳ ಸಾಲುಗಳು ಮತ್ತು ಮಣಿಗಳ ತೋರಣಗಳು ಶ್ರೀಮಂತವಾಗಿ ಕೆತ್ತಲ್ಪಟ್ಟಿವೆ. ಎರಡು ಅನೇಕ ಸಂಖ್ಯೆಯಲ್ಲಿ ಒಂದನ್ನೊಂದು ಛೇದಿಸುವ ಅನೇಕ ಸಾಲುಗಳು ಗಹನವಾಗಿ ಕೆತ್ತಲ್ಪಟ್ಟಿರುವ ಎರಡು ಸ್ಥಂಭಗಳಿವೆ. ಬೆಂಚು ಮತ್ತು ಕಟಕಟೆ ಈಗ ಕಂಡುಬರುವುದಿಲ್ಲ. ಛಾವಣಿಯ ಮೇಲೆ ಏಳುತ್ತಿರುವ ಕಮಲದ ಮೊಗ್ಗನ್ನು ಹೊಂದಿರುವ ದಟ್ಟವಾದ ವರ್ತುಲಗಳ ಆಕಾರದಲ್ಲಿದೆ. ಅದು ಎಂಟು ದಿಕ್ಪಾಲಕರನ್ನು

ಅವರವರ ವಾಹನಗಳೊಂದಿಗೆ ಹೊಂದಿದೆ. ದಕ್ಷಿಣಕ್ಕಿರುವ ಮಂಟಪದ ಮೇಲೆ ನರ್ತಿಸುವ ಗಣೇಶನಿದ್ದಾನೆ.

ನವರಂಗವು ಮಂಟಪದಲ್ಲಿರುವ ಸ್ಥಂಭಗಳಂತೆಯೇ ನಾಲ್ಕು ಸ್ಥಂಭಗಳನ್ನು ಹೊಂದಿದೆ. ನವರಂಗದ ಬಾಗಿಲಿನಲ್ಲಿ ಚೌಕಟ್ಟಿನ ಮೇಲೆ ವೇಣುಗೋಪಾಲನಿದ್ದಾನೆ ಮತ್ತು ಇನ್ನೊಂದು ಭಾಗದಲ್ಲಿ ಯೋಗನರಸಿಂಹ ನಿದ್ದಾನೆ. ಛಾವಣಿಯ ಮಧ್ಯಭಾಗದಲ್ಲಿ ಒಂದೇ ಕೇಂದ್ರಬಿಂದುವುಳ್ಳ ದಿಕ್ಪಾಲಕರು ಮತ್ತು ಕಮಲದ ಮೊಗ್ಗುಗಳು ತೂಗುತ್ತಿರುವಂತೆ ತೋರುವ ವೃತ್ತಗಳಿವೆ. ನವರಂಗದಲ್ಲಿ ಎರಡು ಸುಂದರ ಮೂರ್ತಿಗಳನ್ನು ಇಡಲಾಗಿದೆ. ಮಹಿಷಸುರಮರ್ಧಿನಿಯು ತನ್ನ ಬಲಗಾಲನ್ನು ಮಹಿಷವೊಂದರ ಮೇಲಿಟ್ಟು ಭರ್ಜಿಯಿಂದ ರಕ್ಕಸನೊಂದಿಗೆ ಹೋರಾಡುತ್ತಿರುವ ಶಿಲ್ಪವು ಬಹಳ ಸುಮಧುರವಾಗಿದೆ. ಅವಳ ಕೈಯಲ್ಲಿ ಒಂದು ಕಠಾರಿ, ಪ್ರಯೋಗ ಚಕ್ರ ಮತ್ತು ತ್ರಿಶೂಲವಿದೆ. ಮಹಿಷವೂ ಸಹ ಚೆನ್ನಾಗಿ ಕೆತ್ತಲ್ಪಟ್ಟಿದೆ. ದಕ್ಷಿಣದ ಗರ್ಭಗೃಹವು ಒಂದು ಪ್ರವೇಶದ್ವಾರವನ್ನು ಹೊಂದಿದೆ. ದ್ವಾರದ ಇಕ್ಕೆಲಗಳಲ್ಲೂ ದ್ವಾರಪಾಲಕರ ಮೂರ್ತಿಗಳಿವೆ ಮತ್ತು ಬಾಗಿಲ ಚೌಕಟ್ಟಿನ ಮೇಲೆ ವೇಣುಗೋಪಾಲನ ಶಿಲ್ಪವಿದೆ. ಐದು ಅಡಿ ಎತ್ತರವುಳ್ಳ ವೇಣುಗೋಪಾಲನ ಮೂರ್ತಿಯು ತ್ರಿಭಂಗಿಯ ನಿಲುವಿನಲ್ಲಿ ಗರುಡ ಪೀಠದ ಮೇಲೆ ನಿಂತಿದೆ ಅವನು ಎತ್ತರವಾದ ಕಿರೀಟ, ಕೊರಳಹಾರ, ಕಾಲಿನ ಚೈನು, ಕಡಗ, ತೋಳಬಂದಿ ಮತ್ತು ನಡುಪಟ್ಟಿಯನ್ನು ಧರಿಸಿದ್ದಾನೆ. ದನಗಾಹಿಗಳು, ಹಸು ಮತ್ತಿತರರು ವೇಣುಗೋಪಾಲನು ನುಡಿಸುತ್ತಿರುವ ವೇಣುವಾದವನ್ನು ಕೇಳಿ ಆನಂದಿಸುತ್ತಿದ್ದಾರೆ.

ಉತ್ತರ ಗರ್ಭಗೃಹವೂ ಬಾಗಿಲ ಚೌಕಟ್ಟಿನ ಮೇಲೆ ಯೋಗನರಸಿಂಹನ ಚಿತ್ರವನ್ನು ಹೊಂದಿದೆ. ಮುಖ್ಯದೇವರು ಲಕ್ಷ್ಮಿನರಸಿಂಹ ಮತ್ತು ಚಿತ್ರವನ್ನು ಹೊಂದಿದೆ. ಮುಖ್ಯದೇವನು ಲಕ್ಷ್ಮೀನರಸಿಂಹ ಮತ್ತು ಪ್ರಹ್ಲಾದ. ಅವನು ಶಂಖ, ಚಕ್ರ, ಗಧೆ, ಪದ್ಮಗಳನ್ನು ಹಿಡಿದು ಸುಖಾಸನದ ಮೇಲೆ ಕುಳಿತಿದ್ದಾನೆ. ಎಡ ತೊಡೆಯ ಮೇಲೆ ಲಕ್ಷ್ಮಿಯು ಕುಳಿತಿದ್ದಾಳೆ.

ಮುಖ್ಯ ಗರ್ಭಗೃಹದ ಬಾಗಿಲ ತಲೆಯ ಮೇಲೆ ಗಜಲಕ್ಷ್ಮಿ ಇದೆ. ಗರ್ಭಗೃಹದ ಕೇಂದ್ರದಲ್ಲಿ ತನ್ನ ಎರಡೂ ಪಕ್ಕಗಳಲ್ಲಿ ಸಂಗಾತಿಗಳೊಂದಿಗಿರುವ ಕೇಶವನ ಮೂರ್ತಿ ಇದೆ. ಅದು ಎತ್ತರವಾದ, ಸಪೂರವಾದ, ತುಂಬಾ ಸುಂದರವಾಗಿ ಕೆತ್ತಲ್ಪಟ್ಟ ಶಿಲ್ಪವಾಗಿದೆ ಮತ್ತು ಹೊಯ್ಸಳರ ಕಾಲದ ಕೇಶವನ ಸುಂದರ ಮೂರ್ತಿಗಳಲ್ಲಿ ಒಂದಾಗಿದೆ.

ಲಕ್ಷ್ಮಿನರಸಿಂಹ ದೇವಾಲಯವು ಶಿಲ್ಪಕಲೆಗಳಲ್ಲಿ ಶ್ರೀಮಂತವಾಗಿದೆ. ಚಿಕ್ಕ ಅಳತೆಯ ತ್ರಿಕೂಟಾಚಲದ ಒಂದು ಒಳ್ಳೆಯ ಮಾದರಿ ಎಂದು ಪರಿಗಣಿಸಬಹುದಾಗಿದೆ.

5.4.3 ಮೂಲೆ ಶಂಕರೇಶ್ವರ ದೇವಾಲಯ, ತುರುವೇಕೆರೆ, ತುಮಕೂರು ಜಿಲ್ಲೆ

ತುರುವೇಕೆರೆಯಲ್ಲಿರುವ ಮೂಲೆ ಶಂಕರೇಶ್ವರ ದೇವಾಲಯವು ಇವನ ಕಾಲದ ಅತ್ಯಂತ ಮೊದಲು ಕಟ್ಟಲ್ಪಟ್ಟ ಶಿವನ ದೇವಾಲಯವು ಇವನ ಕಾಲದ ಅತ್ಯಂತ ಮೊದಲು

ಕಟ್ಟಲ್ಪಟ್ಟ ಶಿವನ ದೇವಾಲಯ ಶಿಲಾಲೇಖದ ಪ್ರಕಾರ ಈ ದೇವಾಲಯವು ಕ್ರಿ.ಶ.1253ರಲ್ಲಿ[8] ಸೋಮದದಂಡನಾಯಕನಿಂದ ಕಟ್ಟಲ್ಪಟ್ಟಿತು. ಈ ದೇವಾಲಯವು ಅದೇ ಸ್ಥಳದಲ್ಲಿರುವ ಚೆನ್ನಕೇಶವ ದೇವಸ್ಥಾನದ ಶೈಲಿ ಮತ್ತು ವಿನ್ಯಾಸದಂತೆಯೇ ಇದೆ. ಆದಾಗ್ಯೂ ಕೆಲವೊಂದು ವ್ಯತ್ಯಾಸಗಳಿವೆ. ಮಂದಿರದ ಸುತ್ತ ಇರುವ ಜಗಲಿಯು ಇಲ್ಲಿ ಇಲ್ಲ. ಶಿಖರವು ವಿಭಿನ್ನ ಆಕಾರವನ್ನು ಹೊಂದಿದೆ. ಅದು ನಕ್ಷತ್ರಾಕಾರದ ತಳಹದಿಯ ಮೇಲೆ ನಿಂತಿದೆ ಮತ್ತು ಹಂತಹಂತವಾಗಿ ಪಿರಮಿಡ್ ಮಾದರಿಯ ಸಣ್ಣ ಗೋಪುರಗಳ ನಾಲ್ಕು ಶ್ರೇಣಿಗಳಲ್ಲಿ ಮಂದಿರವು ಎದ್ದಿದೆ. ಈ ಗೋಪುರಗಳೂ ಸಹ ಲಂಬವಾದ ಮೊನಚಾದ ತುದಿಯನ್ನು ಶಿಖರದವರೆವಿಗೂ ಮುಂದುವರಿಯುತ್ತ ಸಾಗಿದೆ. ಬೇರೆ ಎಲ್ಲ ರೀತಿಯಲ್ಲಿಯೂ ಇದು ಚೆನ್ನಕೇಶವನ ದೇವಾಲಯವನ್ನೇ ಹೋಲುತ್ತದೆ.

ನವರಂಗದಲ್ಲಿ ಕೆಲವು ಶಿಲ್ಪಕಲೆಗಳಿವೆ. ಅವು ಸಪ್ತ ಮಾತೃಕೆಯರು ಗಣೇಶ, ವೀರಭದ್ರ, ಭೈರವ, ಷಣ್ಮುಖ ಮತ್ತು ನಂದಿ ಗರ್ಭಗೃಹದಲ್ಲಿರುವ ಲಿಂಗವು ಸುಮಾರು ನಾಲ್ಕು ಅಡಿ ಎತ್ತರವಿದೆ ಮತ್ತು ಹೊಳೆಯುವ ಕಪ್ಪು ಶಿಲೆಯಿಂದ ಮಾಡಲ್ಪಟ್ಟಿದೆ.

5.4.4 ಮಲ್ಲೇಶ್ವರ ದೇವಾಲಯ, ಆಘಾಲಯ, ಮಂಡ್ಯ ಜಿಲ್ಲೆ

ಆಘಾಲಯದಲ್ಲಿರುವ ಮಲ್ಲೇಶ್ವರ ಮಂದಿರವು ಕ್ರಿ.ಶ.1260ರಲ್ಲಿ ಕಟ್ಟಲ್ಪಟ್ಟಿತು. ಅದೂ ಕೂಡ ತ್ರಿಕೂಟಾಚಲವೇ ಆದರೆ ಅದರ ಗೋಪುರಗಳು ಕಾಣೆಯಾಗಿವೆ. ಗೋಪುರದ ಒಂದು ವಿಶೇಷ ಲಕ್ಷಣವೆಂದರೆ ಮೂರು ಗರ್ಭಗೃಹಗಳೂ ಒಂದೇ ರೇಖೆಯ ಮೇಲೆ ಒಂದಕ್ಕೊಂದು ಸಮಾನಾಂತರವಾಗಿ ಪ್ರತಿಯೊಂದು ಗರ್ಭಗೃಹವೂ ಪ್ರತ್ಯೇಕ ಮುಚ್ಚಿದ ಸುಖನಾಸಿಯನ್ನು ಹೊಂದಿದೆ. ನೂರು ಅಡಿ ಉದ್ದದ ಮತ್ತು ಇಪ್ಪತ್ತೈದು ಅಡಿ ಅಗಲದ ಅಳತೆಯುಳ್ಳ ನವರಂಗವು ಎಲ್ಲಾ ಮೂರಕ್ಕೂ ಒಂದೇ ಆಗಿದೆ. ನವರಂಗದ ಪೂರ್ವದ ಗೋಡೆಯ ಮಧ್ಯೆ ಒಂದು ಬಾಗಿಲಿದೆ ಅದು ಮಂಟಪಕ್ಕೆ ಕರೆದುಕೊಂಡು ಹೋಗುತ್ತದೆ. ಹೊರಗೋಡೆಗಳು ಎರಡು ಸರಳ ಕಾರ್ನೀಸುಗಳನ್ನು ಮತ್ತು ಮೇಲೆ ಸಾಧಾರಣ ಚೌಕಸ್ಥಂಭ ಗಳನ್ನು ಹೊಂದಿವೆ. ಎರಡೂ ಪಕ್ಕಗಳಲ್ಲಿಯೂ ಚೌಕಾಕಾರದ ರಂಧ್ರಗಳಿವೆ. ಮಂಟಪದ ಸ್ಥಂಭಗಳು ಹೊಯ್ಸಳ ಶೈಲಿಯದೇ ಆದ ವೈಶಿಷ್ಟ್ಯತೆ ಪಡೆದಿವೆ. ಛಾವಣಿಯೂ ಸಹ ಪದ್ಮ ಮತ್ತು ಗುಲಾಬಿಗಳ ಅಲಂಕಾರದ ಹೊರತು ಉಳಿದೆಲ್ಲಾ ಸರಳವಾಗಿವೆ.

ನವರಂಗದ ದ್ವಾರವೂ ಸಹ ಸಾಧಾರಣವಾಗಿದೆ. ಅದು ಬಳಪದಕಲ್ಲಿನಿಂದ ಮಾಡಿದ ಬೆಂಚುಗಳನ್ನು ಮತ್ತು ಸ್ತಂಭಗಳನ್ನೂ ಹೊಂದಿದೆ. ಗರ್ಭಗೃಹಕ್ಕೆ ಅಭಿಮುಖವಾಗಿ ಮಧ್ಯೆ ನಂದಿಯ ಮೂರ್ತಿ ಇದೆ. ನವರಂಗದಲ್ಲಿ ಅನೇಕ ಮಂಟಪದಲ್ಲಿರುವಂತೆಯೇ ಛಾವಣಿಗಳೂ ಇವೆ. ನವರಂಗದಲ್ಲಿ ಅನೇಕ ಗೂಡುಗಳಿವೆ. ಇವುಗಳಲ್ಲಿ ದೇವ ಮತ್ತು ದೇವತೆಗಳ ಶಿಲ್ಪಗಳ ಮೂರ್ತಿಗಳಿವೆ. ಅವುಗಳನ್ನು ಏಳು ಕುದುರೆಗಳಲ್ಲಿ ಸವಾರಿ ಮಾಡುತ್ತಿರುವ

ಸೂರ್ಯ, ಸಪ್ತಮಾತೃಕೆಯರು, ಮಹಿಷಾಸುರ ಮರ್ಧಿನಿ, ಗಣೇಶ ಮತ್ತು ಷಣ್ಮುಖರೆಂದು ಗುರುತಿಸಬಹುದಾಗಿದೆ. ಮೂರು ಗರ್ಭಗೃಹಗಳೂ ಒಂದಕ್ಕೊಂದು ಒಂದೇ ತೆರನಾಗಿವೆ. ಸುಖನಾಸಿಯ ದ್ವಾರವು ಮೇಲೆ ಉಮೇಶ್ವರನ ಚಿತ್ರವನ್ನು ಹೊಂದಿದೆ. ಉಳಿದ ಕಡೆಗಳಲ್ಲಿ ಪಾರ್ವತಿ ದಕ್ಷಿಣ ಮಧ್ಯೆ ಮತ್ತು ಕೊನೆಯ ಗೂಡುಗಳಲ್ಲಿ ಕ್ರಮವಾಗಿ ನರ್ತಿಸುತ್ತಿರುವ ಶಿವ ಮತ್ತು ಪಾರ್ವತಿಯ ಶಿಲ್ಪಗಳಿವೆ.

ಗರ್ಭಗೃಹದ ದ್ವಾರಗಳಲ್ಲಿ ಚೌಕಟ್ಟಿನ ಮೇಲೆ ಗಜಲಕ್ಷ್ಮಿ ಮತ್ತು ಗೂಡುಗಳಲ್ಲಿ ತಾಂಡವೇಶ್ವರರಿದ್ದಾರೆ. ಮೂರು ಗರ್ಭಗೃಹಗಳಲ್ಲಿಯೂ ಶಿವಲಿಂಗಗಳಿವೆ. ಗೋಡೆಯ ಹೊರಭಾಗಗಳು, ದೇವ ಮತ್ತು ದೇವತೆಗಳ ಅನೇಕ ಸುಂದರ ಶಿಲ್ಪಗಳಿಂದ ನಮ್ಮ ಗಮನ ಸೆಳೆಯುತ್ತವೆ. ಪೂರ್ವದ ಕಡೆ ಕಲ್ಕಿ, ಬುದ್ಧ, ಬಲರಾಮ, ಲಕ್ಷ್ಮಿ, ಶ್ರೀರಾಮ, ವಿಷ್ಣು, ಪರಶುರಾಮ, ಕೃಷ್ಣ, ಸತ್ಯಭಾಮಾ, ಇಂದ್ರ ಮತ್ತು ಸಚಿ ಮತ್ತು ಉಗ್ರನರಸಿಂಹರು ಕಂಡುಬರುತ್ತಾರೆ. ಉತ್ತರದ ಗೋಡೆಯ ಮೂಲೆಯಲ್ಲಿ ವಿಷ್ಣುವಿನ ಎರಡು ಮೂರ್ತಿಗಳಿವೆ. ಆದರೆ ಉತ್ತರದ ಗೂಡು ಖಾಲಿಯಾಗಿದೆ. ಈ ಗೋಡೆಯ ಕೊನೆಯಲ್ಲಿ ನರ್ತಿಸುವ ಪಾರ್ವತಿ ಮತ್ತು ಭೈರವಿಯೊಡನೆ ಭೈರವ ಇದ್ದಾರೆ.

5.4.5 ಪಂಚಲಿಂಗೇಶ್ವರ ದೇವಾಲಯ, ಸೋಮನಾಥಪುರ, ಮೈಸೂರು ಜಿಲ್ಲೆ

ಕ್ರಿ.ಶ.1288ರಲ್ಲಿ[9] ಸೋಮದಂಡನಾಯಕನಿಂದ ಕಟ್ಟಲ್ಪಟ್ಟ ಈ ದೇವಾಲಯವು ಈಗ ಸಾಕಷ್ಟು ಭಗ್ನಗೊಂಡಿದೆ. ಈ ದೇವಾಲಯದ ಪ್ರಾಮುಖ್ಯತೆ ಏನೆಂದರೆ ಮೂಲತಃ ಇದು ಐದು ಗರ್ಭಗೃಹಗಳನ್ನು ಹೊಂದಿದ್ದು, ಪ್ರತಿಯೊಂದು ಲಿಂಗದ ರೂಪದಲ್ಲಿನ ಶಿವನಿಗೆ ಅರ್ಪಿತವಾಗಿತ್ತು. ಪ್ರತಿಗರ್ಭಗೃಹಕ್ಕೂ ಸುಖನಾಸಿ ಇದ್ದು, ನವರಂಗ ಮಾತ್ರ ಎಲ್ಲದಕ್ಕೂ ಒಂದೇ ಆಗಿತ್ತು. ಇಲ್ಲಿಯ ಸ್ತಂಭಗಳು ಹೊಯ್ಸಳ ಶಿಲ್ಪಕಲೆಯ ಮಾದರಿಯೇ ಆಗಿವೆ. ಇಡೀ ದೇವಾಲಯವು ಬೂದು ಬಣ್ಣದ ಗ್ರಾನೈಟ್ ಶಿಲೆಯಿಂದ ಕೆತ್ತಲ್ಪಟ್ಟಿದೆ. ಬಹುಮುಖ್ಯವಾದ ಕೇಶವ ದೇವಾಲಯವು ಅದೇ ಸ್ಥಳದಲ್ಲಿ ಬಳಪದಕಲ್ಲಿನಿಂದ ಕಟ್ಟಲ್ಪಟ್ಟಿತ್ತು. ಸ್ಪಷ್ಟವಾಗಿಯೇ ಬೇರೊಂದು ಸ್ಥಳದಿಂದ ಆ ಶಿಲೆಯು ಆಮದಾಗಿತ್ತು. ಅಷ್ಟು ಬಹಳ ಮುಖ್ಯವಲ್ಲವಾದರೂ ಗ್ರಾನೈಟ್ ಶಿಲೆಯಿಂದ ಕಟ್ಟಲ್ಪಟ್ಟಿರುವ ಪಂಚಕೂಟಾಚಲಕ್ಕೆ ಇದು ಉತ್ತಮ ಉದಾಹರಣೆಯಾಗಿದೆ.

5.4.6 ಸೋಮನಾಥಪುರ ದೇವಾಲಯ

ಈ ಅಧ್ಯಾಯದಲ್ಲಿ ಈ ಕೆಳಕಂಡ ಸಂಗತಿಗಳನ್ನು ಆಧಾರಿಸಿ ಚಾರಿತ್ರಿಕ ದೃಷ್ಟಿಯಿಂದ ಸೋಮನಾಥಪುರ ಮಂದಿರ ಸಂಕೀರ್ಣವನ್ನು ಅಧ್ಯಯನ ಮಾಡುವ ಪ್ರಯತ್ನವನ್ನು ಮಾಡಲಾಗಿದೆ.

1) ಸೋಮನಾಥಪುರ ಸ್ಥಳದ ಹೆಸರಿನ ಪ್ರಾಮುಖ್ಯತೆ ಮತ್ತು ಅದರ ಸ್ಥಾನದ ಬಗ್ಗೆ ಚರ್ಚೆ.

2) ಈ ಊರಿನ ಸ್ಥಾಪಕನಾದ ಸೋಮನಾಥ ದಂಡನಾಯಕನ ಸಾಧನೆಗಳು ಮತ್ತು ಕುಟುಂಬದ ಇತಿಹಾಸ
3) ಸೋಮನಾಥ ದಂಡನಾಯಕನ ಪ್ರಭುವಾದ ಹೊಯ್ಸಳ ಅರಸ ಮೂರನೇ ನರಸಿಂಹನ ವಿವರ ಮತ್ತು ದೇವಾಲಯಗಳಿಗೆ ಉದಾರವಾಗಿ ಧನಸಹಾಯ ಮಾಡಿದ ರೀತಿ.
4) ಸೋಮನಾಥಪುರದ ಶಿಲಾಶಾಸನಗಳಲ್ಲಿ ಮತ್ತು ಸೋಮನಾಥಪುರ ಅಗ್ರಹಾರದ ವಿವರಗಳಲ್ಲಿ ಕಂಡುಬಂದಿರುವಂತೆ ಹೊಯ್ಸಳ ಸಾಮ್ರಾಜ್ಯದ ಅನೇಕ ಸಂಗತಿಗಳ ಬಗ್ಗೆ ಚರ್ಚೆ.

ಸೋಮನಾಥಪುರವು ಇಂದು ದಕ್ಷಿಣ ಕರ್ನಾಟಕದ ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲ್ಲೂಕಿನಲ್ಲಿದೆ. ಹೊಯ್ಸಳರ ಕಾಲದಲ್ಲಿ ಈ ವಸಾಹತುವು ಗಂಗಾನದಿಯ ಒಂದು ಭಾಗವಾಗಿತ್ತು. ಕ್ರಿ.ಶ.1268ಕ್ಕೆ ಮೊದಲು ಈ ಸ್ಥಳದಲ್ಲಿ ಈ ವಸಾಹತು ಇರಲಿಲ್ಲ ಮತ್ತು ಅದೇ ವರ್ಷ ಸೋಮನಾಥ ದಂಡನಾಯಕನಿಂದ ಮಂದಿರಗಳೂ ಮತ್ತು ಅಗ್ರಹಾರವು ಸ್ಥಾಪಿಸಲ್ಪಟ್ಟ ಮೇಲೆಯೇ ಈ ಊರು ಅಸ್ಥಿತ್ವಕ್ಕೆ ಬಂದಿತು. ಅವನು ಕಟ್ಟಿಸಿದ ದೇವಾಲಯಗಳು ಕೇಶವ ದೇವಾಲಯ, ಪಂಚಲಿಂಗೇಶ್ವರ ದೇವಾಲಯ, ಲಕ್ಷ್ಮೀನರಸಿಂಹ ದೇವಾಲಯ ಮತ್ತು ಯೋಗನಾರಾಯಣ ದೇವಾಲಯ, ಪುರಹರ ಅಥವಾ ತ್ರಿಪುರಾಂತೇಶ್ವರ ದೇವಾಲಯ (ಈಗಿಲ್ಲ), ನರಸಿಂಹೇಶ್ವರ ದೇವಾಲಯ (ಈಗಿಲ್ಲ) ಮತ್ತು ಮುರಹರ ದೇವಾಲಯ (ಈಗಿಲ್ಲ).

ಅವನು ಶ್ರೀ ವೈಷ್ಣವರಿಗಾಗಿ ಮತ್ತು ಶೈವ ಬ್ರಾಹ್ಮಣರಿಗಾಗಿ ಅಗ್ರಹಾರಗಳನ್ನೂ ಕಟ್ಟಿಸಿದನು. ಅವನು ಆ ಸ್ಥಳವೆಲ್ಲಾ ಸುತ್ತುವರೆಯುವಂತೆ ಒಂದು ಕೋಟೆ ಗೋಡೆಯನ್ನೂ ಕಟ್ಟಿಸಿದನು. ಗ್ರಾಮದ ಸುತ್ತ ಆ ಗೋಡೆಯು ಸುಮಾರು 3*2 ಫರ್ಲಾಂಗ್‌ನಷ್ಟಿರಬಹುದೆಂದು ಹೇಳಲಾಗಿದೆ. ಇಂದಿಗೂ ಸಹ ಆ ಗೋಡೆಯ ಭಗ್ನಾವಶೇಷಗಳನ್ನು ಕಾಣಬಹುದಾಗಿದೆ. ಇಡೀ ವಾಸ್ತವ್ಯವು ಮಂದಿರಗಳೊಂದಿಗೆ ಕಾವೇರಿ ನದಿಯ ದಡದ ಮೇಲೆ ಕಟ್ಟಲಾಗಿತ್ತು.

ಸೋಮನಾಥಪುರದ ಶಿಲಾಶಾಸನವು ಸೋಮಯ್ಯ ದಂಡನಾಯಕನೇ ಈ ಗ್ರಾಮವನ್ನು ಕಟ್ಟಿದನೆಂದೂ ಅದಕ್ಕೆ ಅವನ ಹೆಸರನ್ನೇ ಇಡಲಾಯಿತೆಂದೂ ಸ್ಪಷ್ಟವಾಗಿ ತಿಳಿಸುತ್ತದೆ. ಸೋಮಯ್ಯ ದಂಡನಾಯಕನ ಪೂರ್ವಿಕರು, ಗುಜರಾತಿನ ಸೋಮನಾಥದಿಂದ ಬಂದವರಾದುದರಿಂದ ಅಲ್ಲಿನ ದೇವರ ಹೆಸರನ್ನೇ ಅನುಸರಿಸಿ ಇಲ್ಲಿನ ಲಿಂಗವನ್ನೂ ಸೋಮನಾಥ ಲಿಂಗದೇವರು ಹೆಸರಿಸಿರಬಹುದೆಂದು ತೋರುತ್ತದೆ. ಸೋಮಯ್ಯ ಲಿಂಗವನ್ನು ಮೊದಲು ಪುಲಿಗೆರೆಗೆ ತರಲಾಯಿತೆಂದೂ, ತದನಂತರ ದಕ್ಷಿಣ ಕರ್ನಾಟಕಕ್ಕೆ ತರಲಾಯಿತೆನ್ನುವ ಈ ವಿವರಣೆಗಳು ಇದರ ಬಗ್ಗೆ ಇರುವ ಸಾಹಿತ್ಯಿಕ ಮೂಲಗಳಲ್ಲಿ ನಾವು ಕಾಣುತ್ತೇವೆ.

ಸೋಮನಾಥ ಲಿಂಗವು ಪಂಚಲಿಂಗೇಶ್ವರ ದೇವಾಲಯದಲ್ಲಿ ಸೋಮನಾಥ ದಂಡನಾಯಕನಿಂದ ಪ್ರತಿಷ್ಠಾಪಿಸಲ್ಪಟ್ಟಿತು. ಅವನು ಮತ್ತೆ ಐದು ಇತರ ಲಿಂಗಗಳನ್ನು ಈಶಾನ್ಯ ಭಾಗದಲ್ಲಿ ಅಂದರೆ ಬಿಜ್ಜಳೇಶ್ವರ, ಹೆಮ್ಮೇಶ್ವರ, ರೇವಲೇಶ್ವರ, ಭೀರಲೇಶ್ವರ ಮತ್ತು ಸೋಮನಾಥಗಳಲ್ಲಿ ಪ್ರತಿಷ್ಠಾಪಿಸಿದನು.

ಸೋಮನಾಥ ದೇವಾಲಯ ಸಂಕೀರ್ಣವು ಶೈವದೇವಾಲಯ ಮಾತ್ರವಲ್ಲ ವಿಷ್ಣುವಿನ ಮಂದಿರಗಳನ್ನೂ ಹೊಂದಿದೆ. ಸೋಮನಾಥಪುರದಲ್ಲಿ ಈ ದೇವಾಲಯ ಸಂಕೀರ್ಣದಲ್ಲಿ ನಾಲ್ಕು ವೈಷ್ಣವ (ಕೇಶವ, ಲಕ್ಷ್ಮಿನರಸಿಂಹ, ನರಸಿಂಹೇಶ್ವರ ಮತ್ತು ಯೋಗನಾರಾಯಣ) ಮತ್ತು ಮೂರು ಶೈವ (ಪಂಚಲಿಂಗೇಶ್ವರ, ಪುರಹರ ಮತ್ತು ಮುರಹರ) ದೇವಾಲಯಗಳಿವೆ. ಇವುಗಳಲ್ಲಿ ಲಕ್ಷ್ಮಿನರಸಿಂಹೇಶ್ವರ, ಪುರಹರ ಮತ್ತು ಮುರಹರ ದೇವಾಲಯಗಳು ಅಳಿದುಹೋಗಿವೆ. ಲಕ್ಷ್ಮಿನರಸಿಂಹೇಶ್ವರನನ್ನು "ಭವ"ನೆಂದು ಶಿವನಿಗೆ ಸಮಾನನೆಂದು ಕರೆಯಲಾಗಿದೆ. ಆದುದರಿಂದ ಇದನ್ನು ಒಂದು ಶೈವ ದೇವಾಲಯವೆಂದು ಪರಿಗಣಿಸ ಬಹುದಾಗಿದೆ. ನಾಲ್ಕು ಶೈವ ಮತ್ತು ಮೂರು ವೈಷ್ಣವ ದೇವಾಲಯಗಳಿರಬಹುದಾಗಿದೆ. ಇದು ಎಲ್ಲಾ ವಿಧಗಳಲ್ಲಿಯೂ ಪ್ರಾಮಾಣಿಕ ಶಾಂತಿಯುತ ಸಹಬಾಳ್ವೆ ಮತ್ತು ಸಾಮರಸ್ಯದ ದ್ಯೂತಕವಾಗಿದೆ. ಎಸ್.ಶೆಟ್ಟಾರ್‌ರವರ ಅಭಿಪ್ರಾಯ ಬೇರೆಯದಾಗಿದೆ. ಅವರ ಪ್ರಕಾರ ಸೋಮನಾಥಪುರದಲ್ಲಿರುವ ದೇವಾಲಯ ಸಂಕೀರ್ಣವು ಶೈವಧರ್ಮದ ಪ್ರಭಾವವು ತಗ್ಗುತ್ತಿರುವುದನ್ನೂ ಮತ್ತು ಶ್ರೀ ವೈಷ್ಣವ ಧರ್ಮದ ಏರಿಕೆಯನ್ನೂ ತೋರುತ್ತದೆ. ಸ್ವಲ್ಪ ಮಟ್ಟಿನ ಧಾರ್ಮಿಕ ಅಸಹನೆಯನ್ನೂ ಪ್ರಕಟಪಡಿಸಿದೆ. ಸೋಮನಾಥಪುರದಲ್ಲಿ ಕೇಶವ ದೇವಾಲಯ ಸಂಕೀರ್ಣದಲ್ಲಿ ಅಲ್ಲಿನ ಶಿಲ್ಪಕಲಾ ವೈವಿಧ್ಯವನ್ನು ಅಧ್ಯಯನ ನಡೆಸಿದ ನಂತರ ಅವರು ಈ ತೀರ್ಮಾನಕ್ಕೆ ಬಂದಿರುತ್ತಾರೆ. ಅಲ್ಲಿ ಅವರು ಗಮನಿಸುವುದೇನೆಂದರೆ ಶೈವಧರ್ಮಕ್ಕೆ ಸಂಬಂಧಿಸಿದ ಮೂರ್ತಿಗಳು ಇಲ್ಲದಿರುವಿಕೆ ಮತ್ತು ಇದು ಹೊಯ್ಸಳರ ಮೊದಲಿನ ದೇವಾಲಯಗಳ ವಾಸ್ತುಶಿಲ್ಪದ ರೀತಿಯೇ ಹೀಗಿತ್ತೆಂಬುದು ಅವರ ಅಭಿಪ್ರಾಯ. ಅದೇನೇ ಆದರೂ ಈ ವಾದವನ್ನು ಪೂರ್ಣತಃ ಒಪ್ಪಲಾಗುವುದಿಲ್ಲ. ವೈಷ್ಣವ ದೇವಾಲಯಗಳ ಸಂಕೀರ್ಣವು ಶೈವ ದೇವಾಲಯಗಳ ಸಂಕೀರ್ಣದ ಪಕ್ಕದಲ್ಲಿಯೇ ಕಟ್ಟಲಾಗಿದೆಯೆಂಬ ಅಂಶವು ಮೇಲಿನ ವಾದವನ್ನು ನೇರವಾಗಿಯೇ ಹುಸಿಗೊಳಿಸುತ್ತದೆ.

ಒಂದು ವಾದವು ವಿದ್ವಾಂಸರಿಂದ ಮಾಡಬಹುದಾದ ಸಾಧ್ಯತೆ ಇದೆ. ಕೇಶವನ ಮಂದಿರದ ಎದುರು ಪಂಚಲಿಂಗ ದೇವಾಲಯವು ಕುಬ್ಜವಾಗಿರುವ ಅಂಶವು ಕೆಲವು ಆಧುನಿಕ ಇತಿಹಾಸಕಾರರನ್ನು ವಾದಿಸಲು ಹೀಗೆ ಪ್ರೇರೇಪಿಸಿದೆ. ಸೋಮನಾಥ ದಂಡನಾಯಕನು ರಾಜನಿಗೆ ಅಧೀನನಾಗಿದ್ದುದರಿಂದ ಕೇಶವ ದೇವಾಲಯವನ್ನೇ ಕುಬ್ಜಗೊಳಿಸುವಷ್ಟು ಶಿವಾಲಯವನ್ನು ನಿರ್ಮಿಸಲು ಸಾಧ್ಯವಾಗಿರಲಾರದು. ಏಕೆಂದರೆ ಅದು ಶ್ರೀ ವೈಷ್ಣವ ಸಂಕೀರ್ಣವಾಗಿದ್ದು ಶ್ರೀ ವೈಷ್ಣವ ಧರ್ಮವು ಇವನ ಪ್ರಭುವಾದ ಮೂರನೇ

ನರಸಿಂಹನ ವ್ಯಯಕ್ತಿಕ ಧರ್ಮವೂ ಆಗಿತ್ತು. ಆದರೆ ಹೊಯ್ಸಳ ಅರಸರು ಅನುಸರಿಸಿದ ಧಾರ್ಮಿಕ ನೀತಿಯನ್ನು ನೋಡಿದಾಗ ಈ ವಾದದಲ್ಲಿ ಹುರುಳಿಲ್ಲವೆಂದು ತೋರುತ್ತದೆ. ಹಾಗೆ ಗಮನಿಸಿದರೆ ಬೇಲೂರಿನಲ್ಲಿರುವ ಕೇಶವ ದೇವಾಲಯವೂ ಸಣ್ಣದೇ ಮತ್ತು ವಿಷ್ಣುವರ್ಧನನು ವಿಷ್ಣುವಿನ ಪರಮ ಭಕ್ತನೇ ಆಗಿದ್ದನು. ಅದೂ ಅಲ್ಲದೆ ಸೋಮನಾಥನಿಂದ ಕಟ್ಟಲ್ಪಟ್ಟ ಈ ದೇವಾಲಯ ಸಂಕೀರ್ಣವು ಅವನ ಪ್ರಭುವಿನಲ್ಲಿದ್ದ ನಿಷ್ಠೆಯ ಅಭಿವ್ಯಕ್ತಿ ಮಾತ್ರವೇ ಎಂದೂ ಹೇಳಲಾಗುವುದಿಲ್ಲ. ರಾಜನ ಅಧೀನರಾಗಿದ್ದವರೂ ಸಹ ತಮ್ಮದೇ ಆದ ಸ್ವತಃ ದೇವಾಲಯಗಳನ್ನು ನಿರ್ಮಿಸಿದ ಅನೇಕ ನಿದರ್ಶನಗಳಿವೆ.

ಆದಾಗ್ಯೂ ಒಂದು ವಿಷಯವಂತೂ ಸ್ಪಷ್ಟವಾಗಿದೆ. ಆ ರೀತಿಯ ದೇವಸ್ಥಾನದ ಸ್ಥಾಪನೆಯು ಆರ್ಥಿಕ ದೃಷ್ಟಿಯಿಂದ ಫಲವತ್ತಾದ ಕಾವೇರಿ ಪ್ರದೇಶದಲ್ಲಿ ಕೃಷಿಯ ಅಭಿವೃದ್ಧಿಯಲ್ಲದೆ ಮತ್ತೇನೂ ಆಗಿರಲಿಲ್ಲ ಮತ್ತು ಅನೇಕ ಪಂಗಡಗಳ ಬ್ರಾಹ್ಮಣರಿಗೆ ರಾಜಾದಾಯದ ಹಂಚಿಕೆ ಮತ್ತು ಅವರನ್ನು ಅವಲಂಬಿಸಿದಂತೆ ಅವರು ಇದರ ಮೂಲಕ ಸಾಮಾಜಿಕ ಗುಂಪುಗಳಿಂದ ಹೆಚ್ಚಿನ ನಿಷ್ಠೆಯನ್ನು ಪಡೆಯಬಹುದಿತ್ತು.

ಹರಿಹರದಲ್ಲಿ ಕಂಡುಬಂದ ಶಿಲಾಶಾಸನವು ಆ ಜಾಗದ ವಿವರವಾದ ಮತ್ತು ಸ್ಪಷ್ಟ ವರ್ಣನೆಯನ್ನು ಹೀಗೆ ಕೊಡುತ್ತದೆ. ಗೋಡೆಗಳೊಂದಿಗೆ ಮತ್ತು ಆಳವಾದ ಕಂದಕವೂ ಸೇರಿದಂತೆ ಕಾವೇರಿ ನದಿಯ ಸುಂದರವಾದ ನೆರೆಹೊರೆಯಲ್ಲಿ ಎಲ್ಲಾ ಪೌರರನ್ನೂ ತುಂಬಿಕೊಂಡ ಅನೇಕ ಮನೆಗಳೊಂದಿಗೆ ಸೂರ್ಯ ಚಂದ್ರರ ರಸ್ತೆಗಳನ್ನೊಳಗೊಂಡ ಸೋಮನಾಥಪುರ ಎಂದು ಕರೆಯಲ್ಪಡುವ ಆ ನಗರದ ನೋಟವು ಕಣ್ಣಿಗೆ ಸದಾ ಹಬ್ಬದಂತಿತ್ತು. ವೇದ, ಶಾಸ್ತ್ರ ಮತ್ತು ಎಲ್ಲಾ ವಿಷಯಗಳ ಅಧ್ಯಯನದಿಂದ ಪಾರಂಗತರಾದ ವಿದ್ವತ್ತಿನಿಂದ ಕೂಡಿದ ಉತ್ತಮ ಶ್ರೇಷ್ಠ ಬ್ರಾಹ್ಮಣರಿಂದ ಕೂಡಿ ಅವರ ಶ್ಲೋಕಗಳು ಮಂತ್ರತಂತ್ರ ಮತ್ತು ತರ್ಕವೂ ದೈನಂದಿನ ಧಾರ್ಮಿಕ ವಿಧಿವಿಧಾನಗಳ ಆಚರಣೆಯಿಂದಲೂ ಕೂಡಿ ತ್ಯಾಗಕ್ಕೆ ಅರ್ಪಣಾಭಾವದಿಂದ ಪವಿತ್ರರಾದ ಸಾಧು ಸ್ವಭಾವದ ಸಜ್ಜನರಿಂದಲೂ ಕೂಡಿದೆ. ಆ ಭವ್ಯ ಸೋಮನಾಥಪುರದ ಹಿರಿಮೆಯನ್ನು ಬಣ್ಣಿಸುವುದು ಮಾತುಗಳಿಗೆ ಮೀರಿದುದಾಗಿದೆ. ನಂತರ ಅಲ್ಲಿಯ ಮರಗಳ ಮತ್ತು ಸಸ್ಯ ಸಂಪತ್ತಿನ ವರ್ಣನೆಯು ಮುಂದುವರೆಯುತ್ತದೆ.

ಮತ್ತೆ ಹೀಗೆ ಮುಂದುವರೆಯುತ್ತದೆ. ಸುವಿಖ್ಯಾತ ಸೋಮನಾಥಪುರದಲ್ಲಿ ಅವನು ದೊಡ್ಡ ದೇವಾಲಯವನ್ನು ಕಟ್ಟಿಸಿದನು. ಆಗಮದ ಎಲ್ಲಾ ನಿಯಮಗಳ ಪ್ರಕಾರವಾಗಿಯೇ ಸೋಮ ಕಮುಪಿ, ಗಯಿ, ಗೋವಲ ಮೊದಲಾದ ವಿಷ್ಣುವಿನ ಅನೇಕ ಅವತಾರಗಳನ್ನು ಆ ಮೂಲಕ ಸ್ಥಾಪಿಸಿ ಅವನು ಅಪಾರವಾದ ಕೀರ್ತಿಗಳಿಸಿದನು. ಪ್ರಸನ್ನ ಚೆನ್ನಕೇಶವನ ಪೂರ್ಣ ಹೆಸರಿನಲ್ಲಿ ಅವನು ಕೇಶವನನ್ನು ಬಲಗೈ ಪಕ್ಕದಲ್ಲಿ ಸ್ಥಾಪಿಸಿದನು ಮತ್ತು ಜಗತ್ತಿನ ಸಂತೋಷದ ಮೂಲ ಅವನ ಗೋಪಾಲನ ರೂಪ ಮನಸ್ಸನ್ನು ಸಂತೋಷದಿಂದ ತುಂಬುವ ಭಗವಂತನ

ರೂಪ ಜನಾರ್ಧನ ಈ ಮೂರು ರೂಪಗಳು ತಮ್ಮಲ್ಲಿ ತಾವೇ ಒಂದಾಗಿ ಆ ಪುರದಲ್ಲಿ ವಿಷ್ಣು ದೇವಾಲಯದಲ್ಲಿ ಮುಖ್ಯದೇವರಾಗಿವೆ. ಎಲ್ಲಾ ರೀತಿಯ ಹಬ್ಬದ ಆಚರಣೆಯ ಕಾರಣ ಆವರಣದ ಸುತ್ತಲೂ ಅನೇಕ ಎಲ್ಲ ರೂಪಗಳ ಬೇರೆ ಬೇರೆ ರೀತಿಗಳಲ್ಲಿ ಪ್ರದರ್ಶಿಸಲ್ಪಟ್ಟಿದ್ದವು. ಮತ್ಸ್ಯ ಮತ್ತಿತರರು ಎಲ್ಲಾ ಹತ್ತೂ ಅವತಾರಗಳೂ ಕೇಶವ ಮತ್ತು ಸಂಕರ್ಸನ ಮತ್ತಿತರರು ಮಂಗಳ ಮಾರುತಿಗಳು ಹನ್ನೆರಡು ಹೆಸರುಗಳಲ್ಲಿ ನಾರಾಯಣ ಮತ್ತಿತರರು ದೀರ್ಘಾಯಸ್ಸು ಮತ್ತು ಸಂಪತ್ತನ್ನು ದಯಪಾಲಿಸುವವರು. ಮೂವತ್ತನಾಲ್ಕು ಸಂಖ್ಯೆಗಳಲ್ಲಿ ಹದಿನೆಂಟು ಕೃಷ್ಣ ಮತ್ತೆಲ್ಲರೂ ಸೇರಿ ಗಣೇಶ, ಭೈರವ, ಭಾಸ್ಕರ, ವಿಶ್ವಕ್ಸೇನ (ಜನಾರ್ಧನ) ಗುರ್ಗಾ ಇನ್ನೂ ಇತರ ಎಪ್ಪತ್ತನಾಲ್ಕು ಸಂಖ್ಯೆಗಳುಳ್ಳ ದೇವರುಗಳು ಪುರದ ಮಧ್ಯೆ ವಿಷ್ಣು ದೇವಾಲಯಗಳನ್ನು ಅಲಂಕರಿಸಿವೆ ಮತ್ತು ಪುರದ ಆಗ್ನೇಯ ಭಾಗದಲ್ಲಿ ಯಾರೋ ದಂಡಾಧಿಪರು ಮಧ್ಯೆ ಸೋಮನಾಥ ಶಿವಲಿಂಗದೊಂದಿಗೆ ಬಿಜ್ಜಳೇಶ್ವರ ಮತ್ತು ಸುಂದರವಾದ ಪರ್ಗದೇಶ್ವರನನ್ನು ಸ್ಥಾಪಿಸಿದರು ಮತ್ತು ಕೀರ್ತಿಶಾಲಿಗಳಾದರು ಮತ್ತು ನರಸಿಂಹೇಶ್ವರನೆಂದು ಕರೆಯಲಾಗುತ್ತಿದ್ದ ಭಾವನನ್ನು ಸೋಮನಾಥಪುರದಲ್ಲಿ ಕಾವೇರಿಯ ಮಧ್ಯೆ ಅವನು ಸ್ಥಾಪಿಸಿದನು. ಬಲಶಾಲಿಯಾದ ಸೋಮ ದಂಡಖಿನಾಥನು ಕೀರ್ತಿಯನ್ನು ಗಳಿಸಿದನು. ಅದು ಕಲಿಕೆಯ ಗದೆಯಾದ ಹೊರದೇಶಗಳಲ್ಲಿಯೂ ಹರಡಿ ಕೀರ್ತಿಯನ್ನು ಗಳಿಸಿತ್ತು. ಸೋಮದಂಡಾಧಿನು ಖುಷಿಯಿಂದ ಆ ಭವ್ಯವಾದ ಸೋಮನಾಥಪುರವನ್ನು ಒಳ್ಳೆಯ ನಡತೆಯುಳ್ಳ ವೇದಶಾಸ್ತ್ರ ಜ್ಞಾನವುಳ್ಳ ಧಾರ್ಮಿಕ ವಿಧಿವಿಧಾನ ಗಳಿಗೆ ಅರ್ಪಿತರಾದ ಸುಶೀಲರಾದ ಉತ್ತಮೋತ್ತಮನು ಬ್ರಾಹ್ಮಣರಿಗೆ ಕೊಟ್ಟನು.

ಸೋಮನಾಥಪುರದ ಅಗ್ರಹಾರದಲ್ಲಿ ಗಿಳಿಗಳೂ ಸಹ ಅಲ್ಲಿ ಕೆಲವು ಸ್ಥಳಗಳಲ್ಲಿ ನ್ಯಾಯದಿಂದ ತುಂಬಿದದು, ಮೀಮಾಂಸೆಯಲ್ಲಿಯೇ ಘೋಷಿಸಲ್ಪಟ್ಟಿದ್ದವು. ಕೆಲವು ಸ್ಥಳಗಳಲ್ಲಿ ಒಟ್ಟಿಗೆ ಸಭೆ ಸೇರಿ ತರ್ಕದ ಕಠಿಣ ಸಮಸ್ಯೆಯನ್ನೂ ವಾದಿಸುತ್ತಿದ್ದವು. ಇನ್ನೂ ಕೆಲವು ಸ್ಥಳಗಳಲ್ಲಿ ವ್ಯಾಕರಣ ತ್ಯಾಗ ಮತ್ತು ಕವಿತೆಯನ್ನೂ ಚರ್ಚಿಸುತ್ತಿದ್ದವು. ಅಂತಹ ಕಲಿಕೆಯ ಗಣಿಯಾದ ವಿದ್ಯಾನಿಧಿಯಾದ ಸೋಮನಾಥ ನಗರಿಯು ಜಗತ್ತಿನ ಒಂದು ಆಭರಣದಂತೆ ತೋರುತ್ತಿತ್ತು.

ಮೂರನೆಯ ವೀರಬಲ್ಲಾಳನ ಕಾಲದ ಕ್ರಿ.ಶ.1300ನೇ ಇಸವಿಯ ಶಿಲಾಶಾನವೊಂದು ಈ ವಸಾಹತುವನ್ನು ವಿದ್ಯಾನಿಧಿ ಪ್ರಸನ್ನ ಸೋಮನಾಥಪುರ ಮಹಾಗ್ರಹಾರವೆಂದು ಬಣ್ಣಿಸುತ್ತದೆ. ಅದರಲ್ಲಿ ಎರಡು ವಿಭಾಗಗಳಿದ್ದವು. (1) ಸಾಯಿಮೆಸ್ತಾನ (2) ವೈಷ್ಣವಸ್ತಾನ, ಬ್ರಾಹ್ಮಣ ಭೂಮಾಲೀಕರನ್ನು ಮಹಾಜನರೆಂದು ಕರೆಯುತ್ತಿದ್ದರು. ಅವರು ಅಗ್ರಹಾರ ಭೂಮಿಗಳಲ್ಲಿಯೂ ಪಾಲು ಪಡೆದಿದ್ದರು. ಇವುಗಳನ್ನು ವೃತ್ತಿಗಳೆಂದು ಕರೆಯುತ್ತಿದ್ದರು.

ಕ್ರಿ.ಶ.1495ರ ವೇಳೆಗೆ ಅಗ್ರಹಾರವು ಭಗ್ನಾವಶೇಷವಾಗಿದ್ದಿರಬಹುದೆಂದು ತೋರುತ್ತದೆ. ಮತ್ತೆ ಇದು ವಿಜಯನಗರದ ಅರಸನಾದ ತುಳುವ ನರಸಿಂಹನ ಅಧಿಕಾರಿಯಾದ ನರಸಿಂಹರಾಜ ಒಡೆಯರಿಂದ ಪುನಃ ಸ್ಥಾಪಿಸಲ್ಪಟ್ಟಿತು. ಈ ಶಿಲಾಶಾಸನವು ತುಳುವ ಕುಟುಂಬದ ಈಶ್ವರನ ಮಗನಾದ ನರಸಿಂಹನ ಅಪ್ಪಣೆಯ ಮೇರೆಗೆ ನಂಜರಾಜ ಒಡೆಯನು ಸೋಮನಾಥಪುರ ಅಗ್ರಹಾರವನ್ನು ಪುನಃ ಸ್ಥಾಪಿಸಿದನು. ಬ್ರಾಹ್ಮಣರಿಗೆ ಧನಸಹಾಯದ ಪುನಃ ಸ್ಥಾಪನೆ ದೇವಾಲಯಗಳ ನವೀಕರಣ, ತೆರಿಗೆ ವಿನಾಯಿತಿ ಇವೇ ಮೊದಲಾದ ಕ್ರಮಗಳಿಗೆ ಅದು ಅನ್ವಯಿಸುತ್ತದೆ.

ವಿಜಯನಗರದ ಸದಾಶಿವರಾಯನ ಕಾಲದ ಕ್ರಿ.ಶ.1550ನೇ ಇಸವಿಗೆ ಸೇರಿದ ಶಿಲಾಶಾಸನವೊಂದು ಸೋಮನಾಥಪುರವನ್ನು ಚತುರ್ವೇದಿಮಂಗಳ ವಿದ್ಯಾನಿಧಿ ಪ್ರಸನ್ನ, ಸೋಮನಾಥಪುರವೆಂದು ಬಣ್ಣಿಸಿದೆ. ಇದರ ಅರ್ಥ ಸೋಮನಾಥಪುರವು ಕಲಿಕೆಯ ಕೇಂದ್ರವಾಗಿತ್ತು ಅಥವಾ ನಾಲ್ಕು ವೇದಗಳಲ್ಲೂ ಪರಂಗತರಾದ ಬ್ರಾಹ್ಮಣ ವಿದ್ವಾಂಸರ ತವರು ಮನೆಯಾಗಿತ್ತು. ಅದೇ ಶಿಲಾಲೇಖವು ಆ ಸಂಕೀರ್ಣದ ಪೌರಾಣಿಕ ಮೂಲಕ ಬಗ್ಗೆಯೂ ಉಲ್ಲೇಖಿಸಿದೆ. ಬಹುಶಃ ಸ್ಥಳೀಯ ಬ್ರಾಹ್ಮಣ ಪಂಡಿತರಿಂದ ಈ ಮೂಲದ ಕಥೆಯು ಉತ್ಪ್ರೇಕ್ಷೆಗೊಳಗಾಗಿರಬಹುದು. ಅದರ ಪ್ರಕಾರ ಈ ಬ್ರಾಹ್ಮಣ ಪಂಡಿತರು ವಿಜಯನಗರದ ಸದಾಶಿವರಾಯನ ಕೈಕೆಳಗೆ ಇದ್ದ ಮುಖ್ಯ ಪಾಳೆಯಗಾರನಾದ ಅವು ಬಲರಾಜನಿಗೆ ಸೋಮನಾಥಪುರವು ಮಹರ್ಷಿ ವಶಿಷ್ಠರ ಪರ್ಣಕೂಟೀರವಾಗಿತ್ತೆಂದೂ ಆದುದರಿಂದ ಅದು ಬಹಳ ಪವಿತ್ರ ಸ್ಥಳವೆಂದೂ ತಿಳಿಸಿದರು. ಇದನ್ನು ಕೇಳಿ ಅವು ಬಲರಾಜನು ಈ ಅಗ್ರಹಾರಕ್ಕೆ ಸ್ವಲ್ಪ ವಂತಿಗೆಯನ್ನು ನೀಡಿದನು. ಹದಿನಾರನೇ ಶತಮಾನದ ನಂತರ ಈ ಅಗ್ರಹಾರಕ್ಕೆ ಸಂಬಂಧಪಟ್ಟಂತೆ ನಮ್ಮ ಬಳಿ ಯಾವುದೇ ದಾಖಲೆಗಳಿರುವುದಿಲ್ಲ.

ಸೋಮನಾಥಪುರ ದೇವಾಲಯ ಸಂಕೀರ್ಣವು ರಾಜ್ಯದ ಯಥಾವತ್ ದೃಷ್ಟಿಯಿಂದ ನೋಡಬಹುದಾಗಿದೆ. ಭಾರತೀಯ ಆಡಳಿತ ಕೇಂದ್ರವು ಬಹು ಪುರಾತನ ಕಾಲದಿಂದಲೂ ರಾಜ್ಯಾಡಳಿತದ ಗುರಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನು ಸಾಧಿಸುವುದೇ ಆಗಿದೆ ಎಂದು ಒತ್ತಿ ಹೇಳಿದೆ. ಇವುಗಳಲ್ಲಿ ಕೊನೆಯದಾಗಿ ಮೋಕ್ಷವು ವ್ಯಕ್ತಿಯ ಪ್ರಯತ್ನಗಳನ್ನು ಮತ್ತು ಆಧ್ಯಾತ್ಮಿಕ ಅನುಭವಗಳನ್ನೇ ಅವಲಂಬಿಸಿದೆ ಮತ್ತು ಇದು ಕೇವಲ ಕೆಲವೇ ಮಂದಿಯಿಂದ ಮಾತ್ರ ಸಾಧ್ಯವಾಗುವಂತಹುದು. ಮೊದಲ ಮೂರು ಪುರುಷಾರ್ಥಗಳ ಸಾಧನೆಗೆ ಪ್ರಾಮುಖ್ಯತೆಯನ್ನು ಕೊಡಲಾಯಿತು. ಆಡಳಿತದ ಫಲವು ಧರ್ಮ, ಅರ್ಥ ಮತ್ತು ಕಾಮಗಳನ್ನು ಸಾಧಿಸುವುದರಲ್ಲಿಯೇ ಅಡಗಿದೆ. ವಾಸ್ತವವಾಗಿ ರಾಜ್ಯವು ಈ ಮೂರು ಫಲಗಳನ್ನೂ ನೀಡಬಹುದು.

ಯಾವುದೇ ದೇವಾಲಯವು ಮೇಲೆ ತಿಳಿಸಿದ ಪುರುಷಾರ್ಥಗಳ ಸಾಧನೆಗಾಗಿ ಆ ದಾರಿಯಲ್ಲಿ ನಡೆಸುವ ಉದ್ದೇಶವನ್ನೇ ಹೊಂದಿರುತ್ತಿತ್ತು. ಹೊಯ್ಸಳ ಅರಸರು ಶೈವ,

ವೈಷ್ಣವ ಅಥವಾ ಜೈನ ಮಂದಿರಗಳ ನಿರ್ಮಾಣವನ್ನು ಕೈಗೊಂಡಿತು. ಈ ರೀತಿಯ ದೇವಾಲಯದ ನಿರ್ಮಾಣಗಳಂತಹ ಕಾರ್ಯಗಳಿಂದ ಹೊಯ್ಸಳ ರಾಜ್ಯವು ಧರ್ಮವನ್ನೇ ಎತ್ತಿಹಿಡಿದಿತ್ತು. ಇಲ್ಲಿ ಧರ್ಮವೆಂದರೆ ಯಾವುದೇ ಒಂದು ಪಂಥದ ಮಿತಿಯ ಅರ್ಥದಲ್ಲಿ ಬಳಸಲ್ಪಡುತ್ತಿತ್ತು. ಇಲ್ಲಿ ಧರ್ಮವೆಂದರೆ ಸನ್ಮಾರ್ಗದಲ್ಲಿ ನಡೆಯುವಿಕೆ, ಸರಿಯಾದ ರೀತಿಯಲ್ಲಿ ಆಲೋಚನೆ ಮತ್ತು ದೇವರಲ್ಲಿ ಸಂಪೂರ್ಣ ನಂಬಿಕೆ ರಾಜ್ಯವು ಜನರು ಪೂಜಿಸುತ್ತಿದ್ದ ದೇವರ ವಿವಿಧ ರೂಪಗಳಲ್ಲಿ ಯಾವುದೇ ತಾರತಮ್ಯವನ್ನು ಮಾಡಲಿಲ್ಲ. ಹೊಯ್ಸಳರು ಹಿಂದಿನ ಭಾರತದ ಅರಸರಂತೆಯೇ ದೇವರನ್ನು ವಿವಿಧ ರೂಪಗಳಲ್ಲಿ ಪೂಜಿಸುವುದನ್ನು ಪ್ರೋತ್ಸಾಹಿಸಿದರು. ಈ ಸಂಬಂಧದಲ್ಲಿ ನಾವು ಬೇಲೂರಿನ ಕೇಶವ ದೇವಾಲಯದಲ್ಲಿ ಸಂರಕ್ಷಿಸುವ ಶಿಲಾಶಾಸನವೊಂದರಿಂದ ಪ್ರಸಿದ್ಧರಾದ ಪ್ರಾರ್ಥನೆಯನ್ನು ಇಲ್ಲಿ ಉದ್ಧರಿಸಬಹುದು.

ಓಂ ಶಿವಾಯ ಸಮುಪಸ್ಥಿತೇ ಶಿವ ಇತಿ, ಬ್ರಹ್ಮೇತಿ
ವೇದಾಂತಿನೋ
ಬೌದ್ಧಃ ಬುದ್ಧ ಇತಿ, ಪ್ರಮಣಪತಾವಃ
ಕರ್ತೇನಿ, ನೈಯಾಯಿಕಃ
ಅರ್ಹಸ್-ಚೇತ್ ಇಹ, ಜೈನ್ ಸಾಹಸ ಮತಿಹಃ
ಕರ್ಮೇತಿ, ಮೀಮಾಂಸಕಃ
ಸೊ ಓಂ ವೊ ವಿದಾಧಾತು, ವಾಂಛಿಪಲಮ್
ಶ್ರೀ ಕೇಶವೇಸಾಸ್ ಸದಾ

"ಯಾರನ್ನು ಶೈವರು ಶಿವನೆಂದೊ ವೇದಾಂತಿಗಳ ಬ್ರಹ್ಮನೆಂದೂ, ಬೌದ್ಧರು ಬುದ್ಧನೆಂದೂ, ಪೂಜಿಸುವರೋ, ನೈಯಾಕರು ಸಾಕ್ಷಿಯಲ್ಲಿ ಕುಶಲರಿದ್ದು ಕರ್ತನೆನ್ನುವರೋ, ಜೈನ ಶಾಸನ ಅನುಯಾಯಿಗಳು ಅರಹತ್ ಎನ್ನುವರೋ, ಮೀಮಾಂಸಕರು ಕರ್ಮ ಎನ್ನುವರೋ, ಆ ದೇವನಾದ ಕೇಶವನು ಸದಾ ನಿಮ್ಮ ಆಸೆಗಳನ್ನು ಪೂರೈಸಲಿ.

ಸೋಮನಾಥಪುರ ದೇವಾಲಯವು ಧರ್ಮವನ್ನು ಎತ್ತಿಹಿಡಿಯುವ ಈ ನೀತಿಗೆ ಅಪವಾದವೇನಲ್ಲ. ಮೂರನೇ ನರಸಿಂಹನು ಸೇರಿದಂತೆ ದೇವರಲ್ಲಿ ನಂಬಿಕೆಯು ಹೊಯ್ಸಳರಿಂದ ಮತ್ತೆ ಸ್ಥಾಪಿಸಲ್ಪಟ್ಟಿತು. ಸೋಮನಾಥಪುರ ದೇವಾಲಯ ಸಂಕೀರ್ಣವು ರಾಜನ ಅಲ್ಲದೆ ಆ ಸಂಕೀರ್ಣದ ನಿರ್ಮಾಣದ ಮತ್ತು ನಿರ್ವಹಣೆಯ ಹೊಣೆ ಹೊತ್ತು ಅಧಿಕಾರಿಗಳ ಧರ್ಮನಿರಪೇಕ್ಷತೆಯ ದೃಷ್ಟಿಕೋನಕ್ಕೆ ವಿಫುಲವಾದ ಪುರಾವೆಯನ್ನು ಒದಗಿಸುತ್ತದೆ.

ಸೋಮನಾಥಪುರ ಸ್ಥಳದ ಹೆಸರು ಶಿವನ ಒಂದು ನಿರ್ದಿಷ್ಟ ರೂಪದ ಪೂಜೆಗಾಗಿಯೇ ನಿರ್ದೇಶಿಸಲ್ಪಟ್ಟ ಕೇಂದ್ರವೆಂದೇ ಭಾಸವಾಗುತ್ತದೆ. ಹೊರನೋಟಕ್ಕೆ ಇದು ಸತ್ಯವೆಂದೇ ತೋರುವುದಿಲ್ಲ. ಸಂದೇಹವಿಲ್ಲ ಸ್ಥಳದ ಹೆಸರು ಈ ಊರಿನ ಸ್ಥಾಪಕನಾದ ಸೋಮನಾಥ ದಂಡನಾಯಕನ ಹೆಸರಿನಿಂದ ಬಂದಿರುವುದಾದರೂ ಹೊರನೋಟದ ಈ ಪ್ರಭಾವವು ಮರೆಯಾಗುವುದಿಲ್ಲ.

ಅಂತೂ ಈ ಸಂಕೀರ್ಣವು ಹಿಂದೂಧರ್ಮದ ಎರಡು ಪ್ರಧಾನ ಶಾಖೆಗಳಾದ ಶೈವಮತ ಮತ್ತು ಶ್ರೀ ವೈಷ್ಣವ ಮತ ಎರಡರ ನಡುವೆ ಶಾಂತಿಯುತ ಸಹಬಾಳ್ವೆಯನ್ನೇ ಪ್ರತಿಪಾದಿಸುತ್ತದೆಯಾದರೂ, ವಾಸ್ತವಿಕವಾಗಿ ಅವುಗಳು ಪರಸ್ಪರ ವಿರುದ್ಧ ವಿಚಾರಗಳನ್ನು ಮತ್ತು ಸಿದ್ಧಾಂತಗಳನ್ನು ಹೊಂದಿದ್ದವು. ಒಂದು ಅದ್ವೈತ ಸಿದ್ಧಾಂತವನ್ನೂ ಮತ್ತೊಂದು ವಿಶಿಷ್ಟಾದ್ವೈತ ಸಿದ್ಧಾಂತವನ್ನೂ ಪ್ರತಿನಿಧಿಸುತ್ತಿದ್ದುವು. ವೈಷ್ಣವ ಧರ್ಮವು ಬಾದಾಮಿ ಚಾಲುಕ್ಯರ ಕಾಲದಿಂದಲೂ ಕರ್ನಾಟಕದಲ್ಲಿ ಪ್ರಚಲಿತವಾಗಿತ್ತು. ಆದರೆ ಶ್ರೀ ವೈಷ್ಣವ ಧರ್ಮವು ಕರ್ನಾಟಕದಲ್ಲಿ ಶ್ರೀರಾಮಾನುಜಾಚಾರ್ಯರಿಂದ ಬೋಧಿಸಲ್ಪಟ್ಟು ಮತ್ತು ಅವರಿಂದ ಜನಪ್ರಿಯಗೊಂಡು, ಹೊಯ್ಸಳ ಅರಸರ ಆಶ್ರಯವನ್ನು ಪಡೆಯಿತು. ಈ ಎರಡೂ ವಿಚಾರಧಾರೆಗಳು ಯಾವುದೇ ಭೇದಭಾವವಿಲ್ಲದೆ ಅಂಗೀಕೃತವಾಗಿದ್ದವು. ಇದು ಬುದ್ಧಿವಂತಿಕೆಯ ನೀತಿಯಾಗಿದ್ದುದಲ್ಲದೆ ವಾಸ್ತವಿಕ ಅವಶ್ಯಕತೆಯೂ ಆಗಿತ್ತು.

ಆ ದಿನಗಳಲ್ಲಿ ಮಂದಿರ ನಿರ್ಮಾಣವು ಒಬ್ಬರ ಧಾರ್ಮಿಕ ನಂಬುಗೆಯ ಅಭಿವ್ಯಕ್ತಿ ಮಾತ್ರವೇ ಆಗಿರಲಿಲ್ಲ. ಅದು ರಾಜ್ಯದ ಏಳು ಅಂಶಗಳಲ್ಲಿ ಅಥವಾ ಸಪ್ತಾಂಗಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟ ಜನಪದದ ವಿಭಿನ್ನ ವಿಚಾರಗಳ ಭಾವೈಕ್ಯತೆಯ ಒಂದು ರೂಪವಾಗಿತ್ತು. ಈ ರೀತಿಯಲ್ಲಿ ಮೂರನೇ ನರಸಿಂಹನಂತಹ ರಾಜರು ಧರ್ಮವನ್ನು ಪ್ರತಿಪಾದಿಸಿದರು. ಸೋಮನಾಥಪುರದ ದೇವಾಲಯ ಸಂಕೀರ್ಣವು ಆಗಿನ ಸಮಕಾಲೀನ ಸಮಾಜದಲ್ಲಿ ಧರ್ಮದ ಕ್ಷೇತ್ರದಲ್ಲಿ ಇನ್ನೂ ಒಂದು ಪಾತ್ರವನ್ನು ವಹಿಸುವುದಿತ್ತು. ಈ ರೀತಿಯಲ್ಲಿ ಅಂದರೆ ದೇವಾಲಯಗಳ ನಿರ್ಮಾಣ ಮತ್ತು ನಿರ್ವಹಣೆಯಾದ ಧರ್ಮವನ್ನು ಪ್ರತಿಪಾದಿಸುವುದರ ಮೂಲಕ ಮೂರನೇ ನರಸಿಂಹ ಮತ್ತು ಅವನ ಅಧೀನದಲ್ಲಿದ್ದ ಮುಖ್ಯಾಧಿಕಾರಿಗಳು, ಹೊಯ್ಸಳ ಕುಟುಂಬಕ್ಕೆ ಜನರಲ್ಲಿ ಒಂದು ನಿಷ್ಠೆಯ ಭಾವವನ್ನುಂಟು ಮಾಡಿದ್ದರು.

ಈಗ ಗಮನಿಸುವ ಮುಂದಿನ ವಿಚಾರವೆಂದರೆ ಸೋಮನಾಥಪುರದ ದೇವಾಲಯ ಸಂಕೀರ್ಣವು ಹೇಗೆ ಅರ್ಥ ಮತ್ತು ಕಾಮವನ್ನು ಪ್ರತಿಪಾದಿಸಿತ್ತು ಎನ್ನುವುದು. ದೇವಾಲಯ ಸಂಕೀರ್ಣದ ಉದಯವು ಅನೇಕ ಚಟುವಟಿಕೆಗಳ ಒಂದು ಹೊಸ ವಸಾಹತುವನ್ನೇ ಅಸ್ತಿತ್ವಕ್ಕೆ ತಂದಿತು. ಅದು ರಾಜ್ಯದ ವಿವಿಧ ಭಾಗಗಳಿಂದ ವಿವಿಧ ವರ್ಗಗಳ ಜನರನ್ನು ವಲಸೆ ಬರಲು ಪ್ರೇರೇಪಿಸಿತು. ಶಿಲಾಶಾಸನಗಳ ಅಧ್ಯಯನವು ಮೇಲಿನ ತೀರ್ಮಾನವನ್ನು

ಪುಷ್ಟಿಗೊಳಿಸುತ್ತದೆ. ಸೋಮನಾಥಪುರ ದೇವಾಲಯ ಸಂಕೀರ್ಣವು ಆ ಸ್ಥಳದಲ್ಲಿ ಒಂದು ಹೊಸ ಸಾಮಾಜಿಕ ರಚನೆಯ ಹುಟ್ಟಿಗೆ ನಾಂದಿ ಹಾಡಿತು. ಅದು ಅರ್ಚಕರಿಗೆ, ಕಲಾವಿದರಿಗೆ, ಕರಕುಶಲ ಕೆಲಸಗಾರರಿಗೆ ಮತ್ತು ಮನೆಗೆಲಸ ಮಾಡುವಂತಹ ವ್ಯಕ್ತಿಗಳಿಗೆ ಉದ್ಯೋಗಾವಕಾಶಗಳನ್ನು ಕೊಟ್ಟಿತು. ಅದು ವ್ಯಾಪಾರವನ್ನೂ ವರ್ಧಿಸಿತು. ಈ ರೀತಿಯಾಗಿ ದೇವಾಲಯ ಸಂಕೀರ್ಣವು ಅರ್ಥ ಮತ್ತು ಕಾಮವನ್ನು ಈಡೇರಿಸಿತು. ದೇವಾಲಯ ಸಂಕೀರ್ಣವು ಹೆಚ್ಚು ಕಡಿಮೆ ಆಧುನಿಕ ಕೈಗಾರಿಕೆಯಂತೆಯೇ ಇದ್ದಿತು. ಹೊಯ್ಸಳ ಅರಸರು ತೆರಿಗೆ ಹಣದಿಂದ ಬಂದ ಆದಾಯವನ್ನು ದೇವಾಲಯಗಳ ಮೇಲೆ ವಿನಿಯೋಗಿಸಿದರು. ಇದು ಸಮಾಜದಲ್ಲಿ ಬಹುಮುಖಿ ಕಾರ್ಯಗಳನ್ನು ನಿರ್ವಹಿಸಿತು. ಸಂಕ್ಷಿಪ್ತವಾಗಿ ಹೇಳುವುದಾದರೆ ಸೋಮನಾಥಪುರ ದೇವಾಲಯ ಸಂಕೀರ್ಣವು ನಾಲ್ಕು ಪುರುಷಾರ್ಥಗಳ ಈಡೇರುವಿಕೆಯನ್ನೇ ಪ್ರತಿಫಲಿಸಿತೆಂಬ ಅಂಶವನ್ನು ಗಮನಿಸಬಹುದಾಗಿದೆ. ಅದು ರಾಜ್ಯಾಡಳಿತ ಸಮಾಜ ಮತ್ತು ಆ ಕಾಲದ ಅರ್ಥವ್ಯವಸ್ಥೆ ಇವುಗಳಿಗೆ ಒಂದಕ್ಕೊಂದು ಸಂಬಂಧ ಕಲ್ಪಿಸಿತು. ಈ ಸಂಕೀರ್ಣದ ಮೇಲೆ ಖರ್ಚು ಮಾಡಿದ ಹಣವು ಒಂದು ಬಂಡವಾಳ ಹೂಡಿಕೆಯೇ ಆಗಿದ್ದಿತು. ಕೆಲವು ಎಡಪಂಥೀಯ ಚರಿತ್ರೆಕಾರರು ಇದನ್ನು ಸಾರ್ವಜನಿಕ ಹಣವನ್ನು ದುಂದು ಮಾಡಿದಂತೆಯೂ ಮತ್ತು ಗುಲಾಮರ ಶ್ರಮವನ್ನು ಶೋಷಣೆ ಮಾಡಿದಂತಾಯಿತೆಂದೂ ದೋಷಿಸುವ ಶಿಲಾಶಾಸನದಲ್ಲಿ ಇದನ್ನು "ಬಿಟ್ಟಿ" ಎಂದು ಕರೆಯಲಾಗಿದೆ.

ಇಲ್ಲಿ ಉಪಯೋಗಿಸಿರುವ ಪದ "ಬಿಟ್ಟಿ" ಅಂದರೆ ಉಚಿತ ಸೇವೆ ಇದು ಕಡ್ಡಾಯ ಸೇವೆಯಲ್ಲ. ಆದರೆ ಒಂದು ಅರ್ಥದಲ್ಲಿ ಸಹಕಾರ ಸೇವೆ ಅದು ಪ್ರೀತಿಯ ಸೇವೆ ಮತ್ತು ನಮಗೆ ದೊರೆತಿರುವ ಸಾಕ್ಷ್ಯಗಳ ಪ್ರಕಾರ ಬಹುಶಃ ಸರದಿಯ ಪ್ರಕಾರ ಈ ರೀತಿ ಮಾಡುತ್ತಿದ್ದಿರಬಹುದೆಂದು ಕಾಣುತ್ತವೆ. ನಂತರದ ಶತಮಾನಗಳಲ್ಲಿ ಈ ರೀತಿಯಾದ ಉಚಿತ ಸೇವೆಯನ್ನು ಕೊಡುತ್ತಿದ್ದ ಗುಂಪುಗಳಿಗೆ ಮತ್ತು ವ್ಯಕ್ತಿಗಳಿಗೆ ರಿಯಾಯಿತಿ ನೀಡಿರುವುದರ ಬಗ್ಗೆ ಶಿಲಾಶಾಸನಗಳಲ್ಲಿ ಉಲ್ಲೇಖವಿದೆ. ಅದೂ ಅಲ್ಲದೆ ದೇವಾಲಯವಾದರೂ ಶಿಲೆಗಳ ಮೂಲಕ ಕಲಾತ್ಮಕ ಮತ್ತು ದೈವಿಕ ಸೌಂದರ್ಯ ಪ್ರಜ್ಞೆಯ ಪ್ರತೀಕವಾಗಿತ್ತು. ಅದು ಪ್ರತಿಮೆಗಳನ್ನು ಕಡೆಯಲು ಮತ್ತು ದೇವಾಲಯಕ್ಕೆ ಜೀವ ತುಂಬಲು ಕುಶಲ ಕೆಲಸಗಾರರನ್ನೂ ಮತ್ತು ಪ್ರಖ್ಯಾತ ಶಿಲ್ಪಿಗಳನ್ನೂ ನೇಮಿಸಿತು.

ಹೊಯ್ಸಳ ರಾಜ್ಯದ ಗುರಿಯು ಒಂದು ವಿಧದಲ್ಲಿ ಈ ದೇವಾಲಯ ಸಂಕೀರ್ಣದ ಮೂಲಕ ಈಡೇರಿತು. ದುರದೃಷ್ಟವಶಾತ್ ಇದುವರೆವಿಗೆ ಪೂರ್ಣತಃ ಕಲೆ ಮತ್ತು ಧಾರ್ಮಿಕ ಇತಿಹಾಸದ ದೃಷ್ಟಿಕೋನದಿಂದ ಮಾತ್ರ ದೇವಾಲಯಗಳ ಅಧ್ಯಯನ ನಡೆದಿತ್ತು. ಒಂದು ಸ್ಥಳದಲ್ಲಿ ದೇವಾಲಯ ಸಂಕೀರ್ಣದ ಉದಯದ ಹಿನ್ನಲೆಯು ಅದರ ಪ್ರಭಾವವು ಯಾರ ಗಮನಕ್ಕೂ ಬಂದಿಲ್ಲ. ಉದಾಹರಣೆಗೆ ಸೋಮನಾಥಪುರ ದೇವಾಲಯ ಸಂಕೀರ್ಣವು ತನ್ನ ಸುತ್ತಲೂ ವಿಶಾಲ ಫಲವತ್ತಾದ ಭೂಪ್ರದೇಶವನ್ನು ಕಾವೇರಿ ನದಿಯ ಪಕ್ಕದಲ್ಲೇ ತಲೆ

ಎತ್ತಿತು. ಈ ದೇವಾಲಯ ಸಂಕೀರ್ಣವು ತಲೆ ಎತ್ತುವ ಮೊದಲು ಈ ಭೂಭಾಗದ ಕೃಷಿ ಸಂಪತ್ತು ಬಳಸಲಾಗದೆ ಹಾಗೆಯೇ ಉಳಿದಿತ್ತು. ಆದರೆ ಈ ದೇವಾಲಯ ಸಂಕೀರ್ಣದ ಉದಯವು ಕಾವೇರಿ ನದಿ ಕಣಿವೆಯ ಈ ಭಾಗದಲ್ಲಿ ಕೃಷಿ ಸಂಪತ್ತಿನ ವಿಸ್ತರಣೆಗೆ ದಾರಿ ಮಾಡಿತು. ಬ್ರಾಹ್ಮಣ ಕುಟುಂಬಗಳು ಈ ಸ್ಥಳಕ್ಕೆ ವಲಸೆ ಬಂದವು ಮತ್ತು ಬ್ರಹ್ಮದೇಯ ಮತ್ತು ದೇವದಾಯ ಭೂಮಿಗಳೆರಡನ್ನೂ ಸರ ಮಾನ್ಯ ಅವಧಿಯಲ್ಲಿ ತಮ್ಮ ಹಿಡಿತಕ್ಕೆ ತೆಗೆದುಕೊಂಡವು ಮತ್ತು ಅವರು ಭೂಕಂದಾಯದಿಂದ ಪೂರ್ಣ ವಿನಾಯಿತಿ ಪಡೆದಿದ್ದಾರೆ ಎಂಬುದೇ ಇದರ ಅರ್ಥವಾಗಿತ್ತು. ಒಮ್ಮೆ ಬ್ರಾಹ್ಮಣ ಜಮೀನುದಾರರು ಬಂದು ಸೋಮನಾಥಪುರದಲ್ಲಿ ನೆಲಸಿದರೋ ಇತರ ಸಂಗತಿಗಳು ಒಂದರ ಹಿಂದೆ ಒಂದು ಶೀಘ್ರವಾಗಿ ಜರುಗಿದವು. ದೇವಾಲಯದ ಬಾಡಿಗೆದಾರರು ಅಸ್ತಿತ್ವಕ್ಕೆ ಬಂದರು. ಅವರು ಬ್ರಾಹ್ಮಣ ಜಮೀನುದಾರರ ಹಾಗೆಯೇ ದೇವಭೂಮಿಯನ್ನು ಉತ್ತಿದ್ದರು, ಬಿತ್ತಿದ್ದರು. ಇದು ಕೃಷಿ ಸಮೃದ್ಧಗೊಳ್ಳಲು ಸಹಾಯವಾಯಿತು ಮತ್ತು ಸಂಕೀರ್ಣದಲ್ಲಿ ಸಮಾಜದ ಎಲ್ಲ ವರ್ಗಗಳೂ ಬೀಡುಬಿಟ್ಟವು.

ಈ ಎಲ್ಲ ಸಂಗತಿಗಳೂ ತಿಳಿಸುವುದೇನೆಂದರೆ ಈ ಕಾಲದಲ್ಲಿ ದಂಡನಾಯಕರಿಂದ ಶೈವ, ವೈಷ್ಣವ ದೇವಾಲಯಗಳ ಕಟ್ಟಡಗಳ ನಿರ್ಮಾಣಗಳ ಚಟುವಟಿಕೆಗಳಿದ್ದವು. ಈ ವಿಶಾಲವಾದ ದೇವಾಲಯಗಳೂ ಮತ್ತು ಶಿಲಾಶಾಸನಗಳಲ್ಲಿ ವರ್ಣಿಸಲ್ಪಟ್ಟಿರುವ ದೇವಾಲಯಗಳು ದಂಡನಾಯಕನಿಗೂ ಮತ್ತು ಕಲೆ ಮತ್ತು ವಾಸ್ತುಶಿಲ್ಪದ ಮಹಾನ್ ಪೋಷಕನೆಂದು ರಾಜನಾದ ಮೂರನೇ ನರಸಿಂಹನಿಗೂ ಅಪಾರ ಗೌರವ ತರುತ್ತವೆ.

5.4.7 ಜೈನಮತ

1) ಇದೇ ನಾಡಿನಲ್ಲಿ ಕೊಲುಗಣ ಬಸದಿಗೆ ಮಹಾಪ್ರಧಾನ ಸರ್ವಾಧಿಕಾರಿ ಕೇತೇಯ ದಂಡನಾಯಕನಿಂದ ತೆರಿಗೆಗಳಿಂದ ಬರುವ ಆದಾಯದಲ್ಲಿ ಕೊಡುಗೆ.
2) ಮೂರನೇ ನರಸಿಂಹ ಹೊನ್ನಚಗೆರೆಯ ಮಾದಯ್ಯನ ಮಗನಾದ ಶಂಭುದೇವ ಮತ್ತಿತರರು ಮಹಾಮಂಡಲಾಚಾರ್ಯ ನಯಕೀರ್ತಿದೇವನ ಶಿಷ್ಯನಾದ ಚಂದ್ರ ಪ್ರಭಾದೇವನಿಂದ ಕೊಂಡ ಮೇಲೆ ಮತ್ತೀಕೆರೆಯ ಬಳಿಯಿದ್ದ ಭೂಮಿಯನ್ನು ಗೊಮ್ಮಟದೇವ ಮತ್ತು ಇಪ್ಪತ್ತನಾಲ್ಕು ತೀರ್ಥಂಕರರ ಪೂಜೆ ಮತ್ತು ನೈವೇದ್ಯಕ್ಕಾಗಿ ಕೊಡುಗೆಯಾಗಿ ಇತ್ತರು.
3) ಗೆಂಸಪೆಯ ಅದಿಯಣ್ಣ ಸೆಟ್ಟಿಯು ಗೊಮ್ಮಟ ದೇವನ ಮಜ್ಜನಕ್ಕಾಗಿ ಒಂದು ಬಳ್ಳ ಹಾಲಿನ ಸರಬರಾಜಿಗಾಗಿ ನಾಲ್ಕು ಗದ್ಯಾಣಗಳನ್ನು ದತ್ತಿಕೊಟ್ಟನು. ದತ್ತಿಯು ಒಡವೆ ವರ್ತಕರ ಮತ್ತು ಅದಕ್ಕೆ ಸಂಬಂಧಪಟ್ಟವರ ಸುಪರ್ದಿನಲ್ಲಿತ್ತು.
4) ಮೂರನೇ ನರಸಿಂಹ ಕ್ರಿ.ಶ.1278 ವೇಲರು ಕೋಣರು, ಕುಮುದರು, ಆಲೂರಿನ ನಲ್ಲೊಡೆಯರುಗಳಿಂದ ಚಂದ್ರನಾಥ ಬಸದಿಯ ನವೀಕರಣ ಇದು ದಕ್ಷಿಣ ಐಹೊಳೆ ಎಂದು ವರ್ಣಿಸಲ್ಪಟ್ಟಿದೆ.

5) ಭಂಡಾರಿಯಯ್ಯನ ಬಸದಿಯ ದೇವ ದೇವರವಲ್ಲಭದೇವನ ಲೇಪನಕ್ಕಾಗಿ, ಉದಯಚಂದ್ರದೇವನ ಶಿಷ್ಯ ಮುನಿಚಂದ್ರ ದೇವ ಮತ್ತಿತರರಿಂದ ಸ್ವಲ್ಪ ಮೊತ್ತದ ಹಣದ ಉಡುಗೊರೆ, ದಾನ ಸದಾ ಅನವರತ ದತ್ತಿಗಾಗಿ ಈ ದಾನ.

6) ಕ್ರಿ.ಶ.1278 ಮಹಾಮಂತ್ರಿ ಕುಮಾರವರ ಚಿಕ್ಕ ಕೇತೇಯ ದಂಡನಾಯಕನು ಪೂರ್ವಾಧಿರಾಯನ ಉನ್ನತ ಅಧಿಕಾರಿಗಳು ಹೊನ್ನಾರದಲ್ಲಿ ಬಂದು ಮೊಕ್ಕಾಂ ಹೂಡಿದಾಗ ಈ ದಂಡನಾಯಕನು ದೇವ ಚೂಡನಾಥನಿಗೆ ಪ್ರಣಾಮಗಳನ್ನು ಸಲ್ಲಿಸಿ ಹೋದನು. ಒಂದು ಬೆಳ್ಳಿಯ ತಟ್ಟೆಯನ್ನೂ ಕಿರೀಟದ ಮೇಲೆ ಪಟ್ಟಿಯನ್ನೂ, ಉಡುಗೊರೆಯಾಗಿ ಕೊಟ್ಟನು. ಚಿಕ್ಕ ಗಂಗಾವಡಿ ನಾಡಿನ ಎಲ್ವೂರಿನ ಮತ್ತು ಬನತಿಯಹಳ್ಳಿ ನಾಡಿನಲ್ಲಿ ಕೆಲವು ತೆರಿಗೆಗಳನ್ನು ಮಗ್ಗದ ಮೇಲಿನ ತೆರಿಗೆ ಮತ್ತು ಹೊಗೆಯ ತೆರಿಗೆಗಳನ್ನು ಒಟ್ಟಿಗೆ ಕಳುಹಿಸಲಾಯಿತು.

7) ದೇವಸ್ಥಾನದ ಭೂಮಿಯನ್ನು ಅನುಭವಿಸುತ್ತಿದ್ದ ನಗರ ಜಿನಾಲಯದ ಅರ್ಚಕರಿಗೂ ಮತ್ತು ಬೆಳಗೊಳದ ನಖರಾಗಳಿಗೂ ಒಂದು ಒಪ್ಪಂದವಾಗಿತ್ತು. ಅದರಲ್ಲಿ ನಖರಾಗಳು ವಿಧಿಸಿದ ಕರಾರಿನಂತೆ ಅರ್ಚಕರು ದೇವ ಆದಿನಾಥನ ಪೂಜೆ ಮತ್ತು ನೈವೇದ್ಯವನ್ನು ಮಾಡುವುದೆಂದೂ ಮತ್ತು ಅವರು ಯಾವುದೇ ರೀತಿಯಲ್ಲಿಯೂ, ಆ ಭೂಮಿಯನ್ನು ಬಿಟ್ಟು ಕೊಡಲಾಗದೆಂದೂ ತಿಳಿಸಲಾಗಿತ್ತು.

8) ನೇಮಿಚಂದ್ರ ಪಂಡಿತನ ಶಿಷ್ಯನಾದ ಬಾಲಚಂದ್ರನಿಂದ ಮತ್ತು ಬೆಳಗೊಳದ ಮಾಣಿಕ್ಯ ನಖರಾಗಳಿಂದ ಸಾಸರಾಷಿ ನಗರ ಜಿನಾಲಯದ ದೇವ ಆದಿನಾಥನಿಗೆ ಭೂಮಿಯು ದಾನವಾಗಿ ಕೊಡಲ್ಪಟ್ಟಿತು.

ಪ್ರತಿಷ್ಠಿತ ಸಹಾಯದ ಜೊತೆಯಲ್ಲಿ ನಾಡುಮಟ್ಟದಲ್ಲಿ ಸಂಪನ್ಮೂಲಗಳನ್ನು ಸಜ್ಜುಗೊಳಿಸುತ್ತಿದ್ದರು. ಕೆಳಗಿನ ಪಟ್ಟಿಯು ಒಂದು ಕಲ್ಪನೆಯನ್ನು ಕೊಡುತ್ತದೆ.

ಗೋಪಣ್ಣ ಮತ್ತು ಹರಿಹರನು 3ನೇ ನರಸಿಂಹನ ಪ್ರಮುಖ ಸೇನಾಪತಿಗಳು ಕೇಶಿರಾಜನು ಇಮ್ಮಡಿ ನರಸಿಂಹ ಮತ್ತು ಹೊಯ್ಸಳ ಸೋಮೇಶ್ವರರಿಬ್ಬರಿಗೆ ಸೇವೆ ಮಾಡಿದ ಪೆರಮಾಳ ಮತ್ತು ಸೋಮಯ್ಯರು 3ನೇ ನರಸಿಂಹನ ಕಾಲದ ಬಹುಪ್ರಮುಖ ದಂಡನಾಯಕರು ಬಾಳಪ್ಪ ಮತ್ತು ಮಾದವ ದಂಡನಾಯಕರು 3ನೇ ಬಲ್ಲಾಳನ ಕಾಲದ ಪ್ರಮುಖ ಸೇನಾಪತಿಗಳಾಗಿದ್ದರು. ಈ ಸೇನಾಪತಿಗಳಿಗೆ ಆನೆಗಳು ಮತ್ತು ಕುದುರೆಗಳ ಮೇಲೆ ವಿಶೇಷ ಸಂಗೀತ ಉಪಕರಣಗಳನ್ನು ಉಪಯೋಗಿಸಿ ಸವಾರಿ ಮಾಡಲು ಅವಕಾಶವಿತ್ತು. ಹಲವು ಹೊಯ್ಸಳ ಶಾಸನಗಳು ರಾಜನು ಅವರಿಗೆ ಮುಕ್ತವಾಗಿ ಅವರ ಸೇವೆಗೆ ದತ್ತಿಗಳನ್ನು ಕೊಡುವ ವಿಷಯವನ್ನು ಸಾಕ್ಷೀಕರಿಸುತ್ತದೆ. ಆದುದರಿಂದ ದಂಡನಾಯಕರು ಹೊಯ್ಸಳ ರಾಜಪ್ರಭುತ್ವಕ್ಕೆ ಮೆಚ್ಚುಗೆಯ ಮಂತ್ರಿಗಳಾಗಿದ್ದರು.

ಅಡಿಟಿಪ್ಪಣಿಗಳು

1) E.C. VII, 73 Beluru
2) Ibid XI Chitaldurg Tq.
3) Ibid VII Kalkuni 144
4) Ibid III 138 Hullahalli
5) E.C. IX Cp. 132
6) Ibid Ng 84
7) Ibid V. Halebid 343
8) E.C. IX Bl 293
9) Ibid 298

ಅಧ್ಯಾಯ - 6

ಉಪಸಂಹಾರ

ಸಂಕೇತಾಕ್ಷರಗಳು

ಆಧಾರಗ್ರಂಥಗಳು

ವಂಶಾವಳಿಗಳು

ಭೂಪಟ

ಅಧ್ಯಾಯ–6
ಉಪಸಂಹಾರ

ಅಧ್ಯಯನದಿಂದ ಹೊರಬೀಳುವ ಕೆಲವು ಮುಖ್ಯ ಸಾಮಾನ್ಯ ತರ್ಕಗಳನ್ನು ಇಲ್ಲಿ ಗಮನಿಸಬಹುದಾಗಿದೆ.

ಹೊಯ್ಸಳ ಸಾಮ್ರಾಜ್ಯದ ದಂಡನಾಯಕರನ್ನು ಜೈನ ಮತ್ತು ಹಿಂದೂ ಧಾರ್ಮಿಕ ಹಿನ್ನಲೆಯಲ್ಲಿ ಆಯ್ಕೆ ಮಾಡಲಾಗುತ್ತಿತ್ತು. ಇದು ಆ ಕಾಲದ ಧಾರ್ಮಿಕ ರೀತಿನೀತಿಗಳಿಗೆ ಅನುಗುಣವಾಗಿತ್ತು. ಜೈನ ಅಧಿಕಾರಿಗಳು ಮಾತ್ರ ಪಾಳೆಯಗಾರರು. ಅವರ ಅಪ್ರತಿಮ ಪ್ರತಿಭೆಯಿಂದ ಹೊಯ್ಸಳರ ಪ್ರೀತಿಪಾತ್ರರಾಗಿದ್ದರು. ಹಿಂದೂ ದಂಡನಾಯಕರು, ಶೈವಧರ್ಮ ಮತ್ತು ವೈಷ್ಣವ ಧರ್ಮದ ಪಂಗಡಗಳಿಂದ ಆಯ್ಕೆಯಾಗುತ್ತಿದ್ದರು. ಸೋಮನಾಥ ದಂಡನಾಯಕನು ಇವರಲ್ಲಿ ಅದ್ವಿತೀಯನಾಗಿದ್ದನು. ಇವನ ಧಾರ್ಮಿಕ ನಂಟು ಶೈವ ಮತದ ಕಡೆಗಿತ್ತು. ದಂಡನಾಯಕರು ಅವರ ಧಾರ್ಮಿಕ ನಂಟು ಯಾವುದೇ ಇರಲಿ ಸಾಮ್ರಾಜ್ಯದ ರಾಜಕೀಯ ಸ್ಥಿರತೆಯ ಸಾಮಾನ್ಯ ಹಿತಕ್ಕಾಗಿ ಶ್ರಮಿಸುತ್ತಿದ್ದರು/ದುಡಿಯುತ್ತಿದ್ದರು. ಹೊಯ್ಸಳ ದಂಡನಾಯಕರ ಸಾಮಾಜಿಕ ಹಿನ್ನಲೆಯು ಬಹಳ ಸ್ವಾರಸ್ಯಕರವಾದುದು. ಏಕೆಂದರೆ ಬ್ರಾಹ್ಮಣೇತರರ ಕೈಯೇ ಮೇಲುಗೈಯಾಗಿರುವಂತೆ ತೋರುವುದು. ಆ ಕಾಲದ ದಂಡನಾಯಕರು, ಅವರ ಸಾಮಾಜಿಕ ಮತ್ತು ಧಾರ್ಮಿಕ ನಂಟುಗಳೇನೇ ಇರಲಿ ಅವರು ಒಂದು ಸಾಮಾನ್ಯ ಸಾಮಾಜಿಕ ವಿಚಾರವನ್ನು ಹೊಂದಿದ್ದರು. ಆ ವಿಚಾರವೆಂದರೆ ವರ್ಣಾಶ್ರಮ ಧರ್ಮಕ್ಕೆ ಒತ್ತು ನೀಡಿದ ಮನುಧರ್ಮ. ದಂಡನಾಯಕರೂ ಇದನ್ನೇ ಎತ್ತಿ ಹಿಡಿದಿದ್ದರು. ಆದಾಗ್ಯೂ ಶ್ರೀರಾಮಾನುಜರ ಭಕ್ತಿ ಚಳುವಳಿಯ ಕಾರಣದಿಂದ ಹೊಯ್ಸಳ ಸಾಮ್ರಾಜ್ಯದಲ್ಲಿ ವರ್ಣಾಶ್ರಮ ಧರ್ಮದ ಬಿಗಿಯು ಎಷ್ಟೋ ಸಲ ಸಡಿಲವಾಗಿತ್ತು. ಆದರೂ ಸ್ಥಳೀಯ ಪದ್ಧತಿಗಳನ್ನು ಮತ್ತು ಸಂಪ್ರದಾಯಗಳನ್ನೇ ದಂಡನಾಯಕರು ಮಾನ್ಯ ಮಾಡಿದ್ದರು ಮತ್ತು ಈ ಅರ್ಥದಲ್ಲಿ ನಾವು ಅವರು ಆಡಳಿತದ ಎಲ್ಲಾ ಹಂತಗಳಲ್ಲಿಯೂ ಸಂಪ್ರದಾಯವಾದಿಗಳಾಗಿದ್ದರೆಂದು ಹೇಳಬಹುದು.

3ನೇ ನರಸಿಂಹ

3ನೇ ನರಸಿಂಹನ ಆಳ್ವಿಕೆಯ ಕಾಲದಲ್ಲಿ ಹೊಯ್ಸಳ ರಾಜ್ಯವು ವಿಸ್ತರಿಸಿತು. ಅವನು ಮಹಾನ್ ಹೊಯ್ಸಳ ಸಾಮ್ರಾಟರಲ್ಲಿ ಒಬ್ಬನು. ಅವನು ಸಾಮ್ರಾಜ್ಯ ವಿಸ್ತರಣೆಗೆ ಕಾರಣಕರ್ತರಾದ

ಅನೇಕ ಸಮರ್ಥ ಸೈನ್ಯಾಧಿಕಾರಿಗಳನ್ನು ಹೊಂದಿದ್ದನು. ವಿಷ್ಣುವರ್ಧನನು ದಂಡನಾಯಕರನ್ನು ಗೌರವಿಸಿದನು. ಯುದ್ಧ ಭೂಮಿಯಲ್ಲಿ ಅವರ ಸಾಧನೆಗಳಿಗಾಗಿ ಅವರಿಗೆ ಭೂಮಿಯನ್ನೂ ಮತ್ತು ಬಿರುದುಗಳನ್ನಿತ್ತನು. ಪ್ರತಿಭೆಯ ಆಧಾರದ ಮೇಲೆಯೇ ಅವರ ನೇಮಕಾತಿ ಆಗುತ್ತಿತ್ತು. ಪೆರುಮಾಳ ದಂಡನಾಯಕ ಮಹಾಪ್ರಧಾನ ಸೋಮಯ್ಯ ದಂಡನಾಯಕ, ಮಲ್ಲಿಕಾರ್ಜುನ ದಂಡನಾಯಕರು ಆಡಳಿತ, ಯುದ್ಧ ಮತ್ತು ವಿಜಯಗಳಲ್ಲಿ ಸೇವೆ ಸಲ್ಲಿಸಿದರು.

ಆಡಳಿತ ವರ್ಗವು ಒಂದು ರೀತಿಯಲ್ಲಿ ಹೊಯ್ಸಳರ ಆಡಳಿತದಲ್ಲಿ ಮಧ್ಯ ಹಂತವನ್ನು ಆಕ್ರಮಿಸಿದ್ದಿತು ಮತ್ತು ಇವರ ಮೇಲೆ ಅತ್ಯುನ್ನತ ಪರಮಾಧಿಕಾರ ರಾಜನದಾಗಿತ್ತು.

ಉಚ್ಚತಮ ಅಧಿಕಾರವು/ಪ್ರಭುವು ಆಡಳಿತದ ಆದರ್ಶ ಮತ್ತು ಯಥಾರ್ಥತೆಯ ಕ್ಷೇತ್ರಗಳೆರಡರಲ್ಲೂ ಮಾದರಿಯಾಗಿ ವರ್ತಿಸುತ್ತಿದ್ದನು. ಮುಖ್ಯವಾದ 'ಧರ್ಮ' ಎಂಬ ವಿಚಾರವು ಉನ್ನತ ಅಧಿಕಾರದ ಚಟುವಟಿಕೆಗಳಲ್ಲೆಲ್ಲಾ ಪ್ರಮುಖ ಪಾತ್ರ ವಹಿಸುತ್ತಿತ್ತು. ಕೇಂದ್ರದ ಮಟ್ಟದಲ್ಲಿ ದಂಡನಾಯಕರು ಅಪ್ರತಿಮರಾಗಿದ್ದರು ಮತ್ತು ಕೆಲಸಕ್ಕೆ ಒಳ್ಳೆಯ ಅರ್ಹವ್ಯಕ್ತಿಗಳಾಗಿದ್ದರು. ಅವರು ಪರಮಾಧಿಕಾರ/ರಾಜ್ಯಕ್ಕೂ ಮತ್ತು ಆಳುವ ಅಧಿಕಾರಿಗಳಿಗೂ ನಡುವೆ ಕೊಂಡಿಯಂತಿದ್ದರು.

ಹೊಯ್ಸಳ ರಾಜ 3ನೇ ನರಸಿಂಹನ ಆಳ್ವಿಕೆಯಲ್ಲಿ ದಂಡನಾಯಕರು ಮುಖ್ಯ ಆಧಾರಸ್ಥಂಭಗಳಾಗಿದ್ದರು. ಬ್ರಾಹ್ಮಣರು ಮೊದಲಿನಿಂದಲೂ, ಭೂಮಿಯನ್ನೂ, ಹಣವನ್ನೂ ದಾನವಾಗಿ ಪಡೆಯುತ್ತಿದ್ದರು. ಈ ರೀತಿ ಬ್ರಾಹ್ಮಣರಿಗೆ ದಾನವಾಗಿ ಕೊಡಲ್ಪಟ್ಟ ಗ್ರಾಮವನ್ನು ಅಗ್ರಹಾರವೆಂದು ಕರೆಯುತ್ತಿದ್ದರು. ಹೊಯ್ಸಳ ದಂಡನಾಯಕರು ಆ ರೀತಿ ಅನೇಕ ಅಗ್ರಹಾರಗಳನ್ನು ಸೃಷ್ಟಿಸಿದರು.

ದಂಡನಾಯಕರು ದೇವಾಲಯದ ಕಟ್ಟಡಗಳ ನಿರ್ಮಾಣವನ್ನು ಬೆಂಬಲಿಸಿದರು ಮತ್ತು ಕೆರೆಗಳನ್ನು ಸಾಮ್ರಾಜ್ಯದ ಅನೇಕ ಭಾಗಗಳಲ್ಲಿ ಕಟ್ಟಿಸಿದರು. ಶಿಕ್ಷಣಕ್ಕೂ ಅವರಿಂದ ಪ್ರೋತ್ಸಾಹ ಲಭಿಸಿತು. ಅವರು ಧರ್ಮ ಸಹಿಷ್ಣುತೆಯ ನೀತಿಯನ್ನು ಅನುಸರಿಸಿದರು. ಶೈವಧರ್ಮ, ವೈಷ್ಣವ ಮತ್ತು ಜೈನ ಧರ್ಮಗಳನ್ನು ಪ್ರೋತ್ಸಾಹಿಸಿದರು. ದಂಡನಾಯಕರು ದೇವಾಲಯಗಳಿಗೆ ಉದಾರವಾಗಿ ಧನಸಹಾಯ ಮಾಡಿದರು. ಈ ಕಾಲದಲ್ಲಿ ಅವರ ಪತ್ನಿಯರು, ಹೆಣ್ಣುಮಕ್ಕಳು, ಗಂಡುಮಕ್ಕಳು, ಸಹೋದರ, ಸಹೋದರಿಯರೂ ಮತ್ತು ತಾಯಂದಿರೂ ಸಹ ದೇವಾಲಯಗಳಿಗೆ ಉದಾರವಾಗಿ ದಾನ ಮಾಡಿದರು.

ಹೀಗೆ ಮೇಲಿನ ಎಲ್ಲಾ ನಿದರ್ಶನಗಳೂ ಈ ಕಾಲದಲ್ಲಿ ಶೈವ, ವೈಷ್ಣವ ಮತ್ತು ಜೈನ ಮಂದಿರಗಳ ನಿರ್ಮಾಣದ ಚಟುವಟಿಕೆಗಳು ದಂಡನಾಯಕರಿಂದ ನಡೆಯುತ್ತಿದ್ದವೆಂಬುದನ್ನು ತೋರಿಸುತ್ತವೆ. ಈ ದೇವಾಲಯಗಳು ಮತ್ತು ಶಿಲಾಲೇಖಗಳಲ್ಲಿ ವರ್ತಿಸಲ್ಪಟ್ಟಿರುವ ದೇವಾಲಯಗಳು, ಹೊಯ್ಸಳ ಅರಸ 3ನೇ ನರಸಿಂಹ ಮತ್ತು ಅವನ ಕಲೆ ಮತ್ತು ವಾಸ್ತುಶಿಲ್ಪಗಳ ಮಹಾ ಪೋಷಕರಾದ ನಿಷ್ಠಾವಂತ ಅಧಿಕಾರಿಗಳಾದ ದಂಡನಾಯಕರಿಗೆ ಹೆಚ್ಚಿನ ಗೌರವ ಪ್ರತಿಷ್ಠೆಗಳನ್ನು ತಂದುಕೊಟ್ಟಿವೆ.

ಸಂಕೇತಾಕ್ಷರಗಳು

ಅ.ಗೂ	–	ಅರಕಲಗೂಡು
ಆ	–	ಆಲೂರು
ಬೆ	–	ಬೇಲೂರು
ಚೆ	–	ಚೆನ್ನಪಟ್ಟಣ
ಚಾ.ನ	–	ಚಾಮರಾಜನಗರ
ಎ.ಕ	–	ಎಫಿಗ್ರಾಫಿಯ ಕರ್ನಾಟಕ
ಗುಂ	–	ಗುಂಡ್ಲುಪೇಟೆ
ಹೆ.ದೆ.ಕೊ	–	ಹೆಗ್ಗಡದೇವನಕೋಟೆ
ಹು	–	ಹುಣಸೂರು
ಹೊ	–	ಹೊಳಲ್ಕೆರೆ
ಹಾ	–	ಹಾಸನ
ಹೊ.ನ	–	ಹೊಳೆನರಸಿಪುರ
ಶಾ	–	ಶಾಸನಗಳು
ಕೊ	–	ಕೊಳ್ಳೆಗಾಲ
ಕೃ.ಪೆ	–	ಕೃಷ್ಣರಾಜಪೇಟೆ
ಕೃ.ರಾ	–	ಕೃಷ್ಣರಾಜನಗರ
ಮಳ	–	ಮಳವಳ್ಳಿ
ಮ	–	ಮದ್ದೂರು
ಮೈ.ಪ್ರಾ.ವ	–	ಮೈಸೂರು ಪ್ರಾಚ್ಯವಸ್ತುಶಾಸ್ತ್ರ ವರದಿ
ಮೈ	–	ಮೈಸೂರು
ನಾ.ಮ	–	ನಾಗಮಂಗಲ
ನಂ	–	ನಂಜನಗೂಡು
ನ	–	ನಗರ
ಟಿ.ನ	–	ಟಿ.ನರಸೀಪುರ
ಪಾಂ	–	ಪಾಂಡವಪುರ
ಶ್ರ.ಬೆ	–	ಶ್ರವಣಬೆಳಗೊಳ
ತಿಪ	–	ತಿಪಟೂರು
ಯ	–	ಯಳಂದೂರು
ಯ.ತೊ	–	ಯಡತೊರೆ/ಎ.ಎಡತೊರೆ

BIBLIOGRAPHY

HOYSALA PERIOD

Primary Sources

Andhra Pradesh Report on Epigraphy for 1966

By Venkataramanayya, N., Hyderabad, 1970

Annual Reports of Indian Epigraphy, 1946 onwards, Delhi.

Annual Reports of the Archaeological Survey of India, 1887 onwards

Annual Reports of the Mysore Archaeological Department, 1906, onwards, Bangalore.

Annual Reports on South Indian Epigraphy, 1887 onwards, Madras.

Bombay-Karnataka Inscription

Vol. I, Part I (ed.) Krishnamacharlu, C.R., Madras, 1940.

Vol. I, Part II (ed.), Lakshminarayan Rao, N., Madras, 1953.

Vol. II (ed.), Desai, P.B., Delhi, 1964.

Vol. III (ed.) Lakshminarayan Rao, N.

Vol. IV (ed.), Gai, G.S., Delhi, 1965.

A Catalogue of Inscriptions copied upto 1964, by Parabrahma Sastri, P.V., Hyderabad, 1965.

A corpus of Inscriptions of the Madras Presidency collected till 1915 with Notes and References by Rangacharya, V., 3 Vols., Madras, 1917.

Epigraphic Carnatica, Vols. I-VIII (Rev. Ed.),

Gopal, B.R. (Pub.), University of Mysore.

Vol. I, Coorg District, 1972.

Vol. II, Sravanabelagola, 1973.

Vol. III, Mysore District (Gundlupete, Nanjangud and Heggadaevanakote Taluks), 1974.

Vol. IV, Mysore District (Chamarajanagara, Yelanduru, Kollegala, Hunsur and Piriyapattana Taluks), 1975.

Vol. V, Mysore District (Krishnarajanagara, Mysore and T. Narasipura Taluks), 1976.

Vol. VI, Mandya District (Krishnarajapetw, Pandavapura and Srirangapattana Taluks), 1977.

Vol. VII, Mandya District (Nagamangala, Mandya, Maddur, Malavalli Taluks), 1979.

Vol. VIII, Hassan District (Holenarasipura, Arakalgudu, Hassan and other Taluks), 1984.

Epigraphia Carnatica Volumes (Ed.), Rice, B.L. Vol. I, Coorg Inscriptions, Bangalore, 1886. Revised edition, Madras, 1914.

Epigraphia Carnatica Volumes (Ed.), Rice, B.L.

Vol. II, Inscriptions at Sravanabelagola, Bangalore,1889. Revised edition by Narasimhachar, R., Bangalore, 1923.

Vol. III, Inscriptions in the Mysore District, Part I, Bangalore, 1894.

Vol. IV, Inscriptions in the Mysore District, Part Ii, Bangalore, 1898.

Vol. V, Inscriptions in the Hassan District, Mangalore, 1902.

Vol. VI, Inscriptions in the Kadur District, Bangalore, 1901.

Vol. VII, Inscriptions in the Shimoga District, Part I, Bangalore, 1902.

Vol. VIII, Inscriptions in the Shimoga District, Part II, Bangalore, 1904.

Vol. IX, Inscriptions in the Bangalore District, Bangalore, 1905.

Vol. X, Inscriptions in the Kolar District, Section I, Mangalore, 1905; Section II, Bangalore, 1905.

Vol. XI, Inscriptions in the Chitaldoorg District, Bangalore, 1903.

Vol. XII, Inscriptions in the Tumkur District, Bangalore, 1904.

Epigraphia Carnatica Volumes (Ed.), Rice, B.L.

Vol. XIII, General Index, Part I, Krishna, M.H., Bangalore, 1934.

Vol. XIV, Supplementary Inscriptions in the Hassan District (Ed.), Krishna, M.H., Mysore, 1943.

Vol. XV, Supplementary Inscriptions in the Hassan District (Ed.), Krishna, M.H., Mysore, 1943.

Vol. XVI, Supplementary Inscriptions in the Tumkur District (Ed.), Nilakanta Sastri, K.A., Mysore, 1955.

Vol. XVII, Supplementary Inscriptions in the Kolar District, (Pub.), Dr. Seshadri, M., Mysore, 1965.

Supplementary Inscriptions in the Shimoga District, Vols. VII and VIII (Pub.), Dr. Seshadri, M., Mysore, 1970.

Epigraphia Indica, 1892 onwards, Calcutta/Delhi. Kannada Inscriptions from Madras Presidency, Parts I and II (ed.), Shama Sastry, R., Madras, 1939, 1941.

Karnataka Inscriptions

Vols. I, II, III, Part I (ed.) Panchamukhi, r.S., Dharwad, 1941, 1952, 1953.

Vol, IV (ed.), Annigeri, A.M., Dharwad, 1961.

Vol. V (ed.), Gopal, B.R., Dharwad, 1969.

Secondary Sources

Books in English

Altekar : State Government in Ancient India, Delhi.

Acharya, P.K : Indian Architecture accotding to manasara Silpasastra, Patna, 1979.

Aiyangar, S.K. : Ancient India and South Indian History and Culture, Poona, 1941.

Annaraya, Appanna : Swami Samantabhadracharya,

Mirji, (Dr.) : Ratnakarandaka Sravokachara, Sholapura, 1960.

Aiyangar, S.K. : Contributions of South India to Indian Culture, Calcutta, 1923.

Altekar, A.S. : Education of Ancient India, Varanasi, 1957.

Do. : The Position of Women in Hindu civilization, Delhi, 1962.

Appadurai, A. : Economic Conditions in Southern India, Vols. I andII, Madras, 1936.

Bhandarkar, R.G. : Vaishnavism, Saivism and Other Minor Religions, Poona, 1929.

Bulher, G. : Indian Palaeography, Calcutta, 1959.

Basavaraju, K.R. : History and Culture of Karnataka, Dharwad, 1984.

Basavaradhya, N. : Raghavanka, Harichandra Kavya, Bangalore, 1955.

Bellave Venkatanarayanappa (Ed.) : Pampa,Vikramarjuna Vijayam, Bangalore, 1931. Also (ed.) Gangasuta, Dharwad, 1976.

Bilhana : Vikramankadeva Charita with an Introduction by George Buhler, Bombay, 1975.

Chakravarti, R. : Santale, the queen of Vishnuvardhana

Coelho William : The Hoysala Vamsa, Bombay, 1950.

Dikshit, G.S. : Okkalu, a Corporate body of Mediaeval Karnataka.

Do.	:	Local Self Government in Mediaeval Karnataka, Dharwar,
Derrett, J.D.M.	:	The Hoysala, Oxfor, 1956.
Deveerappa, H. (Ed.)	:	Nanjunda Kavi, Ramanatha Charita, Mysore, 1964.
Deveerappa, H. and Padmanabha Sharma (Ed.)	:	Janna, Anantanathapurana, Mysore, 1972.
Diwarkar, R.R. (Ed.)	:	Karnataka Through the Ages, Bangalore, 1965.
Gharpure, J.R.	:	Devannabhatta, Smrithi Chandrika, Vyavahara Khanda, Parts I-III- An English translation, Bombay, 1950.
Ramanuja Ayyangar, M.A. and Narasimhachar, S.G. (Ed.)	:	Ranna, Gadayuddha, Mysore 1925.
Rama Rao, R.	:	Religion under Vishnuvardhana, the Hoysala king.
Resesh, K.V. and Others (Ed.)	:	Srikantika, Mysore, 1973.
Rice Lewis, B.	:	Mysore and Coorg from the Inscriptions, London, 1969.

Saletore, B.A. : Ancient Indian Political Thought and Institutions, Bombay, 1968.

Shama Sastri, K. (Trans.) : Kautilya Artha Sastra, Mysore, 1921.

Shamasastry, R. (Ed.) : Nayasena, Dharma Mrita, Mysore 192, 1926.

Shastry, Chandrashekar, S. : Economic Conditions under Hoysalas.

Shastry, Krishna. H. : Hoysalas in and beyond Mysore.

Seetharam, C.B. : Queen Santala Devi.

Sesha Ayyangar, H. (Ed.) : Chavundaraya, Lokopakaram, Madras, 1950.

Sheik Ali, B. (Ed.) : The Hoysala Dynasty, Mysore, 1972.

Do. : History of the Western Gangas of Talakad, Mysore, 1976.

Sircar, DlC. : Indian Epigraphy, Delhi, 1965.

Sitaramiah, M.V.(Ed.) : Sri Vijaya, Kaviraja Marga, Bangalore, 1968.

Srigondekar, G.K. (Ed.) : Somesvaradeva, Manasollasa Vols. 1-3, Baroda, 1925, 1939 and 1981.

Srikantayya, S. : Topography of Halebid

Srikantasastry, S. : Sources of Karnataka History, Vol. I, Mysore, 1940.

Shivanna, K.S. : A critique of Hoysala polity, Mysore, 1988

Venkannayya, T. (Ed.) : Harihara, Basavarajadevara Ragale, Mysore, 1951.

Venkataraman, K.R. : The hoysalas in the Tamil Country

Venkataramappa, K. and javare gowda, D. (Ed.) : Nemichandra, Lilavati Prabanda, Mysore, 1966.

Venkatara Rao, A. and Sesha Ayyangar, H. (Ed.) : Nagavarma, Abhidhanarathamala, Madras, 1940.

Do. : Ponna, Shantipuranam, Madras, 1929.

ಹೊಯ್ಸಳರ ವಂಶಾವಳಿ

ಸಳ

↓

ನೃಪಕಾಮ
(ಸು. ಕ್ರಿ.ಶ. 1000 - 1045)

↓

ವಿನಯಾದಿತ್ಯ
(ಸು. ಕ್ರಿ.ಶ. 1045 - 1098)

↓

ಎರೆಯಂಗ
(ಸು. ಕ್ರಿ.ಶ. 1098 - 1100)

↓

ಒಂದನೇ ಬಲ್ಲಾಳ (ಸು. 1100-1108) | ವಿಷ್ಣುವರ್ಧನ (ಸು. 1108-1142) | ಉದಯಾದಿತ್ಯ

ವಿಷ್ಣುವರ್ಧನ ↓

ಬಲ್ಲಾಳ ದೇವ | ಒಂದನೇ ನರಸಿಂಹ (1142 - 1173)

↓

ಎರಡನೇ ಬಲ್ಲಾಳ (ವೀರ ಬಲ್ಲಾಳ)
(1173 - 1220)

↓

ಎರಡನೇ ನರಸಿಂಹ
(1220 - 1235)

↓

ಸೋಮೇಶ್ವರ
(1235 - 1253)

↓

ಮೂರನೇ ನರಸಿಂಹ (ಸು. 1253 - 1292) | ರಾಮನಾಥ (ಸು. 1253 - 1295)

ಮೂರನೇ ನರಸಿಂಹ ↓

ಮೂರನೇ ಬಲ್ಲಾಳ
(1292 - 1343)


↓

ನಾಲ್ಕನೇ ವಿರುಪಾಕ್ಷ ಬಲ್ಲಾಳ (1343 - 1346)

ಹೊಯ್ಸಳರು



ಚಾಲುಕ್ಯರು
ಸೌರಾಷ್ಟ್ರರು
ಬ್ರೋಚ್
ನರ್ಮದಾ ನದಿ
ತಪತೀ ನದಿ
ಅಜಂತಾ
ನಾಸಿಕ್
ಎಲ್ಲೋರ
ಗೋದಾವರೀ ನದಿ
ಕಾಕತೀಯರು
ಓರಂಗಲ್
ಮಹಾನದಿ
ಭುವನೇಶ್ವರ
ಕಳಿಂಗ
ಪೂರ್ವ ಚಾಲುಕ್ಯರು
ಪಟ್ಟದಕಲ್ಲು
ಐಹೊಳೆ
ಬಾದಾಮಿ
ಗೋವೆ
ಬಂಕಾಪುರ
ಕದಂಬರು
ಹೊಯ್ಸಳರು
ದೋರಸಮುದ್ರ
ಕಾಂಚೀ
ಮಧುರೆ
ಪಾಂಡ್ಯರು
ಅನುರಾಧಪುರ

PLATE - I




SOUTH INDIA AT THE TIME OF NARASIMHA III ACCESSION

PLATE - II




HOYSALA KINGDOM BEFORE NARASIMHA III
(UN - DIVIDED)



HOYSALA KINGDOM DURING THE TIME OF NARASIMHA III
1254-1291 A.D. AFTER PARTITION

PLATE - IV



TEMPLE ARCHITECTURE DURING HOYSALA KING NARASIMHA III

